ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

# ಸ್ವಾವಲೋಕನದ ಸಾಧನವಾಗಿ ಮತ್ತು ಕಲಿಕೆಯನ್ನು ಅರ್ಥೈಸಿಕೊಳ್ಳುವಲ್ಲಿ ಕ್ಯುಎಂಟಿ

# ಸಾಧನಗಳ ಬಳಕೆ –ವಿಶ್ಲೇಷಣೆ

2014–15

ಮಾರ್ಗದರ್ಶನ

ಶ್ರೀ ಬಿಕೆ ಬಸವರಾಜ, ಪ್ರಾಂಶುಪಾಲರು ಮತ್ತು ಉಪನಿರ್ದೇಶಕರು(ಅಭಿವೃದ್ಧಿ) ಡಯಟ್, ವಸಂತ ಮಹಲ್, ಮೈಸೂರು

**ಅಧ್ಯಯನಕಾರರು**


1. ಶ್ರೀನಾರಾಯಣ ಗೌಡ ಟಿ.ಆರ್, ಉಪಪ್ರಾಂಶುಪಾಲರು ಹಾಗೂ ಕ್ಯು.ಎಂ.ಟಿ ನೋಡಲ್ ಅಧಿಕಾರಿಗಳು, ಡಯಟ್, ಮೈಸೂರು.
2. ಶ್ರೀಮತಿ ಪುಷ್ಪಲತಾ ಕೆಎಂ, ಉಪನ್ಯಾಸಕರು ಹಾಗೂ ಕ್ಯು.ಎಂ.ಟಿ ಸಹಾಯಕ ನೋಡಲ್ ಅಧಿಕಾರಿಗಳು ಡಯಟ್, ಮೈಸೂರು.


## ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ,

## ವಸಂತಮಹಲ್, ಮೈಸೂರು

# ಮುನ್ನುಡಿ

ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸಿರುವುದರಿಂದ ಶಾಲಾ ಶಿಕ್ಷಣದಲ್ಲಿ ಅಲ್ಪ–ಸ್ವಲ್ಪ ಸುಧಾರಣೆಯಾದರೂ ಗುಣಮಟ್ಟ ಹಾಗೆಯೇ ಇದೆ. ಉಚಿತ ಮತ್ತು ಕಡ್ಡಾಯ ಶಿಕ್ಷಣ ಜಾರಿಗಿದ್ದ ಮೂರು ವರ್ಷಗಳ ನಿರ್ಧಾರಿತ ಅವಧಿಯ ನಂತರವೂ ಶಿಕ್ಷಣದ ಗುಣಮಟ್ಟದ ಬಗ್ಗೆ ಪ್ರಶ್ನಾರ್ಥಕ ಚಿಹ್ನೆ ಇರುವುದು ಚಿಂತಾಜನಕ ವಿಷಯವಾಗಿದೆ.

ಯೋಜನಾ ಆಯೋಗದ ಉಪಾಧ್ಯಕ್ಷ ಮೊಂಟೆಕ್‌ಸಿಂಗ್ ಅಹ್ಲುವಾಲಿಯಾ ಪ್ರಥಮ್ ವರದಿಯನ್ನು ಜಾರಿಗೊಳಿಸಿ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಜ್ಯಾಮ್‌ದ್ರೇಚರನ್ನು ಉಲ್ಲೇಖಿಸುತ್ತಾ, ಶಿಕ್ಷಣದ ಹಕ್ಕು ವಾಸ್ತವವಾಗಿ ಶಿಕ್ಷಣದ ಮೂಲಭೂತ ಅನುಕೂಲತೆಗಳ ಕಾನೂನಾಗಿದೆ. ಶಾಲೆಗಳಲ್ಲಿ ಕುಡಿಯುವ ನೀರು, ಶೌಚಾಲಯ, ಕಟ್ಟಡ, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಅನುಪಾತದಲ್ಲಿ ಸುಧಾರಣೆಯಾಗಿದೆ. ಆದರೆ ಬೋಧನೆಯ ಪ್ರಶ್ನೆ ಬಂದಾಗ ವಿದ್ಯಾರ್ಥಿಗಳಿಗೆ ಪುಸ್ತಕ ಓದುವುದು ಮತ್ತು ಗುಣಾಕಾರ, ಭಾಗಕಾರ ಮಾಡುವುದೂ ಬರುವುದಿಲ್ಲವೆಂಬುದು ಕಳವಳಕಾರಿಯಾಗಿದೆ ಎಂದಿದ್ದಾರೆ. ಹೀಗಾಗಿ ಶಿಕ್ಷಣ ಗುಣಮಟ್ಟ ಉತ್ತಮಗೊಳ್ಳಬೇಕಾದ ಅಗತ್ಯ ಮತ್ತು ಅನಿವಾರ್ಯತೆಯು ಕಂಡು ಬರುತ್ತದೆ.

ಶಿಕ್ಷಣದ ಗುಣಾತ್ಮಕತೆ ಹೆಚ್ಚಿಸುವ ನಿಟ್ಟಿನಲ್ಲಿ ಶೈಕ್ಷಣಿಕ ಆಚರಣೆಗಳನ್ನು ನಿರಂತರವಾಗಿ ಅವಲೋಕಿಸಿಕೊಳ್ಳುತ್ತಾ ಅಗತ್ಯವಿದ್ದಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುತ್ತಾ ಮುಂದುವರಿಯುವುದು ಶಿಕ್ಷಣ ಕ್ಷೇತ್ರದ ಇಂದಿನ ಆವಶ್ಯಕತೆಯಾಗಿದೆ. ಆರ್ಥಿಕ, ಸಾಮಾಜಿಕ, ತಾಂತ್ರಿಕ ಬದಲಾವಣೆಗಳು ಶಾಲಾ ಶಿಕ್ಷಣವನ್ನು ಹಿಂದೆಂದೂ ಇಲ್ಲದ ರೀತಿಯಲ್ಲಿ ಪ್ರಭಾವಿಸುತ್ತಿವೆ. ಮಕ್ಕಳ ಕಲಿಕೆಯನ್ನು ಈ ರೀತಿಯ ಹಿನ್ನೆಲೆಯಿಂದ ಅರ್ಥೈಸಿಕೊಳ್ಳುವುದು ಮತ್ತು ಅವರಿಗೆ ಅಗತ್ಯ ಒಳಸುರಿಗಳನ್ನು ಸಂಯೋಜಿಸಿಕೊಳ್ಳಬೇಕಾದರೆ ತರಗತಿ ಪ್ರಕ್ರಿಯೆಗಳನ್ನು ವಸ್ತುನಿಷ್ಠವಾಗಿ ಅವಲೋಕಿಸಲು ಸೂಕ್ತ ಸಾಧನಗಳು ಬೇಕಾಗುತ್ತವೆ. ಇಂತಹ ಅಗತ್ಯತೆಯನ್ನು ಕ್ಯು.ಎಂ.ಟಿ ನಮೂನೆಗಳು ಸಮರ್ಥವಾಗಿ ಪೂರೈಸುತ್ತವೆ.

ಆದರೆ ಕ್ಯು.ಎಂ.ಟಿ ನಮೂನೆಗಳ ಬಳಕೆಯಲ್ಲಿ ಆಯಾ ಹಂತಗಳಲ್ಲಿ ಸ್ವಾವಲೋಕನಗಳು ನಡೆಯುವುದಕ್ಕಿಂತಲೂ ಹೆಚ್ಚು ಮಾಹಿತಿ ಕ್ರೋಢೀಕರಿಸಿ ಮೇಲಿನ ಹಂತಕ್ಕೆ ರವಾನಿಸುವ ಕುರಿತಂತೆ ಹೆಚ್ಚಿನ ಕಾಳಜಿ ವ್ಯಕ್ತವಾಗುತ್ತಿರುವುದು ಕಂಡುಬರುತ್ತಿದೆ. ಇದರಿಂದ ಕ್ಯುಎಂಟಿ ನಮೂನೆಗಳಲ್ಲಿ ಸಿಗುವ ಮಾಹಿತಿಗೂ ಶಾಲೆಯಲ್ಲಿ ಕಂಡುಬರುವ ಸ್ಥಿತಿಗೂ ಅಂತರಗಳಿರುವುದು ಗಮನಕ್ಕೆ ಬಂದಿರುತ್ತದೆ. ಈ ಅಂತರ ಅಥವಾ ವ್ಯತ್ಯಾಸಗಳು ಎಷ್ಟರ ಮಟ್ಟಿಗಿವೆ, ಶಿಕ್ಷಣದ ಗುಣಾತ್ಮಕತೆಯ ಮೇಲೆ ಇದರ ಪ್ರಭಾವವೇನು, ಈ ಅಂತರವನ್ನು ನಿವಾರಿಸುವುದು ಹೇಗೆ, ಶಾಲಾ ಹಂತದ ವಾಸ್ತವ ಸ್ಥಿತಿ ಏನಿದೆ, ಕ್ಯು ಎಂ ಟಿ ನಮೂನೆಗಳಲ್ಲಿ ಲಭ್ಯವಾಗುವ ಮಾಹಿತಿಯನ್ನು ಅವಲೋಕನಕ್ಕೆ ಮತ್ತು ವ್ಯಾವಸ್ಥಿಕ ಸುಧಾರಣೆಗೆ ಬಳಸುವುದು ಹೇಗೆ ಎಂಬಿತ್ಯಾದಿ ವಿಷಯಗಳ ಕುರಿತು ಹೆಚ್ಚಿನ ಒಳನೋಟಗಳನ್ನು ಪಡೆಯಲು ಮೈಸೂರು ಡಯಟ್ ಕೈಗೊಂಡ ಅಧ್ಯಯನದ ವರದಿ ಈಗ ನಿಮ್ಮ ಕೈಗಿಡಲು ಹರ್ಷವೆನಿಸುತ್ತದೆ.

ಅಧ್ಯಯನದ ಸಂಯೋಜಕರು ಮತ್ತು ಕ್ಯೂ.ಎಂ.ಟಿ ನೋಡೆಲ್ ಅಧಿಕಾರಿಯಾದ ಶ್ರೀ.ಟಿ.ಆರ್.ನಾರಯಣಗೌಡ, ಉಪಪ್ರಾಂಶುಪಾಲರು ಇವರಿಗೆ ಅಭಿವಂದನೆಗಳು. ಅಧ್ಯಯನದುದ್ದಕ್ಕೂ ಮಾರ್ಗದರ್ಶನ ನೀಡಿದ ಆರ್.ಇ.ಎಂ.ಎಸ್ ನೊಡಲ್ ಅಧಿಕಾರಿಗಳಾದ ಶ್ರೀಮತಿ. ಮಂಜುಳ ಅವರಿಗೂ ಅಭಿನಂದನೆಗಳನ್ನು ತಿಳಿಸುತ್ತೇನೆ. ಈ ಅಧ್ಯಯನದಲ್ಲಿ ನಿರಂತರವಾಗಿ ಶೈಕ್ಷಣಿಕ ಕಾಳಜಿಯೊಂದಿಗೆ ವಿಶ್ಲೇಷಣಾ ಕಾರ್ಯವನ್ನು ನಿರ್ವಹಿಸಿದ ಸಂಸ್ಥೆಯ ಉಪನ್ಯಾಸಕರಾದ ಶ್ರೀಮತಿ.ಕೆ.ಎಂ.ಪುಷ್ಪಲತ ಮತ್ತು ಇವರೊಂದಿಗೆ ಸಹಕರಿಸಿದ ಶ್ರೀಮತಿ.ಮಮತ.ಎಂ ಹಾಗೂ ಶ್ರೀಮತಿ.ತ್ರಿವೇಣಿ.ಕೆ ಇವರನ್ನು ಅಭಿನಂದಿಸುತ್ತೇನೆ.

ಈ ವರದಿ ನೀಡುವ ಒಳನೋಟಗಳು ಮೈಸೂರು ಜಿಲ್ಲೆಯ ಶೈಕ್ಷಣಿಕ ಪ್ರಗತಿಗೆ ಕಾರಣವಾಗಲಿ ಎಂದು ಹಾರೈಸುತ್ತೇನೆ.

**ಬಿ.ಕೆ. ಬಸವರಾಜ**

ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು(ಅಭಿವೃದ್ಧಿ)

ಡಯಟ್, ಮೈಸೂರು

# ಕೃತಜ್ಞತೆಗಳು

ಮಾನವನು ಆಧುನಿಕ ನಾಗರೀಕತೆಯ ಸೆರೆಗಿಗೊಡ್ಡಿಕೊಂಡಿದ್ದು ತನ್ನ ಆಲೋಚನಾ ಶಕ್ತಿ ಹಾಗೂ ಬುದ್ಧಿವಂತಿಕೆಯಿಂದ ತಾನು ಪ್ರಾಣಿಗಳಿಗಿಂತ ಭಿನ್ನವೆಂದು ಮೆರೆದಿದ್ದಾನೆ. ಈ ಭಿನ್ನತೆಗೆ ಮೂಲ ಮಾನವನ ಬೌದ್ಧಿಕ ವಿಕಾಸದ ಮೂಲ ನೆಲೆಯಾದ ಶಿಕ್ಷಣ. ಈ ಶಿಕ್ಷಣ ಇಂದು 'ಶಿಕ್ಷಣ ಸಾರ್ವತ್ರೀಕರಣ' ಗುಣಾಭಿವೃದ್ದಿಗಾಗಿ ಶಿಕ್ಷಣ, ಗುಣಮಟ್ಟದ ಶಿಕ್ಷಣ ಎಂಬುದರತ್ತ ಗಮನ ಕೇಂದ್ರಿಕರಿಸಿದೆ. ಇದಕ್ಕಾಗಿ ಗುಣಾತ್ಮಕ ಉಸ್ತುವಾರಿ ಸಾಧಕಗಳಲ್ಲಿ ಲಭ್ಯವಾಗುವ ಮಾಹಿತಿಯನ್ನು ಅವಲೋಕನಕ್ಕೆ, ಚಿಂತನೆಗೆ ಹಾಗೂ ಉನ್ನತೀಕರಿಸಲು ಜಿಲ್ಲಾ ಹಂತದಲ್ಲಿ ಪ್ರಥಮ ತ್ರೈಮಾಸಿಕದ ಕ್ಯೂ.ಎಂ.ಟಿ ನಮೂನೆಗಳನ್ನು ಆಧರಿಸಿ ವಿಶ್ಲೇಷಣಾ ಕಾರ್ಯವನ್ನು ಕೈಗೊಳ್ಳಲು ಅವಕಾಶವನ್ನು ಕಲ್ಪಿಸಲಾಗಿದೆ. ಈ ವಿಶ್ಲೇಷಣಾ ಕಾರ್ಯವು ಶೈಕ್ಷಣಿಕ ಮುನ್ನೋಟಗಳನ್ನು ಶೋಧಿಸಲು, ವೃತ್ತಿ ಗುಣಮಟ್ಟದ ನಿರಂತರತೆ ಕಾಯ್ದುಕೊಳ್ಳಲು ಬೆಂಬಲವಾಗಿರುವುದು ಸಂತೋಷದ ವಿಷಯವಾಗಿದೆ.

ಡಯಟ್ ಪ್ರಾಂಶುಪಾಲರು ಮತ್ತು ಉಪನಿರ್ದೇಶಕರು(ಅಭಿವೃದ್ಧಿ) ಆಗಿರುವ ಶ್ರೀ.ಬಿ.ಕೆ.ಬಸವರಾಜ ರವರು ಅಧ್ಯಯನದ ಅವಧಿಯುದ್ದಕ್ಕೂ ಸಮಂಜಸವಾದ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡಿ ಸಹಕರಿಸಿದ್ದಾರೆ. ಅವರಿಗೆ ಹೃದಯಪೂರ್ವಕ ನಮನಗಳು. ಆರ್.ಇ.ಎಂ.ಎಸ್ ನೊಡಲ್ ಅಧಿಕಾರಿಗಳಾದ ಶ್ರೀಮತಿ.ಮಂಜುಳರವರು ವಿಶ್ಲೇಷಣಾ ಕಾರ್ಯಕ್ಕೆ ಅನುಕೂಲವಾದ ನಮೂನೆಗಳು ಮತ್ತು ಪ್ರಶ್ನಾವಳಿಗಳನ್ನು ರಚಿಸುವಲ್ಲಿ ಹಾಗೂ ಮಾಹಿತಿ ಸಂಗ್ರಹಣೆಗೆ ಗರಿಷ್ಠ ಪ್ರಮಾಣದಲ್ಲಿ ಸಲಹೆ, ಸಹಕಾರ ನೀಡಿದ್ದು ಇವರಿಗೆ ನನ್ನ ಕೃತಜ್ಞತೆಗಳು. ಮಾಹಿತಿ ಸಂಗ್ರಹಣೆ ಕಾರ್ಯದಲ್ಲಿ ಸಹಕರಿಸಿರುವ ಉಪನ್ಯಾಸಕರು, ಬೋಧಕರು, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು, ಬಿ.ಆರ್.ಪಿ ಗಳು, ಸಿ.ಆರ್.ಪಿಗಳು ಹಾಗೂ ಐ.ಇ.ಆರ್.ಟಿ ರವರಿಗೆ ಧನ್ಯವಾದಗಳು. ವಿಶ್ಲೇಷಣಾ ಕಾರ್ಯದಲ್ಲಿ ಸಹಕರಿಸಿದ ಹಿರಿಯ ಉಪನ್ಯಾಸಕರು, ಉಪನ್ಯಾಸಕರು ಮತ್ತು ಕಛೇರಿ ಸಿಬ್ಬಂದಿ ವರ್ಗದವರಿಗೆ ಕೃತಜ್ಞತಾ ಪೂರ್ವಕವಾಗಿ ನಮನಗಳು. ಈ ವಿಶ್ಲೇಷಣಾ ಕಾರ್ಯ ಯಶಸ್ವಿಯಾಗಲು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಸಹೋದ್ಯೋಗಿ ಮಿತ್ರರಿಗೂ ಕೃತಜ್ಞತಾಪೂರ್ವಕ ನಮನಗಳು.

**ನಾರಾಯಣ ಗೌಡ ಟಿ.ಆರ್.**

ಉಪಪ್ರಾಂಶುಪಾಲರು ಹಾಗೂ ಕ್ಯು.ಎಂ.ಟಿನೋಡಲ್

ಅಧಿಕಾರಿಗಳು,ಡಯಟ್, ಮೈಸೂರು.

# ವಿಷಯಾನುಕ್ರಮಣಿಕೆ


| ಕ್ರ.ಸಂ | ವಿಷಯ | ಪುಟ ಸಂಖ್ಯೆ |
|---|---|---|
| 1 | ಮುನ್ನುಡಿ | |
| 2 | ಕೃತಜ್ಞತೆಗಳು | |
| | **ಅಧ್ಯಾಯ–1 ಪೀಠಿಕೆ** | |
| 3 | ಪೀಠಿಕೆ | |
| 4 | ವಿಶ್ಲೇಷಣಾ ಅಧ್ಯಯನದ ವ್ಯಾಪ್ತಿ | |
| 5 | ವಿಶ್ಲೇಷಣಾ ಅಧ್ಯಯನದ ಪ್ರಾಮುಖ್ಯತೆ | |
| 6 | ಗುಣಾತ್ಮಕ ಶಿಕ್ಷಣದ ಆಯಾಮಗಳು | |
| 7 | ವಿಶ್ಲೇಷಣೆಯ ಉದ್ದೇಶಗಳು | |
| 8 | ವಿಶ್ಲೇಷಣಾ ತಂಡ | |
| 9 | ಮೈಸೂರು ಜಿಲ್ಲೆಯ ನಕ್ಷೆ. | |
| | **ಅಧ್ಯಾಯ–2ಜಿಲ್ಲಾ ಮೇಲುಸ್ತುವಾರಿ ನಮೂನೆಯ (ಡಿ.ಎಮ್.ಎಫ್) ವಿಶ್ಲೇಷಣೆ** | |
| | | |
| 10 | ಭಾಗ–1 ವಿಭಾಗ –ಎ ಶಾಲೆಗಳ ಮತ್ತು ಶಿಕ್ಷಕರ ವಿವರ | |
| 11 | ವಿಭಾಗ –ಬಿ ಹಾಜರಾತಿ ವಿವರ | |
| 12 | ವಿಭಾಗ –ಸಿ ಪಠ್ಯಕ್ರಮ ನಿರ್ವಹಣೆ | |
| 13 | ವಿಭಾಗ –ಡಿ ನಿರಂತರ ಮತ್ತು ವ್ಯಾಪಕ ಮೌಲ್ಯ ಮಾಪನ | |
| 14 | ವಿಭಾಗ –ಇ ಶಿಕ್ಷಕರ ತರಬೇತಿ ವಿವರ | |
| 15 | ವಿಭಾಗ –ಎಫ್ಎಸ್.ಡಿ.ಎಂ.ಸಿ. ಸಮಿತಿಯ ಕಾರ್ಯಗಳು | |
| 16 | ವಿಭಾಗ –ಜಿ ಕಲಿಕಾ ಮಾಪನ | |
| 17 | **ಭಾಗ – 2**ಸಿ.ಆರ್.ಸಿಗಳ ಕಾರ್ಯಚಟುವಟಿಕೆಯ ವಿವರ | |
| 18 | **ಭಾಗ – 3**ಬಿ.ಆರ್.ಸಿಗಳ ಕಾರ್ಯಚಟುವಟಿಕೆಯ ವಿವರ | |
| 19 | **ಭಾಗ – 4**ಜಿಲ್ಲೆಯ ಕಾರ್ಯಚಟುವಟಿಕೆಯ ವಿವರ | |
| 20 | ಡಿಎಂಎಫ್ ವಿಶ್ಲೇಷಣೆಯ ಒಳನೋಟಗಳು | |
| 21 | ಡಿಎಂಎಫ್ ವಿಶ್ಲೇಷಣೆಯ ಶೈಕ್ಷಣಿಕ ನಿಹಿತಾರ್ಥಗಳು | |
| | **ಅಧ್ಯಾಯ–3ಟೆಂಪ್ಲೇಟ್ಸ್‌ಗಳನ್ನು ಆಧರಿಸಿದ ವಿಶ್ಲೇಷಣೆ** | |
| 22 | ಸಾಮಾನ್ಯ ಮಾಹಿತಿ | |
| 23 | ಸಾಮಾನ್ಯ ಮಾಹಿತಿ | |
| 24 | ಸರಾಸರಿ ಹಾಜರಾತಿಯಂತೆ ಶಾಲೆಗಳ ಸಂಖ್ಯೆ | |
| 25 | ಸಿ.ಡಬ್ಲ್ಯೂ.ಎಸ್.ಎನ್ ಮತ್ತು ಓ.ಓ.ಎಸ್.ಸಿ ಶಾಲೆಗಳ ವಿವರ | |
| 26 | ಪಠ್ಯಕ್ರಮದ ನಿರ್ವಹಣೆ | |
| 27 | ಶಿಕ್ಷಕರ ತರಬೇತಿ ವಿವರ ಮತ್ತು ಎಸ್.ಡಿ.ಎಮ್.ಸಿ. ರಚನೆ | |
| 28 | ಕಲಿಕಾ ಮಾಪನ (1 ರಿಂದ 5 ನೇ ತರಗತಿ) | |
| 29 | ಕಲಿಕಾ ಮಾಪನ (6 ರಿಂದ 8 ನೇ ತರಗತಿ) | |

| | | |
|---|---|---|
| 30 | ಸಿ.ಆರ್.ಪಿಗಳ ಕಾರ್ಯಚಟುವಟಿಕೆ | |
| 31 | ಬಿ.ಆರ್.ಸಿಯವರ ಪಾತ್ರ | |
| 32 | ಬಿ.ಆರ್.ಸಿ ಮತ್ತು ಸಿ.ಆರ್.ಸಿಗಳ ಅಂಶಗಳು | |
| 33 | ಜಿಲ್ಲಾವಾರು ಚಟುವಟಿಕೆಗಳು | |
| **ಅಧ್ಯಾಯ–4 ಕ್ಷೇತ್ರ ಭೇಟಿ ಆಧರಿಸಿಕೊಂಡು ಮಾಡಿರುವ – ವಿಶ್ಲೇಷಣೆ** | | |
| 34 | ಸಾಧನಗಳು | |
| 35 | ಸ್ಯಾಂಪಲ್ | |
| 36 | ವಿಶ್ಲೇಷಣೆಗೆ ಒಳಪಟ್ಟ ಶಾಲೆಗಳು | |
| 37 | ದತ್ತಾಂಶ ಸಂಗ್ರಹಣೆ | |
| 38 | ದತ್ತಾಂಶ ವಿಶ್ಲೇಷಣೆ | |
| 39 | ದತ್ತಾಂಶ ವಿಶ್ಲೇಷಣೆ ಮತ್ತು ಅರ್ಥೈಸುವಿಕೆ | |
| 40 | 1). ಶಾಲಾ ಭೌತಿಕ ಸೌಲಭ್ಯಗಳು | |
| 41 | 2). ಪ್ರೋತ್ಸಾಹದಾಯಕ ಯೋಜನೆಗಳು | |
| 42 | 3). ತರಗತಿ ವೀಕ್ಷಣೆ – ನಲಿಕಲಿ, ಇತರೆ ತರಗತಿಗಳು | |
| 43 | 4). ಮುಖ್ಯ ಶಿಕ್ಷಕರ ಪ್ರಶ್ನಾವಳಿ | |
| 44 | 5). ಎಸ್.ಡಿ.ಎಂ.ಸಿ/ ಸಮುದಾಯದವರ ಪ್ರಶ್ನಾವಳಿ ಹಾಗೂ ಸಂದರ್ಶನದ ನಮೂನೆ | |
| 45 | 6). ಸಿ.ಆರ್.ಪಿಗಾಗಿ ಪ್ರಶ್ನಾವಳಿ | |
| 46 | 7). ಬಿ.ಆರ್.ಪಿಗಾಗಿ ಪ್ರಶ್ನಾವಳಿ | |
| 47 | 8). ವಿದ್ಯಾರ್ಥಿಗಳ ಕಲಿಕೆಯ ಮಾಪನ | |
| | | |
| **ಅಧ್ಯಾಯ–5ವಿಶ್ಲೇಷಣಾ ಅಧ್ಯಯನದ ಒಳನೋಟಗಳು** | | |
| 48 | ವಿಶ್ಲೇಷಣೆಯ ಒಳನೋಟಗಳು | |
| 49 | ಶೈಕ್ಷಣಿಕ ನಿಹಿತಾರ್ಥಗಳು | |
| **ಅಧ್ಯಾಯ–6 ಅನುಬಂಧಗಳು** | | |
| 50 | 1). ಶಾಲಾ ಭೌತಿಕ ಸೌಲಭ್ಯಗಳು ಮತ್ತು ಪ್ರೋತ್ಸಾಹದಾಯಕ ಯೋಜನೆಗಳು | |
| 51 | 3). ತರಗತಿ ವೀಕ್ಷಣೆ – ನಲಿಕಲಿ, ಇತರೆ ತರಗತಿಗಳು | |
| 52 | 4). ಮುಖ್ಯ ಶಿಕ್ಷಕರ ಪ್ರಶ್ನಾವಳಿ | |
| 53 | 5). ಎಸ್.ಡಿ.ಎಂ.ಸಿ/ ಸಮುದಾಯದವರ ಪ್ರಶ್ನಾವಳಿ ಹಾಗೂ ಸಂದರ್ಶನದ ನಮೂನೆ | |
| 54 | 6). ಸಿ.ಆರ್.ಪಿಗಾಗಿ ಪ್ರಶ್ನಾವಳಿ | |
| 55 | 7). ಬಿ.ಆರ್.ಪಿಗಾಗಿ ಪ್ರಶ್ನಾವಳಿ | |
| 56 | 8). ವಿದ್ಯಾರ್ಥಿಗಳ ಕಲಿಕೆಯ ಮಾಪನ 1ರಿಂದ 8ನೇ ತರಗತಿ ಎಲ್ಲಾ ವಿಷಯಗಳು | |

# ಅಧ್ಯಾಯ–1

## ಪೀಠಿಕೆ

ಜಗದೆನ್ನ ಮುಟ್ಟಿಸಬೇಕೆಂದು ಕೊರಗದಿರು
ಮಗುವುನೀಂ ಪೆತ್ತರ್ಗೆ, ಲೋಕಕ್ಕೆ ಸ್ಪರ್ಧಿ
ಹೆಗಲಹೊರೆ ಹುಟ್ಟಿದಗಳಲ್ಲ ಮೀರುತ್ತಿರೆ ನಿನ್ನ
ಗೊಡವೆಗಾರಿಗೆ ಬಿಡುವೋ॥ಮಂಕುತಿಮ್ಮ॥

ಶಿಕ್ಷಣವೆಂದರೆ ಅರಿವಿನ, ಕಲಿಕೆಯ, ಮತ್ತು ಪ್ರಗತಿಯ ಪ್ರಕ್ರಿಯಾಗಿದೆ. ಇದು ಸಮಾಜದ ತಳಹದಿಯಾಗಿದ್ದು, ವಿಶೇಷವಾಗಿ ಆರ್ಥಿಕ ಸಮೃದ್ಧಿ, ಸಾಮಾಜಿಕ ಸಾಮರಸ್ಯ, ಮತ್ತು ರಾಜಕಾರಣದ ಸ್ಥಿರತೆಯನ್ನು ತರುವಲ್ಲಿ ಮುಖ್ಯವಾಗುತ್ತದೆ. ಶಿಕ್ಷಣದ ಮುಖ್ಯ ಉದ್ದೇಶ ಸಾಮಾಜಿಕವಾಗಿ ಎಲ್ಲರನ್ನೂ ಸುಶಿಕ್ಷಿತರನ್ನಾಗಿಸುವುದು, ಕೆಲಸದ ಮೂಲಕ ಆರ್ಥಿಕತೆಯಲ್ಲಿ ಅರ್ಹರನ್ನಾಗಿಸುವುದು, ಸಮಾಜದಲ್ಲಿ ಐಕ್ಯಮತವನ್ನು ತರುವುದು, ಸಮಾಜಕ್ಕೆ ಬೇಕಾದ ಮೌಲ್ಯಗಳು ಮತ್ತು ನೀತಿಗಳನ್ನು ಕಲಿಸುವುದು ಮುಂತಾದವು ಆಗಿವೆ. ಇದಕ್ಕಾಗಿ ಸರ್ಕಾರ ಮತ್ತು ಕಾಳಜಿಯುಳ್ಳ ಎಲ್ಲರೂ ಗಂಭೀರ ಗಮನವನ್ನು ಹರಿಸಬೇಕಾಗಿದೆ.

ಮುಖ್ಯವಾಗಿ ಶಿಕ್ಷಣಾಭಿವೃದ್ಧಿಯ ಪಥದಲ್ಲಿ ಸಂವಿಧಾನ ಸ್ವೀಕರಿಸಿದ ನಂತರ ಆರು ದಶಕಗಳು ಸವೆದಿದ್ದರೂ 'ಉಚಿತ ಕಡ್ಡಾಯ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ' ಇನ್ನೂ ಗುರಿ ಮುಟ್ಟದ ಸಂಗತಿಯಾಗಿದೆ. ಇದರ ಮಧ್ಯೆ ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೂ 'ಗುಣಮಟ್ಟ ಶಿಕ್ಷಣ'ಎಂಬ ಪರಿಕಲ್ಪನೆಯು ಎರಡೂವರೆ ದಶಕ (1986ರ ರಾಷ್ಟ್ರೀಯ ಶಿಕ್ಷಣ ನೀತಿಯ ಜಾರಿ ನಂತರ)ಗಳಲ್ಲಿ ಬಹು ಚರ್ಚಿತ ವಿಷಯವಾಗಿ, ಈಗೀಗ ಸುಧಾರಣಾ ಪ್ರಕ್ರಿಯೆಯ ಫಲವಾಗಿ ಸ್ಪಷ್ಟ ಹಾಗೂ ಉತ್ತಮ ಸ್ವರೂಪವನ್ನು ಪಡೆದುಕೊಳ್ಳುತ್ತಿದೆ.

ಪ್ರತಿದಿನ ಶೈಕ್ಷಣಿಕ ಗುಣಮಟ್ಟದ ಬಗ್ಗೆ ಮಾತನಾಡುವ ನಾವು ಶಿಕ್ಷಣದಲ್ಲಿ ಗುಣಾತ್ಮಾಕತೆ ಎಂದರೇನು ಎಂಬುದರ ಬಗ್ಗೆ ತಿಳಿದುಕೊಳ್ಳಬೇಕಾಗುತ್ತದೆ. ಸಮುದಾಯದ ಕ್ರಿಯಾತ್ಮಕ ಪಾಲ್ಗೊಳುವಿಕೆ, ಸಾಮಾಜಿಕ, ಲಿಂಗ ಸಂಬಂಧಿ ಕಂದಕಗಳ ನಿವಾರಣೆ, ತೃಪ್ತಿಕರ ಗುಣಮಟ್ಟದ ಶಿಕ್ಷಣ ಇವುಗಳನ್ನು ಗುಣಾತ್ಮಕತೆ ಎಂಬುದಾಗಿ **ಸರ್ವ ಶಿಕ್ಷಣ ಅಭಿಯಾನ** ವ್ಯಾಖ್ಯಾನಿಸುತ್ತದೆ.
ಅರ್ಹ ವಯಸ್ಸಿನ ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗಿ ನಿಯಮಿತವಾಗಿ ಹಾಜರಾಗಿ ಗುಣಮಟ್ಟದ ಕಲಿಕೆಯನ್ನು ತೋರುವುದು ಹಾಗೂ ಪ್ರಗತಿ ಹೊಂದಿ ಮುಂದಿನ ತರಗತಿಗೆ ಅರ್ಹತೆಯನ್ನು ಪಡೆಯುವುದು ಗುಣಮಟ್ಟದ ಶಿಕ್ಷಣ**–ಕೆ.ಎಸ್.ಕ್ಯೂ.ಎ.ಒ**

ತನ್ನನ್ನು ತಾನು ಸುಧಾರಣೆ ಮಾಡಿಕೊಳ್ಳಲು ವ್ಯವಸ್ಥೆಗೆ ಇರುವ ಸಾಮರ್ಥ್ಯ ಹಾಗೂ ಆಯಾ ಹಂತದಲ್ಲಿ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯವೇ ಗುಣಾತ್ಮಕತೆ ಎಂಬುದಾಗಿ **ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು** ವ್ಯಾಖ್ಯಾನಿಸುತ್ತದೆ.

ನಮ್ಮನ್ನು ನಾವು ಸುಧಾರಿಸಿಕೊಳ್ಳಬೇಕಾದರೆ ಅಥವಾ ನಿರಂತರವಾಗಿ ಸುಧಾರಣೆ ಮಾಡಿಕೊಳ್ಳಬೇಕಾದರೆ ನಾವು ಎಲ್ಲಿದ್ದೇವೆ ಮತ್ತು ಈ ವರೆಗೆ ಹೇಗೆ ಸಾಗಿದ್ದೇವೆ ಎನ್ನುವುದಕ್ಕೆ ಒಂದು ಆಧಾರ ಬೇಕಾಗಿದೆ. ಶಿಕ್ಷಣದ ಎಲ್ಲಾ ಆಯಾಮಗಳನ್ನು ಒಳಗೊಂಡಿರುವ ಕ್ಯೂ.ಎಂ.ಟಿ ನಮೂನೆಗಳು ಈ ಆಧಾರವನ್ನು ಒದಗಿಸಬಲ್ಲದು. ಕ್ಯೂ.ಎಂ.ಟಿ ನಮೂನೆಗಳು ಬರೇ ಭರ್ತಿ ಮಾಡಿ ಮೇಲಿನ ಹಂತಕ್ಕೆ ತಳ್ಳುವ ಸಾಧನಗಳಲ್ಲ. ಬದಲಾಗಿ ಆಯಾ ಹಂತಗಳಲ್ಲಿ ಸ್ವಾವಲೋಕನ ಮಾಡುತ್ತಾ ಗುಣಮಟ್ಟದಲ್ಲಿ ನಿರಂತರವಾಗಿ ಸುಧಾರಣೆ ಮಾಡಿಕೊಳ್ಳಲು ಇರುವ ಸಾಧನಗಳಾಗಿವೆ ಎನ್ನುವುದನ್ನು ಎಲ್ಲರೂ ಅರ್ಥೈಸಿಕೊಳ್ಳಬೇಕಾಗಿದೆ. ಸ್ವಾವಲೋಕನ ಇಲ್ಲದ ಆಚರಣೆಗಳು ಖಂಡಿತವಾಗಿಯೂ ನಮ್ಮನ್ನು ಗುಣಾತ್ಮಕತೆಯತ್ತ ಒಯ್ಯಲಾರವು.ಆದ್ದರಿಂದ ಕ್ಯೂ.ಎಂ.ಟಿ ಸಾಧನಗಳು ನಮ್ಮನ್ನು ಎಷ್ಟರ ಮಟ್ಟಿಗೆ ಸ್ವಾವಲೋಕನ ಮಾಡುವತ್ತ ಪ್ರೇರೇಪಿಸಿದೆ ಎನ್ನುವುದನ್ನು ತಿಳಿಯಬೇಕಾದದ್ದು ಅತ್ಯಗತ್ಯವಾಗಿದೆ.

ಗುಣಮಟ್ಟದ ಉಸ್ತುವಾರಿ ನಮೂನೆಗಳು ಶಾಲಾ ಹಂತ, ಸಮುದಾಯದ ಹಂತ, ಕ್ಲಸ್ಟರ್ ಹಂತ, ಬ್ಲಾಕ್ ಹಂತ, ಜಿಲ್ಲಾ ಹಂತ ಹೀಗೆ ಹಲವು ಸ್ತರಗಳಲ್ಲಿ ನಮ್ಮ ಪರಿಸರದ ಶೈಕ್ಷಣಿಕ ಪ್ರಗತಿಯ ಅವಲೋಕನಕ್ಕೆ ಅವಕಾಶ ಒದಗಿಸುತ್ತವೆ. ಬಾಹ್ಯ ಮೂಲದಿಂದ ಮೌಲ್ಯಮಾಪನ ಆಗದೇ ತನ್ನದೇ ಪರಿಸರವನ್ನು ತಾನೇ ಸ್ವತ: ಅವಲೋಕಿಸಲು ಅವಕಾಶ ಮಾಡಿಕೊಡುವುದು ಈ ನಮೂನೆಗಳ ಪ್ರಧಾನವಾದ ಆಶಯವಾಗಿದೆ. ಸ್ವಾವಲೋಕನದಿಂದ ತನ್ನನ್ನು ತಾನೇ ಪರಿಷ್ಕರಿಸಿಕೊಳ್ಳಲು ಇಲಾಖೆಯೇ ಒದಗಿಸಿರುವ ಅಮೂಲ್ಯವಾದ ಅವಕಾಶವಾಗಿದೆ. ಇದು ಶಾಲಾ ಶಿಕ್ಷಕ ಅಥವಾ ಮುಖ್ಯ ಶಿಕ್ಷಕ ಮಾತ್ರವಲ್ಲದೆ ಎಲ್ಲಾ ಹಂತಗಳ ಅನುಪಾಲನಾಧಿಕಾರಿಗಳಿಗೂ ಶೈಕ್ಷಣಿಕ ಪ್ರಗತಿಯ ಸ್ವಾವಲೋಕನಕ್ಕೆ ಆಸ್ಪದ ಮಾಡಿಕೊಡುತ್ತದೆ. ಹೀಗೆ ಒಂದು ವ್ಯವಸ್ಥೆಗೆ ತನ್ನನ್ನು ತಾನೇ ಸುಧಾರಿಸಿಕೊಳ್ಳಲು ಸಹಾಯ ಮಾಡುವುದರಿಂದ ಇದು ಹೆಚ್ಚು ಪರಿಣಾಮಕಾರಿಯಾದ ಕ್ರಮವಾಗಿದೆ ಎಂದು ಹೇಳಬಹುದು.

ಕಳೆದ ಏಳೆಂಟು ವರ್ಷಗಳಿಂದ ಗುಣಮಟ್ಟ ಮೇಲುಸ್ತುವಾರಿ ನಮೂನೆಗಳನ್ನು ಬಳಕೆ ಮಾಡಿ ಸ್ವಮೌಲ್ಯಮಾಪನಕ್ಕೆ ಹಚ್ಚುವ ಇಲಾಖೆಯ ಪ್ರಯತ್ನ ನಿರಂತರವಾಗಿ ನಡೆದುಕೊಂಡು ಬಂದಿದೆ. ಆದರೆ ಪ್ರಸಕ್ತ ಸಾಲಿನಲ್ಲಿ ಈ ನಮೂನೆಗಳನ್ನು ಆಧರಿಸಿ ಬ್ಲಾಕ್ ಹಂತ ಹಾಗೂ ಜಿಲ್ಲಾ ಹಂತದಲ್ಲಿಯೇ ವಿಶ್ಲೇಷಣಾ ವರದಿಯನ್ನು ಸಿದ್ಧಪಡಿಸಿ ಸಲ್ಲಿಸಲು ಇಲಾಖೆ ನಿರ್ದೇಶನ ನೀಡಿದೆ. ವಾಸ್ತವವಾಗಿ ಇದೊಂದು ಪರಿಣಾಮಕಾರಿಯಾದ ಕ್ರಮವೇ ಆಗಿದೆ. ತನ್ನದೇ ಬ್ಲಾಕ್ ಹಾಗೂ ಜಿಲ್ಲೆಯ ಶೈಕ್ಷಣಿಕ ಮಾಹಿತಿಯನ್ನು ಆಧರಿಸಿ ವಿಶ್ಲೇಷಿಸಿ, ವಿಮರ್ಶಿಸಿ, ತೂಗಿ ನೋಡಿ ಕೈಗೊಳ್ಳಬೇಕಾಗಿರುವ ಕ್ರಮಗಳ ಕುರಿತ ಒಳನೋಟಗಳು ತಳಮಟ್ಟದಲ್ಲಿ ಅದರಲ್ಲಿಯೂ ಬ್ಲಾಕ್ ಹಂತದಲ್ಲಿ ರೂಪು ತಳೆಯಬೇಕು. ಶಾಲಾ ಹಂತದ ಆಗುಹೋಗುಗಳ ಕುರಿತ ನೇರವಾದ ಸಂಬಂಧ ಹೊಂದಿರುವ ಬ್ಲಾಕ್‌ನಲ್ಲಿ ತಮ್ಮದೇ ಶಾಲೆಗಳ ಗುಣಮಟ್ಟದ ವಾಸ್ತವಗಳನ್ನು ಕುರಿತ ಸ್ಪಷ್ಟ ಅರಿವು ಬಹಳ ಮುಖ್ಯ. ಈ ಅರಿವು ಮುಂದೆ ಯೋಜನೆಗಳನ್ನು ರೂಪಿಸಲು, ಸಮರ್ಪಕವಾಗಿ ಅನುಷ್ಠಾನ ಮಾಡಲು ನಿರ್ದೇಶಕವಾಗಿರುತ್ತದೆ. ಆದ್ದರಿಂದ ಇಂತಹ ಪ್ರಯತ್ನಗಳನ್ನು ಬ್ಲಾಕ್ ಹಾಗೂ ಜಿಲ್ಲಾ ಹಂತದಲ್ಲಿ ಅತ್ಯಂತ ಆಪ್ತವಾಗಿ ಸ್ವೀಕರಿಸಲಾಗಿದೆ.

ಗುಣಾತ್ಮಕ ಕಲಿಕೆ ನಮ್ಮೆಲ್ಲರ ಆಶಯವಾಗಿದೆ. ಇವುಗಳನ್ನು ಆಧರಿಸಿಕೊಂಡು ಎಲ್ಲರೂ ತಮ್ಮ ತಮ್ಮ ಹಂತಗಳಲ್ಲಿ ಸ್ವಾವಲೋಕನ ಮಾಡುತ್ತಾ ಗುಣಮಟ್ಟದಲ್ಲಿ ಸುಧಾರಣೆಯನ್ನು ಮಾಡಬೇಕಾಗಿದೆ. ಈ ಸಾಧನಗಳನ್ನು ಆಧರಿಸಿಕೊಂಡು ಎಲ್ಲಾ ಹಂತದಲ್ಲಿ ಎಷ್ಟರ ಮಟ್ಟಿಗೆ ಸ್ವಾವಲೋಕನ ಸಾಧ್ಯವಾಗಿದೆ ಮತ್ತು ಮಕ್ಕಳ ಕಲಿಕೆಯ ಮಟ್ಟ ಹೇಗಿದೆ ಎನ್ನುವುದನ್ನು ಅಧ್ಯಯನ ಮಾಡುವುದು ಇಂದಿನ ಅಗತ್ಯವಾಗಿದೆ. ಅಂತೆಯೇ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ನಮೂನೆಗಳಲ್ಲಿನ ಮಾಹಿತಿಯನ್ನು ವಿಶ್ಲೇಷಣೆಗೊಳಪಡಿಸಿ ಸಾಕಷ್ಟು ಒಳನೋಟಗಳನ್ನು ಪಡೆದುಕೊಳ್ಳಲಾಗಿದೆ ಹಾಗೂ ಈ ಸಂಬಂಧದ ವರದಿಯನ್ನು ಸಿದ್ಧಪಡಿಸಲಾಗಿದೆ.

## ಅಧ್ಯಯನದ ಹಿನ್ನೆಲೆ ಮತ್ತು ವ್ಯಾಪ್ತಿ:

ಶಿಕ್ಷಣ ಗುಣಮಟ್ಟದ ನಿರ್ವಹಣೆ ಮತ್ತು ಪರಿಣಾಮಕಾರಿ ಮೇಲುಸ್ತುವಾರಿ ಎಲ್ಲ ಶೈಕ್ಷಣಿಕ ಕಾರ್ಯಕ್ರಮಗಳ ಆದ್ಯತೆಯ ವಿಚಾರವಾಗಿದೆ. ಶಿಕ್ಷಣದ ಗುಣಮಟ್ಟ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ನೇರವಾಗಿ ಒಂದಕ್ಕೊಂದು ಸಂಬಂಧಿಸಿರುವುದರಿಂದ ಇವು ದೇಶದ ಪ್ರಗತಿಯನ್ನು ಅಷ್ಟೇ ಮುಖ್ಯವಾಗಿ ಪ್ರಭಾವಿಸುತ್ತವೆ. ದೇಶದಲ್ಲಿನ ಶಿಕ್ಷಣದ ನೀತಿಯು ದೇಶದ ಬೆಳವಣಿಗೆಯ ದಿಕ್ಕನ್ನು ನಿರ್ದೇಶಿಸುತ್ತದೆ ಎಂಬುದ ಸುಳ್ಳಲ್ಲ. ಲಭ್ಯವಿರುವ ಮಾನವ ಸಂಪನ್ಮೂಲವನ್ನು ಸೂಕ್ತ ಶೈಕ್ಷಣಿಕ ಪರಿಕರಗಳ ಮೂಲಕ ಸಾಣೆ ಹಿಡಿದು ದೇಶದ ಪ್ರಗತಿಗೆ ಅನುಕೂಲವಾಗುವ ರೀತಿಯಲ್ಲಿ ಬಳಕೆ ಮಾಡಿಕೊಳ್ಳಬಹುದಾದ ಸಾಧ್ಯತೆಗಳನ್ನು ಎಲ್ಲರೂ ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬೇಕಾದ್ದದ್ದು ಇಂದಿನ ಮೊದಲ ಆದ್ಯತೆಯಾಗಬೇಕು ಎನಿಸುತ್ತದೆ. ಅದರಲ್ಲಿಯೂ ಸಮಾನ ಶಿಕ್ಷಣ, ಏಕರೂಪ ಶಿಕ್ಷಣ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ, ಕೌಶಲ್ಯಯುತವಾದ ಮಾನವ ಸಂಪನ್ಮೂಲ ಎಂಬ ಕಾಳಜಿಗಳು ತೀವ್ರವಾಗುತ್ತಿರುವ ಸಂದರ್ಭದಲ್ಲಿ ಶಿಕ್ಷಣ ನೀಡಲು ಮತ್ತು ಪಡೆಯಲು ಆಯ್ಕೆ ಮಾಡಿಕೊಳ್ಳಬೇಕಾಗಿರುವ ದಾರಿಗಳು ಹೆಚ್ಚು ಸ್ಪಷ್ಟವಾಗಿರುವುದು ತುಂಬಾ ಅಗತ್ಯ.

ಗುಣಮಟ್ಟದ ಉಸ್ತುವಾರಿ ನಮೂನೆಗಳು ಶಾಲಾ ಹಂತ, ಸಮುದಾಯದ ಹಂತ, ಕ್ಲಸ್ಟರ್ ಹಂತ, ಬ್ಲಾಕ್ ಹಂತ, ಜಿಲ್ಲಾ ಹಂತ ಹೀಗೆ ಹಲವು ಸ್ತರಗಳಲ್ಲಿ ನಮ್ಮ ಪರಿಸರದ ಶೈಕ್ಷಣಿಕ ಪ್ರಗತಿಯ ಅವಲೋಕನಕ್ಕೆ ಅವಕಾಶ ಒದಗಿಸುತ್ತವೆ. ಈ ಮೌಲ್ಯಮಾಪನ ಬಾಹ್ಯ ಮೂಲದಿಂದ ಆಗದೇ ತನ್ನದೇ ಪರಿಸರವನ್ನು ತಾನೇ ಸ್ವತ: ಅವಲೋಕಿಸಲು ಅವಕಾಶ ಮಾಡಿಕೊಡುವುದೇ ಈ ನಮೂನೆಗಳ ಪ್ರಧಾನವಾದ ಆಶಯವಾಗಿದೆ. ಇದು ಸ್ವಾವಲೋಕನದಿಂದ ತನ್ನನ್ನು ತಾನೇ ಪರಿಷ್ಕರಿಸಿಕೊಳ್ಳಲು ಇಲಾಖೆಯೇ ಒದಗಿಸಿರುವ ಅಮೂಲ್ಯವಾದ ಅವಕಾಶವಾಗಿದೆ. ಇದು ಶಾಲಾ ಶಿಕ್ಷಕ ಅಥವಾ ಮುಖ್ಯ ಶಿಕ್ಷಕ ಮಾತ್ರವಲ್ಲದೆ ಎಲ್ಲಾ ಹಂತಗಳ ಅನುಪಾಲನಾಧಿಕಾರಿಗಳಿಗೂ ಶೈಕ್ಷಣಿಕ ಪ್ರಗತಿಯ ಸ್ವಾವಲೋಕನಕ್ಕೆ ಆಸ್ಪದ ಮಾಡಿಕೊಡುತ್ತದೆ. ಗುಣಮಟ್ಟದ ಪರಿಕಲ್ಪನೆಯೇ ಒಂದು ವ್ಯವಸ್ಥೆ ತನ್ನನ್ನು ತಾನೇ ಸುಧಾರಿಸಿಕೊಳ್ಳುವುದೇ ಆಗಿರುವುದರಿಂದ ಇದು ಹೆಚ್ಚು ಪರಿಣಾಮಕಾರಿಯಾದ ಕ್ರಮವಾಗಿದೆ.

ಗುಣಮಟ್ಟ ಉಸ್ತುವಾರಿ ನಮೂನೆಗಳು ಶೈಕ್ಷಣಿಕ ಮೌಲ್ಯಮಾಪನದಲ್ಲಿ ಹೆಚ್ಚಿನ ಪಾತ್ರವನ್ನು ವಹಿಸಬೇಕೆಂಬುದು ನಮ್ಮೆಲ್ಲರ ನಿರೀಕ್ಷೆ. ವಾಸ್ತವವಾಗಿ ಈ ನಮೂನೆಗಳ ಮಹತ್ವವನ್ನು ಶಾಲಾ ಹಂತದಿಂದ ಹಿಡಿದು ಎಲ್ಲ ಅನುಪಾಲನಾ ಅಧಿಕಾರಿಗಳು ಹಾಗೂ ಮೇಲಧಿಕಾರಿಗಳಿಗೂ ಅರ್ಥ ಮಾಡಿಸಲು ಹಲವು ಮುಖ್ಯವಾದ ಪ್ರಯತ್ನಗಳು ನಡೆದಿವೆ. ಈ ನಮೂನೆಗಳು ಹೆಚ್ಚು ಸ್ಪಷ್ಟವಾದ ಹಾಗೂ ನಿಖರವಾದ ಸ್ವ ಮೌಲ್ಯಮಾಪನವನ್ನು ನಿರೀಕ್ಷಿಸುತ್ತವೆ. ಆ ಮೂಲಕ ಇರುವ ವಾಸ್ತವ ನೆಲೆಯನ್ನು ತಿಳಿದುಕೊಂಡು ಮುಂದೆ ಸಾಗಬೇಕಾದ ದಿಕ್ಕನ್ನು ನಿರ್ದೇಶಿಸುತ್ತವೆ. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಈ ನಮೂನೆಗಳು ಅಪೇಕ್ಷಿಸುವ ಸಂಗತಿಗಳು ಹಲವು ಕಾರಣಗಳಿಂದ ನೇಪಥ್ಯಕ್ಕೆ ಸರಿದಿರುವುದೇ ಹೆಚ್ಚು. ಇದಕ್ಕೆ ಮುಖ್ಯ ಕಾರಣ ಸ್ವ–ಮೌಲ್ಯಮಾಪನದ ಮಹತ್ವ ಹೆಚ್ಚು ಜನಕ್ಕೆ ಅರ್ಥವಾಗದೇ ಇರುವುದು.

ಸ್ವ–ಮೌಲ್ಯಮಾಪನ ನಿಖರವಾಗಿ ಆಗಬೇಕೆಂದಾಗ; ಸ್ವ–ಮೌಲ್ಯಮಾಪನ ಮಾಡಿಕೊಳ್ಳಬೇಕಾದ ನೌಕರನ ವಿದ್ಯಾರ್ಹತೆ, ತನ್ನ ಜವಾಬ್ದಾರಿಗಳ ಸ್ಪಷ್ಟ ಅರಿವು, ಸ್ವ–ಮೌಲ್ಯಮಾಪನದಿಂದ ಆಗುವ ಪ್ರಯೋಜನಗಳ ಬಗ್ಗೆ ಆತನಲ್ಲಿರುವ ಧನಾತ್ಮಕ ಆಲೋಚನೆ, ಶೈಕ್ಷಣಿಕ ಗುರಿಗಳ ಬಗೆಗಿನ ದೂರದೃಷ್ಟಿ, ಇರುವ ಕೊರತೆಗಳನ್ನು ಸರಿಪಡಿಸಿಕೊಂಡು ಗುಣಾತ್ಮಕತೆಯನ್ನು ಸವಾಲಾಗಿ ಸ್ವೀಕರಿಸುವ ನಾಯಕತ್ವ ಗುಣ ಇವೆಲ್ಲಾ ಮುಖ್ಯವಾದ ಸಂಗತಿಗಳಾಗುತ್ತವೆ. ಈ ಅಂಶಗಳು ಪ್ರಭಾವಿಸುತ್ತಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಗತ್ಯ ಬದಲಾವಣೆಗೆ ಮುಂದಾದಲ್ಲಿ ಗುಣಮಟ್ಟದ ಉಸ್ತುವಾರಿ ನಮೂನೆಗಳಿಂದ ಇನ್ನೂ ಹೆಚ್ಚಿನದನ್ನು ಸಾಧಿಸಿಕೊಳ್ಳಲು ಸಾಧ್ಯವಿದೆ.

ಕಳೆದ ಏಳೆಂಟು ವರ್ಷಗಳಿಂದ ಗುಣಮಟ್ಟ ಮೇಲುಸ್ತುವಾರಿ ನಮೂನೆಗಳನ್ನು ಬಳಕೆ ಮಾಡಿ ಸ್ವಮೌಲ್ಯಮಾಪನಕ್ಕೆ ಹಚ್ಚುವ ಇಲಾಖೆಯ ಪ್ರಯತ್ನ ನಿರಂತರವಾಗಿ ನಡೆದುಕೊಂಡು ಬಂದಿದೆ. ಆದರೆ ಪ್ರಸಕ್ತ ಸಾಲಿನಲ್ಲಿ ಈ ನಮೂನೆಗಳನ್ನು ಆಧರಿಸಿ ಬ್ಲಾಕ್ ಹಂತದಲ್ಲಿಯೇ ವಿಶ್ಲೇಷಣಾ ವರದಿಯನ್ನು ಸಿದ್ಧಪಡಿಸಿ ಸಲ್ಲಿಸಲು ಇಲಾಖೆ ನಿರ್ದೇಶನ ನೀಡಿದೆ. ವಾಸ್ತವವಾಗಿ ಇದೊಂದು ಪರಿಣಾಮಕಾರಿಯಾದ ಕ್ರಮವೇ ಆಗಿದೆ. ತನ್ನದೇ ಬ್ಲಾಕ್‌ನ ಶೈಕ್ಷಣಿಕ ಮಾಹಿತಿಯನ್ನು ಆಧರಿಸಿ ವಿಶ್ಲೇಷಿಸಿ, ವಿಮರ್ಶಿಸಿ ತೂಗಿ ನೋಡಿ ಕೈಗೊಳ್ಳಬೇಕಾಗಿರುವ

ಕ್ರಮಗಳ ಕುರಿತ ಒಳನೋಟಗಳು ತಳಮಟ್ಟದಲ್ಲಿ ಅದರಲ್ಲಿಯೂ ಬ್ಲಾಕ್ ಹಂತದಲ್ಲಿ ರೂಪು ತಳೆಯಬೇಕು. ಶಾಲಾ ಹಂತದ ಆಗುಹೋಗುಗಳ ಕುರಿತ ನೇರವಾದ ಸಂಬಂಧ ಹೊಂದಿರುವ ಬ್ಲಾಕ್‌ನಲ್ಲಿ ತಮ್ಮದೇ ಶಾಲೆಗಳ ಗುಣಮಟ್ಟದ ವಾಸ್ತವಗಳನ್ನು ಕುರಿತ ಸ್ಪಷ್ಟ ಅರಿವು ಬಹಳ ಮುಖ್ಯ. ಈ ಅರಿವು ಮುಂದೆ ಯೋಜನೆಗಳನ್ನು ರೂಪಿಸಲು, ಸಮರ್ಪಕವಾಗಿ ಅನುಷ್ಠಾನ ಮಾಡಲು ನಿರ್ದೇಶಕವಾಗಿಬಿಡುತ್ತದೆ. ಆದ್ದರಿಂದ ಇಂತಹ ಪ್ರಯತ್ನಗಳನ್ನು ಬ್ಲಾಕ್ ಹಂತದಲ್ಲಿ ಅತ್ಯಂತ ಆಪ್ತವಾಗಿ ಸ್ವೀಕರಿಸಲಾಗಿದೆ.ಈ ನಮೂನೆಗಳಲ್ಲಿನ ಮಾಹಿತಿಯನ್ನು ವಿಶ್ಲೇಷಣೆಗೊಳಪಡಿಸಿ ಸಾಕಷ್ಟು ಒಳನೋಟಗಳನ್ನು ಪಡೆದುಕೊಳ್ಳಲಾಗಿದೆ ಹಾಗೂ ಈ ಸಂಬಂಧದ ವರದಿಯನ್ನು ಸಿದ್ಧಪಡಿಸಲಾಗಿದೆ.

## ವಿಶ್ಲೇಷಣಾ ಅಧ್ಯಯನದ ಪ್ರಾಮುಖ್ಯತೆ

ಗುಣಾತ್ಮಕತೆಯ ಬಗ್ಗೆ ಚಿಂತನೆ ಮಾಡಿದಾಗ ಅರ್ಥೈಸಿಕೊಳ್ಳುವುದು, ವಿಚಾರಶೀಲತೆ, ಸೃಜನ ಶೀಲತೆ, ಗ್ರಹಿಕೆ, ಪರಿಕಲ್ಪನೆಗಳನ್ನು ಅರ್ಥೈಸಿಕೊಂಡು ಸ್ಪಷ್ಟವಾಗಿ ಕಲ್ಪನೆ ಹೊಂದುವ ಸಾಮರ್ಥ್ಯ, ಅಮೂರ್ತವಾದವುಳನ್ನು ಸ್ಪುಟವಾಗಿ ಗ್ರಹಿಸುವ ಶಕ್ತಿ, ಚಿಂತನಾ ಶೀಲತೆ ಇವುಗಳ ಒಟ್ಟು ಮೊತ್ತವೇ ಶಿಕ್ಷಣದ ಗುಣಮಟ್ಟವಾಗಿದೆ ಎನ್ನಬಹುದು. ಸುಗಮ ಹಾಗೂ ಸಂತಸ ಕಲಿಕೆಗೆ ನೀಡುವ ಅವಕಾಶಗಳು ಗುಣಮಟ್ಟದ ಸಾಧನೆಗೆ ಪೂರಕವಾಗಿದೆ. ಗುಣಮಟ್ಟ ಎಂದಾಗ ಶಾಲೆಯ ಭೌತಿಕ ವಾತವರಣ, ಶಿಕ್ಷಕರು, ಅದರಲ್ಲಿಯೂ ಅವರ ವೃತ್ತಿಪರತೆಯ ಪ್ರಾವಿಣ್ಯತೆ, ಮುಖ್ಯ ಶಿಕ್ಷಕರು, ಶಾಲಾಭಿವೃದ್ಧಿಯ ನೈಜ್ಯ ಅಸ್ಥಿತ್ವ ಹಾಗೂ ತರಗತಿ ಪ್ರಕ್ರಿಯೆಗಳು ಪ್ರಮುಖ ಎನಿಸುತ್ತವೆ.

ಅಂಕಧಾರಿತ ಫಲಿತಾಂಶ ಸಂಪೂರ್ಣ ಗುಣಾತ್ಮಕತೆಯ ಸೂಚಕವಾಗಲಾರದು. ಆಯ್ದ ಕೆಲವು ವಿಷಯಗಳಲ್ಲಿನ ಕೆಲವು ಸಾಮರ್ಥ್ಯಗಳಲ್ಲಿ ಮಕ್ಕಳು ತಮ್ಮ ಕಲಿಕಾ ಮಟ್ಟವನ್ನು ತೋರಿಸಿದ ಮಾತ್ರಕ್ಕೆ ಅದನ್ನು ಗುಣಮಟ್ಟ ಎಂದು ಹೇಳುವುದು ಅಷ್ಟು ಸಮಂಜಸ ಎನಿಸುವುದಿಲ್ಲ. ನಮ್ಮ ಇಂದಿನ ಪರೀಕ್ಷಾ ಫಲಿತಾಂಶಗಳು ಮಕ್ಕಳ ಮಾನಸಿಕ, ಸಾಮಾಜಿಕ, ಮನೋದೈಹಿಕ ಬೆಳವಣಿಗೆ ಬಗ್ಗೆ ಏನನ್ನು ಹೇಳುವುದಿಲ್ಲ. ಗುಣಾತ್ಮಕ ಶಿಕ್ಷಣ ಮಗುವಿನ ಸಮಗ್ರ ಬೆಳವಣಿಗೆಗೆ ಕಾರಣವಾಗಬೇಕು. ಆದರೆ ಮಗವಿನ ಬೆಳವಣಿಗೆಯ ಎಲ್ಲ ಆಯಾಮಗಳನ್ನು ಬಿಟ್ಟು ಕೇವಲ ಅಂಕಗಳನ್ನೇ ಗುಣಾತ್ಮಕತೆಯ ಸೂಚಕ ಎಂದು ತಿಳಿದಿರುವುದು ದೊಡ್ಡ ಭ್ರಮೆಯೆ ಸರಿ.

ಇಂದು ಸಮಾಜ ಪರಿಮಾಣತ್ಮಕ ವಿಷಯಗಳ ಕಡೆಗೆ ಹೆಚ್ಚು ಗಮನ ಹರಿಸುತ್ತಿದೆ. ಇವರ ಚಿಂತನೆ ಮಕ್ಕಳು ಎಷ್ಟು ಅಂಕಗಳನ್ನು ಗಳಿಸಿದ್ದಾರೆ, ಮಕ್ಕಳು ಎಷ್ಟನೆ ರ್‍ಯಾಂಕ್‌ಗಳಿಸಿದ್ದಾರೆ ಎಂಬುದಾಗಿದೆ. ಆದರೆ ಮಕ್ಕಳು ಯಾವ ಸಾಮರ್ಥ್ಯದಲ್ಲಿ ಎಷ್ಟು ಸಾಧನೆ ಮಾಡಿದ್ದಾರೆ, ಯಾವ ಯಾವ ವಿಷಯದಲ್ಲಿ ಯಾವ ಯಾವ ಸಾಮರ್ಥ್ಯಗಳನ್ನು ತನ್ನಾದಾಗಿಸಿಕೊಂಡಿದ್ದಾರೆ ಎಂಬುದಾಗಿ ಚಿಂತಿಸಬೇಕಾಗಿದೆ.

ಅಹಿಂಸೆಯ ಬಗ್ಗೆ ಪುಟಗಟ್ಟಲೇ ಬರೆದು ಶೇಕಡಾ 100 ಅಂಕ ಪಡೆದ ಮಕ್ಕಳು ಏಕೆ ಭಯೋತ್ಪಾದಕರಾಗುತ್ತಿದ್ದಾರೆ? ಡಿಗ್ರಿಗಳನ್ನು ಪಡೆದು ಹೊರಬಂದ ಯುವಕರು ಸಮಾಜದಲ್ಲಿ ಬದುಕು ಸಾಗಿಸಲು ಕಷ್ಟಪಟ್ಟು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದೇಕೆ? ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿದ ಬಹುತೇಕ ಮಕ್ಕಳು ದಿನನಿತ್ಯದ ಸರಳ ಲೆಕ್ಕಚಾರ ಮಾಡಲು ಹಾಗೂ ಸರಳ ವಾಕ್ಯಗಳನ್ನು ಓದಲು, ಬರೆಯಲು ಅಸಮರ್ಥರಾದಲ್ಲಿ ನಮ್ಮ ಶಿಕ್ಷಣ ಎತ್ತ ಸಾಗುತ್ತಿದೆ ಎಂದು ಚಿಂತಿಸಬೇಕಾಗಿದೆ. ಇಂದಿನ ಶಿಕ್ಷಣ ಮಕ್ಕಳಿಗೆ ಪ್ರಸ್ತುತ ಆಗಬೇಕು, ಮಕ್ಕಳು ಅನುಭವಗಳ ಮೂಲಕ ಜ್ಞಾನವನ್ನು ಕಟ್ಟಿಕೊಳ್ಳಬೇಕು. ಕಟ್ಟಿಕೊಂಡ ಜ್ಞಾನ ಮಕ್ಕಳಲ್ಲಿ ಬಹುಕಾಲ ಉಳಿಯುತ್ತದೆ. **ಹಚ್ಚಿಕೊಂಡ**ಜ್ಞಾನ ಅಲ್ಪಸಮಯದಲ್ಲಿ ನಶಿಸಿ ಹೋಗುತ್ತದೆ. ಆದ್ದರಿಂದ ಅಂಕಾಧಾರಿತ ಫಲಿತಾಂಶ ಗುಣಾತ್ಮಕತೆಯ ಸೂಚಕವಾಗಿ ಉಳಿದಿಲ್ಲವಾದ್ದರಿಂದ ಗುಣಾತ್ಮಕ ಶಿಕ್ಷಣ ನೀಡುವುದು ಸವಾಲೇ ಸರಿ.

ನಿಸರ್ಗದಲ್ಲಿ ಮಾನವ ಸಂಪತ್ತು ಅಮೂಲ್ಯವಾದದ್ದು. ಈ ಪರಿಸರದೊಂದಿಗೆ ಹೊಂದಿಕೊಂಡು ಜೀವಿಸಲು ಮಾನವನಿಗೆ ಗುಣಾತ್ಮಕ ಶಿಕ್ಷಣ ಬೇಕು. ಗುಣಾತ್ಮಕ ಶಿಕ್ಷಣಕ್ಕೆ ಮೂಲಭೂತ ಸೌಲಭ್ಯಗಳು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮಕ್ಕಳ ಸಂಖ್ಯೆಗನುಗುಣವಾಗಿ ಹಾಗೂ ತರಗತಿಗನುಗುಣವಾಗಿ ಸುಸಜ್ಜಿತವಾದ ಕೊಠಡಿಗಳ ಅಗತ್ಯವಿರುತ್ತದೆ. ಶಾಲಾವರಣ ರಕ್ಷಣೆಗೆ ಶಾಲಾ ಕಾಂಪೌಂಡ್ ನಿರ್ಮಿಸುವುದು, ಮಕ್ಕಳಿಗೆ ಕುಳಿತುಕೊಳ್ಳಲು ಪಿಠೋಪಕರಣಗಳು, ಕಂಪ್ಯೂಟರ್‌ಗಳು, ಕಲಿಕಾ ವಾತಾವರಣ ಇವು ಗುಣಾತ್ಮಕ ಶಿಕ್ಷಣಕ್ಕೆ ಪೂರಕವಾದ ಅಂಶಗಳಾಗಿವೆ.

## ಗುಣಾತ್ಮಕ ಶಿಕ್ಷಣದ ಆಯಾಮಗಳು:

ಶಿಕ್ಷಣದಲ್ಲಿ ಗುಣಾತ್ಮಕತೆಯನ್ನು ಸಾಧಿಸುವುದು ನಮ್ಮ ಇಂದಿನ ಆದ್ಯತೆ ಆಗಿದೆ. ಹಲವು ಪ್ರಯೋಗಗಳು, ವರದಿಗಳು ಮುಂದುವರೆದು ಆರ್.ಟಿ.ಇ–2009 ರಲ್ಲಿ ಗುಣಾತ್ಮಕ ಶಿಕ್ಷಣ ಕುರಿತು ಹೆಚ್ಚು ಪ್ರಾಶಸ್ತ್ಯ ನೀಡಲಾಗಿದೆ. ದಾಖಲಾತಿ ಹಾಗೂ ಹಾಜರಾತಿ ಸಾರ್ವತ್ರೀಕರಣದ ಜೊತೆಗೆ ಗುಣಾತ್ಮಕ ಶಿಕ್ಷಣದ ಸಾರ್ವತ್ರಿಕರಣವು ಆಗಬೇಕು.

ಸಾಮಾನ್ಯವಾಗಿ ಗುಣಾತ್ಮಕತೆ ಎಂಬ ಶಬ್ದವು ಒಂದು ವ್ಯವಸ್ಥೆ ಅಥವಾ ವಸ್ತುವಿನ ಗುಣ, ಯೋಗ್ಯ ಎಂಬ ಅರ್ಥವನ್ನು ನೀಡುತ್ತದೆ. ಶಿಕ್ಷಣ ತಜ್ಞರು ತಮ್ಮದೇ ಆದ ವ್ಯಾಖ್ಯಾನವನ್ನು ನೀಡಿದ್ದಾರೆ. ಶಿಕ್ಷಣ ಆಯೋಗಗಳು ಕಾಲಕಾಲಕ್ಕೆ ಅನುಗುಣವಾಗಿ ವ್ಯಾಖ್ಯಾನಿಸಿವೆ. ಆದ್ದರಿಂದ ಗುಣಾತ್ಮಕತೆಯ ಅರ್ಥವು ವಿಶಾಲವಾಗಿದ್ದು ಸಂಕೀರ್ಣವಾಗಿದೆ.

ಅಂತರರಾಷ್ಟ್ರೀಯ ಡೆಲಾರ್ಸ್ (1996) ಆಯೋಗವು ಪ್ರತಿಯೊಬ್ಬ ಕಲಿಕಾದಾರರಿಗೂ ಜೀವನದ ಉದ್ದಕೂ ಕಲಿಯುವ ಅವಕಾಶ ಒದಗಿಸುವುದಾಗಿದ್ದು, ಅವರ ಜ್ಞಾನ, ಕೌಶಲ್ಯ, ಮನೋಭಾವಗಳನ್ನು ಹೆಚ್ಚಿಸುವ ಹಾಗೂ ಅವುಗಳನ್ನು ಬದಲಾವಣೆಯ, ಸಂಕೀರ್ಣದ ಮತ್ತು ಅಂತರ್ ಅವಲಂಬಿತ ಪ್ರಪಂಚಕ್ಕೆ ಅಳವಡಿಸಿಕೊಳ್ಳುವಂತೆ ಮಾಡುವುದೇ ಗುಣಾತ್ಮಕ ಶಿಕ್ಷಣ ಎಂದು ಅಭಿಪ್ರಾಯಿಸಿದೆ.

**'ಗುಣಮಟ್ಟ ಶಿಕ್ಷಣ'–**

**"**ಮಗುವಿನ ಕಾರ್ಯ ಸಾಮರ್ಥ್ಯವೇ ವ್ಯವಸ್ಥೆಯು ಸಾಧಿಸುವ ಗುಣಮಟ್ಟದ ಸಂಕೇತ**"– ಎನ್ ಸಿ ಎಫ್.**

**"**ಶಿಕ್ಷಣದಲ್ಲಿ ಗುಣಮಟ್ಟ ಎಂಬುದು ಉತ್ತಮ ಬದುಕನ್ನು ಬದುಕಲು ಅಗತ್ಯವಾದ ಎಲ್ಲಾ ಕ್ರಿಯೆಗಳನ್ನು ಒಳಗೊಳ್ಳುತ್ತದೆ**"–ಎನ್ ಸಿ ಎಫ್.**

**"**ಶಿಕ್ಷಣವನ್ನು ತಮ್ಮ ವೃತ್ತಿಯನ್ನಾಗಿ ಸ್ವೀಕರಿಸಿ ಕೆಲಸ ಮಾಡುವ ಉತ್ಸಾಹಿ ಶಿಕ್ಷಕರ ಲಭ್ಯತೆಯೂ ಸಹ ಗುಣಮಟ್ಟದ ಒಂದು ಅವಶ್ಯಕ ಷರತ್ತು .**"–ಎನ್‌ಸಿ ಎಫ್.**

**"**ಭೌತಿಕ ಸಂಪನ್ಮೂಲಗಳನ್ನೇ ಗುಣಮಟ್ಟದ ಸಂಕೇತಗಳೆಂದು ಭಾವಿಸಬಾರದು; ಆದರೂ ಸಂಸ್ಥೆಗಳಿಂದ ನಡೆಸಲ್ಪಡುವ ಶಾಲೆಗಳಲ್ಲಿ ಮೂಲ ಸ್ವರೂಪದ ಸೌಲಭ್ಯಗಳನ್ನೂ ಒಳಗೊಂಡ ಸಂಪನ್ಮೂಲದ ಅತಿ ಹೆಚ್ಚು ಮತ್ತು ದೀರ್ಘಕಾಲದ ಕೊರತೆ ಗುಣಮಟ್ಟದ ಬಗ್ಗೆ ಗಂಭೀರವಾದ ಪರಿಣಾಮಗಳನ್ನುಂಟು ಮಾಡುತ್ತದೆ. **" –ಎನ್ ಸಿ ಎಫ್.**

**'ಗುಣಮಟ್ಟ'** ಎಂದರೆ;

1. ಪ್ರಕ್ರಿಯೆ ಪ್ರೇರಿತ ಚಿಂತನೆ ಮಾಡುವುದು.
2. ಪ್ರಕ್ರಿಯೆಯಲ್ಲಿ ನಿರಂತರ ಸುಧಾರಣೆ ಮಾಡುವುದು.
3. ವಾಸ್ತವಾಂಶಗಳೊಂದಿಗೆ ನಿರ್ವಹಿಸುವುದು.
4. ಆದ್ಯತೆಯ ಮೇರೆಗೆ ಆಡಳಿತ ನಿರ್ವಹಿಸುವುದು.
5. ಎಲ್ಲರೂ ಭಾಗವಹಿಸುವಂತೆ ಮಾಡುವುದು– ( ಶಿಕ್ಷಣ ತಜ್ಞ ಡೆಮಿಂಗ್)

ಇತ್ಯಾದಿ ಉಲ್ಲೇಖಗಳನ್ನು ವಿಶ್ಲೇಷಿಸಿದಾಗ 'ಶಿಕ್ಷಣ ಮಗುವಿನಲ್ಲಿ ನಡೆಯುವ ಅರ್ಥಪೂರ್ಣ ಮತ್ತು ಮೌಲ್ಯಯುಕ್ತ ಕಲಿಕೆ; ಕೇವಲ ಭೌತಿಕ ಸವಲತ್ತುಗಳು ಮಾತ್ರವಲ್ಲ' ಎಂಬುದು ವೇದ್ಯವಾಗುತ್ತದೆ. ಹಾಗಾದರೆ, ಗುಣಮಟ್ಟ ಶಿಕ್ಷಣವನ್ನು ನಿರ್ಧರಿಸುವ ಅಂಶಗಳಾವುವು? ಎಂಬ ಜಿಜ್ಞಾಸೆ ಏಳುತ್ತದೆ.

‘ಗುಣಮಟ್ಟ’ ಪದವು ಅಭಿವೃದ್ಧಿ ಸೂಚಕವಾದ ಪದವಾಗಿದೆ. ಪ್ರಸ್ತುತ ಸನ್ನಿವೇಶದಲ್ಲಿ ‘ಅಭಿವೃದ್ಧಿ’ ಎಂದರೆ ಸರ್ವರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ವ್ಯವಸ್ಥೆಯಲ್ಲಿ ಇರುವ ತೊಡಕುಗಳನ್ನು ನಿವಾರಿಸಿ ಸಂಪನ್ಮೂಲಗಳ ಬಳಕೆಯಿಂದ ಪ್ರಗತಿಯ ಕಡೆಗೆ ನಿರಂತರವಾಗಿ ಚಲಿಸುವಂತೆ ಮಾಡುವ ಕಾರ್ಯವಿಧಾನ. ಶಾಲಾ ಶಿಕ್ಷಣದಲ್ಲಿ ಅಭಿವೃದ್ಧಿ ವಿಷಯ ಬಂದಾಗ, ಶಿಕ್ಷಕರ ನೇಮಕ, ಶಾಲಾ ಕೊಠಡಿಗಳ ನಿರ್ಮಾಣ, ಆವರಣ ಗೋಡೆ, ರ್‍ಯಾಂಪ್ಸ್, ಶೌಚಾಲಯ, ಕುಡಿಯುವ ನೀರು, ಪೀಠೋಪಕರಣ, ವಿದ್ಯುತ್, ಸಮವಸ್ತ್ರ, ಪಠ್ಯಪುಸ್ತಕ, ಅಕ್ಷರದಾಸೋಹ, ಕ್ಷೀರ ಭಾಗ್ಯ ಇತ್ಯಾದಿಗಳೆಲ್ಲವೂ ಭೌತಿಕವಾಗಿ ಅಭಿವೃದ್ಧಿಯ ಮಾನಕಗಳಾಗಿ ಪರಿಗಣಿತವಾಗುತ್ತವೆ. ಅದರಂತೆ ಅಭಿವೃದ್ಧಿಯ ಮುಂದುವರಿಕೆಯಾಗಿ ಶೈಕ್ಷಣಿಕ ಅಭ್ಯುದಯವು ಶಿಕ್ಷಕರ ವೃತ್ತಿ ನೈಪುಣ್ಯ, ಶಿಕ್ಷಕರ ಸೇವಾ ಪ್ರಾಂಜಲ ವ್ಯಕ್ತಿತ್ವ, ಮಕ್ಕಳಲ್ಲಿನ ಪ್ರಭುತ್ವ ಕಲಿಕೆ, ಶಿಸ್ತುಬದ್ಧ ನಾಗರೀಕ ಜೀವನ, ಸಮುದಾಯದ ಶಿಕ್ಷಣ ಕಳಕಳಿ, ಆಡಳಿತದ ಉಸ್ತುವಾರಿ, ಅನುಷ್ಠಾನದಲ್ಲಿ ಪೂರ್ಣತೆ, ಇಷ್ಟು ಮಾತ್ರವಲ್ಲದೆ ಶೈಕ್ಷಣಿಕ ಮತ್ತು ಆಡಳಿತ ಪಾರದರ್ಶಕತೆ ತೋರುವ ಜವಾಬ್ದಾರಿ ಮತ್ತು ಉತ್ತರದಾಯಿತ್ವ ಇವುಗಳೆಲ್ಲವೂ ಅಭ್ಯುಯದ ಮಾನಕಗಳಾಗಿ ಗೋಚರಿಸುತ್ತವೆ. ಇವುಗಳ ತಿಳಿವಳಿಕೆ ಮತ್ತು ಚಾಲನೆಗೊಳಿಸಿ ಸ್ಥಿರಗೊಳಿಸುವುದು ಇಂದಿನ ಗುಣಾತ್ಮಕ ಶಿಕ್ಷಣದ ಪ್ರಚಲಿತ ಲಕ್ಷಣಗಳು. ಒಂದು ಅರ್ಥದಲ್ಲಿ ಅಭಿವೃದ್ಧಿಯ ಮಾನದಂಡಗಳು ಅಥವಾ ಸೂಚಕಗಳು ಗುಣಮಟ್ಟದ ಸೂಚಕಗಳೇ ಆಗಿವೆ. ಆದುದರಿಂದ ಸೂಚಕಗಳು ಶಿಕ್ಷಣ ಕ್ಷೇತ್ರದ ಗುರಿಗಳಾದ ಸಾರ್ವತ್ರಿಕ ಲಭ್ಯತೆ, ಸಾರ್ವತ್ರಿಕ ದಾಖಲಾತಿ, ಸಾರ್ವತ್ರಿಕ ಉಳಿಕೆ ಹಾಗೂ ಕಲಿಕೆಯಲ್ಲಿ ಸಾರ್ವತ್ರಿಕ ಗುಣಮಟ್ಟ ಸಾಧಿಸಲು ಅಗತ್ಯವಾದ ಕಾರ್ಯಕ್ರಮಗಳನ್ನು ರೂಪಿಸಲು ‘ಶೈಕ್ಷಣಿಕ ಅಭಿವೃದ್ಧಿ ಸೂಚಕಗಳು’ ಅಥವಾ ‘ಗುಣಮಟ್ಟ ಸೂಚಕಗಳು’ ನೆರವಾಗುತ್ತವೆ. ಶಿಕ್ಷಣ ಕಾರ್ಯಕ್ರಮಗಳ ಯೋಜನೆ ತಯಾರಿಕೆ, ಅನುಷ್ಠಾನ, ಪ್ರಗತಿ ಪರಿಶೀಲನೆ, ಮೇಲುಸ್ತುವಾರಿ, ಮೌಲ್ಯಮಾಪನ ಕೈಗೊಳ್ಳುವಲ್ಲಿ ಸೂಚಕಗಳ ಪಾತ್ರ ಮಹತ್ವದ್ದಾಗಿದೆ.

**ಶೈಕ್ಷಣಿಕ ವ್ಯವಸ್ಥೆಯನ್ನು ಅತ್ಯಂತ ಸುಲಭವಾಗಿ ಈ ರೇಖಾ ಚಿತ್ರದ ಮೂಲಕವಾಗಿ ತಿಳಿಯಬಹುದು.**

**ಶೈಕ್ಷಣಿಕ ವ್ಯವಸ್ಥೆ**




ಶೈಕ್ಷಣಿಕ ವ್ಯವಸ್ಥೆಯ ಗುಣಮಟ್ಟ ಉತ್ತಮವಾಗಬೇಕಾದರೆ 'ಗುಣಮಟ್ಟದ ಹೂಡಿಕೆ’ ಅಷ್ಟೇ ಇದ್ದರೆ ಸಾಲದು, ‘ಶೈಕ್ಷಣಿಕ ಪ್ರಕ್ರಿಯೆ’ಯೂ ಸಹ ಗುಣಮಟ್ಟದಲ್ಲಿ ಇರಬೇಕಾಗುತ್ತದೆ. ಅತ್ಯುತ್ತಮ ಗುಣಮಟ್ಟದ ಹೂಡಿಕೆ ಮತ್ತು ಪ್ರಕ್ರಿಯೆಗಳಿಂದ ‘ಗುಣಮಟ್ಟದ ಉತ್ಪನ್ನ’ ಪಡೆಯಲು ಸಾಧ್ಯವಿದೆ. ರಾಷ್ಟ್ರದ ಸುಶಿಕ್ಷಿತ, ಜವಾಬ್ದಾರಿಯುತ ರಾಷ್ಟ್ರಪ್ರೇಮಿ ನಾಗರಿಕರ ಸೃಜನೆಯೇ ಶೈಕ್ಷಣಿಕ ವ್ಯವಸ್ಥೆಯ ‘ಉತ್ತಮ ಉತ್ಪನ್ನ'ಗಳೆನ್ನಬಹುದು. ಶೈಕ್ಷಣಿಕ ವ್ಯವಸ್ಥೆಯ ಮೂರು ಅಂಗಗಳಾದ ಹೂಡಿಕೆ, ಪ್ರಕ್ರಿಯೆ, ಉತ್ಪನ್ನಗಳಿಗೆ ಸಂಬಂಧಿಸಿದಂತೆ ಮೂರು ರೀತಿಯ ಸೂಚಕಗಳನ್ನು ಗುರುತಿಸಬಹುದಾಗಿರುವಂತೆ ಅವುಗಳನ್ನು ಒಟ್ಟಾರೆ ಶಿಕ್ಷಣ ಗುಣಮಟ್ಟದ ಸೂಚಕಗಳು ಎಂತಲೂ ಪರಿಗಣಿತವಾಗುತ್ತವೆ.

- ಮೂಲಭೂತ ಹಾಗೂ ಇತರ ಸೌಲಭ್ಯಗಳು

- ಕಲಿಕಾ ಪರಿಸರ
- ಶಿಕ್ಷಕರ ಪೂರ್ವಸಿದ್ಧತೆ
- ಪಠ್ಯಕ್ರಮ ಮತ್ತು ಕಲಿಕಾ ಸಾಮಾಗ್ರಿಗಳು
- ಬೋದನಾ ಕಲಿಕಾ ಪ್ರಕ್ರಿಯೆ
- ಮೌಲ್ಯಮಾಪನ, ಮೇಲುಸ್ತುವಾರಿ ಮತ್ತು ಮೇಲ್ವಿಚಾರಣೆ
- ಸಮುದಾಯದ ಭಾಗವಹಿಸುವಿಕೆ ಮತ್ತು ಒತ್ತಾಸೆ

ಈ ಮೇಲ್ಕಂಡ ಅಂಶಗಳನ್ನು ಆಧರಿಸಿಯೇ ಆರ್.ಟಿ.ಇ –2009 ತನ್ನ ಸೆಕ್ಷನ್ 19ರ ಅನ್ವಯ ಪ್ರತಿ ರಾಜ್ಯವು ತಮ್ಮ ಶಿಕ್ಷಣದ ಗುಣಾತ್ಮಕತೆಗೆ ಸೂಚಕಗಳನ್ನು ರಚಿಸಿಕೊಂಡು ಅದರನ್ವಯ ಕಾರ್ಯ ನಿರ್ವಹಿಸಲು ಸೂಚಿಸಿದೆ.

ಕೊನೆಯದಾಗಿ, ಗುಣಮಟ್ಟವು ಒಂದು ನಿರಂತರ ಪ್ರಯಾಣವೇ ಹೊರತು ಅಂತಿಮ ಗುರಿಯಲ್ಲ. ಈ ಹಾದಿಯಲ್ಲಿ, ಎಲ್ಲಿ ಸಮಸ್ಯೆಗಳು ಇರುವುದಿಲ್ಲವೋ ಅಲ್ಲಿ ಗುಣಮಟ್ಟ ಮೇಲ್ಮಟ್ಟದಲ್ಲಿರುತ್ತದೆ. ಎಲ್ಲಿ ಸಮಸ್ಯೆಗಳು ಹೆಚ್ಚಾಗಿರುತ್ತವೆಯೋ ಅಲ್ಲಿ ಗುಣಮಟ್ಟ ಕೆಳಮಟ್ಟದಲ್ಲಿರುತ್ತವೆ. ಆದ ಕಾರಣ ನಮ್ಮ ಶಾಲೆಗಳಲ್ಲಿನ ಭೌತಿಕ, ಶೈಕ್ಷಣಿಕ, ಮತ್ತು ಶಿಕ್ಷಣ ಪ್ರೋತ್ಸಾಹಕ ಕಾರ್ಯಕ್ರಮಗಳನ್ನು ನಿರ್ವಹಿಸುವಾಗ ವ್ಯವಸ್ಥಿತವಾದ ಪ್ರಯತ್ನಗಳನ್ನು ಭಾಗೀದಾರರೆಲ್ಲರೂ ಹದವರಿತು ಮುಂದುವರೆಸಿದರೆ ಗುಣಮಟ್ಟದಲ್ಲಿ ಸುಧಾರಣೆ ತರಬಹುದು.

## ಗುಣಮಟ್ಟ ಶಿಕ್ಷಣದ ಸೂಚಕಗಳು (ಕಲಿಕೆಯನ್ನು ಅನುಲಕ್ಷಿಸಿದಂತೆ )

'ತರುಲತೆಯಲ್ಲಿರುವ ಸುಂದರ ಹೂವುಗಳು' ಎಂದು ಮಕ್ಕಳನ್ನು ಸಂಬೋಧಿಸುವ ಭಾವುಕ ಕವಿವಾಣಿ ಇದೆ. ಮಕ್ಕಳು ಸಮಾಜ ಪ್ರಕೃತಿಯ ಸಹಜವಾದ ಸೃಷ್ಟಿ, ಅವು ಹೇಗೆ ದೈಹಿಕವಾಗಿ ಬೆಳವಣಿಗೆ ಹೊಂದುತ್ತಾ ಹೋಗುತ್ತಾರೋ ಹಾಗೆಯೇ ಜ್ಞಾನವನ್ನೂ ಗಳಿಸುತ್ತಾ ಹೋಗುತ್ತಾರೆ. ಮಕ್ಕಳು ತಮ್ಮ ಸುತ್ತಣ ಪರಿಸರದೊಡನೆ ಸಕ್ರಿಯವಾಗಿ ತೊಡಗಿಸಿಕೊಂಡು ಹೊಸದನ್ನು ವೀಕ್ಷಿಸುತ್ತಾ, ಶೋಧಿಸುತ್ತಾ, ಪ್ರತಿಕ್ರಿಯಿಸುತ್ತಾ, ಕಲ್ಪಿಸುತ್ತಾ ಪ್ರಶ್ನೆಗಳಿಗೆ ತಮ್ಮದೇ ಉತ್ತರ–ಅರ್ಥಗಳನ್ನು ಕಂಡುಕೊಳ್ಳುತ್ತಿರುತ್ತಾರೆ. ಬಾಲ್ಯದ ಒಡನಾಡಿಗಳು, ಕುಟುಂಬದ ಹಿರಿಯರು, ನೆರೆಹೊರೆ ಸಹಜೀವಿಗಳು ಇವರೆಲ್ಲರ ಜೊತೆ ಸಂಬಂಧವನ್ನು ಕಂಡುಕೊಂಡು ಸಜಹ ಬದಲಾವಣೆ ಮತ್ತು ಅಭಿವೃದ್ಧಿ ಹೊಂದುತ್ತಾರೆ. ಈ ಎಲ್ಲಾ ಕಲಿಕೆಯು ಅನೌಪಚಾರಿಕವಾಗಿಯೇ ನಡೆಯುತ್ತದೆ. ಅಂದರೆ ಮಗುವಿನ ಗ್ರಹಿಕೆ, ಜ್ಞಾನಭಂಡಾರದ ರಚನೆ, ಸ್ವಸಾಮರ್ಥ್ಯ ಬೆಳವಣಿಗೆ ಮುಂತಾದವು ವಿಕಾಸವಾಗಲು ಅನೌಪಚಾರಿಕ ಕಲಿಕೆ ಸೂಕ್ತ ಭೂಮಿಕೆಯನ್ನು ಒದಗಿಸುತ್ತದೆ. ಆದರೆ ಈ ಕಲಿಕಾ ಪ್ರಕ್ರಿಯು ಸಾಧ್ಯವಾಗಬೇಕಾದರೆ ಮಕ್ಕಳು ಪ್ರಯತ್ನ ಶೀಲರಾಗಬೇಕಾರೆ ಅವಕಾಶಗಳು ಒದಗಬೇಕು, ಸಂದರ್ಭಗಳನ್ನು ಯುಕ್ತಿಯಿಂದ ನಿಭಾಯಿಸುವ ಶಕ್ತಿ ಸಾಧ್ಯವಾಗಬೇಕು ಮತ್ತು ಮಾಡಿದ ತಪ್ಪುಗಳನ್ನು ತಿದ್ದಿಕೊಳ್ಳಲು ಅತ್ಯಗತ್ಯ ಔಪಚಾರಿಕ ಶಾಲಾ ವಾತಾವರಣ ಬೇಕು. ಶಾಲೆಗಳಲ್ಲಿ ನಡೆಯುವ ಶಿಕ್ಷಣ ಪ್ರಕ್ರಿಯೆಗಳು ಕಲಿಕೆಗೆ ಬೇಕಾದ ಹೊಸ ಆಯಾಮಗಳನ್ನು ಸೃಷ್ಟಿಸುತ್ತವೆ.

ಮಕ್ಕಳು ಏನು ಕಲಿಸಬೇಕು? ಹೇಗೆ ಕಲಿಸಬೇಕು? ಎಂಬುದು ತೀವ್ರ ಆಸಕ್ತಿಕರವಾದ ವಿಷಯ. ಭೋಧನಾ ವಿಧಾನ, ಬೋಧನಾ ಕಾರ್ಯ, ಕಲಿಯುವವರಿಗಾಗಿ ನಮ್ಮಿಂದ ರೂಪಿತವಾದ ಪಠ್ಯಗಳು, ಅವರಿಂದ ಸಹಬಾಳ್ವೆ, ಗ್ರಹಣಾ ಶಕ್ತಿ ಮುಂತಾದುವುಗಳಿಗೆ ಹೆಚ್ಚು ಒತ್ತು ಕೊಡುತ್ತವೆ. ಬದಲಾಗಿ ಪರಿಸರ ಅರಿಯುವ ಸಹಜ ಕುತೂಹಲ, ನೈಜ ವಿಧಾನಗಳಿಂದ ಜ್ಞಾನ ರಚನೆ, ಸನ್ನಿವೇಶಗಳ ಜೊತೆ ಬೆರೆಯುವ ಮತ್ತು ಇತರರೊಡನೆ ವ್ಯವಹರಿಸುವ ರೀತಿ ಮುಂಥಾದವನ್ನು ಆದರಿಸಿ ಮಕ್ಕಳಲ್ಲಿ ಸಕ್ರಿಯತೆ ಮತ್ತು ಸೃಜನಾತ್ಮಕ ಸಾಮರ್ಥ್ಯಗಳನ್ನು ಪೋಷಿಸಬೇಕು. ಇಂತಹ ಎಲ್ಲಾ ಅಂಶಗಳ ಕುರಿತ ಸಮಗ್ರ ದೃಷ್ಟಿಕೋನ ಹೊಂದಿರುವ ಶಿಕ್ಷಣವು ಪಠ್ಯ ಮತ್ತು ಸಹಪಠ್ಯಗಳ ಮೂಲಕ ದೊರೆತಾಗ ಮಗುವಿನಲ್ಲಿ ಗುಣಮಟ್ಟದ ಕಲಿಕೆಯನ್ನು ನಾವು ನಿರೀಕ್ಷಿಸಬಹುದಾಗಿದೆ. ಒಟ್ಟಿನಲ್ಲಿ ಒಂದು ವಿದ್ಯಾರ್ಥಿ ಅಥವಾ ವಿದ್ಯಾರ್ಥಿಗಳ ಗುಂಪಿನ ನಿರ್ದಿಷ್ಟ ಅಗತ್ಯಗಳನ್ನು ಪೂರೈಸುವ ಶಿಕ್ಷಣದ ಅವಶ್ಯಕತೆ ಇಂದು ಹೆಚ್ಚಾಗಿದೆ. ಇದರ ಅಳವಡಿಕೆಗೆ

ಕಲಿಕೆಯ ಕನಿಷ್ಠ ಮಟ್ಟಗಳು, ನಲಿಕಲಿ ಪ್ರಯೋಗಗಳು, ಕೆ.ಎಸ.ಕ್ಯು.ಎ.ಒ ಅಧ್ಯಯನಗಳು, ಆರ್.ಟಿ.ಇಯ ಶಿಫಾರಸ್ಸುಗಳು ಇವುಗಳ ಮೂಲಕ ಬಂದಂತಹ ಶೈಕ್ಷಣಿಕ ಅನುಭಗಳ ಹಿನ್ನೆಲೆಯಲ್ಲಿ ಪುನರ್‍ರಚಿತವಾದ ವಿಷಯವಾರು ಕಲಿಕಾ ಮಾನಕಗಳನ್ನು ಗುಣಮಟ್ಟ ಶಿಕ್ಷಣದ ಪ್ರಧಾನ ಸೂಚಕಗಳೆಂದು ಪರಿಗಣಿಸಲು ಯಾವ ಅಭ್ಯಂತರವೂ ಇಲ್ಲವಷ್ಟೆ !

## ಅಧ್ಯಯನ ಉದ್ದೇಶಗಳು

1. ಜಿಲ್ಲಾ ಉಸ್ತುವಾರಿ ನಮೂನೆಯನ್ನು ಆಧರಿಸಿ ವಿಶ್ಲೇಷಣೆ ಮಾಡುವುದು.
2. ಬ್ಲಾಕ್‍ವಾರು ಹಾಗೂ ತರಗತಿವಾರು ಸರಾಸರಿ ಹಾಜರಾತಿಯನ್ನು ಗುರ್ತಿಸಿ ವಿಶ್ಲೇಷಿಸುವುದು.
3. ಸಿ.ಡಬ್ಲ್ಯೂ.ಎಸ್.ಎನ್ ಮತ್ತು ಒ.ಒ.ಎಸ್.ಸಿ ಮಕ್ಕಳ ದಾಖಲಾತಿ ಮತ್ತು ಹಾಜರಾತಿಯನ್ನು ಉತ್ತಮಪಡಿಸಲು ತಾಲ್ಲೂಕಿನಲ್ಲಿ ಕೈಗೊಂಡ ಕ್ರಮಗಳನ್ನು ತಿಳಿಯುವುದು.
4. ನಿರಂತರ ಮತ್ತು ವ್ಯಾಪಕ ಮೌಲ್ಯ ಮಾಪನದ ಅನುಷ್ಠಾನದಲ್ಲಿ ಶಾಲಾ, ಕ್ಲಸ್ಟರ್, ಬ್ಲಾಕ್ ಹಾಗೂ ಜಿಲ್ಲಾ ಹಂತದ ಅನುಪಾಲನೆಯನ್ನು ತಿಳಿಯುವುದು.
5. ತರಗತಿ ಕೋಣೆಯಲ್ಲಿ ಶಿಕ್ಷಕರ ತರಬೇತಿ ಅನುಷ್ಠಾನಗೊಂಡಿರುವ ಬಗ್ಗೆ ಮಾಹಿತಿ ಸಂಗ್ರಹಿಸುವುದು.
6. ಶೈಕ್ಷಣಿಕ ಗುಣಮಟ್ಟದ ಹೆಚ್ಚಳದಲ್ಲಿ ಸಮುದಾಯದ ಪಾತ್ರವನ್ನು ಅರಿಯುವುದು.
7. ಮಕ್ಕಳ ಕಲಿಕಾ ಮಟ್ಟದ ವಾಸ್ತವತೆಯನ್ನು ಅರಿಯುವುದು.
8. ಬಿ.ಆರ್.ಪಿ ಮತ್ತು ಸಿ.ಆರ್.ಪಿಗಳು ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದರಲ್ಲಿ ತೊಡಗಿಸಿಕೊಂಡಿರುವರೆ ಎಂದು ವಿಶ್ಲೇಷಿಸುವುದು.
9. ಕ್ಯೂ.ಎಂ.ಟಿ ನಮೂನೆಗಳು ಎಷ್ಟರಮಟ್ಟಿಗೆ ಸ್ವಾವಲೋಕನ ಮಾಡಿಕೊಳ್ಳಲು ಸಹಾಯ ಮಾಡಿವೆ? ಎಂದು ತಿಳಿಯುವುದು.

## ಅಧ್ಯಯನ ತಂಡ

### ಮಾರ್ಗದರ್ಶನ:

ಶ್ರೀ ಬಿ ಕೆ ಬಸವರಾಜ, ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು(ಅಭಿವೃದ್ಧಿ), ಡಯಟ್, ಮೈಸೂರು.

### ವಿಶ್ಲೇಷಣಾ ಅಧ್ಯಯನದ ಸಂಯೋಜಕರು ಮತ್ತು ಮಾರ್ಗದರ್ಶಕರು:

ಶ್ರೀನಾರಾಯಣ ಗೌಡ ಟಿ. ಆರ್, ಉಪಪ್ರಾಂಶುಪಾಲರು ಹಾಗೂ ಕ್ಯು.ಎಂ.ಟಿ ನೋಡಲ್ ಅಧಿಕಾರಿಗಳು, ಡಯಟ್, ಮೈಸೂರು.

ಶ್ರೀಮತಿ ಮಂಜುಳಾ, ಹಿರಿಯ ಉಪನ್ಯಾಸಕರು ಮತ್ತು ರೆಮ್ಸ್ ನೋಡೆಲ್ ಅಧಿಕಾರಿಗಳು, ಡಯಟ್, ಮೈಸೂರು

### ವಿಶ್ಲೇಷಣೆ ಮತ್ತು ವರದಿ ರಚನೆ:

1) ಶ್ರೀಮತಿ ಪುಷ್ಪಲತಾ ಕೆಎಂ, ಉಪನ್ಯಾಸಕರು, ಡಯಟ್, ಮೈಸೂರು.
2) ಶ್ರೀಮತಿ ಮಮತ ಎಂ, ಉಪನ್ಯಾಸಕರು, ಡಯಟ್, ಮೈಸೂರು.
3) ಶ್ರೀಮತಿ ತ್ರಿವೇಣಿ ಕೆ, ಉಪನ್ಯಾಸಕರು, ಡಯಟ್, ಮೈಸೂರು.

# ಮೈಸೂರು ಜಿಲ್ಲೆಯ ನಕ್ಷೆ




## ಮೈಸೂರಿನ ಪುಟ್ಟದೊಂದು ಸುಂದರ ಶಾಲೆ



ಶಾಲೆಯ ಹೊರಭಾಗದಲ್ಲಿ ಅರಳಿದ ಶಾಲಾ ವನ– ಜತನದಿಂದ ರಕ್ಷಿಸುತ್ತಾರೆ ಸಂಕನಹಳ್ಳಿಯ ಊರಜನ

# ಅಧ್ಯಾಯ–2

## ಜಿಲ್ಲಾ ಮೇಲುಸ್ತುವಾರಿ ನಮೂನೆ(ಡಿಎಂಎಫ್)ಆಧರಿಸಿದ

## ವಿಶ್ಲೇಷಣೆ

(ಅ) **ಶೈಕ್ಷಣಿಕ ಜಿಲ್ಲೆ:** ಮೈಸೂರು

**ಕಾರ್ಯ ನಿರ್ವಹಿಸುತ್ತಿರುವ ಬಿಆರ್‌ಸಿ ಮತ್ತು ಸಿಆರ್‌ಪಿಗಳ ಮಾಹಿತಿ:**

**ಕೋಷ್ಟಕ–1**

| ಕ್ರ. ಸಂ | ಬ್ಲಾಕ್‌ಗಳು | ಸಿ.ಆರ್.ಸಿ ಗಳ ಸಂಖ್ಯೆ | ಕಾರ್ಯನಿರ್ವಹಿಸುತ್ತಿರುವ ಸಿ.ಆರ್.ಸಿಗಳ ಸಂಖ್ಯೆ | ಖಾಲಿ ಇರುವ ಸಿ.ಆರ್.ಸಿಗಳ ಸಂಖ್ಯೆ | ಬಿ.ಆರ್.ಸಿಗಳ ಸಂಖ್ಯೆ | ಕಾರ್ಯನಿರ್ವಹಿಸುತ್ತಿರುವ ಬಿ.ಆರ್.ಸಿಗಳ ಸಂಖ್ಯೆ | ಖಾಲಿ ಇರುವ ಬಿ.ಆರ್.ಸಿಗಳ ಸಂಖ್ಯೆ |
|---|---|---|---|---|---|---|---|
| 1 | ಹೆಚ್ ಡಿ ಕೋಟೆ | 20 | 18 | 2 | 1 | 1 | 0 |
| 2 | ಹುಣಸೂರು | 27 | 26 | 1 | 1 | 1 | 0 |
| 3 | ಕೆ ಆರ್ ನಗರ | 21 | 21 | 0 | 1 | 1 | 0 |
| 4 | ಮೈಸೂರು ಉತ್ತರ | 9 | 8 | 1 | 1 | 1 | 0 |
| 5 | ಮೈಸೂರು ಗ್ರಾಮಾಂತರ | 5 | 5 | 0 | 1 | 1 | 0 |
| 6 | ಮೈಸೂರು ದಕ್ಷಿಣ | 21 | 19 | 2 | 1 | 0 | 1 |
| 7 | ನಂಜನಗೂಡು | 28 | 25 | 3 | 1 | 1 | 0 |
| 8 | ಪಿರಿಯಾಪಟ್ಟಣ | 24 | 24 | 0 | 1 | 1 | 0 |
| 9 | ಟಿ ನರಸೀಪುರ | 21 | 20 | 1 | 1 | 1 | 0 |
| ಒಟ್ಟು | | **176** | **166** | 10 | 8 | 8 | 1 |

**ಸಿಆರ್‌ಪಿಗಳ ಮಾಹಿತಿ:**

ಗ್ರಾಫ್–1




- ಕ್ಲಸ್ಟರ್ ಹಂತದಲ್ಲಿ 176 ಸಿಆರ್‌ಸಿ ಹುದ್ದೆಗಳು ಮಂಜೂರಾಗಿದ್ದು, 10 ಹುದ್ದೆಗಳು ಭರ್ತಿಯಾಗಿರುವುದಿಲ್ಲ.

- ನಂಜನಗೂಡು, ಎಚ್‌ಡಿಕೋಟೆ ಮತ್ತು ಮೈಸೂರು ದಕ್ಷಿಣ ವಲಯಗಳಲ್ಲಿ ಉಳಿದ ತಾಲ್ಲೂಕುಗಳಿಗೆ ಹೋಲಿಸಿದಾಗ ಹೆಚ್ಚು ಸಿಆರ್‌ಪಿಗಳ ಹುದ್ದೆ ಖಾಲಿ ಇರುತ್ತದೆ.
- ಹುದ್ದೆಗಳು ಖಾಲಿ ಇದ್ದರೂ ಇಲಾಖಾ ಕಾರ್ಯಗಳಿಗೆ ಯಾವುದೇ ರೀತಿಯ ತೊಂದರೆಯಾಗದ ರೀತಿಯಲ್ಲಿ ಹಿಂದೆ ಕಾರ್ಯ ನಿರ್ವಹಿಸಿರುವ ಸಿಆರ್‌ಪಿ ಅಥವಾ ಕ್ರಿಯಾಶೀಲ ಶಿಕ್ಷಕರನ್ನು ಬಳಸಿಕೊಂಡು ಕಾರ್ಯ ನಿರ್ವಹಿಸಲಾಗುತ್ತಿದೆ.
- ಹುದ್ದೆ ಭರ್ತಿಯಾಗಿದ್ದರೂ ಸಿಆರ್‌ಪಿಗಳಿಗೆ ಬುನಾದಿ ತರಬೇತಿ ಆಗಿರುವುದಿಲ್ಲ. ಆದರೂ ಬ್ಲಾಕ್ ಹಂತದಲ್ಲಿ ಮಾರ್ಗದರ್ಶನ ನೀಡಿ ಕಾರ್ಯ ನಿರ್ವಹಿಸಲಾಗುತ್ತಿದೆ.
- ಕ್ರೋಡೀಕೃತ ಎಸ್‌ಎಂಎಫ್ ಆಧರಿಸಿದ ಸ್ವಾವಲೋಕನಗಳಿಂದ ಸಿಆರ್‌ಸಿ ಬಲವರ್ಧನೆ ಮತ್ತು ಕ್ಲಸ್ಟರ್ ಕ್ರಿಯಾ ಯೋಜನೆ ಸಿದ್ದಪಡಿಸುವ ಬಗ್ಗೆ ಸಿಆರ್‌ಪಿಗಳಿಗೆ ಹೆಚ್ಚಿನ ಮಾರ್ಗದರ್ಶನದ ಅಗತ್ಯವಿದೆ.

### ಆ) ಜಿಲ್ಲೆಯಲ್ಲಿರುವ ಒಟ್ಟು ಬಿ.ಆರ್.ಸಿ.ಗಳ ಸಂಖ್ಯೆ: 9

**ಗ್ರಾಫ್–2**




- ಮೈಸೂರು ಜಿಲ್ಲೆಯ ಒಟ್ಟು 9 ಶೈಕ್ಷಣಿಕ ಬ್ಲಾಕ್‌ಗಳಲ್ಲಿ ಒಟ್ಟು 8 ವಲಯಗಳಲ್ಲಿ ಬಿಆರ್‌ಸಿ ಹುದ್ದೆಗಳು ಭರ್ತಿಯಾಗಿದ್ದು ಒಟ್ಟು 8 ಬಿಆರ್‌ಸಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.
- ಮೈಸೂರು ದಕ್ಷಿಣ ವಲಯದಲ್ಲಿ ಬಿಆರ್‌ಸಿ ಹುದ್ದೆ ಭರ್ತಿಯಾಗಿಲ್ಲ, ಆದರೆ ಬಿಆರ್‌ಪಿಯವರು ಪ್ರಭಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಈ ಹುದ್ದೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಆದರೆ ಬಿಆರ್‌ಸಿ ಹುದ್ದೆ ಭರ್ತಿಯಾದಲ್ಲಿ ಕಾರ್ಯವನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಬಹುದಾಗಿದೆ.

## 1. (ಎ) ಜಿಲ್ಲೆಯಲ್ಲಿರುವ ಒಟ್ಟು ಸರ್ಕಾರಿ ಶಾಲೆಗಳ ಸಂಖ್ಯೆ:

**ಕೋಷ್ಟಕ–2:**

| ತಾಲ್ಲೂಕುಗಳ ಹೆಸರು | ಕಿಪ್ರಾ ಶಾಲೆ | | ಹಿಪ್ರಾ ಶಾಲೆ | | ಒಟ್ಟು | |
|---|---|---|---|---|---|---|
| | 2013–14 | 2014–15 | 2013–14 | 2014–15 | 2013–14 | 2014–15 |
| ಹೆಚ್ ಡಿ ಕೋಟೆ | 170 | 171 | 136 | 135 | 306 | 306 |
| ಹುಣಸೂರು | 160 | 158 | 126 | 127 | 286 | 285 |
| ಕೆ ಆರ್ ನಗರ | 115 | 115 | 105 | 105 | 220 | 220 |
| ಮೈಸೂರು ಉತ್ತರ | 21 | 14 | 55 | 55 | 76 | 69 |
| ಮೈಸೂರು ಗ್ರಾಮಾಂತರ | 95 | 95 | 122 | 122 | 217 | 217 |
| ಮೈಸೂರು ದಕ್ಷಿಣ | 7 | 6 | 27 | 28 | 34 | 34 |
| ನಂಜನಗೂಡು | 111 | 111 | 155 | 155 | 266 | 266 |
| ಪಿರಿಯಾಪಟ್ಟಣ | 170 | 170 | 115 | 115 | 285 | 285 |
| ಟಿ ನರಸೀಪುರ | 116 | 113 | 114 | 116 | 230 | 229 |
| ಒಟ್ಟು | 965 | 953 | 955 | 958 | 1920 | 1911 |

**ಗ್ರಾಫ್–3**




- 2013–14 ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳ ಸಂಖ್ಯೆ 1920 ಇದ್ದು, 2014–15 ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳ ಸಂಖ್ಯೆ 1911 ಕ್ಕೆ ಇಳಿದಿದೆ ಇದೆ. ಮೈಸೂರು ಉತ್ತರ ವಲಯದ ಉರ್ದು ಸೆಂಟ್ರಲ್ ಕ್ಲಸ್ಟರ್‌ನಲ್ಲಿ ಒಂದೇ ಆವರಣದಲ್ಲಿ 07 ಉರ್ದು ಶಾಲೆಗಳನ್ನು ನಡೆಸುತ್ತಿದ್ದು, ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದ ಕಾರಣದಿಂದ 2014–2015 ಶೈಕ್ಷಣಿಕ ಸಾಲಿನಿಂದ ಮಾನ್ಯ ಆಯುಕ್ತರ ಆದೇಶದ ಮೇರೆಗೆ 07 ಶಾಲೆಗಳನ್ನು ವಿಲೀನಗೊಳಿಸಿ ಸ.ಉ.ಹಿ.ಪ್ರಾ ಸೆಂಟ್ರಲ್ ಶಾಲೆಯಾಗಿ ಮಾರ್ಪಡಿಸಲಾಗಿದೆ.
- ಹುಣಸೂರು ಮತ್ತು ಟಿ ನರಸೀಪುರ ತಾಲ್ಲೂಕುಗಳಲ್ಲಿ ತಲಾ ಒಂದೊಂದು ಶಾಲೆಗಳನ್ನು ವಿದ್ಯಾರ್ಥಿಗಳು ಇಲ್ಲದಿರುವ ಕಾರಣ ಮುಚ್ಚಲಾಗಿರುತ್ತದೆ.

**ಕೋಷ್ಟಕ 3:**

| ಕ್ರ. ಸಂ | ಬ್ಲಾಕ್‌ಗಳು | ಜಿಲ್ಲೆಯಲ್ಲಿರುವ ಒಟ್ಟು ಸರ್ಕಾರಿ ಶಾಲೆಗಳ ಸಂಖ್ಯೆ | | | | | | |
|---|---|---|---|---|---|---|---|---|
| | | 1 ರಿಂದ 5 | 6 ರಿಂದ 8 | 1 ರಿಂದ 8 | 1 ರಿಂದ 7 | 6 ಮತ್ತು 7 | ಇತರೆ | ಒಟ್ಟು |
| **1** | ಹೆಚ್.ಡಿ.ಕೋಟೆ | 171 | 0 | 40 | 94 | 0 | 1 | 306 |
| **2** | ಹುಣಸೂರು | 158 | 2 | 36 | 89 | 0 | 0 | 285 |
| **3** | ಕೆ.ಆರ್.ನಗರ | 115 | 2 | 22 | 78 | 0 | 3 | 220 |
| **4** | ಮೈ.ಉತ್ತರ | 14 | 0 | 11 | 44 | 0 | 0 | 69 |
| **5** | ಮೈ.ದಕ್ಷಿಣ | 6 | 0 | 1 | 27 | 0 | 0 | 34 |
| **6** | ಮೈ.ಗ್ರಾಮಾಂತರ | 95 | 0 | 37 | 84 | 0 | 1 | 217 |
| **7** | ನಂಜನಗೂಡು | 111 | 0 | 58 | 97 | 0 | 0 | 266 |
| **8** | ತಿ.ನರಸೀಪುರ | 113 | 1 | 42 | 72 | 0 | 1 | 229 |
| **9** | ಪಿರಿಯಾಪಟ್ಟಣ | 170 | 1 | 27 | 87 | 0 | 0 | 285 |
| | | **953** | **6** | **274** | **672** | **0** | **6** | **1911** |

**ಗ್ರಾಫ್–4**




- 2014–15 ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳ ಸಂಖ್ಯೆ 1911 ಇದೆ. ಇದರಲ್ಲಿ ಜಿಲ್ಲೆಯಲ್ಲಿ 1 ರಿಂದ 5ನೇ ತರಗತಿಯೊಳಗೆ ಒಟ್ಟು 953 ಶಾಲೆಗಳು, 6 ರಿಂದ 8ನೇ ತರಗತಿಯೊಳಗೆ 6 ಶಾಲೆಗಳು, 1 ರಿಂದ 8ನೇ ತರಗತಿಯೊಳಗೆ 274 ಶಾಲೆಗಳು ಹಾಗೂ 1 ರಿಂದ 7ನೇ ತರಗತಿಯೊಳಗೆ 672 ಶಾಲೆಗಳು ಅಸ್ತಿತ್ವದಲ್ಲಿವೆ. ಇದಲ್ಲದೇ ಕಸ್ತೂರ ಬಾ ಹಾಗೂ ಆದರ್ಶ ಶಾಲೆಗಳು 06 ಇರುತ್ತವೆ. 1911 ಶಾಲೆಗಳು ಮಾತ್ರ ಪ್ರಸಕ್ತ ವರ್ಷ ಮೈಸೂರು ಜಿಲ್ಲೆಯಲ್ಲಿ ಸರ್ಕಾರದ ಆಶಯದಂತೆ ಕರ್ತವ್ಯ ನಿರ್ವಹಿಸುತ್ತಿವೆ.

## ಅವಕಾಶದ ದರ (Access rate and un-served habitation)

### ಜನವಸತಿ ಪ್ರದೇಶ ಮತ್ತು ಅವಕಾಶ– ಕಿರಿಯ ಪ್ರಾಥಮಿಕ

**ಕೋಷ್ಟಕ–4:**

| ತಾಲ್ಲೂಕು | ಒಟ್ಟು ಜನವಸತಿ ಪ್ರದೇಶಗಳು | ಜನವಸತಿ ಪ್ರದೇಶದಲ್ಲಿ | | ಪ್ರಾಥಮಿಕ ಶಾಲೆಗಳು ಇಲ್ಲದಿರುವ ಜನವಸತಿ ಪ್ರದೇಶಗಳು (ಒಂದು ಕಿ.ಮೀ ಒಳಗೆ)) | ಪ್ರಾಥಮಿಕ ಶಾಲೆಗಳಿಲ್ಲದ ಜನವಸತಿ ಪ್ರದೇಶಗಳು (ಇಜಿಎಸ್) | | | | | | ಪ್ರಾಥಮಿಕ ಶಾಲೆಗಳು ಲಭ್ಯತೆಯ ಪ್ರಮಾಣ |
|---|---|---|---|---|---|---|---|---|---|---|---|
| | | ಪ್ರಾಥಮಿಕ ಶಾಲೆಗಳು(ಒಂದು ಕಿ.ಮೀ ಒಳಗೆ) | ಇಜಿಎಸ್ (ಒಂದು ಕಿ.ಮೀ ಒಳಗೆ)) | | ಸರ್ಕಾರಿ ನಿಯಮದ ಪ್ರಕಾರ ಜನವಸತಿ ಪ್ರದೇಶಕ್ಕೆ ಅರ್ಹವಾಗಿರುವ ಪ್ರಾ.ಶಾ | ಜನವಸತಿ ಪ್ರದೇಶಗಳಲ್ಲಿನ ಮಕ್ಕಳ ಸಂಖ್ಯೆ | ಜನವಸತಿ ಪ್ರದೇಶಕ್ಕೆ ಅರ್ಹವಾಗಿರುವ ಪ್ರಾ.ಶಾಲೆಗಳು/(ಇಜಿಎಸ್) | ಇ ಜನವಸತಿ ಪ್ರದೇಶಗಳಲ್ಲಿನ ಮಕ್ಕಳ ಸಂಖ್ಯೆ | ಜನವಸತಿ ಪ್ರದೇಶಕ್ಕೆ ಅರ್ಹವಾಗಿರುವ ಪ್ರಾ.ಶಾಲೆಗಳು/(ಇಜಿಎಸ್) | ಇ ಜನವಸತಿ ಪ್ರದೇಶಗಳಲ್ಲಿನ ಮಕ್ಕಳ ಸಂಖ್ಯೆ | |
| ಹೆಚ್ ಡಿ ಕೋಟೆ | 399 | 380 | 0 | 19 | 0 | 0 | 0 | 0 | 0 | 0 | 100 |
| ಹುಣಸೂರು | 280 | 278 | 0 | 2 | 2 | 82 | 0 | 0 | 0 | 0 | 99.2 |
| ಕೆ ಆರ್ ನಗರ | 241 | 241 | 0 | 0 | 0 | 0 | 0 | 0 | 0 | 0 | 100 |
| ಮೈಸೂರು (ಉ) | 86 | 86 | 0 | 0 | 0 | 0 | 0 | 0 | 0 | 0 | 100 |
| ಮೈಸೂರು. ಗ್ರಾ | 239 | 239 | 0 | 0 | 1 | 55 | 0 | 0 | 0 | 0 | 100 |
| ಮೈಸೂರು(ದ) | 31 | 31 | 0 | 0 | 0 | 0 | 0 | 0 | 0 | 0 | 100 |
| ನಂಜನಗೂಡು | 283 | 280 | 0 | 3 | 0 | 0 | 0 | 0 | 0 | 0 | 99.1 |
| ಪಿರಿಯಾಪಟ್ಟಣ | 250 | 250 | 0 | 0 | 0 | 0 | 0 | 0 | 0 | 0 | 100 |
| ಟಿ ನರಸೀಪುರ | 224 | 224 | 0 | 0 | 0 | 0 | 0 | 0 | 0 | 0 | 100 |
| ಒಟ್ಟು | 2,033 | 2,009 | 0 | 24 | 3 | 137 | 0 | 0 | 0 | 0 | 99.8 |

**Source: Children Census-2012**

- ಹಲವಾರು ಸಹಜ ಅಡೆತಡೆಗಳು ಅಂದರೆ ದೂರವರ್ತಿತ ಪ್ರದೇಶಗಳು, ಬಹುದೂರದ ಪ್ರದೇಶಗಳು, ಪ್ರಮುಖ ಹೆದ್ದಾರಿಗಳು ಇತ್ಯಾದಿ ಇದ್ದರೂ ಒಂದು ಕಿ.ಮೀ ಅಂತರದಲ್ಲಿ ಶೇ99.8 ರಷ್ಟು ಕಿರಿಯ ಪ್ರಾಥಮಿಕ ಶಾಲೆಗಳು ಹಾಗೂ 3ಕಿ.ಮೀ ಅಂತರದಲ್ಲಿ ಶೇ 100 ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಗಿದೆ.

### ಜನವಸತಿ ಪ್ರದೇಶ ಮತ್ತು ಅವಕಾಶ– ಹಿರಿಯ ಪ್ರಾಥಮಿಕ ಶಾಲೆ

**ಕೋಷ್ಟಕ–5**

| ತಾಲ್ಲೂಕು | ಒಟ್ಟು ಜನವಸತಿ ಪ್ರದೇಶಗಳು | ಜನವಸತಿ ಪ್ರದೇಶದಲ್ಲಿ | | ಹಿರಿಯಪ್ರಾಥಮಿಕ ಶಾಲೆಗಳು ಇಲ್ಲದಿರುವ ಜನವಸತಿ ಪ್ರದೇಶಗಳು / EGS) | ಹಿರಿಯ ಪ್ರಾಥಮಿಕ ಶಾಲೆಗಳಿಲ್ಲದ ಜನವಸತಿ ಪ್ರದೇಶಗಳು(ಇಜಿಎಸ್) | | | |
|---|---|---|---|---|---|---|---|---|
| | | ಹಿ.ಪ್ರಾ. ಶಾಲೆಗಳ ಸಂಖ್ಯೆ | ಇಜಿಎಸ್ ಹಿ.ಪ್ರಾ.ಶಾ | | ಜನವಸತಿ ಪ್ರದೇಶಕ್ಕೆ ಅರ್ಹವಾಗಿರುವ ಹಿ.ಪ್ರಾ.ಶಾ. | ಇ ಜನವಸತಿ ಪ್ರದೇಶಗಳಲ್ಲಿನ ಮಕ್ಕಳ ಸಂಖ್ಯೆ EGS) | ಹಿ.ಪ್ರಾ.ಶಾ.ಗಳನ್ನು ಒದಗಿಸಲಾಗದ ಜನವಸತಿ ಪ್ರದೇಶಗಳು | ಇ ಜನವಸತಿ ಪ್ರದೇಶಗಳಲ್ಲಿನ ಮಕ್ಕಳ ಸಂಖ್ಯೆ |
| ಹೆಚ್ ಡಿ ಕೋಟೆ | 399 | 369 | 0 | 30 | 4 | 64 | 0 | 0 |
| ಹುಣಸೂರು | 280 | 280 | 0 | 0 | 2 | 54 | 0 | 0 |
| ಕೆ ಆರ್ ನಗರ | 241 | 241 | 0 | 0 | 0 | 0 | 0 | 0 |
| ಮೈಸೂರು ಉತ್ತರ | 86 | 86 | 0 | 0 | 3 | 80 | 0 | 0 |
| ಮೈಸೂರು. ಗ್ರಾ | 239 | 239 | 0 | 0 | 11 | 194 | 0 | 0 |
| ಮೈಸೂರು ದಕ್ಷಿಣ | 31 | 31 | 0 | 0 | 0 | 0 | 0 | 0 |
| ನಂಜನಗೂಡು | 283 | 283 | 0 | 0 | 7 | 103 | 0 | 0 |
| ಪಿರಿಯಾಪಟ್ಟಣ | 250 | 250 | 0 | 0 | 0 | 0 | 0 | 0 |
| ಟಿ ನರಸೀಪುರ | 224 | 224 | 0 | 0 | 12 | 194 | 0 | 0 |
| ಒಟ್ಟು | 2033 | 2003 | 0 | 30 | 39 | 689 | 0 | 0 |

**Source: Children Census-2012**

## ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಶಾಲೆಗೆ ಹೋಗುವ ಮಕ್ಕಳ ಜನಸಂಖ್ಯೆ ಹಾಗೂ ಅವಕಾಶದ ಅನುಪಾತ

**ಕೋಷ್ಟಕ: 6**

| ತಾಲ್ಲೂಕು | 1–5 ತರಗತಿಮಕ್ಕಳ ದಾಖಲಾತಿ | ಒಂದು ಕಿ.ಮೀ ವ್ಯಾಪ್ತಿಯೊಳಗೆ ಶಾಲಾ ಸೌಲಭ್ಯವಿರುವ ಮಕ್ಕಳ ಸಂಖ್ಯೆ(1–5) | ಪ್ರಾಥಮಿಕ ಸೌಲಭ್ಯದ ದರ |
|---|---|---|---|
| ಹೆಚ್ ಡಿ ಕೋಟೆ | 21439 | 21439 | 100 |
| ಹುಣಸೂರು | 22839 | 22839 | 100 |
| ಕೆ ಆರ್ ನಗರ | 18238 | 18238 | 100 |
| ಮೈಸೂರು ಉತ್ತರ | 43474 | 43474 | 100 |
| ಮೈಸೂರು ಗ್ರಾಮಾಂತರ | 31912 | 31912 | 100 |
| ಮೈಸೂರು ದಕ್ಷಿಣ | 25159 | 25159 | 100 |
| ನಂಜನಗೂಡು | 28188 | 28188 | 100 |
| ಪಿರಿಯಾಪಟ್ಟಣ | 19570 | 19570 | 100 |
| ಟಿ ನರಸೀಪುರ | 20413 | 20413 | 100 |
| ಒಟ್ಟು | 231232 | 231232 | 100 |

**Source: Children Census-2012**

**ಗ್ರಾಫ್–5**




- ಎಲ್ಲ ತಾಲ್ಲೂಕುಗಳಲ್ಲಿಯೂ ಪ್ರಾಥಮಿಕ ಶಾಲೆಗಳ ಲಭ್ಯತೆಯ ದರ ನೂರರಷ್ಟಿದೆ.

**ಕೋಷ್ಟಕ: 7**

| ತಾಲ್ಲೂಕು | 6&7 ನೇ ತರಗತಿಮಕ್ಕಳ ದಾಖಲಾತಿ | ಮೂರು ಕಿ.ಮೀ ವ್ಯಾಪ್ತಿಯೊಳಗೆ ಶಾಲಾ ಸೌಲಭ್ಯವಿರುವ ಮಕ್ಕಳ ಸಂಖ್ಯೆ(6&7) | ಹಿರಿಯ ಪ್ರಾಥಮಿಕ ಸೌಲಭ್ಯದ ದರ |
|---|---|---|---|
| ಹೆಚ್ ಡಿ ಕೋಟೆ | 9223 | 9223 | 100 |
| ಹುಣಸೂರು | 9856 | 9856 | 100 |
| ಕೆ ಆರ್ ನಗರ | 7889 | 7889 | 100 |
| ಮೈಸೂರು ಉತ್ತರ | 17715 | 17715 | 100 |
| ಮೈಸೂರು ಗ್ರಾ | 13116 | 13116 | 100 |
| ಮೈಸೂರು ದಕ್ಷಿಣ | 11480 | 11480 | 100 |
| ನಂಜನಗೂಡು | 13053 | 13053 | 100 |
| ಪಿರಿಯಾಪಟ್ಟಣ | 8403 | 8403 | 100 |
| ಟಿ ನರಸೀಪುರ | 8688 | 8688 | 100 |
| ಒಟ್ಟು | 57686 | 57686 | 100 |

**Source: Children Census-2012**

**ಗ್ರಾಫ್–6**




- ಎಲ್ಲ ತಾಲ್ಲೂಕುಗಳಲ್ಲಿಯೂ ಹಿರಿಯ ಪ್ರಾಥಮಿಕ ಶಾಲೆಗಳ ಲಭ್ಯತೆಯ ದರ ನೂರರಷ್ಟಿದೆ.

## ತಾಲ್ಲೂಕುವಾರು ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ:

**ಕೋಷ್ಟಕ: 8**

| ತಾಲ್ಲೂಕು | ಶಿಕ್ಷಣ ಇಲಾಖೆ(ಕಿಪ್ರಾಶಾ) | | | ಶಿಕ್ಷಣ ಇಲಾಖೆ(ಹಿ.ಪ್ರಾಶಾ) | | | ಒಟ್ಟು ಶಿಕ್ಷಕರ ಸಂಖ್ಯೆ | | |
|---|---|---|---|---|---|---|---|---|---|
| | S | W | ಶೇ | S | W | ಶೇ | S | W | ಶೇ |
| ಹೆಚ್ ಡಿ ಕೋಟೆ | 592 | 322 | 54.39 | 796 | 648 | 81.41 | 1,388 | 970 | 69.88 |
| ಹುಣಸೂರು | 380 | 355 | 93.42 | 755 | 708 | 93.77 | 1,135 | 1,063 | 93.66 |
| ಕೆ ಆರ್ ನಗರ | 303 | 286 | 94.39 | 607 | 571 | 94.07 | 910 | 857 | 94.18 |
| ಮೈಸೂರು ಉತ್ತರ | 106 | 94 | 88.68 | 462 | 432 | 93.51 | 568 | 526 | 92.61 |
| ಮೈಸೂರು ಗ್ರಾಮಾಂತರ | 244 | 238 | 97.54 | 877 | 825 | 94.07 | 1,121 | 1,063 | 94.83 |
| ಮೈಸೂರು ದಕ್ಷಿಣ | 21 | 17 | 80.95 | 158 | 146 | 92.41 | 179 | 163 | 91.06 |
| ನಂಜನಗೂಡು | 287 | 257 | 89.55 | 1,088 | 929 | 85.39 | 1,375 | 1,186 | 86.25 |
| ಪಿರಿಯಾಪಟ್ಟಣ | 404 | 352 | 87.13 | 664 | 550 | 82.83 | 1,068 | 902 | 84.46 |
| ಟಿ ನರಸೀಪುರ | 346 | 272 | 78.61 | 730 | 621 | 85.07 | 1,076 | 893 | 82.99 |
| ಒಟ್ಟು | 2,683 | **2,193** | 81.74 | 6,137 | **5,430** | 88.48 | 8,820 | 7,623 | 86.43 |

**Source : DISE 2013**

**ಗ್ರಾಫ್–7**




### ಅ) ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಸ್ಥಾನಮಾನ

- ಹಾಲಿ ಕರ್ತವ್ಯ ನಿರ್ವಹಿಸುತ್ತಿರುವವರು – 2193
- ಹೆಚ್.ಡಿ.ಕೋಟೆ ಹಾಗೂ ತಿ.ನರಸೀಪುರ ತಾಲ್ಲೂಕುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಪ್ರಮಾಣ ಕ್ರಮವಾಗಿ ಶೇ 54.3 ಮತ್ತು ಶೇ 78.61 ಆಗಿದ್ದು ಇದು ಉಳಿದ ತಾಲ್ಲೂಕುಗಳಿಗಿಂತ ಕಡಿಮೆಯಾಗಿದೆ.
- ಹೆಚ್.ಡಿ ಕೋಟೆ, ಪಿರಿಯಾಪಟ್ಟಣ, ಟಿ ನರಸೀಪುರ ತಾಲ್ಲೂಕುಗಳಲ್ಲಿ ಖಾಲಿ ಹುದ್ದೆಗಳ ಸಂಖ್ಯೆ ಹೆಚ್ಚಾಗಿರುವುದನ್ನು ಗಮನಿಸಬಹುದಾಗಿದೆ.

### ಆ) ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಸ್ಥಾನಮಾನ

- ಹಾಲಿ ಕರ್ತವ್ಯ ನಿರ್ವಹಿಸುತ್ತಿರುವವರು – 5430

- ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಶೇಕಡಾವಾರು ಸಂಖ್ಯೆ ಹೆಚ್.ಡಿ.ಕೋಟೆ, ಪಿರಿಯಾಪಟ್ಟಣ ಹಾಗೂ ತಿ.ನರಸೀಪುರ ತಾಲ್ಲೂಕುಗಳಲ್ಲಿ 81.4, 82.83, ಹಾಗು 85.06 ಆಗಿದ್ದು, ಇದು ಉಳಿದ ತಾಲ್ಲೂಕುಗಳಿಗಿಂತ ಕಡಿಮೆಯಿರುತ್ತದೆ.

### ಇ)ಪ್ರಾಥಮಿಕ ಹಂತದಲ್ಲಿ ತಾಲೂಕುವಾರು ಶಿಕ್ಷಕರ ಸಂಖ್ಯೆ

- ಸರ್ಕಾರಿ ಶಾಲೆಗಳಲ್ಲಿ ಅತಿಹೆಚ್ಚು ಅಂದರೆ, ಮೈಸೂರು ಗ್ರಾಮಾಂತರದಲ್ಲಿ ಶೇ.94.8, ಕೆ.ಆರ್.ನಗರ ತಾಲೂಕಿನಲ್ಲಿ ಶೇ 94.1 ರಷ್ಟು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದು, ಅತಿ ಕಡಿಮೆ ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಶೇ 69.88ರಷ್ಟು ಶಿಕ್ಷಕರು ಕಾರ್ಯ ನಿರ್ವಹಿಸುತಿರುವುದು ಕಂಡು ಬರುತ್ತದೆ.
- ನಗರದಿಂದ ಹೆಚ್ಚು ದೂರದಲ್ಲಿರುವ ಮತ್ತು ಹಾಡಿ ಪ್ರದೇಶದ ಶಾಲೆಗಳು ಎಚ್‌ಡಿಕೋಟೆಯಲ್ಲಿರುವ ಕಾರಣ ಶಿಕ್ಷಕರ ಸಂಖ್ಯೆ ಕಡಿಮೆ ಇರುತ್ತದೆ.

### 2) ಎ) ಆರ್.ಟಿ.ಇ. ಪ್ರಕಾರ ಪಿ.ಟಿ.ಆರ್. ಹೊಂದಿರುವ ಶಾಲೆಗಳ ಸಂಖ್ಯೆ.

ತಾಲ್ಲೂಕ್‌ವಾರು ಮಕ್ಕಳ ಮತ್ತು ಶಿಕ್ಷಕರ ಅನುಪಾತ(PTR Block Wise)

**ಕೋಷ್ಟಕ: 9**

| ತಾಲ್ಲೂಕು | ಪ್ರಾಥಮಿಕ ಹಂತ | | |
|---|---|---|---|
| | ಕಿ.ಪ್ರಾ | ಹಿ.ಪ್ರಾ | ಪ್ರಾಥಮಿಕ |
| ಹೆಚ್ ಡಿ ಕೋಟೆ | 25 | 28 | 25 |
| ಹುಣಸೂರು | 26 | 27 | 26 |
| ಕೆ ಆರ್ ನಗರ | 23 | 23 | 23 |
| ಮೈಸೂರು ಉತ್ತರ | 28 | 28 | 28 |
| ಮೈಸೂರು ಗ್ರಾಮಾಂತರ | 23 | 24 | 23 |
| ಮೈಸೂರು ದಕ್ಷಿಣ | 26 | 26 | 26 |
| ನಂಜನಗೂಡು | 28 | 28 | 28 |
| ಪಿರಿಯಾಪಟ್ಟಣ | 27 | 27 | 27 |
| ಟಿ ನರಸೀಪುರ | 26 | 26 | 25 |
| ಒಟ್ಟು | 26 | 26 | 26 |

**Source: Dise 2013**

**ಗ್ರಾಫ್–8**



- ಮೈಸೂರು ಉತ್ತರ ಹಾಗೂ ನಂಜನಗೂಡಿನ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ಮತ್ತು ಶಿಕ್ಷಕರ ಅನುಪಾತ 1 : 28 ಇದ್ದು ಉಳಿದ ತಾಲ್ಲೂಕುಗಳಿಗಿಂತ ಇದು ಹೆಚ್ಚಾಗಿದೆ.
- ಕೆ.ಆರ್.ನಗರ ತಾಲ್ಲೂಕ್ ನಲ್ಲಿ ಈ ಪ್ರಮಾಣ 1:23 ಇದ್ದು ಮಕ್ಕಳು ಮತ್ತು ಶಿಕ್ಷಕರ ಅನುಪಾತ ಉತ್ತಮವಾಗಿದೆ.

### ವ್ಯತಿರಿಕ್ತ ಪಿ.ಟಿ.ಆರ್.ಹೊಂದಿರುವ ಶೇಕಡಾವಾರು ಶಾಲೆಗಳ ಸಂಖ್ಯೆ:

**ಕೋಷ್ಟಕ–10:**

| ತಾಲ್ಲೂಕುಗಳ ಹೆಸರು | ಪಿಟಿಆರ್ 30 ಕ್ಕಿಂತ ಹೆಚ್ಚಾಗಿರುವ ಶೇಕಡಾವಾರು ಶಾಲೆಗಳ ಸಂಖ್ಯೆ | ಪಿಟಿಆರ್ 35 ಕ್ಕಿಂತ ಹೆಚ್ಚಾಗಿರುವ ಶೇಕಡಾವಾರು ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ |
|---|---|---|
| ಹೆಚ್ ಡಿ ಕೋಟೆ | 11.11 | 80 |
| ಹುಣಸೂರು | 4.43 | 76.38 |
| ಕೆ ಆರ್ ನಗರ | 0 | 51.43 |
| ಮೈಸೂರು ಉತ್ತರ | 0 | 61.82 |
| ಮೈಸೂರು ಗ್ರಾಮಾಂತರ | 3.16 | 91.8 |
| ಮೈಸೂರು ದಕ್ಷಿಣ | 0 | 28.57 |
| ನಂಜನಗೂಡು | 1.8 | 85.81 |
| ಪಿರಿಯಾಪಟ್ಟಣ | 5.88 | 70.43 |
| ಟಿ ನರಸೀಪುರ | 5.31 | 76.72 |
| ಒಟ್ಟು | **4.93** | **74.74** |

**ಗ್ರಾಫ್–9:**




- ಎಚ್‌ಡಿಕೋಟೆ ತಾಲ್ಲೂಕಿನಲ್ಲಿ ಶೇ 11.11ರಷ್ಟು ಶಾಲೆಗಳಲ್ಲಿ ವ್ಯತಿರಿಕ್ತ ಪಿಟಿಆರ್ ಇರುವುದು ಕಂಡು ಬರುತ್ತದೆ. ಶಾಲೆಗಳು ಕಾಡಂಚಿನಲ್ಲಿದ್ದು ಏಕೋಪಾಧ್ಯಾಯ ಶಾಲೆಗಳು ಕಂಡು ಬಂದಿವೆ. ಶಿಕ್ಷಕರ ನೇಮಕಾತಿ ಆಗದಿರುವುದು ಇದಕ್ಕೆ ಕಾರಣವಾಗಿರಬಹುದು
- ಮೈಸೂರು ಉತ್ತರ, ದಕ್ಷಿಣ ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿ ವ್ಯತಿರಿಕ್ತ ಪಿಟಿಆರ್ ಇರುವುದಿಲ್ಲ.

ಗ್ರಾಫ್–10




- ಪಿಟಿಆರ್ ಪ್ರಮಾಣ 35ಕ್ಕಿಂತ ಹೆಚ್ಚಾಗಿರುವ ಶಾಲೆಗಳ ಸಂಖ್ಯೆ ಮೈಸೂರು ಗ್ರಾಮಾಂತರ ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿ ಹೆಚ್ಚಾಗಿ ಕಂಡುಬಂದಿದ್ದು ಮೈಸೂರು ದಕ್ಷಿಣದಲ್ಲಿ ಕಡಿಮೆ ಇರುತ್ತದೆ.

**ಕಳೆದ ತ್ರೈಮಾಸಿಕ ಅವಧಿಯಲ್ಲಿ ನೇಮಕಾತಿಯನ್ನು ಹೊಂದಿ, ಕರ್ತವ್ಯಕ್ಕೆ ಹಾಜರಾಗದ ಶಿಕ್ಷಕರ ಸಂಖ್ಯೆ.** (ಜಿಲ್ಲಾ ವ್ಯಾಪ್ತಿಯಲ್ಲಿ)ಇರುವುದಿಲ್ಲ.

**ಕಳೆದ ತ್ರೈಮಾಸಿಕ ಅವಧಿಯಲ್ಲಿ ನೇಮಕಾತಿಯನ್ನು ಹೊಂದಿ, ಕರ್ತವ್ಯಕ್ಕೆ ಹಾಜರಾದ ಶಿಕ್ಷಕರ ಸಂಖ್ಯೆ** (ಜಿಲ್ಲಾ ವ್ಯಾಪ್ತಿಯಲ್ಲಿ)– 6

## ವಿಭಾಗ – (ಬಿ)

## ಸರಾಸರಿ ಹಾಜರಾತಿಯಂತೆ ತರಗತಿವಾರು ಶಾಲೆಗಳ ಸಂಖ್ಯೆ

**ಕೋಷ್ಠಕ–11**

| ತರಗತಿ | ಸರಾಸರಿ ಹಾಜರಾತಿಯಂತೆ ಶಾಲೆಗಳ ಸಂಖ್ಯೆ | | | | | | | | |
|---|---|---|---|---|---|---|---|---|---|
| | ಬಾಲಕರು | | | ಬಾಲಕಿಯರು | | | ಒಟ್ಟು | | |
| | 80% ಮೇಲ್ಪಟ್ಟು | 60% 79% | 60% ಕ್ಕಿಂತ ಕಡಿಮೆ | 80% ಮೇಲ್ಪಟ್ಟು | 60%–79% | 60% ಕ್ಕಿಂತ ಕಡಿಮೆ | 80% ಮೇಲ್ಪಟ್ಟು | 60%–79% | 60% ಕ್ಕಿಂತ ಕಡಿಮೆ |
| I | 1807 | 91 | 4 | 1813 | 69 | 11 | 1816 | 79 | 9 |
| II | 1810 | 84 | 8 | 1813 | 67 | 12 | 1817 | 77 | 10 |
| III | 1811 | 64 | 16 | 1808 | 72 | 8 | 1800 | 83 | 13 |
| IV | 1815 | 67 | 13 | 1803 | 79 | 3 | 1821 | 69 | 6 |
| V | 1810 | 62 | 15 | 1811 | 56 | 9 | 1813 | 67 | 9 |
| VI | 906 | 28 | 16 | 886 | 46 | 18 | 893 | 40 | 17 |
| VII | 904 | 37 | 9 | 912 | 33 | 5 | 910 | 34 | 6 |
| VIII | 264 | 14 | 2 | 246 | 13 | 2 | 257 | 14 | 2 |

**ಗ್ರಾಫ್–11**




- 3 ಮತ್ತು 5ನೇ ತರಗತಿಯಲ್ಲಿ ಬಾಲಕರ ಹಾಜರಾತಿ ಶೇ 60 ಕ್ಕಿಂತ ಕಡಿಮೆ ಹಾಜರಾತಿ ಇರುವ ಶಾಲೆಗಳ ಸಂಖ್ಯೆ ಕ್ರಮವಾಗಿ 16 ಮತ್ತು 15 ಆಗಿದೆ. ಇದೇ ರೀತಿ ಬಾಲಕಿಯರ ವಿಭಾಗದಲ್ಲಿ 2 ಮತ್ತು 6 ನೇ ತರಗತಿಯಲ್ಲಿ ಶೇ 60ಕ್ಕಿಂತ ಕಡಿಮೆ ಹಾಜರಾತಿ ಹೊಂದಿರುವ ಶಾಲೆಗಳ ಸಂಖ್ಯೆ ಕ್ರಮವಾಗಿ 12 ಮತ್ತು 18 ಆಗಿರುತ್ತದೆ.
- ಒಟ್ಟಾರೆ 6ನೇ ತರಗತಿಯಲ್ಲಿ ಗೈರು ಹಾಜರಿ ಹೆಚ್ಚಾಗಿರುವುದು ಕಂಡು ಬರುತ್ತದೆ.
- ಲಿಂಗವಾರು ಹಾಜರಾತಿಯನ್ನು ಗಮನಿಸಿದಾಗ 7ನೇ ತರಗತಿಯನ್ನು ಹೊರತುಪಡಿಸಿ ಉಳಿದ ತರಗತಿಗಳಲ್ಲಿ ಬಾಲಕರ ಹಾಜರಾತಿ ಬಾಲಕಿಯರ ಹಾಜರಾತಿಗಿಂತ ಉತ್ತಮವಾಗಿದೆ.

## ತರಗತಿವಾರು ಶೇಕಡಾದಲ್ಲಿ ಜಿಲ್ಲೆಯ ಹಾಜರಾತಿ ವಿವರ

**ಕೋಷ್ಟಕ:12**

| ತರಗತಿ | 80 % ಮೇಲ್ಪಟ್ಟು | 60% – 79% | 60% ಕ್ಕಿಂತ ಕಡಿಮೆ |
|---|---|---|---|
| 1 | 95.3 | 4.1 | 0.4 |
| 2 | 95.4 | 4 | 0.5 |
| 3 | 94.9 | 4.3 | 0.6 |
| 4 | 96.04 | 3.6 | 0.3 |
| 5 | 95.9 | 3.5 | 0.4 |
| 6 | 91.6 | 6.9 | 1.4 |
| 7 | 94.1 | 3.3 | 2.4 |
| 8 | 94.1 | 5.1 | 0.7 |

**ಗ್ರಾಫ್–12**




- ಮೇಲಿನ ಕೋಷ್ಟಕವನ್ನು ವಿಶ್ಲೇಷಿಸಿದಾಗ 6ನೇ ತರಗತಿಯನ್ನು ಹೊರತುಪಡಿಸಿ ಎಲ್ಲಾ ತರಗತಿಗಳಲ್ಲಿ ಸರಾಸರಿ ಹಾಜರಾತಿಯು ಸರಾಸರಿ ಶೇ 95 ರಷ್ಟಿರುತ್ತದೆ.
- ಪ್ರೋತ್ಸಾಹದಾಯಕ ಯೋಜನೆಗಳು ಮತ್ತು ಶಿಕ್ಷಕರು ಕಾಳಜಿಯಿಂದ ಮಾಡುವ ಮನೆ ಮನೆ ಭೇಟಿ ಕಾರ್ಯಗಳು ಮಕ್ಕಳ ಹಾಜರಾತಿಯನ್ನು ಗಣನೀಯವಾಗಿ ಹೆಚ್ಚಿಸುವಲ್ಲಿ ಮಹತ್ವವಾದ ಪಾತ್ರವನ್ನು ವಹಿಸಿದೆ.
- ರಚನಾ ತತ್ವಾಧರಿಸಿದ ಕಲಿಕೆ, ಸಿಸಿಇ ಮೂಲಕ ಮಕ್ಕಳ ಕಲಿಕೆಯನ್ನು ಅರ್ಥ ಮಾಡಿಕೊಳ್ಳಲು ಶಿಕ್ಷಕರು ಮಾಡುವ ಪ್ರಯತ್ನ ಬಹುಶ: ಮಕ್ಕಳನ್ನು ಶಾಲೆಯತ್ತ ಬರುವಂತೆ ಮಾಡಿರಬಹುದು.
- ಆದರೆ 6ನೇ ತರಗತಿ ವಿದ್ಯಾರ್ಥಿಗಳ ಹಾಜರಾತಿ ಕಡಿಮೆಯಾಗಿರುವುದು ಗಮನಾರ್ಹ ಅಂಶವಾಗಿದೆ. ಇದಕ್ಕೆ ಹಲವು ಕಾರಣ ಗಳಿರಬಹುದು.
- 1 ಕಿ. ಮೀ ವ್ಯಾಪ್ತಿಯಲ್ಲಿರುವ ಕಿರಿಯ ಪ್ರಾಥಮಿಕ ಶಾಲೆಗಳಿಗೆ ನಿರಾಳವಾಗಿ ಹೋಗುತ್ತಿದ್ದ ಮಕ್ಕಳು ಕಿರಿಯ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸ ಮುಗಿದ ಬಳಿಕ 5 ಕಿ ಮೀ ವ್ಯಾಪ್ತಿಯೊಳಗಿರುವ ಹಿರಿಯ ಪ್ರಾಥಮಿಕ ಶಾಲೆಯನ್ನು ಸೇರಿದ ವರ್ಷದಲ್ಲಿ ಬೇರೆ ಬೇರೆ ಕಾರಣಗಳಿಂದ ಶಾಲೆಗೆ ಗೈರುಹಾಜರಾಗುತ್ತಿರುವುದು ಸ್ಪಷ್ಟವಾಗುತ್ತಿದೆ. ದೂರದ ಊರುಗಳಿಂದ ಮಕ್ಕಳು ಶಾಲೆಗೆ ಬರುವಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿರಬಹುದು.

- ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳು ಪ್ರೌಢಾವಸ್ಥೆಗೆ ಬರುವುದರಿಂದ ದುಡಿಮೆಯ ಕಡೆ ಹೆಚ್ಚು ಗಮನ ನೀಡುತ್ತಿರುತ್ತಾರೆ.
- 6ನೇ ತರಗತಿಯಲ್ಲಿ ಹೆಣ್ಣು ಮಕ್ಕಳು ಪ್ರೌಢಾವಸ್ಥೆಗೆ ಕಾಲಿಡುವ ಸಂದರ್ಭದಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸದಿರುವುದು ಇದಕ್ಕೆ ಮುಖ್ಯ ಕಾರಣವಾಗಿರಬಹುದು.
- 6ನೇ ತರಗತಿ ಕಲಿಕಾಂಶಗಳು ಕ್ಲಿಷ್ಟಕರವಾಗಿರುವುದು, 6ನೇ ತರಗತಿ ಹೊಸ ಪಠ್ಯಾಧಾರಿತ ತರಬೇತಿಯನ್ನು ಶಿಕ್ಷಕರಿಗೆ ನೀಡಲು ಅಸಾಧ್ಯವಾಗಿರುವುದು ಇದಕ್ಕೆ ಕಾರಣವಾಗಿರಬಹುದು.
- ಶಿಕ್ಷಕರ ಕೊರತೆಯಿಂದಾಗಿ ಬಹುವರ್ಗ ಬೋಧನೆ ಅನಿವಾರ್ಯವಾದಾಗ ಕಲಿಕೆ ನಿರಾಸಕ್ತಿಯನ್ನುಂಟುಮಾಡಿರಬಹುದು
- 6 ರಿಂದ 8ನೇ ತರಗತಿಗಳಲ್ಲಿ ಒಟ್ಟಾರೆ 60% ಕ್ಕಿಂತ ಕಡಿಮೆ ಹಾಜರಾತಿ ಇರುವ ಮಕ್ಕಳ ಸಂಖ್ಯೆ ಹೆಚ್ಚಾಗಿರುತ್ತದೆ.
- ಕಲಿಕಾಂಶಗಳ ಕ್ಲಿಷ್ಟತೆ, ಶಿಕ್ಷಕರ ಕೊರತೆಯಿಂದ ಬಹುವರ್ಗ ಬೋಧನೆಯ ಅನಿವಾರ್ಯದಿಂದಾಗಿ ಮಕ್ಕಳಿಗೆ ವೈಯಕ್ತಿಕ ಗಮನ ನೀಡಲು ಅಸಾಧ್ಯವಾಗಿರುವುದು ಇದಕ್ಕೆ ಕಾರಣವಾಗಿರಬಹುದು.
- ದೂರದ ಊರಿನಿಂದ ಶಾಲೆಗೆ ಹಾಜರಾಗುವುದು ಕೆಲವು ಸಂದರ್ಭಗಳಲ್ಲಿ ಹಿರಿಯ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗಿರಬಹುದು.

**ಬ್ಲಾಕ್‌ವಾರು ಸರಾಸರಿ ಹಾಜರಾತಿಯಂತೆ ಶಾಲೆಗಳ ಸಂಖ್ಯೆ:**

ಕೋಷ್ಟಕ:13

| ಕ್ರ. ಸಂ | ಬ್ಲಾಕ್‌ಗಳು | ಒಟ್ಟು | | | | | | | | |
|---|---|---|---|---|---|---|---|---|---|---|
| | | ಬಾಲಕರು | | | ಬಾಲಕಿಯರು | | | ಒಟ್ಟು | | |
| | | 80 % ಮೇಲ್ಪಟ್ಟ | 60% – 79% | 60% ಕ್ಕಿಂತ ಕಡಿಮೆ | 80 % ಮೇಲ್ಪಟ್ಟ | 60% – 79% | 60% ಕ್ಕಿಂತ ಕಡಿಮೆ | 80 % ಮೇಲ್ಪಟ್ಟ | 60% – 79% | 60% ಕ್ಕಿಂತ ಕಡಿಮೆ |
| 1 | ಹೆಚ್.ಡಿ.ಕೋಟೆ | 281 | 19 | 6 | 281 | 19 | 6 | 281 | 19 | 6 |
| 2 | ಹುಣಸೂರು | 285 | 0 | 0 | 285 | 0 | 0 | 285 | 0 | 0 |
| 3 | ಕೆ.ಆರ್. ನಗರ | 215 | 2 | 3 | 207 | 10 | 3 | 208 | 9 | 3 |
| 4 | ಮೈ.ಉತ್ತರ | 52 | 14 | 3 | 52 | 14 | 3 | 52 | 14 | 3 |
| 5 | ಮೈ .ದಕ್ಷಿಣ | 31 | 3 | 0 | 30 | 4 | 0 | 31 | 4 | 0 |
| 6 | ಮೈ.ಗ್ರಾಮಾಂತರ | 209 | 7 | 1 | 206 | 11 | 0 | 205 | 11 | 1 |
| 7 | ನಂಜನ ಗೂಡು | 248 | 18 | 0 | 253 | 13 | 0 | 251 | 15 | 0 |
| 8 | ತಿ.ನರಸೀಪುರ | 229 | 0 | 0 | 229 | 0 | 0 | 229 | 0 | 0 |
| 9 | ಪಿರಿಯಾ ಪಟ್ಟಣ | 285 | 0 | 0 | 285 | 0 | 0 | 285 | 0 | 0 |

ಗ್ರಾಫ್–13



- ಹುಣಸೂರು, ಪಿರಿಯಾಪಟ್ಟಣ ಮತ್ತು ಟಿ ನರಸೀಪುರ ತಾಲ್ಲೂಕುಗಳಲ್ಲಿ ಹಾಜರಾತಿ ಉತ್ತಮವಾಗಿದೆ.
- ಮೈಸೂರು ಉತ್ತರ ವಲಯದಲ್ಲಿ ಹಾಜರಾತಿ ಪ್ರಮಾಣ ಉಳಿದ ತಾಲ್ಲೂಕುಗಳಿಗಿಂತ ಕಡಿಮೆ ಇದೆ.
- ನಂಜನಗೂಡು ಮತ್ತು ಮೈಸೂರು ಉತ್ತರವಲಯದಲ್ಲಿ ಬಾಲಕಿಯರ ಹಾಜರಾತಿ ಬಾಲಕರ ಹಾಜರಾತಿಗಿಂತ ಉತ್ತಮವಾಗಿದೆ. ಉಳಿದ ತಾಲ್ಲೂಕುಗಳಲ್ಲಿ ಬಾಲಕರ ಹಾಜರಾತಿ ಉತ್ತಮವಾಗಿದೆ.

6. ಅ) ಜಿಲ್ಲೆಯಲ್ಲಿನ ಸರ್ಕಾರಿ ಶಾಲೆಯಲ್ಲಿರುವ ವಿಶೇಷ ಅಗತ್ಯತೆಯಳ್ಳ ಮಕ್ಕಳ ಸಂಖ್ಯೆ : 5006

**ಕೊಷ್ಟಕ 14:**

| ಕ್ರ. ಸಂ | ಬ್ಲಾಕ್‌ಗಳು | ಸಿ.ಡಬ್ಲ್ಯೂ.ಎಸ್.ಎನ್ ಮಕ್ಕಳ ಸಂಖ್ಯೆ | | | ಸಿ.ಡಬ್ಲ್ಯೂ.ಎಸ್.ಎನ್ ಮಕ್ಕಳು ಇಲ್ಲದಿರುವ ಶಾಲೆಗಳ ಸಂಖ್ಯೆ |
|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | |
| 1 | ಹೆಚ್.ಡಿ.ಕೋಟೆ | 262 | 179 | 441 | 64 |
| 2 | ಹುಣಸೂರು | 320 | 186 | 506 | 89 |
| 3 | ಕೆ.ಆರ್.ನಗರ | 309 | 187 | 496 | 25 |
| 4 | ಮೈ.ಉತ್ತರ | 402 | 291 | 693 | 22 |
| 5 | ಮೈ.ದಕ್ಷಿಣ | 260 | 277 | 537 | 10 |
| 6 | ಮೈ.ಗ್ರಾಮಾಂತರ | 390 | 308 | 698 | 70 |
| 7 | ನಂಜನಗೂಡು | 438 | 265 | 703 | 42 |
| 8 | ತಿ.ನರಸೀಪುರ | 335 | 214 | 549 | 30 |
| 9 | ಪಿರಿಯಾಪಟ್ಟಣ | 220 | 163 | 383 | 85 |
| | ಒಟ್ಟು | 2936 | 2070 | 5006 | 437 |

**ಗ್ರಾಫ್–14**




- ವಿಶೇಷ ಅಗತ್ಯತೆಯಳ್ಳ ಮಕ್ಕಳು ನಂಜನಗೂಡು, ಮೈಸೂರು ಗ್ರಾಮಾಂತರ ಮತ್ತು ಉತ್ತರ ವಲಯಗಳಲ್ಲಿ ಹೆಚ್ಚಾಗಿರುವುದು ಕಂಡು ಬರುತ್ತದೆ.
- ಇವೇ ತಾಲ್ಲೂಕುಗಳಲ್ಲಿ ವಿಶೇಷ ಅಗತ್ಯತೆಯಳ್ಳ ಗಂಡು ಮಕ್ಕಳ ಮತ್ತು ಹೆಣ್ಣು ಮಕ್ಕಳ ಸಂಖ್ಯೆಯೂ ಹೆಚ್ಚಾಗಿರುವುದು ಕಂಡು ಬರುತ್ತದೆ.
- ಜಿಲ್ಲೆಯಲ್ಲಿ ಒಟ್ಟು 5006 ವಿಶೇಷ ಅಗತ್ಯವುಳ್ಳ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿದ್ದು ಒಳಗೊಳ್ಳುವಿಕೆಯ ಶಿಕ್ಷಣಕ್ಕೆ ಶಾಲೆಗಳು ಭದ್ರ ಬುನಾದಿ ಹಾಕುತ್ತಲಿದೆ.
- ಒಳಗೊಳ್ಳುವ ಶಿಕ್ಷಣದ ಆಶಯಗಳಲ್ಲಿ ಅಡಕವಾಗಿರುವ ಸೂಕ್ಷ್ಮಾತಿಸೂಕ್ಷ್ಮ ಅಂಶಗಳ ಮನೋಧೋರಣೆ ಬಗ್ಗೆ ಹೆಚ್ಚಿನ ಗಮನಹರಿಸಬೇಕಾಗಿದೆ.(ಉದಾಹರಣೆಗಾಗಿ ಅನುಪಾಲನಾಧಿಕಾರಿಗಳು ಶಾಲೆಗೆ ಭೇಟಿ ನೀಡಿ ಮಗುವಿನ ಕಲಿಕೆಯನ್ನು

ಪರಿಶೀಲಿಸುತ್ತಿರುವಾಗಲೇ ಮಗುವಿನ ಸಮಸ್ಯೆಯ ಬಗ್ಗೆ ಯಾವುದೇ ಮುಲಾಜಿಲ್ಲದೆ ಶಿಕ್ಷಕರು ವಿವರಣೆ ನೀಡಲು ಆರಂಭಿಸುತ್ತಾರೆ. ಅದು ಮಗುವಿಗೆ ಮುಜುಗರವನ್ನುಂಟುಮಾಡಬಹುದು)

- ಮೈಸೂರು ಉತ್ತರ ವಲಯ ಚಿಕ್ಕ ತಾಲ್ಲೂಕು ಆಗಿದ್ದರೂ ವಿಶೇಷ ಅಗತ್ಯವುಳ್ಳ ಮಕ್ಕಳ ಸಂಖ್ಯೆ ಹೆಚ್ಚಾಗಿರುವುದು ಸ್ಪಷ್ಟವಾಗುತ್ತಿದೆ. ಇದಕ್ಕೆ ಕಾರಣವೇನಿರಬಹುದು ಎನ್ನುವುದನ್ನು ಪತ್ತೆ ಹಚ್ಚಲು ಒಂದು ಅಧ್ಯಯನವನ್ನು ಕೈಗೊಳ್ಳಬಹುದಾಗಿದೆ.

**ಗ್ರಾಫ್–15**

ಆ)**ವಿಶೇಷ ಅಗತ್ಯತೆಯಳ್ಳ ಮಕ್ಕಳು ಇಲ್ಲದಿರುವ ಶಾಲೆಗಳ ಸಂಖ್ಯೆ:** 476 (ಮಾಹಿತಿ ಮೇಲಿನ ಕೋಷ್ಠಕದಲ್ಲಿದೆ)




- 1435ಶಾಲೆಗಳಲ್ಲಿ ವಿಶೇಷ ಅಗತ್ಯತೆಯುಳ್ಳ ಮಕ್ಕಳು ಕಲಿಯುತ್ತಿದ್ದು ಕೇವಲ 476 ಶಾಲೆಗಳಲ್ಲಿ ಮಾತ್ರ ವಿಶೇಷ ಅಗತ್ಯವುಳ್ಳ ಮಕ್ಕಳು ಇಲ್ಲದಿರುವುದು ಕಂಡುಬಂದಿದೆ.
- ಹುಣಸೂರು ಮತ್ತು ಪಿರಿಯಾಪಟ್ಟನದ ಹೆಚ್ಚು ಶಾಲೆಗಳಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳಿರುವುದಿಲ್ಲ.



ನಮಗೂ ಸಾಮರ್ಥ್ಯವಿದೆ, ಗುರುತಿಸಿ, ಪ್ರೋತ್ಸಾಹಿಸಿ ಮತ್ತು ಸಶಕ್ತಗೊಳಿಸಿ –ತರಬೇತಿಗೆ ಹಾಜರಾಗಿರುವ ಗೃಹಾಧಾರಿತ ಮಕ್ಕಳು ತಮ್ಮ ಪೋಷಕರೊಂದಿಗೆ

6. ವಿದ್ಯಾರ್ಥಿಗಳ ಹಾಜರಾತಿಯನ್ನು ಉತ್ತಮಪಡಿಸಲು ಜಿಲ್ಲೆಯಲ್ಲಿ ಕೈಗೊಂಡಿರುವ ಕ್ರಮಗಳು:

- ಹಾಜರಾತಿಯನ್ನು ಉತ್ತಮ ಪಡಿಸಲು ಜಿಲ್ಲೆಯ ಪ್ರತಿಯೊಂದು ಬ್ಲಾಕಿನಲ್ಲಿಯೂ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.
- ವಿಶೇಷ ದಾಖಲಾತಿ ಆಂದೋಲನವನ್ನು ಬೇಸಿಗೆ ರಜೆಯಲ್ಲಿ ನಡೆಸಿರುತ್ತಾರೆ.
- ಶಾಲಾ ದಾಖಲಾತಿ ಆಂದೋಲನದಡಿಯಲ್ಲಿ ಸರ್ಕಾರದ ಸವಲತ್ತುಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಮನೆಮನೆಗೆ ಭೇಟಿ ನೀಡಿ ಕರ ಪತ್ರ ಹಂಚಲಾಗಿದೆ.
- ತಾಯಂದಿರ ಸಭೆಯನ್ನು ಕೂಡ ನಡೆಸಲಾಗಿ ಹಾಜರಾತಿ ಉತ್ತಮವಾಗಿರುತ್ತದೆ.
- ಶಾಲಾ ಪರಿಸರವನ್ನು ಉತ್ತಮಪಡಿಸಿ ವರ್ಷದ ಅಂತಿಮದಲ್ಲಿ ಹೆಚ್ಚು ಹಾಜರಾತಿ ಹೊಂದಿರುವ ವಿದ್ಯಾರ್ಥಿಗಳನ್ನು ಗುರುತಿಸಿ ಬಹುಮಾನ ನೀಡುವ ಪದ್ಧತಿಯನ್ನು ಜಿಲ್ಲೆಯ ಅನೇಕ ಶಾಲೆಗಳು ರೂಢಿಸಿಕೊಂಡಿರುವುದರಿಂದ ಹಾಜರಾತಿಯನ್ನು ಉತ್ತಮಪಡಿಸಲಾಗುತ್ತಿದೆ.
- ಶಿಕ್ಷಣ ಪ್ರೇಮಿಗಳ ಸಹಕಾರದೊಂದಿಗೆ ಪೋಷಕರ ಮನವೊಲಿಸುವಿಕೆ.
- ಆರ್.ಟಿ ಇ. ಪ್ರಕಾರ ಗುಣಮಟ್ಟದ ಶಿಕ್ಷಣಕ್ಕಾಗಿ ಭಾಗೀದಾರರಿಗೆ ಅರಿವು ಮೂಡಿಸಿರುವುದು.
- ದಾನಿಗಳ ಮೂಲಕ ಕಲಿಕಾ ಸಾಮಗ್ರಿಗಳ ವಿತರಣೆ.
- ಈ ಎಲ್ಲಾ ಕಾರ್ಯಕ್ರಮಗಳಿಂದ ಕೇವಲ ಹಾಜರಾತಿ ಉತ್ತಮವಾಗಿರುವುದಲ್ಲದೆ ದಾಖಲಾತಿ ಕೂಡ ಉತ್ತಮವಾಗುತ್ತಿರುವುದು ಕಂಡು ಬಂದಿದೆ.

7. (ಬಿ). ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಆರ್.ಟಿ.ಇ ಅಡಿಯಲ್ಲಿ ದಾಖಲಿಸಲಾದ ಮಕ್ಕಳ ಸಂಖ್ಯೆ: 2396

ಗಂಡು: 1313 ಹೆಣ್ಣು:1083 ಒಟ್ಟು: 2396

**ಕೋಷ್ಟಕ 15:**

| ಕ್ರ. ಸಂ | ಬ್ಲಾಕ್‌ಗಳು | ಓಓಎಸ್.ಸಿ ಮಕ್ಕಳನ್ನು ದಾಖಲಿಸಿದ ಮಕ್ಕಳ ಸಂಖ್ಯೆ | | |
|---|---|---|---|---|
| | | ಗಂಡು | ಹೆಣ್ಣು | ಒಟ್ಟು |
| 1 | ಹೆಚ್.ಡಿ.ಕೋಟೆ | 136 | 94 | 230 |
| 2 | ಹುಣಸೂರು | 147 | 167 | 314 |
| 3 | ಕೆ.ಆರ್.ನಗರ | 114 | 75 | 189 |
| 4 | ಮೈ.ಉತ್ತರ | 372 | 335 | 707 |
| 5 | ಮೈ.ದಕ್ಷಿಣ | 88 | 71 | 159 |
| 6 | ಮೈ.ಗ್ರಾಮಾಂತರ | 89 | 77 | 166 |
| 7 | ನಂಜನಗೂಡು | 110 | 90 | 200 |
| 8 | ತಿ.ನರಸೀಪುರ | 106 | 73 | 179 |
| 9 | ಪಿರಿಯಾಪಟ್ಟಣ | 151 | 101 | 252 |
| ಒಟ್ಟು | | 1313 | 1083 | 2396 |

**ಗ್ರಾಫ್–16:**




- ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಮುಖ್ಯಶಿಕ್ಷಕರು, ಶಿಕ್ಷಕರು, ಸಿ.ಆರ್.ಪಿ., ಬಿ.ಆರ್.ಸಿ., ಬಿ.ಇ.ಓ. ಗಳು ತಂಡಗಳಲ್ಲಿ ಭೇಟಿ ನೀಡಿ, ಮಕ್ಕಳ ಹಾಗು ಪೋಷಕರ ಮನವೊಲಿಸಿ ಶಾಲೆಗಳಲ್ಲಿ ದಾಖಲಿಸಿರುತ್ತಾರೆ. ಪ್ರಸಕ್ತ ಸಾಲಿನಲ್ಲಿ ಆರ್.ಟಿ.ಇ. ಅಡಿಯಲ್ಲಿ ದಾಖಲಿಸಲಾದ ಮಕ್ಕಳ ಸಂಖ್ಯೆ 2396 ಆಗಿರುವುದು ಗಮನಾರ್ಹ.
- ಮೈಸೂರು ಉತ್ತರ ವಲಯದಲ್ಲಿ ಉಳಿದ ತಾಲ್ಲೂಕುಗಳಿಗಿಂತ ಹೆಚ್ಚು ಮಕ್ಕಳನ್ನು ದಾಖಲಿಸಲಾಗಿದೆ.
- ಹುಣಸೂರು ತಾಲ್ಲೂಕಿನಲ್ಲಿ ಗಂಡು ಮಕ್ಕಳಿಗಿಂತ ಹೆಚ್ಚು ಹೆಣ್ಣುಮಕ್ಕಳನ್ನು ದಾಖಲಿಸಲಾಗಿದೆ.
- ಜಿಲ್ಲೆಯಲ್ಲಿ ಒಟ್ಟು 5512 ಶಾಲೆಯಿಂದ ಹೊರಗುಳಿದ ಮಕ್ಕಳಿದ್ದು ಕೆ.ಆರ್.ನಗರ ತಾಲ್ಲೂಕಿನಲ್ಲಿ ಅತೀ ಕಡಿಮೆ ಅಂದರೆ 274 ಮಕ್ಕಳನ್ನು ದಾಖಲಿಸಬೇಕಾಗಿದ್ದರೆ ಮೈಸೂರು ಉತ್ತರ ವಲಯದಲ್ಲಿ 1316 ಮಕ್ಕಳನ್ನು ದಾಖಲಿಸಬೇಕಾಗಿದೆ.

(b) ಈ ಮಕ್ಕಳು ವಿಶೇಷ ತರಬೇತಿಯನ್ನು ಪಡೆಯುತ್ತಿರುವ ಕೇಂದ್ರಗಳ ಸಂಖ್ಯೆ :32

ಅ) ಅದೇ ಶಾಲೆಯಲ್ಲಿ – 32

ಆ) ವಸತಿ ರಹಿತ ಕೇಂದ್ರಗಳು ಯಾವುದೇ ಸರ್ಕಾರೇತರ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿ ನಡೆಯುತ್ತಿಲ್ಲ.

ಇ) ವಸತಿ ಸಹಿತ ಕೇಂದ್ರಗಳು ಸರ್ಕಾರೇತರ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿ ನಡೆಯುತ್ತಿಲ್ಲ.

ಈ) ಇತರೆ – ಇರುವುದಿಲ್ಲ.

- ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಆರ್.ಟಿ.ಇ ಅಡಿಯಲ್ಲಿ ದಾಖಲಿಸಿರುವ ಮಕ್ಕಳಿಗೆ ವಿಶೇಷ ತರಬೇತಿಯನ್ನು ದಾಖಲೆ ಹೊಂದಿದ ಶಾಲೆಗಳಲ್ಲಿಯೇ ಏರ್ಪಡಿಸಲಾಗಿರುತ್ತದೆ. ಮುಖ್ಯವಾಹಿನಿಗೆ ಬಂದ ಮಕ್ಕಳು ಒಂದೇ ಪರಿಸರದಲ್ಲಿರುವುದರಿಂದ ಶಾಲಾ ಶಿಕ್ಷಣವನ್ನು ಮುಂದುವರೆಸಲು ಸಹಕಾರಿಯಾಗಿರುತ್ತದೆ.

(c) ಕಳೆದ ತ್ರೈಮಾಸಿಕ ಅವಧಿಯಲ್ಲಿ ವಿಶೇಷ ತರಬೇತಿ ಕಾರ್ಯಕ್ರಮದಡಿಯಲ್ಲಿ ತರಬೇತಿ ಪಡೆಯುತ್ತಿದ್ದ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ: 2396



ಕೆಜಿಬಿವಿ ಹೆಣ್ಮಕ್ಕಳ ಶಾಲೆಯ ಮಕ್ಕಳ ಕಲಿಕೆಯ ವಿವಿಧ ಚಿತ್ರಣಗಳು– ಕೆಆರ್ ನಗರ ತಾಲ್ಲೂಕು



ಫೈಜೂಲ ಮದ್ರಸ, ಗೌಸಿಯಾ ನಗರ –ಮಕ್ಕಳೊಂದಿಗೆ ಚರ್ಚಿಸುತ್ತಿರುವ ಅಧಿಕಾರಿ ವೃಂದ

# ವಿಭಾಗ – (ಸಿ)

## ಪಠ್ಯಕ್ರಮದ ನಿರ್ವಹಣೆ:

1. **ಶಾಲಾ ಪ್ರಾರಂಭವಾದ ನಂತರ ವಿವಿಧ ಸಮಯದಲ್ಲಿ ಪಠ್ಯಪುಸ್ತಕ ವಿತರಿಸಿದ ಶಾಲೆಗಳ ಸಂಖ್ಯೆ:**

**ಕೋಷ್ಟಕ–16**

| ಒಂದು ವಾರದ ಒಳಗೆ | ಒಂದು ತಿಂಗಳ ಒಳಗೆ | ಒಂದು ತಿಂಗಳ ನಂತರ | ಅನ್ವಯಿಸುವುದಿಲ್ಲ |
|---|---|---|---|
| 1879 | 32 | – | – |

- ತಾಲ್ಲೂಕು ಹಂತದಲ್ಲಿನ ಉತ್ತಮ ಯೋಜನೆಯ ಫಲವಾಗಿ 1879 ಶಾಲೆಗಳಿಗೆ ಶಾಲೆ ಪ್ರಾರಂಭವಾದ ಒಂದು ವಾರದೊಳಗೆ ಪಠ್ಯಪುಸ್ತಕವನ್ನು ವಿತರಿಸಲಾಗಿದೆ. ಆದರೆ ಕೆಲವು ದೂರದ/ಅರಣ್ಯ ಪ್ರದೇಶದ ಶಾಲೆಗಳಿಗೆ ಪಠ್ಯಪುಸ್ತಕವನ್ನು ವಿತರಿಸಲು ವಾಹನ ವ್ಯವಸ್ಥೆಯ ತೊಂದರೆಯಾಗಿರುವುದರ ಪರಿಣಾಮ ಒಂದು ತಿಂಗಳೊಳಗೆ ವಿತರಿಸಲಾಗಿದೆ.

9. **ನಿಗದಿತ ಸಮಯಕ್ಕೆ ಪಠ್ಯಪುಸ್ತಕಗಳನ್ನು ವಿತರಿಸುವುದಕ್ಕೆ ಜಿಲ್ಲಾ ಉಪನಿರ್ದೇಶಕರು ಕೈಗೊಂಡಿರುವ ಕ್ರಮಗಳು:**

- ಸಂಬಂಧಿಸಿದ ತಾಲ್ಲೂಕು ಅಧಿಕಾರಿಗಳಿಗೆ ಜಿಲ್ಲಾ ಮಟ್ಟದಿಂದ ಸಭೆಗಳನ್ನು ನಡೆಸಿ ಶಾಲಾ ಪ್ರಾರಂಭೋತ್ಸವದಂದೇ ಸಮುದಾಯ ಹಾಗೂ ಪೋಷಕರ ಸಭೆ ನಡೆಸಿ ಮಕ್ಕಳಿಗೆ ಪುಸ್ತಕಗಳ ವಿತರಣೆಗೆ ಕ್ರಮ ವಹಿಸಲಾಗಿದೆ.
- ತಾಲ್ಲೂಕು ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲಾ ಹಂತಕ್ಕೆ ನೇರವಾಗಿ ಸಿ.ಆರ್.ಪಿ.ಗಳ ಮೂಲಕ ಪುಸ್ತಕ ವಿತರಣೆ ಮಾಡಿಸಿದ್ದಾರೆ

10. **ಬೋಧನಾ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ನಾವೀನ್ಯತೆಯ ತಂತ್ರಗಳನ್ನು ಅಳವಡಿಸಿರುವ ಶಾಲೆಗಳ ವಿವರ:**(ಕನಿಷ್ಠ 3 ಶಾಲೆಗಳ ಹೆಸರನ್ನು ನಮೂದಿಸಿ)

1. **ಸಕಿಪ್ರಾ ಶಾಲೆ ಕೋಳಗಾಲ ಹೊಸ ಬಡಾವಣೆ, ಎಚ್.ಡಿ ಕೋಟೆ ತಾಲ್ಲೂಕು**
    - ಶಾಲಾ ಸ್ವಚ್ಛತೆ ಮತ್ತು ಶಿಸ್ತು ಅತ್ಯುತ್ತಮವಾಗಿದೆ.
    - ಕಲಿಕೆಗೆ ಸಂಬಂಧಿಸಿದಂತೆ ಪಠ್ಯ ಮಸ್ತಗಳನ್ನು ಮೀರಿದ ಚಟುವಟಿಕೆಗಳನ್ನು ಶಿಕ್ಷಕರು ಮಾಡುತ್ತಿದ್ದಾರೆ.
    - ಸಮುದಾಯದಲ್ಲಿ ಮಕ್ಕಳ ಕಲಿಕೆಗೆ ಅವಕಾಶ.
    - ನಲಿಕಲಿ ತರಗತಿ ನಿರ್ವಹಣೆ ಮತ್ತು ಕಲಿಕೆ ಉತ್ತಮವಾಗಿದೆ.
    - ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವ ಸಾಮರ್ಥ್ಯ ಮತ್ತು ಚಿಂತನಾ ಶೀಲತೆಯನ್ನು ಬೆಳೆಸುವ ರೀತಿಯಲ್ಲಿ ಶಿಕ್ಷಕರು ತರಗತಿಗಳನ್ನು ಅನುಕೂಲಿಸುತ್ತಾರೆ.
2. **ಸ.ಕಿ.ಪ್ರಾ.ಶಾಲೆ ಸಂಕನಹಳ್ಳಿ, ಕೆ.ಆರ್.ನಗರ ತಾಲ್ಲೂಕು**
    - ಶಾಲೆಯ ಪ್ರತಿಯೊಂದು ಕೋನವೂ ಕಲಿಕೆಯ ತಾಣವಾಗಿದೆ. ಮಕ್ಕಳೇ ಶಾಲೆಯ ಎಲ್ಲಾ ಚಟುವಟಿಕೆಗಳ ನಿರ್ವಹಣೆಯನ್ನು ಮಾಡುವಂತೆ ಅನುಕೂಲಿಸಲಾಗಿದೆ.

- ಇರುವ ಸ್ವಲ್ಪ ಜಾಗದಲ್ಲಿ ಅತ್ಯುತ್ತಮವಾದ ಕೈತೋಟವಿದೆ. ಔಷಧಿ ವನ, ಕಿಚನ್ ಗಾರ್ಡನ್, ಮಳೆಕೊಯ್ಲು, ಅಪಾಯಕಾರಿ ಮತ್ತು ಅಪಾಯಕಾರಿಯಲ್ಲದ ಕಸ ವಿಲೇವಾರಿ, ತ್ಯಾಜ್ಯ ನೀರಿನ ಬಳಕೆ, ಜೈವಿಕ ಗೊಬ್ಬರ, ಪೌಷ್ಠಿಕ ಆಹಾರ ಇತ್ಯಾದಿಗಳಿಗೆ ಪ್ರತ್ಯಕ್ಷ ಸಾಕ್ಷಿಯಾಗಿದೆ.
- ಸಮುದಾಯದವರು ಶಾಲೆಗೆ ಬಂದು ತೋಟದ ಕೆಲಸ ಮಾಡುತ್ತಾರೆ. ಊರ ಜನ ಶಾಲಾ ಗ್ರಂಥಾಲಯವನ್ನು ಉತ್ತಮವಾಗಿ ಬಳಕೆ ಮಾಡುತ್ತಿದ್ದಾರೆ.
- ಊರೊಳಗೆ ಬಯಲು ಮಲವಿಸರ್ಜನೆ. ಶಿಕ್ಷಕರು ಮತ್ತು ಮಕ್ಕಳು ಊರೊಳಗೆ ಶೌಚಾಲಯ ನಿರ್ಮಾಣ ಮಾಡುವ ಬಗ್ಗೆ ಕ್ರಾಂತಿಯನ್ನುಂಟುಮಾಡಿರುತ್ತಾರೆ.
- ಮಕ್ಕಳ ಕಲಿಕೆ ಅತ್ಯುತ್ತಮವಾಗಿದೆ.

3. **ಸ.ಕಿ.ಪ್ರಾ.ಶಾಲೆ, ಮರಯ್ಯನ ಹುಂಡಿ, ಮೈಸೂರು ಗ್ರಾಮಾಂತರ ವಲಯ**

- ಸುಂದರ ಕೈತೋಟವಿದೆ.
- ವಿದ್ಯಾರ್ಥಿಗಳ ಬರೆವಣಿಗೆ ಅತ್ಯುತ್ತಮವಾಗಿದೆ. ಶಾಲೆಯಲ್ಲಿರುವ ಎಲ್ಲಾ ಮಕ್ಕಳ ಸ್ಪಷ್ಟವಾಗಿ ಸ್ವಚ್ಛವಾಗಿ ಬರೆಯುವಂತೆ, ನಿರರ್ಗಳವಾಗಿ ಓದುವಂತೆ ಶಿಕ್ಷಕರು ಪ್ರಜ್ಞಾಪೂರ್ವಕವಾಗಿ ನಿರಂತರ ಮಾರ್ಗದರ್ಶನ ನೀಡಿರುತ್ತಾರೆ.
- ಹೆಚ್ಚು ಚಟುವಟಿಕೆಗಳಿಗೆ ಅವಕಾಶವನ್ನು ಕಲ್ಪಿಸಲಾಗಿದೆ.

ಮೇಲೆ ಉಲ್ಲೇಖಿಸಲಾದ ಮೂರು ಶಾಲೆಗಳಲ್ಲಿ ಶಿಕ್ಷಕರ ನಾಯಕತ್ವ, ಬದ್ಧತೆ, ನಾವೀನ್ಯಯುತವಾಗಿ ಕಾರ್ಯ ನಿರ್ವಹಿಸುವ ಆಸಕ್ತಿ ಮತ್ತು ಅನುಷ್ಠಾನಗೊಳಿಸುವ ತಾಳ್ಮೆ ಸ್ಪಷ್ಟವಾಗಿ ಕಾಣುತ್ತಿದೆ. ಅದಕ್ಕಾಗಿ ಈ ಶಾಲೆಗಳಲ್ಲಿ ಮಕ್ಕಳ ಕಲಿಕೆಯೂ ಅತ್ಯುತ್ತಮವಾಗಿರುತ್ತದೆ.




ಶಾಲೆ ಮುಂಭಾಗದಲ್ಲಿ ಶಾಂತಿ ಸಂದೇಶ ಸಾರಿದೆ ತ್ರಿವರ್ಣ ಧ್ವಜಗಳು



ಔಷಧೀಯ ವನ– ಬೆಳೆಸು ಮತ್ತು ಬಳಸು




ಪರಿಸರ ಪ್ರೀತಿಸುವ ಮಕ್ಕಳಿಂದ ಕಸವಿಲೇವಾರಿ



ಶೌಚಾಲಯಗಳೇ ಇಲ್ಲದ ಊರಿನ ಮಕ್ಕಳಿಂದ ಅತ್ಯುತ್ತಮವಾಗಿ ಶೌಚಾಲಯ ನಿರ್ವಹಣೆ



ಸಂಕನಹಳ್ಳಿಯ ಪುಸ್ತಕಪ್ರೇಮಿ–ಮಕ್ಕಳಿಗೆ ಮಾದರಿ ಅಜ್ಜ




ಹ್ಯಾಂಡ್ಸ್ ಆನ್ ಮತ್ತು ಮೈಂಡ್ಸ್ ಆನ್ ಕಲಿಕೋಪಕರಣಗಳು

11. **ತರಗತಿ ಕೊಠಡಿಯಲ್ಲಿ ಸಮನ್ವಯ ಶಿಕ್ಷಣವನ್ನು ನೀಡಲು ಶಿಕ್ಷಕರು ತೆಗೆದುಕೊಂಡ ನಿರ್ದಿಷ್ಟ ಕ್ರಮ (CWSN):**

- ಸಿ.ಡಬ್ಲ್ಯೂ.ಎಸ್.ಎನ್ ಮಕ್ಕಳ ಅಗತ್ಯಾನುಸಾರ ಒಳಗೊಳ್ಳುವಿಕೆ ಶಿಕ್ಷಣದಡಿ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ.
- ಎಲ್ಲಾ ಶಾಲೆಗಳಲ್ಲಿ ಸಿ.ಡಬ್ಲ್ಯೂ.ಎಸ್.ಎನ್ ಮಕ್ಕಳನ್ನು ಸಾಮಾನ್ಯ ಮಕ್ಕಳೊಂದಿಗೆ ಪಠ್ಯ ಹಾಗೂ ಸಹಪಠ್ಯ ಚಟುವಟಿಕೆಗಳಲ್ಲಿ ತೊಡಗಿಸುತ್ತಿದ್ದಾರೆ.
- ಬೋಧನಾ ಸಮಯದಲ್ಲಿ ಆಸಕ್ತಿವಹಿಸುವುದು, ಹೆಚ್ಚು ಪಾಠೋಪಕರಣಗಳನ್ನು ಬಳಸುವುದು ಮತ್ತು ಕಲಿಕೆಯನ್ನು ಅನುಕೂಲಿಸಲಾಗುತ್ತಿದೆ.
- ಚಟುವಟಿಕೆಗಳನ್ನು ಮಗುವಾರು ರೂಪಿಸಿ ಪಾಲ್ಗೊಳ್ಳುವಂತೆ ಮಾಡಲಾಗುತ್ತಿದೆ.
- ಮಕ್ಕಳಿಗೆ ವೈಯಕ್ತಿಕ ಗಮನ ನೀಡಲಾಗಿದೆ.
- ಚಟುವಟಿಕೆ ಆಧಾರಿತ ಕಲಿಕೆಗೆ ಒತ್ತು ಕೊಡಲಾಗಿದೆ.
- ಬೋಧನೆಯಲ್ಲಿ ವಿಶೇಷ ಆದ್ಯತೆ ನೀಡುವುದು.
- ಅವರ ಸಮಸ್ಯೆಗಳನ್ನು ಅರಿತು ಅದರಂತೆ ಅವರು ಕಲಿಕೆಯಲ್ಲಿ ತೊಡಗಲು ಪ್ರೇರಣೆ ನೀಡುತ್ತಿರುವುದು.
- ಎಲ್ಲಾ ಮಕ್ಕಳ ಜೊತೆ ಬೆರೆತು ಆನಂದದಾಯಕವಾಗಿ ಕಲಿಯಲು ಅವಕಾಶ ಕಲ್ಪಿಸಿರುವುದು.
- ಪಾಲಕರಿಗೆ ತರಬೇತಿ.
- ಸೂಕ್ತ ಪಾಠೋಪಕರಣಗಳ ಬಳಕೆ ಮಾಡುವುದು.
- ತಾರತಮ್ಯರಹಿತ ವಾತಾವರಣ ನಿರ್ಮಾಣ ಮತ್ತು ಇತರೆ ಎಲ್ಲಾ ಮಕ್ಕಳೊಂದಿಗೆ ಅವರಿಗೆ ಸೂಕ್ತ ಸ್ಥಳಾವಕಾಶ ಒದಗಿಸಿ ಬೋಧಿಸಲಾಗುತ್ತಿದೆ.
- ವಿಶ್ವ ಅಂಗವಿಕಲರ ದಿನಾಚರಣೆಯನ್ನು ಆಚರಿಸುವ ಮೂಲಕ ಮಕ್ಕಳಿಗೆ ವಿವಿಧ ಚಟುವಟಿಕೆಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಲಾಗುತ್ತಿದೆ.
- ಜಾಗೃತಿ ಶಿಬಿರದಲ್ಲಿ ಐ.ಇ.ಆರ್.ಟಿ.ಗಳು ತರಗತಿ ಶಿಕ್ಷಕರೊಂದಿಗೆ ಸಮಾಲೋಚಿಸಿ ಮಾರ್ಗದರ್ಶನ ನೀಡುತ್ತಿದ್ದಾರೆ.
- ಇಲಾಖೆ ವತಿಯಿಂದ ಮಗುವಿಗೆ ಸಿಗಬೇಕಾದ ಸಾಧನ ಸಲಕರಣೆಗಳನ್ನು ಎಲ್ಲಾ ಮಕ್ಕಳಿಗೂ ತಜ್ಞ ವೈದ್ಯರ ಸಲಹೆ ಪಡೆದು ನೀಡಲಾಗುತ್ತಿದೆ. ನಾಯಕತ್ವದ ಜವಾಬ್ದಾರಿ ಹಂಚಿಕೆ, ವಿಷಯ ಮಂಡನೆಗೆ ಅವಕಾಶ, ಗುಂಪು ಚಟುವಟಿಕೆಯಲ್ಲಿ ಆದ್ಯತೆ ನೀಡಲಾಗುತ್ತಿದೆ.
- ವಿದ್ಯಾರ್ಥಿಯು ಅಂಗವಿಕಲ ಗುರ್ತಿನ ಪುಸ್ತಕ ಮಾಡಿಸಲು ಮಾರ್ಗದರ್ಶನ ನೀಡಲಾಗುತ್ತಿದೆ.
- ಮೆಡಿಕಲ್ ಕ್ಯಾಂಪ್‌ನಲ್ಲಿ ಮಗುವು ಭಾಗವಹಿಸಲು ಪೋಷಕರಿಗೆ ಮಾರ್ಗದರ್ಶನ ನೀಡಲಾಗುತ್ತಿದೆ.

# ವಿಭಾಗ – (ಡಿ)

## ನಿರಂತರ ಮತ್ತು ವ್ಯಾಪಕ ಮೌಲ್ಯ ಮಾಪನ (CCE):

### ಸಿ.ಸಿ.ಇ. ಬಗ್ಗೆ ಶಾಲೆಯಲ್ಲಿ ಶಿಕ್ಷಕರು ಕೈಗೊಳ್ಳುವ ಚಟುವಟಿಕೆಗಳು:

- ಶಿಕ್ಷಕರು ಮಕ್ಕಳ ನೈಜ ಕಲಿಕಾ ಮಟ್ಟವನ್ನು ಗುರುತಿಸಿಕೊಳ್ಳುತ್ತಾರೆ.
- ಪೂರ್ವಸಿದ್ಧತೆ ಮಾಡಿಕೊಳ್ಳುವಾಗ ವಿದ್ಯಾರ್ಥಿವಾರು ಯೋಜನೆಯನ್ನು ಸಿದ್ಧಗೊಳಿಸುತ್ತಾರೆ.
- ಸಾಮರ್ಥ್ಯಕ್ಕೆ ಪೂರಕವಾಗಿ ವಿದ್ಯಾರ್ಥಿಗಳ ಸ್ಥಳೀಯ ಪರಿಸರಕ್ಕನುಗುಣವಾಗಿ ಚಟುವಟಿಕೆಗಳನ್ನು ಆಯೋಜಿಸಿ ಮಕ್ಕಳು ತರಗತಿಯಲ್ಲಿ ಮುಕ್ತವಾಗಿ ಭಾಗವಹಿಸಿ ಕಲಿಕೆಯನ್ನು ರಚಿಸಿಕೊಳ್ಳಲು ಅನುಕೂಲಿಸುತ್ತಾರೆ.
- ರೂಪಣಾತ್ಮಕ ಮೌಲ್ಯಮಾಪನಕ್ಕೆ ಹೆಚ್ಚಿನ ಒತ್ತನ್ನು ಕೊಡಲಾಗಿದೆ. ಅಂದರೆ ಕಲಿಕಾ ಪ್ರಕ್ರಿಯೆಯೊಳಗೆ ಮಗುವಿನ ಭಾಗವಹಿಸುವಿಕೆಯನ್ನು ಗಮನಿಸುತ್ತಾ ಮಗುವಿನ ಸರ್ವಾಂಗೀಣ ವ್ಯಕ್ತಿತ್ವವನ್ನು ರೂಪಿಸುವ ಪ್ರಯತ್ನ ಮಾಡಲಾಗುತ್ತದೆ.
- ಸಾಧನ ತಂತ್ರಗಳನ್ನು ಬಳಸಿ ಮಕ್ಕಳ ಕಲಿಕೆಯನ್ನು ಗುರುತಿಸುತ್ತಾರೆ.
- ಕಲಿಕೆಯ ಮೌಲ್ಯಮಾಪನಕ್ಕಿಂತ ಕಲಿಕೆಗಾಗಿ ಮಾಡುವ ಮೌಲ್ಯಮಾಪನಕ್ಕೆ ಹೆಚ್ಚು ಒತ್ತನ್ನು ನೀಡಲಾಗಿದೆ.
- ಕಲಿಕೆಯೊಳಗೆ ಮಗುವಿನ ಸಮಸ್ಯೆಗಳನ್ನು ಗುರುತಿಸಿ ಪರಿಹಾರಗಳನ್ನು ಒದಗಿಸುತ್ತಾರೆ.
- ಮಕ್ಕಳಿಗೆ ಅಗತ್ಯವಿರುವ ಹಿಮ್ಮಾಹಿತಿಯನ್ನು ನೀಡುತ್ತಾರೆ. ಮಕ್ಕಳ ಸ್ವಾವಲೋಕನಕ್ಕೆ ಅವಕಾಶ ಕಲ್ಪಿಸುತ್ತಾರೆ.
- ಪೋಷಕರೊಂದಿಗೆ ಮತ್ತು ಶಿಕ್ಷಕರೊಂದಿಗೆ ಮಕ್ಕಳ ಬೆಳವಣಿಗೆಯ ಬಗ್ಗೆ ಚರ್ಚಿಸುತ್ತಾರೆ.

### ಸಿ.ಸಿ.ಇ. ಬಗ್ಗೆ ಶಾಲೆಯಲ್ಲಿ ಮುಖ್ಯ ಶಿಕ್ಷಕರು ಕೈಗೊಳ್ಳುವ ಚಟುವಟಿಕೆಗಳು:

- ಸಿಸಿಇಗೆ ಪೂರಕವಾಗಿ ಶಿಕ್ಷಕರು ತರಗತಿಯಲ್ಲಿ ಮಾಡುವ ಚಟುವಟಿಕೆಗಳ ಅವಲೋಕನ ಮಾಡುತ್ತಾರೆ.
- ಮಕ್ಕಳ ಕೃತಿ ಸಂಪುಟ ಬರವಣಿಗೆ, ಓದುವ ಕೌಶಲಗಳನ್ನು ಖುದ್ದು ಗಮನಿಸಿ ಶಿಕ್ಷಕರಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ
- ತರಗತಿ ವೀಕ್ಷಿಸಿ ಶಿಕ್ಷಕರು ತರಗತಿಯನ್ನು ಹೇಗೆ ಚಟುವಟಿಕೆ ಆಧಾರಿತವಾಗಿ ರಚನಾವಾದದ ಹಿನ್ನೆಲೆಯಲ್ಲಿ ಅನುಕೂಲಿಸಬೇಕು? ಹಾಗೂ ಅದರ ಜೊತೆಯಲ್ಲಿಯೇ ಮೌಲ್ಯಮಾಪನ ಸಾಗುವ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಿರುತ್ತಾರೆ
- ತರಗತಿಯಲ್ಲಿ ಉತ್ತಮ ಕಲಿಕಾ ವಾತಾವರಣ ನಿರ್ಮಾಣವಾಗುವಂತೆ ಶಿಕ್ಷಕರಿಗೆ ಮಾರ್ಗದರ್ಶನ ನೀಡಿರುತ್ತಾರೆ.
- ಸಿಸಿಇ ಸಂಬಂಧ ಎಲ್ಲಾ ದಾಖಲೆಗಳನ್ನು ಪರಿಶೀಲಿಸುವ ಮೂಲಕ ಮೇಲುಸ್ತುವಾರಿ ಮಾಡುತ್ತಿದ್ದಾರೆ.
- ಮಕ್ಕಳ ಪ್ರಗತಿಯ ಕುರಿತು ಪೋಷಕರ ಜೊತೆ ಸಂವಾದ ನಡೆಸಲು ಅವಕಾಶ ಕಲ್ಪಿಸುತ್ತಾರೆ.
- ಸಮಾಲೋಚನಾ ಸಭೆಗಳಲ್ಲಿ ಉತ್ತಮವಾಗಿ ಸಿಸಿಇ ಅನುಷ್ಠಾನ ಮಾಡುವ ಬಗ್ಗೆ ಮತ್ತು ಅನುಷ್ಠಾನಿಕ ಸಮಸ್ಯೆಗಳ ಬಗ್ಗೆ ಚರ್ಚಿಸಲು ಹೆಚ್ಚು ಹೆಚ್ಚು ಅವಕಾಶಗಳನ್ನು ಮಾಡಿಕೊಟ್ಟಿರುವುದರಿಂದ ಶಿಕ್ಷಕರ ಹಲವಾರು ಸವಾಲುಗಳಿಗೆ ಪರಿಹಾರ ಸಿಗುತ್ತದೆ.
- ತರಗತಿ ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿ ವೀಕ್ಷಣೆ ಮಾಡಿ ಸಿಸಿಇಯ ಮುಖ್ಯ ಭಾಗವಾಗಿರುವ ರೂಪಣಾತ್ಮಕ ಮೌಲ್ಯಮಾಪನದ ಬಗ್ಗೆ ಶಿಕ್ಷಕರಿಗೆ ಮಾರ್ಗದರ್ಶನ ನೀಡಲು ಸಮರ್ಥರಾಗುವಂತೆ ಮುಖ್ಯ ಶಿಕ್ಷಕರ ಬಲವರ್ಧನೆ ಮಾಡಬೇಕಾಗಿದೆ.




ಮಕ್ಕಳನ್ನು ಅರ್ಥೈಸುವತ್ತ....




ಎನ್‌ಸಿಎಫ್, ಸಿಸಿಇ ಆಚರಣೆಗಳು ತರಗತಿ ಪ್ರಕ್ರಿಯೆಯಲ್ಲಿದೆಯೇ?

ಜ್ಞಾನದ ರಚನೆಯಲ್ಲಿ ತೊಡಗಿರುವ ಮಕ್ಕಳು–ಅನುಕೂಲಿಸುತ್ತಿರುವ ಶಿಕ್ಷಕರು



ಮಕ್ಕಳ ವ್ಯಕ್ತಿತ್ವದ ಕನ್ನಡಿಯಾಗಿ ಅರಳಿರುವ ಕೃತಿ ಸಂಪುಟಗಳು




ಕಲಿಕಾ ಸ್ವಾತಂತ್ರ್ಯ..........

**ಸಿ.ಸಿ.ಇ. ಬಗ್ಗೆ ಕ್ಲಸ್ಟರ್‌ನಲ್ಲಿ ಸಿ.ಆರ್.ಪಿ.ಗಳು ಕೈಗೊಳ್ಳುವ ಚಟುವಟಿಕೆಗಳು:**

- ಶಾಲೆಗಳಿಗೆ ಭೇಟಿ ನೀಡಿದಾಗ, ಭೇಟಿ ನೀಡಿದ ಮಾಹೆ, ದಿನ, ವಿಷಯವಾರು, ಆ ಮಾಹೆಯ ಸಾಮರ್ಥ್ಯಕ್ಕನುಗುಣವಾಗಿ ಕಲಿಕಾಂಶ ಗಳಿಸಿರುವರೋ, ಇಲ್ಲವೋ ಎಂಬುದನ್ನು ವೈಯಕ್ತಿಕವಾಗಿ ಮೌಖಿಕ ಮತ್ತು ಲಿಖಿತ ರೂಪದಲ್ಲಿ ಪರೀಕ್ಷಿಸುವ ಮೂಲಕ ಮೇಲುಸ್ತುವಾರಿ ಮಾಡಿ ಕೊನೆಯಲ್ಲಿ ಎಲ್ಲಾ ಶಿಕ್ಷಕರನ್ನೂ ಒಂದು ಕೊಠಡಿಯಲ್ಲಿ ಸೇರಿಸಿ ಎಲ್ಲಿ ದೋಷ ಆಗಿದೆ ಹಾಗೂ ನಿಧಾನ ಕಲಿಕೆಗೆ ಕಾರಣ ಮತ್ತು ಪಾಠೋಪಕರಣಗಳ ಸೂಕ್ತ ಬಳಕೆ ಹಾಗೂ ಸೂಕ್ತ ಬದಲಾವಣೆ ಎಲ್ಲೆಲ್ಲಿ ಅಗತ್ಯವಿದೆ ಎಂಬುದರ ಕುರಿತು ಹಿಮ್ಮಾಹಿತಿಯನ್ನು ನೀಡುತ್ತಾರೆ.
- ಸಿಸಿಇ ಸಂಬಂಧ ಎಲ್ಲಾ ದಾಖಲೆಗಳನ್ನು ಪರಿಶೀಲಿಸುವ ಮೂಲಕ ಮೇಲುಸ್ತುವಾರಿ ಮಾಡುತ್ತಿದ್ದಾರೆ. ಮಕ್ಕಳ ಕೃತಿ ಸಂಪುಟ ಬರವಣಿಗೆ, ಓದುವ ಕೌಶಲಗಳನ್ನು ಖುದ್ದು ಗಮನಿಸಿ ಶಿಕ್ಷಕರಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಸಿ.ಆರ್.ಪಿ.ಗಳು ಶಾಲಾ ಭೇಟಿಯ ಸಂದರ್ಭದಲ್ಲಿ ತರಗತಿ ವೀಕ್ಷಿಸಿ ಶಿಕ್ಷಕರು ತರಗತಿಯನ್ನು ಹೇಗೆ ಚಟುವಟಿಕೆ ಆಧಾರಿತವಾಗಿ ರಚನಾವಾದದ ಹಿನ್ನೆಲೆಯಲ್ಲಿ ಅನುಕೂಲಿಸಬೇಕು? ಹಾಗೂ ಅದರ ಜೊತೆಯಲ್ಲಿಯೇ ಮೌಲ್ಯಮಾಪನ ಸಾಗುವ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಿರುತ್ತಾರೆ.
- ಸಿ.ಆರ್.ಪಿ.ಗಳು ಶಾಲಾ ಭೇಟಿಯ ಸಂದರ್ಭದಲ್ಲಿ ತರಗತಿಗೆ ಭೇಟಿ ನೀಡಿ ಮಕ್ಕಳಿಗೆ ಉಕ್ತಲೇಖನ ನೀಡುವುದು, ಕಪ್ಪು ಹಲಗೆಯ ಮೇಲೆ ಬರಹಗಳನ್ನು ಬರೆಸುವುದು, ಮೌಖಿಕ ಪ್ರಶ್ನೆಗಳನ್ನು ಕೇಳಿ ಉತ್ತರವನ್ನು ಪಡೆಯುವುದು, ಸರಳ ಲೆಕ್ಕಗಳನ್ನು ಮಾಡಿಸುವುದು, ವಾಕ್ಯಗಳನ್ನು ಓದಿಸುವುದು, ಔಪಚಾರಿಕ & ಅನೌಪಚಾರಿಕ ಸನ್ನಿವೇಶಗಳನ್ನು ನೀಡಿ ಮಾತನಾಡಿಸುವುದು. ಹೀಗೆ ಮಕ್ಕಳ ಕಲಿಕೆಯನ್ನು ಮೇಲ್ವಿಚಾರಣೆ ಮಾಡುತ್ತಿರುತ್ತಾರೆ.
- ಸಿ.ಆರ್.ಪಿ.ಗಳು ಶಿಕ್ಷಕರಿಗೆ ಅಗತ್ಯ ಮಾರ್ಗದರ್ಶನ ನೀಡುವುದಲ್ಲದೆ ಶಿಕ್ಷಕರು ಎದುರಿಸಿದ ಸವಾಲುಗಳಿಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. ಶಾಲಾ ಭೇಟಿಯ ಸಂದರ್ಭದಲ್ಲಿ ಸಿ.ಆರ್.ಪಿ.ಗಳು, ಶಿಕ್ಷಕರು ನಿರ್ವಹಿಸಿರುವ ದಾಖಲೆಗಳನ್ನು ಪರಿಶೀಲಿಸಿರುತ್ತಾರೆ. ಘಟಕ ಯೋಜನೆ ತಯಾರಿಸುವುದು, ಮತ್ತು ಶಿಕ್ಷಕರ ವೈಯಕ್ತಿಕ ನಮೂದುಗಳು ಹಾಗೂ ಮಕ್ಕಳಿಗೆ ಅಗತ್ಯ ಸಮಯದಲ್ಲಿ ನೀಡಿದ ಹಿಮ್ಮಾಹಿತಿಗಳ ಉಲ್ಲೇಖಗಳನ್ನು ಶಾಲಾ ಭೇಟಿ ವರದಿಯಲ್ಲಿ ಹಾಗೂ ಸಿ.ಆರ್.ಪಿ, ಬಿ.ಆರ್.ಪಿ ಸಭೆಯಲ್ಲಿ ಹಂಚಿಕೊಂಡಿರುತ್ತಾರೆ. ನಂತರದ ಭೇಟಿಗಳಲ್ಲಿ ಶಿಕ್ಷಕರ ಅನುಪಾಲನೆಯನ್ನು ಉಲ್ಲೇಖಿಸಿರುತ್ತಾರೆ. ಕ್ಲಸ್ಟರ್ ವ್ಯಾಪ್ತಿಯಲ್ಲಿನ ಶಾಲೆಗಳಲ್ಲಿರುವ ಕಲಿಕೆ/ಬೋಧನಾ ಪ್ರಕ್ರಿಯೆಯಲ್ಲಿರುವ ಉತ್ತಮ ಅಭ್ಯಾಸಗಳನ್ನು ಶಿಕ್ಷಕರ ಸಮಾಲೋಚನಾ ಸಭೆಯಲ್ಲಿ ಹಂಚಿಕೊಂಡಿರುತ್ತಾರೆ..
- ಹೀಗೆ ಅನೇಕ ರೀತಿಯಲ್ಲಿ ಪ್ರತಿಯೊಬ್ಬ ಸಿ.ಆರ್.ಪಿ.ಯೂ ಮಕ್ಕಳ ಪ್ರಗತಿಯನ್ನು ತಮ್ಮದೇ ಆದ ಅನನ್ಯ ರೀತಿಯಲ್ಲಿ ಮೇಲುಸ್ತುವಾರಿಯನ್ನು ಮಾಡುತ್ತಿದ್ದಾರೆ.

**ಸಿ.ಸಿ.ಇ. ಬಗ್ಗೆ ಡಯಟ್‌ನವರು ಕೈಗೊಳ್ಳುವ ಚಟುವಟಿಕೆಗಳು:**

- ಸಿಸಿಇ ಬಗ್ಗೆ ಹೆಚ್ಚು ಸ್ಪಷ್ಟತೆಯನ್ನು ಪಡೆದುಕೊಳ್ಳುವ ಸಲುವಾಗಿ ಉಪನ್ಯಾಸಕರ ತಂಡವು ಅಗತ್ಯ ಬಿದ್ದಾಗ ಚರ್ಚೆಯನ್ನು ಮಾಡುವಂತೆ ಪ್ರಾಂಶುಪಾಲರು ಅವಕಾಶ ಕಲ್ಪಿಸಿರುತ್ತಾರೆ. ಸಿಸಿಇಯ ಪರಿಕಲ್ಪನೆಯ ಬಗ್ಗೆ ಹೆಚ್ಚು ಸ್ಪಷ್ಟತೆಯನ್ನು ಪಡೆದುಕೊಳ್ಳಲು ಈ ಸಮಾಲೋಚನೆ–ಸಂವಾದ ಸಹಾಯವಾಗುತ್ತದೆ.
- ಉಪನ್ಯಾಸಕರು ತಮ್ಮ ನೋಡೆಲ್ ತಾಲ್ಲೂಕುಗಳಲ್ಲಿರುವ ಶಾಲೆಗಳಿಗೆ ಭೇಟಿಯನ್ನು ನೀಡುವ ಸಂದರ್ಭದಲ್ಲಿ ಮೊದಲಿಗೆ ದಾಖಲೆಗಳನ್ನು ಪರಿಶೀಲಿಸದೆ ನೇರವಾಗಿ ತರಗತಿ ಕೋಣೆಗೆ ಹೋಗಿ ಕಲಿಕಾ ಪ್ರಕ್ರಿಯೆಯನ್ನು ಗಮನಿಸುತ್ತಾರೆ.
- ಪ್ರಕ್ರಿಯೆಯಲ್ಲಿ ಮಕ್ಕಳ ಬೆಳವಣಿಗೆ ಮತ್ತು ಪ್ರಗತಿಯನ್ನು ಗಮನಿಸುತ್ತಾರೆ. ಬೇರೆ ಬೇರೆ ವಿಧಾನಗಳಿಂದ ಮಕ್ಕಳ ಕಲಿಕೆಯನ್ನು ಪರಿಶೀಲಿಸುತ್ತಾರೆ. ಕೃತಿ ಸಂಪುಟ ನಿರ್ವಹಣೆ ಮತ್ತು ಮಕ್ಕಳ ಕಲಿಕೆಯ ಪ್ರಗತಿಗೆ ಸಂಬಂಧಿಸಿದ ಪುರಾವೆಗಳನ್ನು ನಿರ್ವಹಿಸಿರುವ ರೀತಿಯನ್ನು ಗಮನಿಸಿ ಮಾರ್ಗದರ್ಶನ ನೀಡುತ್ತಾರೆ. ಮಕ್ಕಳ ಕಲಿಕೆಯನ್ನು ಗಮನಿಸಿ ಶಿಕ್ಷಕರಿಗೆ ಮಾರ್ಗದರ್ಶನವನ್ನು ನೀಡುತ್ತಾರೆ.

- ಕಲಿಕಾ ಸಮಸ್ಯೆ ಇರುವ, ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳ ಪ್ರಗತಿಗೆ ಸಂಬಂಧಿಸಿದಂತೆ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು ಕೈಗೊಂಡ ಕ್ರಮಗಳ ಬಗ್ಗೆ ವಿಮರ್ಶೆ ಮಾಡುತ್ತಾರೆ.
- ಸಿಆರ್‌ಪಿಗಳ ಜೊತೆಯಲ್ಲಿ ಭೇಟಿ ನೀಡಿದ ಸಂದರ್ಭಗಳಲ್ಲಿ ಈ ಕುರಿತಂತೆ ಅವರ ಜೊತೆಯಲ್ಲಿಯೂ ಸಂದರ್ಭಕ್ಕನುಗುಣವಾಗಿ ಚರ್ಚೆಯನ್ನು ಮಾಡಲಾಗುತ್ತದೆ.
- ಬಿಇಒ ಮತ್ತು ಬಿಆರ್‌ಸಿಗಳ ಸಭೆಯಲ್ಲಿ ತಾಲ್ಲೂಕುವಾರು ಭೇಟಿ ನೀಡಿದ ಶಾಲೆಗಳಲ್ಲಿ ನಹಶಿಕ್ಷಕರು ಮತ್ತು ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗುತ್ತದೆ ಮತ್ತು ಬಿಇಒ ಮತ್ತು ಬಿಆರ್‌ಸಿಗಳ ಪ್ರತಿಕ್ರಿಯೆಗಳನ್ನು ಪಡೆದುಕೊಂಡು ಚಿಂತನೆಗಳನ್ನು ಮಾಡಲಾಗುತ್ತದೆ.
- **ಕಳೆದ ಸಾಲಿನಲ್ಲಿ ಸಿಆರ್‌ಪಿ, ಬಿಆರ್‌ಪಿ ಮತ್ತು ಎಲ್ಲಾ ಅನುಪಾಲನಾಧಿಕಾರಿಗಳಿಗಾಗಿ ಶೈಕ್ಷಣಿಕ ಸಮಾವೇಶವನ್ನು ನಡೆಸಿ ಸಿಸಿಇ ಕುರಿತಂತೆ ಪರಿಕಲ್ಪನಾತ್ಮಕವಾಗಿ ಸ್ಪಷ್ಟತೆ ಪಡೆದುಕೊಳ್ಳಲಾಗಿದೆ ಮತ್ತು ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲಾಗಿದೆ.**
- ಒಟ್ಟಿನಲ್ಲಿ ಮೈಸೂರು ಜಿಲ್ಲೆಯಲ್ಲಿ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಕುರಿತಂತೆ ಉತ್ತಮವಾಗಿ ಅನುಪಾಲನೆ ಮತ್ತು ಮಾರ್ಗದರ್ಶನ ನೀಡುವ ಪ್ರಯತ್ನವನ್ನು ಕಾಳಜಿಯಿಂದ ಮಾಡಲಾಗುತ್ತಿದೆ.



**ಕಲಿಕೋಪಕರಣಗಳಿಂದ ತುಂಬಿರುವ ಕ್ಲಸ್ಟರ್ ಕೇಂದ್ರ– ಚಲ್ಲಹಳ್ಳಿ ಕ್ಲಸ್ಟರ್, ಹುಣಸೂರು ತಾಲ್ಲೂಕು**

# ವಿಭಾಗ – (ಇ)

**ಶಿಕ್ಷಕರ ತರಬೇತಿ ವಿವರ:**

**ಸಮಾಲೋಚನಾ ಸಭೆಯ ಪ್ರಗತಿ ಸೆಪ್ಟೆಂಬರ್–2014 ಅಂತ್ಯಕ್ಕೆ:**

**ಕೋಷ್ಟಕ 17:**

| ಕ್ರ ಸಂ | ತಾಲ್ಲೂಕಿನ ಹೆಸರು | ಮಾನವ ದಿನ | ಒಟ್ಟು ಸಾಧನೆ | ಶೇ ಸಾಧನೆ |
|---|---|---|---|---|
| 1 | ಎಚ್‌ಡಿ.ಕೋಟೆ | 4640 | 1799 | **39** |
| 2 | ಹುಣಸೂರು | 4825 | 1930 | **40** |
| 3 | ಕೆಆರ್ ನಗರ | 4255 | 1668 | **39** |
| 4 | ಮೈಸೂರು ಉತ್ತರ | 2970 | 1188 | **40** |
| 5 | ಮೈಸೂರು ದಕ್ಷಿಣ | 1320 | 528 | **40** |
| 6 | ಮೈಸೂರು ತಾಲ್ಲೂಕು | 4700 | 1521 | **32** |
| 7 | ನಂಜನಗೂಡು | 5125 | 2050 | **40** |
| 8 | ಪಿರಿಯಾಪಟ್ಟಣ | 4010 | 1604 | **40** |
| 9 | ತಿ ನರಸೀಪುರ | 3785 | 1476 | **39** |
| **ಒಟ್ಟು** | | **35630** | 13764 | **39** |




- 5 ಸಮಾಲೋಚನಾ ಸಭೆಗಳಲ್ಲಿ ಸೆಪ್ಟೆಂಬರ್ ಅಂತ್ಯಕ್ಕೆ 2 ಸಮಾಲೋಚನಾ ಸಭೆಗಳನ್ನು ನಡೆಸಬೇಕಾಗಿತ್ತು. ಎಲ್ಲಾ ಬ್ಲಾಕ್‌ಗಳಲ್ಲಿ ಉತ್ತಮವಾಗಿ ಸಮಾಲೋಚನಾ ಸಭೆಗಳನ್ನು ನಡೆಸಿರುತ್ತಾರೆ. ಶೇ 98 ಸಾಧನೆ ಆಗಿರುತ್ತದೆ.
- ಪ್ರತಿ ಕ್ಲಸ್ಟರ್ ಕೇಂದ್ರಕ್ಕೆ ವೀಕ್ಷಕರಾಗಿ ಭೇಟಿ ನೀಡುವಂತೆ ಡಯಟ್ ನೋಡಲ್ ಅಧಿಕಾರಿಗಳು, ಬಿಇಒ, ಬಿಆರ್‌ಸಿ, ಬಿಆರ್‌ಪಿ ಮತ್ತು ಇಸಿಓಗಳಿಗೆ ವೇಳಾ ಪಟ್ಟಿಯನ್ನು ಸಿದ್ಧಪಡಿಸಿ ಅನುಪಾಲನಾಧಿಕಾರಿಗಳು ಕ್ಲಸ್ಟರ್ ಕೇಂದ್ರಗಳಿಗೆ ಭೇಟಿ ನೀಡುವುದರ ಮೂಲಕ ಸಮಾಲೋಚನಾ ಸಭೆಯ ಸಿದ್ಧತೆ ಮತ್ತು ನಿರ್ವಹಣೆಯ ಗುಣಮಟ್ಟದ ಬಗ್ಗೆ ಖಾತ್ರಿಡಿಸಿಕೊಳ್ಳಲಾಗಿದೆ.
- ಹೆಚ್ಚಿನ ಕೇಂದ್ರಗಳಲ್ಲಿ ಶಿಕ್ಷಕರು ಸಂಜೆ 5.30ರ ವರೆಗೆ ತರಬೇತಿಯಲ್ಲಿ ಭಾಗವಹಿಸಿ ಸಮಾಲೋಚನಾ ತರಬೇತಿಯ ಉಪಯೋಗವನ್ನು ಪಡೆದುಕೊಂಡಿರುತ್ತಾರೆ.

- **1 ರಿಂದ 3ನೇ ತರಗತಿ ವಿಷಯಾಧಾರಿತ ತರಬೇತಿ ಪ್ರಗತಿ ಅಕ್ಟೋಬರ್ 2014ರ ಅಂತ್ಯಕ್ಕೆ:**

**ಕೋಷ್ಟಕ 18:**

| ತಾಲ್ಲೂಕಿನ ಹೆಸರು | ಭೌತಿಕ ಗುರಿ | ಒಟ್ಟು ಸಾಧನೆ | ಶೇಕಡಾವಾರು ಸಾಧನೆ |
|---|---|---|---|
| ಎಚ್‌ಡಿ.ಕೋಟೆ | 570 | 360 | 63 |
| ಹುಣಸೂರು | 580 | 281 | 48 |
| ಕೆಆರ್ ನಗರ | 496 | 309 | 62 |
| ಮೈಸೂರು ಉತ್ತರ | 324 | 110 | 34 |
| ಮೈಸೂರು ದಕ್ಷಿಣ | 140 | 112 | 80 |
| ಮೈಸೂರು ತಾಲ್ಲೂಕು | 523 | 197 | 38 |
| ನಂಜನಗೂಡು | 580 | 173 | 30 |
| ಪಿರಿಯಾಪಟ್ಟಣ | 492 | 198 | 40 |
| ತಿ ನರಸೀಪುರ | 449 | 195 | 43 |
| ಒಟ್ಟು ಜಿಲ್ಲೆಯ ಸಾಧನೆ | 4154 | 1935 | 47 |




- ಮೈಸೂರು ದಕ್ಷಿಣ ವಲಯ, ಎಚ್.ಡಿ ಕೋಟೆ ಮತ್ತು ಕೆ.ಆರ್.ನಗರ ತಾಲ್ಲೂಕಿನವರು ಉತ್ತಮ ಪ್ರಗತಿ ಸಾಧಿಸಿರುತ್ತಾರೆ.
- ನಂಜನಗೂಡಿನ ತರಬೇತಿ ಸಾಧನೆಯು ಕಡಿಮೆಯಾಗಿದೆ.
- ರಾಜ್ಯ ಮಟ್ಟದ ಎಂಆರ್‌ಪಿ ತರಬೇತಿಯು ಆಗಸ್ಟ್ ತಿಂಗಳಲ್ಲಿ ನಡೆದಿದ್ದು, ಜಿಲ್ಲಾ ಮಟ್ಟದ ಎಂಆರ್‌ಪಿ ತರಬೇತಿಯು ಅಗಸ್ಟ್ 3ನೇ ವಾರದಲ್ಲಿ ನಡೆದಿರುವುದರಿಂದ ತಾಲ್ಲೂಕು ಹಂತದ ತರಬೇತಿಯು ಸೆಪ್ಟೆಂಬರ್ ತಿಂಗಳಲ್ಲಿ ಆರಂಭವಾಗಿರುತ್ತದೆ. ಸೆಪ್ಟೆಂಬರ್ 24 ರಿಂದ ಮೈಸೂರಿನಲ್ಲಿ ದಸರಾ ರಜೆ ಆರಂಭವಾಗಿರುವುದರಿಂದ ಪ್ರಗತಿ ಸ್ವಲ್ಪ ಕಡಿಮೆಯಾಗಿರುತ್ತದೆ. ಇದನ್ನು ನವೆಂಬರ್ ಮಾಹೆಯಲ್ಲಿ ಸರಿದೂಗಿಸಲು ಉದ್ದೇಶಿಸಿದೆ.
- ಜಿಲ್ಲಾ ಮಟ್ಟದ ತರಬೇತಿಯನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಲಾಗಿದೆ. ಅವಧಿವಾರು ವಿನ್ಯಾಸ ಸಿದ್ಧಪಡಿಸಿದೆ. ಪ್ರಾತ್ಯಕ್ಷಿಕೆ, ಕ್ಷೇತ್ರ ಭೇಟಿ, ಪ್ರಯೋಗ, ಚರ್ಚೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

**ಕೋಷ್ಟಕ 19:**

| 4 ರಿಂದ 5ನೇ ತರಗತಿ ವಿಷಯಾಧಾರಿತ ತರಬೇತಿ ಪ್ರಗತಿ ಅಕ್ಟೋಬರ್ 2014 | | | | |
|---|---|---|---|---|
| ಕ್ರ ಸಂ | ತಾಲ್ಲೂಕಿನ ಹೆಸರು | ಭೌತಿಕ ಗುರಿ | ಒಟ್ಟು ಸಾಧನೆ | ಶೇಕಡಾವಾರು ಸಾಧನೆ |
| 1 | ಎಚ್‌ಡಿ.ಕೋಟೆ | 230 | 0 | 0 |
| 2 | ಹುಣಸೂರು | 245 | 100 | 40.82 |
| 3 | ಕೆಆರ್ ನಗರ | 213 | 0 | 0 |
| 4 | ಮೈಸೂರು ಉತ್ತರ | 166 | 0 | 0 |
| 5 | ಮೈಸೂರು ದಕ್ಷಿಣ | 60 | 0 | 0 |
| 6 | ಮೈಸೂರು ತಾಲ್ಲೂಕು | 255 | 0 | 0 |
| 7 | ನಂಜನಗೂಡು | 265 | 0 | 0 |
| 8 | ಪಿರಿಯಾಪಟ್ಟಣ | 210 | 0 | 0 |
| 9 | ತಿ ನರಸೀಪುರ | 200 | 0 | 0 |
| | ಒಟ್ಟು | 1844 | 100 | 5.42 |




- ಹುಣಸೂರು ತಾಲ್ಲೂಕಿನವರು ಉತ್ತಮ ಪ್ರಗತಿ ಸಾಧಿಸಿರುತ್ತಾರೆ.
- ಉಳಿದ ಎಲ್ಲಾ ತಾಲ್ಲೂಕುಗಳಲ್ಲಿ ತರಬೇತಿ ಸಾಧನೆಯು ಕಡಿಮೆಯಾಗಿದೆ.
- ರಾಜ್ಯ ಮಟ್ಟದ ಎಂಆರ್‌ಪಿ ತರಬೇತಿಯು ಆಗಸ್ಟ್ ತಿಂಗಳ ಅಂತ್ಯದಲ್ಲಿ ನಡೆದಿದ್ದು, ಜಿಲ್ಲಾ ಮಟ್ಟದ ಎಂಆರ್‌ಪಿ ತರಬೇತಿಯು ಸೆಪ್ಟೆಂಬರ್ ತಿಂಗಳಲ್ಲಿ ನಡೆದಿರುವುದರಿಂದ ತಾಲ್ಲೂಕು ಹಂತದ ತರಬೇತಿಯು ತಡವಾಗಿ ಆರಂಭವಾಗಿರುತ್ತದೆ. ಸೆಪ್ಟೆಂಬರ್ 24 ರಿಂದ ಮೈಸೂರಿನಲ್ಲಿ ದಸರಾ ರಜೆ ಆರಂಭವಾಗಿರುವುದರಿಂದ ಪ್ರಗತಿ ಸ್ವಲ್ಪ ಕಡಿಮೆಯಾಗಿರುತ್ತದೆ. ಇದನ್ನು ನವೆಂಬರ್ ಮಾಹೆಯಲ್ಲಿ ಸರಿದೂಗಿಸಲಾಗುವುದು.
- ರಾಜ್ಯ ಮಟ್ಟದಲ್ಲಿ ತರಬೇತಿ ಸಾಹಿತ್ಯವನ್ನು ರಜಾ ಅವಧಿಯಲ್ಲಿಯೇ ಸಿದ್ಧಪಡಿಸುವುದು. ಜೂನ್ ತಿಂಗಳಲ್ಲಿ ತರಬೇತಿಗಳನ್ನು ಆರಂಭಿಸಿದಲ್ಲಿ ತಾಲ್ಲೂಕು ಹಂತದ ತರಬೇತಿಗಳು ಮೊದಲ ಸೆಮಿಸ್ಟರ್ ಅವಧಿಯಲ್ಲಿ ಮುಗಿಯುವ ಸಾಧ್ಯತೆಗಳಿರುತ್ತವೆ.
- ಜಿಲ್ಲಾ ಮಟ್ಟದ ತರಬೇತಿಯನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಲಾಗಿದೆ. ಅವಧಿವಾರು ವಿನ್ಯಾಸ ಸಿದ್ಧಪಡಿಸಿದೆ. ಪ್ರಾತ್ಯಕ್ಷಿಕೆ, ಕ್ಷೇತ್ರ ಭೇಟಿ, ಪ್ರಯೋಗಿಕ, ಚರ್ಚೆಗಳಿಗೆ ಹೆಚ್ಚಿನ ಆಧ್ಯತೆ ನೀಡಲಾಗಿದೆ.



ಸಮಾಲೋಚನಾ ಸಭೆಗಳಲ್ಲಿ–ವಿಷಯವಾರು ಗುಂಪುಗಳಲ್ಲಿ ಮುಂದಿನ ತಿಂಗಳ ಪಾಠಗಳಿಗೆ ಸಿದ್ಧತೆ ಮಾಡಿಕೊಳ್ಳುತ್ತಿರುವ ಶಿಕ್ಷಕರು



ಸಮಾಲೋಚನಾ ತರಬೇತಿ ಮತ್ತು ತರಬೇತಿಗಳಲ್ಲಿ ವಿಷಯವಾರು ಗುಂಪುಚರ್ಚೆಯಲ್ಲಿ ತೊಡಗಿರುವ ಶಿಕ್ಷಕರು–ಪಿರಿಯಾಪಟ್ಟಣ

1). ಶಿಕ್ಷಕರು ಪಡೆದ ತರಬೇತಿಗಳ ಅನುಷ್ಠಾನಕ್ಕೆ ತೆಗೆದುಕೊಂಡ ಮುಖ್ಯವಾದ 5 ಉದಾಹರಣೆಗಳು:





**ಜ್ಞಾನ ರಚನೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳು– ಕೊಡಗು ಹೊಸೂರು ಕಾಲೊನಿ ಮತ್ತು ಚಿಕ್ಕ ಬೀಚನ ಹಳ್ಳಿ, ಹುಣಸೂರು ತಾಲ್ಲೂಕು**

- ಆರ್.ಅನುರಾಧ ಸ.ಹಿ.ಪ್ರಾ.ಶಾಲೆ ಬಿ.ಮಟಕೆರೆ, ಎಚ್ ಡಿ ಕೋಟೆ ಶಾಲೆ–ಬಿ.ಸಿ.ಟಿ ತರಬೇತಿಯ ಅನುಷ್ಠಾನ.
- ತ್ರಿವೇಣಿ ಸ.ಹಿ.ಪ್ರಾ.ಶಾಲೆ ಚೆನ್ನಗುಂಡಿ–ಆರ್.ಟಿ.ಇ, ಎನ್.ಸಿ.ಎಫ್–2005 ಅಂಶಗಳ ಅಳವಡಿಕೆ
- ಶ್ರೀ ವಾಸು, ಸಹಶಿಕ್ಷಕರು, ಒಡೆಯರ ಹೊಸಹಳ್ಳಿ, ಹುಣಸೂರು ತಾಲ್ಲೂಕು, ಎನ್.ಸಿ.ಎಫ್–2005, ಸಿ.ಸಿ.ಇ ಅನುಷ್ಠಾನ
- ಕೆ ಆರ್ ನಗರ ತಾಲ್ಲೂಕು–ರುಕ್ಮಿಣಿ ಸಹಶಿಕ್ಷಕರು ನಲಿಕಲಿ ತರಬೇತಿ
- ಮೈಸೂರು ಉತ್ತರ ವಲಯ– ರುಕ್ಮಿಣಿ, ಸಹಶಿಕ್ಷಕರು, ಸಿಸಿಇ ತರಬೇತಿ
- ಶ್ರೀಮತಿ ಮಮತಾ, ಸಹಶಿಕ್ಷಕರು, ಸಹಿಪ್ರಾ ಶಾಲೆ ಅಶೋಕಪುರಂ, ಮೈಸೂರು ದಕ್ಷಿಣ ವಲಯ
- ಹೆಚ್.ಹೇಮಲತ, ಸ.ಶಿ, ಸ.ಕಿ.ಪ್ರಾ.ಶಾಲೆ, ಮರ್‍ರಯ್ಯನಹುಂಡಿ, ಇವರು ಸಿ.ಸಿ.ಇ ಪ್ರಕಾರ ಮಕ್ಕಳಿಗೆ ಶಿಕ್ಷಣವನ್ನು ತರಗತಿ ಕೊಠಡಿಯಿಂದ ಹೊರಗೂ ಅಂದರೆ ಪರಿಸರದ ಮೂಲಕ ನೀಡಲು ಶಾಲಾ ಪರಿಸರವನ್ನು ನಿರ್ಮಿಸಿ ಉತ್ತಮ ಕಲಿಕೆಗೆ ಅವಕಾಶ ಕಲ್ಪಿಸುತ್ತಿರುವುದು.
- ಶ್ರೀಮತಿ ಮಮತ, ಸಹಿಪ್ರಾ ಶಾಲೆ ದಾಸನೂರು, ಬಿಸಿಟಿ ಮತ್ತು ರಚನಾ ತತ್ವ –ನಂಜನಗೂಡು ತಾಲ್ಲೂಕು
- ಶ್ರೀ ಪ್ರದೀಪ್, ಸಹಶಿಕ್ಷಕರು, ಪಿರಿಯಾಪಟ್ಟಣ ತಾಲ್ಲೂಕು, ನಲಿಕಲಿ ಅನುಷ್ಠಾನ
- ಶ್ರೀ ವೆಂಕಟರಾಜು, ಸಹಿಪ್ರಾ ಶಾಲೆ ಬೆನಕನಪುರ, ತಿ ನರಸೀಪುರ ತಾಲ್ಲೂಕು ಎನ್‌ಸಿಎಫ್, ಸಿಸಿಇ ತತ್ವಗಳ ಅಳವಡಿಕೆ

2). ಮುಂಬರುವ ತರಬೇತಿಗಳ ಬಗ್ಗೆ ಬಿ.ಆರ್.ಸಿ.ಗಳ ಐದು ಪ್ರಮುಖ ಸಲಹೆಗಳು:

- ಏಕಕಾಲಕ್ಕೆ ಹಲವು ತರಬೇತಿಗಳನ್ನು ಮಾಡುವುದು ಸೂಕ್ತವಲ್ಲ
- ಒಮ್ಮೆಗೆ ಒಂದು ಶಾಲೆಯಿಂದ ಹೆಚ್ಚು ಶಿಕ್ಷಕರನ್ನು ಹಲವಾರು ಕಾರಣಗಳಿಂದ ನಿಯೋಜನೆ ಮಾಡಿಕೊಳ್ಳುವುದು ತಪ್ಪಬೇಕು
- ಕ್ಲಸ್ಟರ್ ಹಂತದಲ್ಲಿ ತರಬೇತಿಗಳನ್ನು ಆಯೋಜಿಸುವುದು ಸೂಕ್ತ
- ಬ್ಲಾಕ್ ಹಂತದ ಪ್ರತೀ ತರಬೇತಿಯು ಶಿಕ್ಷಕರುಗಳಿಗೆ ನೀಡಿದ ನಂತರ ಎಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೂ ಸಂಬಂಧ ಪಟ್ಟ ತರಬೇತಿಯ ಬಗ್ಗೆ ಹಾಗೂ ಅನುಷ್ಠಾನದ ಬಗ್ಗೆ ಸಿ.ಆರ್.ಪಿಗಳಿಗೂ ಸೂಕ್ತ ಮಾಹಿತಿ ನೀಡುವುದು ಅಗತ್ಯವಿದೆ.

- ಕಂಪ್ಯೂಟರ್ ತರಬೇತಿ ಆಯೋಜನೆ.
- ಸಿಸಿಇ ಪುನಃಶ್ಚೇತನ ತರಬೇತಿ ಅವಶ್ಯಕತೆ.
- ನಲಿ–ಕಲಿ ತರಬೇತಿ ಆಯೋಜನೆ.
- ಕ್ಲಿಷ್ಟಾಂಶಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆದು ಪರಿಹಾರ ಪಡಿಸುವುದು.
- ನಾವಿನ್ಯಯುತ ತಂತ್ರಗಳ ಬಗ್ಗೆ ತರಬೇತಿ ನೀಡುವುದು.
- ಸರಳ ಪ್ರಯೋಗಗಳನ್ನು ಮಾಡುವ ಕುರಿತು ಪ್ರಾತ್ಯಕ್ಷಿಕೆ ನೀಡುವುದು.
- ವೃತ್ತಿ ದಕ್ಷತೆ ಹೆಚ್ಚಿಸುವ ತರಬೇತಿ ನೀಡುವುದು.
- ಮುಖ್ಯ ಶಿಕ್ಷಕರುಗಳಿಗೆ ಆಡಳಿತಾತ್ಮಕ ತರಬೇತಿ ನೀಡುವುದು.
- ಓ.ಓ.ಎಸ್.ಸಿ. ಮಕ್ಕಳ ಕಲಿಕಾ ಪ್ರಕ್ರಿಯೆಯನ್ನು ಉತ್ತಮಪಡಿಸಲು ಸಾಧನ/ತಂತ್ರಗಳ ಬಗ್ಗೆ ಮಾರ್ಗದರ್ಶನ ನೀಡುವುದು.
- ಆರ್.ಟಿ.ಇ. ಮತ್ತು ಸಿ.ಸಿ.ಇ. ಬಗ್ಗೆ ಹೆಚ್ಚಿನ ಮಾಹಿತಿ ನೀಡುವುದು.
- ಮೌಲ್ಯಶಿಕ್ಷಣ ವೃದ್ಧಿಸುವಂತಹ ತರಬೇತಿಗಳ ಅವಶ್ಯಕತೆ
- ಕೌಶಲಗಳನ್ನು ಹೆಚ್ಚಿಸುವ ಹಾಗೂ ಸೃಜನಶೀಲತೆ ಬೆಳೆಯಲು ಸಹಾಯ ಮಾಡುವ ತರಬೇತಿಗಳು
- 4 & 5ನೇ ತರಗತಿಗೊಳನ್ನೊಳಗಂಡಂತೆ ಬಹು ತರಗತಿ ಬೋಧನೆಗೆ ಸೂಕ್ತ ಮಾರ್ಗದರ್ಶನ ನೀಡಲು ತರಬೇತಿ

## ವಿಭಾಗ – (ಎಫ್)

**ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಕಾರ್ಯಗಳು:**

15. ಜಿಲ್ಲಾ ಹಂತದಲ್ಲಿ ಎಸ್.ಡಿ.ಎಂ.ಸಿ. ಗಳನ್ನು ಹೊಂದಿರುವ ಒಟ್ಟು ಶಾಲೆಗಳ ಸಂಖ್ಯೆ: 1911

16. (ಎ) ಶಾಲಾಭಿವೃದ್ಧಿ ಯೋಜನೆಯನ್ನು (ಎಸ್.ಡಿ.ಪಿ.) ರಚನೆ ಮಾಡಿರುವ ಶಾಲೆಗಳ ಸಂಖ್ಯೆ: 1839

(ಬಿ) ಎಸ್.ಡಿ.ಪಿ. ಯೋಜನೆ ತಯಾರಿಸುವಲ್ಲಿ ಭಾಗವಹಿಸಿದ ಎಸ್.ಡಿ.ಎಂ.ಸಿ.ಗಳ ಸಂಖ್ಯೆ : 1580

17. ಕಳೆದ 6 ತಿಂಗಳ ಅವಧಿಯಲ್ಲಿ ತರಬೇತಿ ಪಡೆದಿರುವ ಎಸ್.ಡಿ.ಎಂ.ಸಿ.ಸದಸ್ಯರ ಸಂಖ್ಯೆ: 2984

**ಕೋಷ್ಟಕ 20:**

| ತಾಲ್ಲೂಕು ಹೆಸರು | ಎಸ್‌ಡಿ ಎಂಸಿಯನ್ನು ಹೊಂದಿರುವ ಶಾಲೆಗಳ ಸಂಖ್ಯೆ | ಎಸ್‌ಡಿಪಿ ರಚನೆ ಮಾಡಿರುವ ಶಾಲೆಗಳ ಸಂಖ್ಯೆ | ಎಸ್‌ಡಿಪಿ ರಚನೆಯಲ್ಲಿ ಭಾಗವಹಿಸಿದ ಎಸ್‌ಡಿಎಂಸಿಗಳ ಸಂಖ್ಯೆ | 6 ತಿಂಗಳಲ್ಲಿ ಎಸ್‌ಡಿಎಂಸಿ ತರಬೇತಿ ಪಡೆದಿರುವ ಸದಸ್ಯರ ಸಂಖ್ಯೆ |
|---|---|---|---|---|
| ಎಚ್‌ಡಿ.ಕೋಟೆ | 306 | 281 | 281 | 830 |
| ಹುಣಸೂರು | 285 | 285 | 285 | |
| ಕೆಆರ್ ನಗರ | 220 | 220 | 110 | 1350 |
| ಮೈಸೂರು ಉತ್ತರ | 69 | 69 | 45 | 448 |
| ಮೈಸೂರು ದಕ್ಷಿಣ | 34 | 33 | 1 | 2 |
| ಮೈಸೂರು ತಾಲ್ಲೂಕು | 217 | 217 | 217 | 354 |
| ನಂಜನಗೂಡು | 266 | 220 | 127 | 0 |
| ಪಿರಿಯಾಪಟ್ಟಣ | 285 | 285 | 285 | 0 |
| ತಿ ನರಸೀಪುರ | 229 | 229 | 229 | 0 |
| ಒಟ್ಟು | 1911 | 1839 | 1580 | 2984 |

- ಎಸ್‌ಡಿಎಂಸಿ ಸದಸ್ಯರಿಗೆ ಇಲಾಖೆಯಿಂದ ನೀಡಿರುವ ತರಬೇತಿಗಳು ಶಾಲೆಯ ಬಗ್ಗೆ ತಮಗಿರುವ ಮನೋಭಾವಗಳನ್ನು ಧನಾತ್ಮಕವಾಗಿ ಬದಲಾಯಿಸುವಲ್ಲಿ ಮಹತ್ತರವಾದ ಪರಿಣಾಮವನ್ನು ಬೀರಿರುತ್ತದೆ.

- ಎಲ್ಲಾ ಶಾಲೆಗಳಲ್ಲಿ ನಿಯಮಾನುಸಾರ ಎಸ್‌ಡಿಎಂಸಿಗಳನ್ನು ರಚನೆ ಮಾಡಿರುತ್ತಾರೆ.
- ಹೆಚ್ಚಿನ ಶಾಲೆಗಳಲ್ಲಿ ಎಸ್‌ಡಿಪಿ ರಚನೆಯನ್ನು ಎಸ್‌ಡಿಎಂಸಿ ಸಹಕಾರದೊಂದಿಗೆ ರಚನೆ ಮಾಡಲಾಗಿದೆ. ಎಸ್‌ಡಿಪಿ ರಚನೆಯು ಎಸ್‌ಡಿಎಂಸಿ ತರಬೇತಿಯ ಭಾಗವಾಗಿರುವುದರಿಂದ ಇದು ಸಾಧ್ಯವಾಗಿದೆ.
- ಇನ್ನೂ ಕೆಲವು ಶಾಲೆಗಳಲ್ಲಿ ಎಸ್‌ಎಇಪಿ ರಚನೆಯಲ್ಲಿ ಎಸ್‌ಡಿಎಂಸಿ ಭಾಗವಹಿಸುವಿಕೆಯ ಅಗತ್ಯತೆಯನ್ನು ಮನಗಾಣಿಸಬೇಕಾಗಿದೆ.
- ಎಸ್‌ಡಿಎಂಸಿ ಸದಸ್ಯರಿಗೆ ತಮ್ಮೂರಿನ ಶಾಲೆಯ ಕುರಿತ ಕಾಣ್ಕೆಯ ಬಗ್ಗೆ ಹೆಚ್ಚಿನ ಅರಿವನ್ನು ಮೂಡಿಸಬೇಕಾಗಿದೆ. ಈ ನಿಟ್ಟಿನಲ್ಲಿ ಶಾಲೆಯಲ್ಲಿರುವ ಶಿಕ್ಷಕರು ತಮ್ಮ ಸಮುದಾಯದವರು ಶಾಲೆಯತ್ತ ಬರುವಂತೆ ಮನವೊಲಿಸಬೇಕಾಗಿದೆ.

## ವಿಭಾಗ – (ಜಿ)

**ಕಲಿಕಾ ಮಾಪನ :**

18. **ಸಿ.ಸಿ.ಇ. ನಮೂನೆ ಅನುಸಾರ ಶಾಲಾ ಹಂತದಲ್ಲಿ ಇರುವಂತೆ ಮಕ್ಕಳ ಕಲಿಕಾ ಮಟ್ಟ.**

(a) 1 ರಿಂದ 5 ನೇ ತರಗತಿ ಮಕ್ಕಳ ಕಲಿಕಾ ಸಾಧನೆಯನ್ನು ತರಗತಿವಾರು/ವಿಷಯವಾರು ವಿವರ–

**ವಿವರ ನೀಡಿದ ಜಿಲ್ಲೆಯ ಒಟ್ಟು ಶಾಲೆಗಳು: 1911**

i) ಜಿಲ್ಲಾ ಹಂತದಲ್ಲಿ ವಿದ್ಯಾರ್ಥಿಗಳ ಕಲಿಕಾ ಮಟ್ಟದ ಪ್ರಗತಿಯನ್ನು ಮಾಪನ ಮಾಡಿದ ಶಾಲೆಗಳ ಸಂಖ್ಯೆ: 1911

ii) ಜಿಲ್ಲಾ ಹಂತದಲ್ಲಿ ವಿದ್ಯಾರ್ಥಿಗಳ ಕಲಿಕಾ ಮಟ್ಟದ ಪ್ರಗತಿಯನ್ನು ಮಾಪನ ಮಾಡದ ಶಾಲೆಗಳ ಸಂಖ್ಯೆ: ಇಲ್ಲ

iii) ಜಿಲ್ಲಾ ಹಂತದಲ್ಲಿ ವಿದ್ಯಾರ್ಥಿಗಳ ಕಲಿಕಾ ಮಟ್ಟ ಬಿ ಗ್ರೇಡ್ ಕ್ಕಿಂತ ಕಡಿಮೆ ಇರುವ ಶಾಲೆಗಳ ಸಂಖ್ಯೆ: 106

- ಕಿರಿಯ ಪ್ರಾಥಮಿಕ: 1ನೇ ತರಗತಿ ಕಲಿಕಾ ಪ್ರಗತಿ:

**ಕೋಷ್ಟಕ–21:**

| 1 | ಕನ್ನಡ | | ಇಂಗ್ಲೀಷ್ | | ಗಣಿತ | | ಪರಿಸರಅಧ್ಯಯನ | |
|---|---|---|---|---|---|---|---|---|
| | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು |
| ಎ+ | 29.08 | 29.34 | 23.11 | 24.46 | 28.79 | 30 | 34.43 | 34.32 |
| ಎ | 28.5 | 28.9 | 28.17 | 29.69 | 31.85 | 30.5 | 33.28 | 30.67 |
| ಬಿ+ | 23.75 | 24.71 | 25.6 | 26.65 | 21.32 | 22.77 | 20.6 | 22.36 |
| ಬಿ | 14.6 | 13.15 | 17.71 | 13.79 | 14.08 | 13.28 | 8.62 | 10.09 |
| ಸಿ | 4.07 | 3.9 | 5.4 | 5.41 | 3.94 | 3.45 | 3.07 | 2.56 |
| ಒಟ್ಟು | 100 | 100 | 100 | 100 | 100 | 100 | 100 | 100 |

- ಶ್ರೇಣಿಗಳು ಎ+ = ಶೇ90–100, ಎ=ಶೇ 70–89, ಬಿ+ =ಶೇ 50–69, ಬಿ=ಶೇ 30–49, ಸಿ=30% ಕ್ಕಿಂತ ಕಡಿಮೆ

**ಗ್ರಾಫ್–2**




- ಒಂದನೇ ತರಗತಿಯ ಪರಿಸರದ ಅಧ್ಯಯನ ವಿಷಯದಲ್ಲಿ ಕಲಿಕಾ ಪ್ರಗತಿಯು ಇತರೆ ವಿಷಯಗಳಿಗಿಂತ ಉತ್ತಮವಾಗಿರುತ್ತದೆ.
- ಕಲಿಕೆಯು ಪ್ರಥಮ ವರ್ಷದಲ್ಲಿ ಸುಮಾರು ಶೇ.50 ರಷ್ಟು ಮಕ್ಕಳು ಶೇ.70 ರಷ್ಟು ಕಲಿಕೆಯನ್ನು ಸಾಧಿಸಿರುತ್ತಾರೆ (ಲಿಂಗವಾರು).
- ಬಾಲಕ ಬಾಲಕಿಯರ ಸಾಧನೆಯನ್ನು ಹೋಲಿಸಿದಾಗ ಶಿಕ್ಷಣದ ಪ್ರಥಮ ವರ್ಷದಲ್ಲಿ ಗಮನಾರ್ಹ ವ್ಯತ್ಯಾಸಗಳು ಕಂಡು ಬರುತ್ತಿಲ್ಲ.

- ಹೆಚ್ಚಿನ ಮಕ್ಕಳ ಮಾತೃ ಭಾಷೆ ಕನ್ನಡ ಆಗಿರುವುದರಿಂದ ಇಂಗ್ಲೀಷ್ ಕಲಿಕೆಯಲ್ಲಿ ಸ್ವಲ್ಪ ಕಡಿಮೆ ಸಾಧನೆಯಾಗಿದೆ.

## 2ನೇ ತರಗತಿ ಕಲಿಕಾ ಪ್ರಗತಿ

**ಕೋಷ್ಟಕ–22**

| ಗ್ರೇಡ್ | ಕನ್ನಡ | | ಇಂಗ್ಲೀಷ್ | | ಗಣಿತ | | ಪರಿಸರ ಅಧ್ಯಯನ | |
|---|---|---|---|---|---|---|---|---|
| | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು |
| ಎ+ | 27.74 | 32.8 | 18.61 | 20.47 | 22.62 | 24.77 | 28.01 | 31 |
| ಎ | 31.01 | 31.1 | 28.16 | 28.14 | 26.55 | 29.06 | 29.82 | 28.98 |
| ಬಿ+ | 21.46 | 20.74 | 26.07 | 26.13 | 26.66 | 25.58 | 23.81 | 23.15 |
| ಬಿ | 12.91 | 10.44 | 19.66 | 18.93 | 18.78 | 16.69 | 14.61 | 13.86 |
| ಸಿ | 6.88 | 4.93 | 7.49 | 6.33 | 5.38 | 3.91 | 3.74 | 3.01 |
| ಒಟ್ಟು | 100 | 100 | 100 | 100 | 100 | 100 | 100 | 100 |

**ಗ್ರಾಫ್–3:**




- 2ನೇ ತರಗತಿಯ ಮಕ್ಕಳಲ್ಲಿ ಸಿ ಗ್ರೇಡ್‌ನ ವಿದ್ಯಾರ್ಥಿಗಳು ಶೇ.3 ರಿಂದ ಶೇ.7 ರ ಆಸುಪಾಸಿನಲ್ಲಿರುತ್ತಾರೆ.
- 2ನೇ ತರಗತಿಯ ಕನ್ನಡ ವಿಷಯದಲ್ಲಿ ಬಾಲಕಿಯರು ಬಾಲಕರಿಗಿಂತ ಎ+ನ ಶ್ರೇಣಿಯಲ್ಲಿ ಶೇ.5ರಷ್ಟು ಮುಂದಿರುತ್ತಾರೆ.
- ಆಂಗ್ಲ ಭಾಷೆಯ ಎ+ ನಲ್ಲಿರುವ ಮಕ್ಕಳ ಸಾಧನೆ ಇತರೆ ವಿಷಯಗಳಿಗಿಂತ ಕಡಿಮೆ ಇರುವುದು ಕಂಡು ಬಂದಿದೆ.
- ಸಿ ಗ್ರೇಡ್‌ನಲ್ಲಿ ಶೇ.3 ರಿಂದ ಶೇ.8 ರಷ್ಟು ವಿದ್ಯಾರ್ಥಿಗಳು ಮಾತ್ರ ಇರುತ್ತಾರೆ (ಲಿಂಗವಾರು).
- ಎಲ್ಲಾ ವಿಷಯಗಳಲ್ಲಿಯೂ ಶೇ.50 ಕ್ಕಿಂತ ಕಡಿಮೆ ಸಾಧನೆ ಮಾಡಿರುವ ಮಕ್ಕಳ ಸಂಖ್ಯೆ(ಲಿಂಗವಾರು) ಶೇ.25ರಷ್ಟು ಇರುತ್ತದೆ.

### 3ನೇ ತರಗತಿ ಕಲಿಕಾ ಪ್ರಗತಿ:

**ಕೋಷ್ಟಕ–23:**

| 3 | ಕನ್ನಡ | | ಇಂಗ್ಲೀಷ್ | | ಗಣಿತ | | ಪರಿಸರಅಧ್ಯಯನ | |
|---|---|---|---|---|---|---|---|---|
| | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು |
| ಎ+ | 29.42 | 32.02 | 25.45 | 26.26 | 27.78 | 30.5 | 33.18 | 35.76 |
| ಎ | 30.11 | 30.38 | 30.54 | 29.66 | 28.08 | 31.35 | 32.95 | 31.87 |
| ಬಿ+ | 22.56 | 22.36 | 23.5 | 24.75 | 25.13 | 21.77 | 19.95 | 19.6 |
| ಬಿ | 14.18 | 11.87 | 14.96 | 14.68 | 14.66 | 12.39 | 11.31 | 10.11 |
| ಸಿ | 3.72 | 3.36 | 5.54 | 4.65 | 4.34 | 3.98 | 2.61 | 2.67 |
| ಒಟ್ಟು | 100 | 100 | 100 | 100 | 100 | 100 | 100 | 100 |

**ಗ್ರಾಫ್–4:**




- ಅನ್ಯ ವಿಷಯಗಳೊಂದಿಗೆ ತುಲನೆ ಮಾಡಿದಾಗ ಪರಿಸರದ ಅಧ್ಯಯನ ಹಾಗೂ ಕನ್ನಡ ಭಾಷೆಯಲ್ಲಿ ಕಲಿಕಾ ಪ್ರಗತಿಯಲ್ಲಿ ಮುಂದಿರುವುದನ್ನು ಕಾಣಬಹುದು.
- ಶೇ.75 ರಿಂದಶೇ. 80 ರಷ್ಟು ಮಕ್ಕಳು ಶೇ.50 ಕ್ಕಿಂತ ಹೆಚ್ಚು ಸಾಧನೆ ಮಾಡಿರುವುದನ್ನು ಕಾಣಬಹುದಾಗಿದೆ (ಲಿಂಗವಾರು).
- ಶೇ.20 ರಷ್ಟು ವಿದ್ಯಾರ್ಥಿಗಳು ಮಾತ್ರ ಶೇ.50 ಕ್ಕಿಂತ ಕಡಿಮೆ ಕಲಿಕಾ ಪ್ರಗತಿಯನ್ನು ಹೊಂದಿರುತ್ತಾರೆ.
- ಬಿ ಶ್ರೇಣಿಯಲ್ಲಿರುವ ಶೇಕಡವಾರು ವಿದ್ಯಾರ್ಥಿಗಳ ಸಂಖ್ಯೆ ಶೇ.10 ರಿಂದ ಶೇ 15 (ಲಿಂಗವಾರು) ರವರೆಗಿದ್ದು, ಸೂಕ್ತ ಮಾರ್ಗದರ್ಶನ ನೀಡುವುದರಿಂದ ಕಲಿಕಾ ಸಾಧನೆಯನ್ನು ಉತ್ತಮಪಡಿಸಬಹುದಾಗಿದೆ.

**4ನೇ ತರಗತಿ ಕಲಿಕಾ ಪ್ರಗತಿ:**

**ಕೋಷ್ಟಕ–24:**

| 4 | ಕನ್ನಡ | | ಇಂಗ್ಲೀಷ್ | | ಗಣಿತ | | ಪರಿಸರಅಧ್ಯಯನ | |
|---|---|---|---|---|---|---|---|---|
| | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು |
| ಎ+ | 24.99 | 26.7 | 20.74 | 23.6 | 21.22 | 22.39 | 27 | 30.73 |
| ಎ | 29.16 | 29.95 | 28.25 | 27.44 | 29.04 | 28.82 | 27.1 | 30.2 |
| ಬಿ+ | 25.08 | 24.73 | 26.72 | 26.72 | 25.97 | 26.11 | 24.31 | 22.24 |
| ಬಿ | 15.78 | 15.49 | 17.22 | 16.57 | 18.13 | 17.42 | 17.15 | 12.99 |
| ಸಿ | 4.99 | 3.13 | 7.05 | 5.66 | 5.63 | 5.26 | 4.44 | 3.85 |
| ಒಟ್ಟು | 100 | 100 | 100 | 100 | 100 | 100 | 100 | 100 |

**ಗ್ರಾಫ್–5:**




- ಪರಿಸರ ಅಧ್ಯಯನದಲ್ಲಿ ಬಾಲಕಿಯರ ಪ್ರಗತಿ ಬಾಲಕರ ಪ್ರಗತಿಗಿಂತ ಶೇ.3ರಷ್ಟು ಹೆಚ್ಚಾಗಿರುತ್ತದೆ ಹಾಗೂ ವಿದ್ಯಾರ್ಥಿಗಳ ಕಲಿಕಾ ಸಾಧನೆ ಬೇರೆ ವಿಷಯಗಳಿಗಿಂತ ಹೆಚ್ಚಾಗಿದೆ.
- ಶೇ.70 ರಿಂದ ಶೇ 89 ರಷ್ಟು ಕಲಿಕಾ ಪ್ರಗತಿಯಲ್ಲಿ ಶೇ 25 ರಿಂದ ಶೇ 30 ರಷ್ಟು ವಿದ್ಯಾರ್ಥಿಗಳು ಕೇಂದ್ರೀಕೃತವಾಗಿರುತ್ತಾರೆ.
- ಎಲ್ಲಾ ವಿಷಯಗಳಲ್ಲೂ ಶೇ.7ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಸಿ ಗ್ರೇಡ್‌ನಲ್ಲಿ ಕೇಂದ್ರೀಕೃತವಾಗಿರುವುದು ಉತ್ತಮವಾದ ಅಂಶವಾಗಿದೆ(ಲಿಂಗವಾರು).

### 5ನೇ ತರಗತಿ ಕಲಿಕಾ ಪ್ರಗತಿ:

**ಕೋಷ್ಟಕ–25:**

| 5 | ಕನ್ನಡ | | ಇಂಗ್ಲೀಷ್ | | ಗಣಿತ | | ವಿಜ್ಞಾನ | | ಸಮಾಜ ವಿಜ್ಞಾನ | |
|---|---|---|---|---|---|---|---|---|---|---|
| | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು |
| ಎ+ | 28.14 | 30.86 | 22.72 | 25.68 | 25.46 | 26.42 | 26.75 | 28.44 | 26.04 | 30.28 |
| ಎ | 31.09 | 31.72 | 29.33 | 29.03 | 29.38 | 31.95 | 29.42 | 31.75 | 31.36 | 30.26 |
| ಬಿ+ | 23.22 | 23.1 | 24.05 | 24.7 | 25.99 | 23.49 | 25.41 | 23.54 | 23.04 | 22.06 |
| ಬಿ | 13.62 | 11.54 | 18.11 | 16.32 | 13.84 | 13.55 | 13.34 | 12.54 | 15.33 | 13.71 |
| ಸಿ | 3.92 | 2.78 | 5.79 | 4.27 | 5.33 | 4.59 | 5.07 | 3.73 | 4.21 | 3.68 |
| ಒಟ್ಟು | 100 | 100 | 100 | 100 | 100 | 100 | 100 | 100 | 100 | 100 |

**ಗ್ರಾಫ್–6:**




- ಕನ್ನಡ ಮತ್ತು ಸಮಾಜ ವಿಜ್ಞಾನ ವಿಷಯದಲ್ಲಿ ಬಾಲಕಿಯರು ಎ+ ಹಾಗೂ ಎ ಶ್ರೇಣಿಯಲ್ಲಿ ಸಮನಾಗಿ ಹಂಚಿಹೋಗಿರುತ್ತಾರೆ.
- ಶೇ.10 ಹಾಗೂ ಅದಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಸಿ ಗ್ರೇಡ್‌ನಲ್ಲಿರುವುದು ಕಂಡು ಬರುತ್ತಿದ್ದಾರೆ.
- ಶೇ.75 ಕ್ಕಿಂತ ಹೆಚ್ಚು ಮಕ್ಕಳು ಶೇ.50 ಕ್ಕಿಂತ ಹೆಚ್ಚು ಕಲಿಕಾ ಸಾಧನೆ ಉಳ್ಳವರಾಗಿರುತ್ತಾರೆ.
- ಬಿ+ ಗ್ರೇಡ್‌ನಲ್ಲಿ ಶೇ.22 ರಿಂದ ಶೇ.26 ರ ವರೆಗೆ ಎಲ್ಲಾ ವಿಷಯಗಳಲ್ಲಿಯೂ ವಿದ್ಯಾರ್ಥಿಗಳ ಸಾಧನೆ ಇರುವುದನ್ನು ಗುರ್ತಿಸಲಾಗಿದೆ.

(ಬಿ) **6 ರಿಂದ 8 ನೇ ತರಗತಿಯ ತರಗತಿವಾರು/ವಿಷಯವಾರು ಕಲಿಕಾ ಮಾಪನ:**

**6ನೇ ತರಗತಿ ಕಲಿಕಾ ಪ್ರಗತಿ:**

**ಕೋಷ್ಟಕ–26:**

| 6 | ಕನ್ನಡ | | ಇಂಗ್ಲೀಷ್ | | ಗಣಿತ | | ವಿಜ್ಞಾನ | | ಸಮಾಜವಿಜ್ಞಾನ | | ಹಿಂದಿ | |
|---|---|---|---|---|---|---|---|---|---|---|---|---|
| | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು |
| ಎ+ | 23.43 | 28.22 | 18.21 | 22.02 | 20.16 | 23.12 | 23.37 | 26.84 | 23.5 | 26 | 17.76 | 21.08 |
| ಎ | 33.32 | 31.31 | 30.32 | 29.52 | 32.26 | 32.07 | 32.52 | 31.51 | 32.71 | 32.51 | 22.31 | 22.34 |
| ಬಿ+ | 24.56 | 23.66 | 27.66 | 27.05 | 27.18 | 25.65 | 26.57 | 25.78 | 24.91 | 24.23 | 24.24 | 22.31 |
| ಬಿ | 14.13 | 13.41 | 17.13 | 15.22 | 15.72 | 15.13 | 13.15 | 11.87 | 14.55 | 13.22 | 14.58 | 13.51 |
| ಸಿ | 4.57 | 3.38 | 6.67 | 6.19 | 4.67 | 4.03 | 4.4 | 4.01 | 4.34 | 4.05 | 21.1 | 20.75 |
| ಒಟ್ಟು | 100 | 100 | 100 | 100 | 100 | 100 | 100 | 100 | 100 | 100 | 100 | 100 |

**ಗ್ರಾಫ್–7:**




- 6ನೇ ತರಗತಿಯ ಹಿಂದಿ ಭಾಷೆಯಲ್ಲಿನ ಪ್ರಗತಿಯು ಕುಂಠಿತವಾಗುತ್ತಿರುವುದನ್ನು ಕಾಣಬಹುದಾಗಿದೆ.
- ಹಿಂದಿ ಭಾಷೆಯ ಬಿ ಮತ್ತು ಸಿ ಗ್ರೇಡ್‌ನಲ್ಲಿ ಶೇ.33 ರಿಂದ ಶೇ 35ರಷ್ಟು ವಿದ್ಯಾರ್ಥಿಗಳಿರುವುದನ್ನು ಕೋಷ್ಟಕದಲ್ಲಿ ಕಾಣಬಹುದಾಗಿದೆ.
- ಹಿಂದಿ ಭಾಷೆಯ ಕಲಿವಿನ ಕಡೆಗೆ ಹೆಚ್ಚು ಗಮನ ವಹಿಸಬೇಕಾಗಿದೆ.
- ಕನ್ನಡ, ಗಣಿತ, ವಿಜ್ಞಾನ ಸಮಾಜ ವಿಜ್ಞಾನದಲ್ಲಿ ಮತ್ತು ಆಂಗ್ಲ ಭಾಷೆಯ ಎ ಗ್ರೇಡ್‌ನಲ್ಲಿ ಮಕ್ಕಳ ಸಾಧನೆ ಹೆಚ್ಚಾಗಿರುವುದನ್ನು ಕಾಣಬಹುದಾಗಿದೆ.

**ಕೋಷ್ಟಕ–27:**

| 7 | ಕನ್ನಡ | | ಇಂಗ್ಲೀಷ್ | | ಗಣಿತ | | ವಿಜ್ಞಾನ | | ಸಮಾಜವಿಜ್ಞಾನ | | ಹಿಂದಿ | |
|---|---|---|---|---|---|---|---|---|---|---|---|---|
| | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು |
| ಎ+ | 23.47 | 25.89 | 21.27 | 22.33 | 20.13 | 23.04 | 22.08 | 25.5 | 23.1 | 26.04 | 14.69 | 17.84 |
| ಎ | 28.32 | 29.44 | 26.99 | 26.04 | 29.36 | 28.98 | 30 | 25.43 | 29.78 | 27.9 | 20.56 | 21.43 |
| ಬಿ+ | 26.5 | 24.24 | 27.67 | 26.43 | 27.12 | 25.98 | 26.41 | 26.49 | 24.21 | 23 | 23.21 | 22.52 |
| ಬಿ | 16.48 | 16.02 | 18.5 | 19.58 | 17.59 | 16.65 | 15.98 | 17.2 | 16.47 | 17.26 | 18.21 | 15.25 |
| ಸಿ | 5.22 | 4.41 | 5.56 | 5.61 | 5.86 | 5.35 | 5.53 | 5.38 | 6.44 | 5.81 | 23.25 | 22.96 |
| ಒಟ್ಟು | 100 | 100 | 100 | 100 | 100 | 100 | 100 | 100 | 100 | 100 | 100 | 100 |

**ಗ್ರಾಫ್–8:**




- ಬಹುಶಃ ವಿಷಯವಾರು ಶಿಕ್ಷಕ ಕೊರತೆಯಿಂದಾಗಿ ಹಿಂದಿ ಕಲಿಕೆಯಲ್ಲಿ ವಿದ್ಯಾರ್ಥಿಗಳು ಹಿಂದುಳಿದಿರುವುದನ್ನು ಕೋಷ್ಟಕದಲ್ಲಿ ನೋಡಬಹುದಾಗಿದೆ.
- ಹಿಂದಿಯನ್ನು ಹೊರತುಪಡಿಸಿ ಸಿ ಗ್ರೇಡ್‌ನಲ್ಲಿ ಶೇ.10 ರೊಳಗೆ ಮಾತ್ರ ವಿದ್ಯಾರ್ಥಿಗಳು ಕೇಂದ್ರಿಕೃತರಾಗಿರುತ್ತಾರೆ.
- ಶೇ.30 ರಿಂದ 49ರೊಳಗೆ ಅಂಕ ಗಳಿಸಿದವರಲ್ಲಿ, ಶೇ.15 ರಿಂದ 20 ರಷ್ಟು ವಿದ್ಯಾರ್ಥಿಗಳು ಮಾತ್ರ ಇರುತ್ತಾರೆ.

## 8ನೇ ತರಗತಿ ಕಲಿಕಾ ಪ್ರಗತಿ:

**ಕೋಷ್ಟಕ–28:**

| 8 | ಕನ್ನಡ | | ಇಂಗ್ಲೀಷ್ | | ಗಣಿತ | | ವಿಜ್ಞಾನ | | ಸಮಾಜವಿಜ್ಞಾನ | | ಹಿಂದಿ | |
|---|---|---|---|---|---|---|---|---|---|---|---|---|
| | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು |
| ಎ+ | 26.05 | 26.7 | 19.18 | 18.17 | 20.24 | 22.13 | 22.24 | 23.46 | 22.57 | 25.51 | 18.53 | 19.54 |
| ಎ | 35.11 | 32.11 | 27.64 | 28.38 | 30.69 | 30.42 | 31.18 | 28.06 | 30.88 | 28.79 | 23.75 | 23.16 |
| ಬಿ+ | 23.06 | 25.57 | 29.91 | 31.24 | 27.05 | 23.02 | 25.95 | 25.89 | 27.76 | 25.69 | 22.86 | 21.72 |
| ಬಿ | 11.01 | 10.47 | 17.28 | 16.56 | 15.95 | 17.9 | 15.49 | 17.29 | 15.48 | 15.59 | 12.65 | 10.96 |
| ಸಿ | 4.76 | 5.15 | 5.98 | 5.64 | 6.06 | 6.53 | 5.13 | 5.3 | 3.31 | 4.43 | 22.2 | 24.61 |
| ಒಟ್ಟು | 100 | 100 | 1146 | 100 | 100 | 100 | 100 | 100 | 100 | 100 | 100 | 100 |

**ಗ್ರಾಫ್–9:**




- ಹಿಂದಿಯನ್ನು ಹೊರತುಪಡಿಸಿ ಉಳಿದ ಎಲ್ಲಾ ವಿಷಯಗಳಲ್ಲಿ ಶೇ 50ಕ್ಕಿಂತ ಕಡಿಮೆ ಸಾಧನೆ ಮಾಡಿರುವವರ ಸಂಖ್ಯೆ ಶೇ 15 ರಿಂದ ಶೇ 23ರ ವರೆಗೆ ಇದ್ದು, ಶೇ 77 ರಿಂದ ಶೇ85ರ ವರೆಗೆ ಸಾಮಾನ್ಯ ಮಟ್ಟಕ್ಕಿಂತ ಉತ್ತಮವಾಗಿರುವುದು ಕಲಿಕೆಯ ಪ್ರಗತಿಯನ್ನು ತೋರಿಸುತ್ತದೆ.
- ಎ ಗ್ರೇಡ್‌ನಲ್ಲಿ ಎಲ್ಲಾ ವಿಷಯಗಳಲ್ಲಿಯೂ ಉಳಿದ ಗ್ರೇಡ್‌ಗಳಿಗಿಂತ ಹೆಚ್ಚು ವಿದ್ಯಾರ್ಥಿಗಳು ಕೇಂದ್ರೀಕೃತರಾಗಿರುತ್ತಾರೆ.
- ಬಾಲಕ/ಬಾಲಕಿಯರ ಕಲಿಕಾ ಸಾಧನೆಯಲ್ಲಿ ಹೆಚ್ಚಿನ ವ್ಯತ್ಯಾಸವೇನು ಇರುವುದಿಲ್ಲ.
- ಶೇ.23.40 ರಷ್ಟು ವಿದ್ಯಾರ್ಥಿಗಳು ಹಿಂದಿ ವಿಷಯದಲ್ಲಿ ಸಿ ಗ್ರೇಡ್‌ನಲ್ಲಿ ಕೇಂದ್ರೀಕೃತವಾಗಿರುತ್ತಾರೆ(ಲಿಂಗವಾರು).
- ಇಂಗ್ಲಿಷ್ ಹಾಗೂ ಹಿಂದಿ ವಿಷಯದಲ್ಲಿ ಶೇ 70 ಕ್ಕಿಂತ ಹೆಚ್ಚು ಸಾಧನೆ ಮಾಡಿರುವವರ ಸಂಖ್ಯೆ ಶೇ.42.28 ರಿಂದ ಶೇ.46.82 ರ ವರೆಗೆ ಇದ್ದು ಉಳಿದ ವಿಷಯಗಳಿಗಿಂತ ಕಡಿಮೆ ಇದೆ.

# ಭಾಗ –(IIa)

1. **ಕಳೆದ ತ್ರೈಮಾಸಿಕ ಅವಧಿಯಲ್ಲಿ ಸಿ.ಆರ್.ಪಿಗಳು, ವೀಕ್ಷಣೆ ಮಾಡಿದ ತರಗತಿಗಳ ಸರಾಸರಿ ಸಂಖ್ಯೆ: 28**

**ಕೋಷ್ಟಕ 29:**

| ಕ್ರ.ಸಂ | ಬ್ಲಾಕ್‌ಗಳು | ಸಿ.ಆರ್.ಪಿ.ಗಳು ವೀಕ್ಷಿಸಿದ ಕನಿಷ್ಠ ತರಗತಿಗಳು | ಸಿ.ಆರ್.ಪಿ.ಗಳು ವೀಕ್ಷಿಸಿದ ಗರಿಷ್ಠ ತರಗತಿಗಳು | ವಿಶೇಷ ತರಬೇತಿ ಕೇಂದ್ರಗಳಿಗೆ ಭೇಟಿ ನೀಡಿದ ಕನಿಷ್ಠ ಕೇಂದ್ರಗಳು | ವಿಶೇಷ ತರಬೇತಿ ಕೇಂದ್ರಗಳಿಗೆ ಭೇಟಿ ನೀಡಿದ ಗರಿಷ್ಠ ಕೇಂದ್ರಗಳು | ಸಿ.ಆರ್.ಪಿ.ಗಳು ಭೇಟಿ ನೀಡಿದ ಶಾಲೆಗಳ ಸಂಖ್ಯೆ | | | |
|---|---|---|---|---|---|---|---|---|---|
| | | | | | | ತಿಂಗಳಿ ಗೊಮ್ಮೆ | 2 ತಿಂಗಳಿಗೊಮ್ಮೆ | 3 ತಿಂಗಳಿಗೊಮ್ಮೆ | ಭೇಟಿ ನೀಡಿರುವುದಿಲ್ಲ |
| 1 | ಹೆಚ್.ಡಿ.ಕೋಟೆ | 26 | 29 | 5 | 8 | 306 | | | |
| 2 | ಹುಣಸೂರು | 8 | 23 | 3 | 9 | 200 | 0 | 0 | 0 |
| 3 | ಕೆ.ಆರ್.ನಗರ | 15 | 40 | 5 | 9 | 220 | 0 | 0 | 0 |
| 4 | ಮೈ.ಉತ್ತರ | 20 | 50 | 03 | 03 | 68 | 0 | 0 | 0 |
| 5 | ಮೈ.ದಕ್ಷಿಣ | 15 | 21 | 2 | 2 | 33 | 0 | 0 | 0 |
| 6 | ಮೈ.ಗ್ರಾಮಾಂತರ | 21 | 90 | 1 | 1 | 217 | 0 | 0 | 0 |
| 7 | ನಂಜನಗೂಡು | 30 | 45 | 12 | 20 | 266 | 0 | 0 | 0 |
| 8 | ತಿ.ನರಸೀಪುರ | 15 | 20 | 10 | 8 | 229 | 0 | 0 | 0 |
| 9 | ಪಿರಿಯಾಪಟ್ಟಣ | 42 | 65 | 5 | 9 | 285 | 0 | 0 | 0 |

- ವೀಕ್ಷಿಸಿದ ಸರಾಸರಿ ಕನಿಷ್ಠ ತರಗತಿಗಳು: 19 ವೀಕ್ಷಿಸಿದ ಸರಾಸರಿ ಗರಿಷ್ಠ ತರಗತಿಗಳು: 37

---

- ಶಾಲೆಯಿಂದ ಹೊರಗುಳಿದ ವಿಶೇಷ ತರಬೇತಿ ಕೇಂದ್ರಗಳಿಗೆ ಭೇಟಿ ನೀಡಿದ ಸಂಖ್ಯೆ: 107
- ವೀಕ್ಷಿಸಿದ ಕನಿಷ್ಠ ತರಗತಿಗಳು 1 ವೀಕ್ಷಿಸಿದ ಗರಿಷ್ಠ ತರಗತಿಗಳು 20
- ಪ್ರತಿ ತಿಂಗಳು ಪ್ರತಿ ಸಿ.ಆರ್.ಪಿ.ಗಳು 20 ಶಾಲೆಗಳಿಗೆ ಭೇಟಿ ನೀಡಿ, ಪ್ರತಿ ಶಾಲೆಯಲ್ಲಿ ಮೂರು ತರಗತಿಗಳಂತೆ ಒಟ್ಟು 60 ತರಗತಿಗಳನ್ನು ವೀಕ್ಷಣೆ ಮಾಡಬೇಕಾಗಿದೆ. ತರಬೇತಿ ಇತರೆ ಕಾರ್ಯಕ್ರಮಗಳು ಹೆಚ್ಚಾಗಿ ಇರುವುದರಿಂದ ಗುರಿಯನ್ನು ಮುಟ್ಟಲು ಸಾಧ್ಯವಾಗುತ್ತಿಲ್ಲ.
- ಈ ತ್ರೈಮಾಸಿಕ ಅವಧಿಯಲ್ಲಿ ಪ್ರತಿಯೊಬ್ಬ ಸಿ.ಆರ್.ಪಿ.ಗಳು 60 ಶಾಲೆಗಳಿಗೆ ಭೇಟಿ ನೀಡಿ ಒಟ್ಟು 120 ತರಗತಿಗಳನ್ನು ವೀಕ್ಷಣೆ ಮಾಡಬೇಕಾಗಿತ್ತು. ಸಿ.ಆರ್.ಪಿಗಳಿಗೆ ಶಾಲಾ ಸಂದರ್ಶನಗಳಿಗಿಂತ ಇತರೇ ಕಾರ್ಯದಲ್ಲಿ ಹೆಚ್ಚಾಗಿ ತೊಡಗಿಕೊಳ್ಳುತ್ತಿದ್ದು ಕನಿಷ್ಠ 08 ತರಗತಿಗಳನ್ನು ಹುಣಸೂರುತಾಲ್ಲೂಕಿನಲ್ಲಿ ಮತ್ತು ಗರಿಷ್ಠ 90 ತರಗತಿಗಳನ್ನು ಮೈಸೂರುಗ್ರಾಮಾಂತರದಲ್ಲಿ ಮಾರ್ಗದರ್ಶಿಸಿರುವುದು ಕಂಡುಬಂದಿದೆ.
- ಹೆಚ್ಚು ತರಗತಿಗಳನ್ನು ವೀಕ್ಷಿಸಿ ಶೈಕ್ಷಣಿಕ ಮಾರ್ಗದರ್ಶನ ನೀಡುವ ಅಗತ್ಯವಿದೆ.
- ಶಾಲಾ ಭೇಟಿಯ ಜೊತೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ ನಡೆಸುವ ವಿಶೇಷ ತರಬೇತಿ ಕೇಂದ್ರಗಳಿಗೂ ಭೇಟಿಯನ್ನು ನೀಡುತ್ತಿದ್ದಾರೆ.
- ವಿಶೇಷ ತರಬೇತಿ ಕೇಂದ್ರಗಳಿಗೆ ವಿವಿಧ ವೇಳೆಗಳಲ್ಲಿ ಅನಿರೀಕ್ಷಿತವಾಗಿ ಭೇಟಿ ನೀಡುವುದರ ಮೂಲಕ ಮಕ್ಕಳ ಹಾಜರಾತಿಯನ್ನು ಖಾತ್ರಿಪಡಿಸಿಕೊಳ್ಳಲಾಗುತ್ತದೆ.
- ಮಕ್ಕಳಿಗೆ ನೀಡುವ ಆಹಾರದ ಗುಣಮಟ್ಟ, ವಸತಿ ಸೌಕರ್ಯ, ಇತರೆ ಸೌಕರ್ಯದ ಜೊತಿಯಲ್ಲಿ ಮಕ್ಕಳಿಗೆ ನೀಡಲಾಗುವ ಆಪ್ತ ಸಮಾಲೋಚನೆಯ ಉಪಯುಕ್ತತೆಯನ್ನು ಪರಿಶೀಲಿಸಿ ಮಾರ್ಗದರ್ಶನ ನೀಡುತ್ತಾರೆ.

- ಈ ಕೇಂದ್ರದಲ್ಲಿರುವ ಮಕ್ಕಳ ಆರೋಗ್ಯ ಕುರಿತಂತೆ ಸ್ವಯಂಸೇವಕರು ವಹಿಸುತ್ತಿರುವ ಕಾಳಜಿ ಮತ್ತು ಕಲಿಕೆಯ ಗುಣಮಟ್ಟವನ್ನು ಅವಲೋಕಿಸಿ ಮಾರ್ಗದರ್ಶನ ನೀಡಲಾಗುತ್ತದೆ.

1. **ಪ್ರತಿ ಶಾಲೆಗೆ ಸಿ.ಆರ್.ಸಿ.ಗಳ ಶಾಲಾ ಭೇಟಿ (ಸಂಖ್ಯೆಯನ್ನು ನಮೂದಿಸಿ)ಸಿ.ಆರ್.ಪಿಗಳು ಭೇಟಿ ನೀಡಿದ ಶಾಲೆಗಳ ಸಂಖ್ಯೆ**

   - ತಿಂಗಳಿಗೊಮ್ಮೆ ಎಲ್ಲಾ ಶಾಲೆಗಳಿಗೆ **ಸಿ.ಆರ್.ಸಿ.ಗಳು ಭೇಟಿ ನೀಡಿರುತ್ತಾರೆ**
   - ಶೈಕ್ಷಣಿಕ ಅನುಪಾಲಕರಾಗಿ ಸಿಆರ್‌ಪಿಗಳು ಕಾರ್ಯ ನಿರ್ವಹಿಸಬೇಕಾಗಿದ್ದು, ಅನಿರೀಕ್ಷಿತ ಕಾರ್ಯದ ಮೇಲೆ ಭೇಟಿ ಹೆಚ್ಚಾಗಿದ್ದು, ಶಾಲಾ ಭೇಟಿಯ ಗುಣಾತ್ಮಕತೆಯ ಬಗ್ಗೆ ಹೆಚ್ಚು ಕಾಳಜಿವಹಿಸಬೇಕಾಗಿದೆ.

2. **ತರಗತಿ ಕಲಿಕಾ ಪ್ರಕ್ರಿಯೆಯನ್ನು ಉತ್ತಮಗೊಳಿಸಲು ಸಿ.ಆರ್.ಸಿ.ಗಳು ವರದಿ ಮಾಡಿದ ಐದು ಉತ್ತಮ ಅಂಶಗಳು :**

   - ಪೂರ್ವ ಸಿದ್ಧತೆಯೊಂದಿಗೆ ಪರಿಸರದಲ್ಲಿ ಸಿಗುವ ಸರಳ ವಸ್ತುಗಳನ್ನು ಬಳಸಿ ಕಲಿಕೆಯನ್ನು ಸರಳಗೊಳಿಸಿ ಮಕ್ಕಳಿಗೆ ಅರ್ಥೈಸುವುದು.
   - ಮಕ್ಕಳು ತಾವೇ ಚಟುವಟಿಕೆಯಲ್ಲಿ ಬೆರೆತು ಕಲಿಕೆಯಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಣೆ ನೀಡುವುದು.
   - ಪ್ರತ್ಯಕ್ಷ ಅನುಭವಗಳ ಮೂಲಕ ಹಾಗೂ ನೈಜವಾದ ಸ್ಥಳೀಯ ಹಾಗೂ ಸರಳ ವಸ್ತು ಬಳಸಿ ಚಟುವಟಿಕೆ ರೂಪಿಸುವ ಮೂಲಕ ಬೋಧನೆ ಮಾಡುತ್ತಿರುವುದು.
   - ಉತ್ತಮ ಬೋಧನೋಪಕರಣಗಳನ್ನು ಸೃಜನಾತ್ಮಕವಾಗಿ ತಯಾರಿಸಿ ಸದ್ಬಳಕೆ ಮಾಡುವ ಮೂಲಕ ಪಾಠ ಬೋಧನೆ ಮಾಡುತ್ತಿರುವುದು.
   - ತರಗತಿಗಳಲ್ಲಿ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸುವ ಮೂಲಕ ಸಂತಸದ ಕಲಿಕೆ ಮೂಡಿಸುತ್ತಿರುವುದು.

**4.ಮಕ್ಕಳ ಕಲಿಕಾ ಪ್ರಗತಿಯನ್ನು ದಾಖಲಿಸದಿರುವ ಶಾಲೆಗಳ ಸಂಖ್ಯೆ: ಯಾವುದೂ ಇಲ್ಲ.**

- 100% ಸಿ.ಆರ್.ಜಿ ತಂಡಗಳು ಸಾಮರ್ಥ್ಯಾಧಾರಿತ ಪ್ರಶ್ನೆಪತ್ರಿಕೆ ತಯಾರಿಸಿ ಜಿಲ್ಲೆಯ ಎಲ್ಲಾ ಶಾಲೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡಿ ಗ್ರೇಡ್‌ಗಳಲ್ಲಿ ಮಕ್ಕಳ ಕಲಿಕಾ ಪ್ರಗತಿಯನ್ನು ದಾಖಲಿಸಿ ಸಲ್ಲಿಸಿರುತ್ತಾರೆ

5.a)**ಶೇ. 60% ಕ್ಕಿಂತ ಕಡಿಮೆ ಪ್ರಮಾಣದ ಪಠ್ಯಕ್ರಮವನ್ನು ಬೋಧಿಸಿರುವ ಶಾಲೆಗಳ ಸಂಖ್ಯೆ: 27**

- ಶಿಕ್ಷಕರ ಕೊರತೆ, ಬಹುವರ್ಗ ಭೊಧನೆ, ಶಿಕ್ಷಕರು ಧೀರ್ಘಕಾಲ ರಜೆಯಲ್ಲಿರುವುದು, ಅನೇಕ ಕಾರ್ಯಕ್ರಮಗಳ ಆಯೋಜನೆ ಹೀಗೆ ಹಲವಾರು ಕಾರಣಗಳಿಂದ ಕೆಲವೊಮ್ಮೆ ಶಿಕ್ಷಕರು ಶೇ. 60% ಕ್ಕಿಂತ ಕಡಿಮೆ ಪ್ರಮಾಣದ ಪಠ್ಯಕ್ರಮವನ್ನು ಬೋಧಿಸಿರುವುದು ಕಂಡುಬರುತ್ತದೆ.

**b)ಶೇ 60% ಕ್ಕಿಂತ ಕಡಿಮೆ ಪ್ರಮಾಣದ ಪಠ್ಯಕ್ರಮ ಬೋಧಿಸದ ಶಾಲೆಗಳಿಗೆ ಬಿ.ಆರ್.ಸಿ. ಮತ್ತು ಸಿ.ಆರ್.ಸಿ.ಗಳು ಕೈಗೊಂಡಿರುವ ಕ್ರಮಗಳು:**

**ಸಿ.ಆರ್.ಸಿಯವರು ತೆಗೆದುಕೊಂಡಿರುವ ಕ್ರಮಗಳು :-**

- ಶಾಲಾ ಅವಧಿಯ ಮುಂಚೆ ಹೆಚ್ಚುವರಿ ತರಗತಿಗಳನ್ನು ಪಡೆದು ಪಠ್ಯಕ್ರಮವನ್ನು ಬೋಧಿಸಲು ತಿಳಿಸಿರುವುದು.
- ಶಿಕ್ಷಕರ ಕೊರತೆಯಾದ ಸಂದರ್ಭಗಳಲ್ಲಿ ಸುತ್ತಮುತ್ತಲಿನ ಶಾಲೆಗಳಿಂದ ಶಿಕ್ಷಕರನ್ನು ನಿಯೋಜಿಸಿ ಪಠ್ಯಕ್ರಮ ಪೂರೈಸಲು ಸಹಾಯ ಮಾಡಿರುವುದು.
- ಬಿಡುವಿನ ವೇಳೆ ಸಿ.ಆರ್.ಪಿ ಗಳೇ ಪಾಠ ಬೋಧನೆ ಮಾಡಿರುವುದು.

**ಬಿ.ಆರ್.ಸಿ ತೆಗೆದುಕೊಂಡಿರುವ ಕ್ರಮಗಳು :–**

- ಹೆಚ್ಚುವರಿ ಶಿಕ್ಷಕರಿರುವ ಶಾಲೆಗಳಿಂದ ಶಿಕ್ಷಕರನ್ನು ನಿಯೋಜನೆಗೊಳಿಸುವುದು.
- ಮೌಲ್ಯಾಧಾರಿತ ಮಾರ್ಗದರ್ಶನ ನೀಡಿರುವುದು.

**6 (a) ನಿರೀಕ್ಷಿತ ಪ್ರಮಾಣದಲ್ಲಿ ಶಾಲೆಗಳಿಗೆ ಭೇಟಿ ನೀಡದಿರುವ ಸಿ.ಆರ್.ಸಿ. ಗಳ ಬಗ್ಗೆ ಕ್ರಮ ತೆಗೆದುಕೊಂಡ ಬಿ.ಆರ್.ಸಿ.ಗಳ ಸಂಖ್ಯೆ: ಇಲ್ಲ**

- ನಿರೀಕ್ಷಿತ ಪ್ರಮಾಣದಲ್ಲಿ ಶಾಲೆಗಳಿಗೆ ಭೇಟಿ ನೀಡದಿರುವ ಸಿ.ಆರ್.ಸಿ.ಗಳು ಯಾರೂ ಇಲ್ಲದಿದ್ದರೂ ಶಾಲಾ ತರಗತಿಯ ವೀಕ್ಷಣೆಗೆಂದು ಪೂರ್ವಸಿದ್ದತೆಯೊಂದಿಗೆ ಹೊಗುವ ಸಂದರ್ಭ ಕಡಿಮೆ ಸಂಖ್ಯೆಯದ್ದಾಗಿರುತ್ತದೆ.
- ಏಕೆಂದರೆ ಯಾವುದಾದರೊಂದು ಮಾಹಿತಿಯನ್ನು ನೀಡಲು/ಪಡೆಯಲು ಶಾಲಾ ಭೇಟಿ ಹೊಗುವ ಅವರು ಆ ಸಮಯದಲ್ಲಿಯೇ ತರಗತಿ ಪ್ರಕ್ರಿಯೆಯನ್ನು ತುರ್ತಾಗಿ ನೋಡಿ ಬರುವ ಸನ್ನಿವೇಶ ನಿರ್ಮಾಣವಾಗುತ್ತಿದೆ. ಸಿ.ಆರ್.ಪಿ.ಗಳನ್ನು ಹೆಚ್ಚು ಶೈಕ್ಷಣಿಕವಾಗಿ ತೊಡಗಿಸಿಕೊಳ್ಳುವ ಅಗತ್ಯತೆ ಇರುತ್ತದೆ.

**ತ್ರೈಮಾಸಿಕವಾಗಿ ಕ್ಯೂ.ಎಂ.ಟಿ. ನಮೂನೆಗಳನ್ನು ನಿಗದಿತ ಸಮಯದಲ್ಲಿ ನೀಡದಿರುವ ಬಿ.ಆರ್.ಸಿ.ಗಳ ಸಂಖ್ಯೆ: 6**

- ಎಕಕಾಲದಲ್ಲಿ ಅನೇಕ ಕಾರ್ಯಗಳ ಒತ್ತಡದಿಂದಾಗಿ ಸಿ.ಆರ್.ಪಿ.ಗಳು ಸಿ.ಆರ್.ಜಿ. ತಂಡದೊಂದಿಗೆ ಹೊಗಿ ವಿದ್ಯಾರ್ಥಿಗಳ ಶೈಕ್ಷಣಿಕ ಮೌಲ್ಯಮಾಪನ ಮಾಡಲು ಸಾಧ್ಯವಾಗದಿರುವ ಕಾರಣದಿಂದಾಗಿ ಕ್ಯೂ.ಎಂ.ಟಿ. ನಮೂನೆಗಳನ್ನು ತಡವಾಗಿ ಸಲ್ಲಿಸಿರುತ್ತಾರೆ.

**ಬ್ಲಾಕ್ ಹಂತದಲ್ಲಿ ನಿಗದಿಪಡಿಸಿದ ಪಠ್ಯ–ಕ್ರಮ/ಪಠ್ಯ–ಪುಸ್ತಕ ಪೂರ್ಣಗೊಳಿಸದ ಶಾಲೆ/ಶಿಕ್ಷಕರ ವಿರುದ್ಧ ಕ್ರಮ ಕೈಗೊಳ್ಳದಿರುವ ಬಿ.ಆರ್.ಸಿ.ಗಳ ಬಗ್ಗೆ ವಿವರ: ಯಾವುದೂ ಇರುವುದಿಲ್ಲ**

- ಬ್ಲಾಕ್ ಹಂತದಲ್ಲಿ ನಿಗದಿಪಡಿಸಿದ ಪಠ್ಯ-ಕ್ರಮ/ಪಠ್ಯ-ಪುಸ್ತಕ ಪೂರ್ಣಗೊಳಿಸದ ಶಾಲೆ/ಶಿಕ್ಷಕರ ವಿರುದ್ಧ ಯಾವುದೇ ಕ್ರಮ ವಹಿಸಿರುವುದಿಲ್ಲ. ಬದಲಾಗಿ ಮುಖ್ಯ ಶಿಕ್ಷಕರಿಂದ ಪಠ್ಯ-ಪುಸ್ತಕ ಪೂರ್ಣಗೊಳಿಸದಿರುವುದಕ್ಕೆ ಕಾರಣ ತಿಳಿದು ಸಮಸ್ಯೆಯನ್ನು ಬಗೆಹರಿಸಲು ಕ್ರಮವಹಿಸಲಾಗಿದೆ (ಶಿಕ್ಷಕರು ವೈದ್ಯಕೀಯ ರಜೆ ಹೋಗಿರುವಲ್ಲಿ, ಹತ್ತಿರದ ಶಾಲೆಯಿಂದ ಹೆಚ್ಚುವರಿ ಶಿಕ್ಷಕರನ್ನು ನಿಯೋಜಿಸುವುದು, ವಿಶೇಷ ತರಗತಿಯನ್ನು ನಡೆಸಲು ತಿಳಿಸುವುದು, ಕೆಲ ಒಮ್ಮೆ ಸಿ.ಆರ್.ಪಿ.ಗಳಿಗೆ ವಿಶೇಷ ತರಗತಿಯನ್ನು ನಡೆಸಲು ತಿಳಿಸುವುದು.)

# ಭಾಗ – III

## 1. ಜಿಲ್ಲೆಯಲ್ಲಿ ಬಿ.ಆರ್.ಸಿ.ಗಳು ನಿರ್ವಹಿಸಿದ ಪ್ರಮುಖ ಹಾಗೂ ನಿರ್ದಿಷ್ಟ ಐದು ಉತ್ತಮ ಕಾರ್ಯಗಳು:

- ಶಾಲಾ ಮುಖ್ಯಸ್ಥರಿಗೆ ಮತ್ತು ಶಿಕ್ಷಕರಿಗೆ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಅಗತ್ಯ ಮಾರ್ಗದರ್ಶನ ನೀಡಿರುವುದು.
- ಶಾಲಾ ಮಕ್ಕಳ ಕಲಿಕಾ ಪ್ರಗತಿ ಪರಿಶೀಲನೆ ಮಾಡಿ ಹಿಮ್ಮಾಹಿತಿ ನೀಡಿರುವುದು.
- ಗುಣಮಟ್ಟದ ತರಬೇತಿಗಳನ್ನು ಆಯೋಜಿಸಿ ಶೈಕ್ಷಣಿಕ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲಾಗಿದೆ.
- ಯಾವುದೇ ಶಿಕ್ಷಕರು ತರಬೇತಿಗಳಿಗೆ ಗೈರು ಹಾಜರಾಗದಂತೆ ಕ್ರಮ ವಹಿಸಲಾಗಿದೆ
- ತರಗತಿ ಕೋಣೆಯಲ್ಲಿ ಕಲಿಕೆ ಆಗುತ್ತಿರುವುದರ ಬಗ್ಗೆ ಶಾಲಾ ಭೇಟಿ ಸಮಯದಲ್ಲಿ ವೀಕ್ಷಣೆ ಮಾಡಿ ಸಲಹೆ ಮಾರ್ಗದರ್ಶನ ನೀಡಲಾಗುತ್ತಿದೆ.
- ಆರ್.ಟಿ.ಇ ನಿಯಮ ಕಡ್ಡಾಯವಾಗಿ ಜಾರಿಗೊಳಿಸುವ ಬಗ್ಗೆ ಜಾಗೃತಿ ಮೂಡಿಸುವುದು.
- ಗುಣವರ್ಧನೆಗಾಗಿ ಹತ್ತು ಅಂಶಗಳ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ದೃಢಪಡಿಸಿಕೊಳ್ಳಲಾಗಿದೆ.
- ಮಕ್ಕಳು ಶಾಲೆಯಿಂದ ಹೊರಗುಳಿಯುವಿಕೆ ಪ್ರಮಾಣ ತಗ್ಗಿಸಲು ಶಾಲೆಯನ್ನು ಆಕರ್ಷಣೀಯ (ಭೌತಿಕ/ಶೈಕ್ಷಣಿಕ) ಗೊಳಿಸಲು ಕ್ರಮ ಕೈಗೊಳ್ಳಲಾಗಿದೆ
- ವಿಜ್ಞಾನ ಮತ್ತು ಗಣಿತ ವಿಷಯಗಳ 6 ರಿಂದ 8ನೇ ತರಗತಿಯ ಸಮಾಲೋಚನಾ ತರಬೇತಿಯನ್ನು ತಾಲ್ಲೂಕು ಹಂತದಲ್ಲಿ ಆಯೋಜಿಸಿ, ತರಗತಿವಾರು, ಘಟಕವಾರು, ಕ್ಲಿಷ್ಟಾಂಶಗಳನ್ನು ಪಟ್ಟಿ ಮಾಡಿ, ಮಕ್ಕಳಿಗೆ ಅರ್ಥೈಸುವ ವಿಧಾನಗಳನ್ನು, ಬೋಧನ ಕಲಿಕಾ ಪ್ರಕ್ರಿಯೆಗಳನ್ನು, ಪುಸ್ತಕದ ರೂಪದಲ್ಲಿ ಹೊರತರುವಲ್ಲಿ ಯೋಜನೆ ರೂಪಿಸುವಲ್ಲಿ ಕಾರ್ಯಪ್ರವೃತ್ತರಾಗಿರುವರು.
- ಪ್ರತೀ ಬ್ಲಾಕಿನ ಸಿ.ಆರ್.ಪಿ. ತಂಡವನ್ನು ಸೂಕ್ತ ರೀತಿಯಲ್ಲಿ ಸಂಘಟಿಸಿ ಶೈಕ್ಷಣಿಕ ವರ್ಷ ಪ್ರರಂಭವಾಗುವ ಮೊದಲೇ ಹೊಸ ಪಠ್ಯಪುಸ್ತಕ ವಿಶ್ಲೇಷಣಾ ಕಾರ್ಯಾಗಾರವನ್ನು ನಡೆಸಿದ್ದಾರೆ.
- ಈ ಹೊಸ ಪಠ್ಯಪುಸ್ತಕ ವಿಶ್ಲೇಷಣಾ ಕಾರ್ಯಾಗಾರ ಸಿ.ಆರ್.ಪಿ ಗಳಲ್ಲಿ ಶಿಕ್ಷರಿಗೆ ಮಾರ್ಗದರ್ಶನ ನೀಡುವ ಸಾಮರ್ಥ್ಯವನ್ನು ಹೆಚ್ಚಿಸಿದೆ.
- ಶಿಕ್ಷಕರು ಮಾಡಿರುವ ಕ್ರಿಯಾ ಸಂಶೋಧನೆಗೆ ಮಾರ್ಗದರ್ಶಿಸಿ ಕ್ರೋಢೀಕರಿಸುವ ಕಾರ್ಯವನ್ನು ಮಾಡಿರುತ್ತಾರೆ.

**ಶಾಲಾ ಭೇಟಿಯ ವೇಳಾಪಟ್ಟಿಯನ್ನು ತಯಾರಿಸಲಾಗಿದೆಯೇ ? ಹೌದು**

- ಎಲ್ಲಾ ಬಿ.ಆರ್.ಸಿಗಳು ಪ್ರತೀ ತಿಂಗಳ 25 ರಂದೇ ಮುಂದಿನ ತಿಂಗಳ ಶಾಲಾ ಭೇಟಿಯ ವೇಳಾಪಟ್ಟಿಯನ್ನು ತಯಾರಿಸಿಕೊಂಡಿರುತ್ತಾರೆ.
- ಅನಿವಾರ್ಯ ಕಾರ್ಯಗಳ ಒತ್ತಡದಿಂದಾಗಿ ಯೋಜಿಸಿದ ರೀತಿಯಲ್ಲಿ ಶಾಲಾ ಭೇಟಿಯನ್ನು ನೀಡಲು ಸಾಧ್ಯವಾಗುತ್ತಿಲ್ಲ.

## 2. ಬ್ಲಾಕಿನಲ್ಲಿ ರಾಜ್ಯ ಮಟ್ಟದಿಂದ ಶಾಲಾ ಮಟ್ಟದವರೆವಿಗೂ ಈ ತ್ರೈಮಾಸಿಕ ಅವಧಿಯಲ್ಲಿ ಪ್ರತಿ ಶಾಲೆಗೆ ಎಷ್ಟು ಬಾರಿ ಭೇಟಿ ಮಾಡಿರುತ್ತೀರಿ–01

- ಎಲ್ಲಾ ಬಿ.ಆರ್.ಸಿಗಳು ಪ್ರತೀ ತಿಂಗಳು ಶಾಲಾ ಭೇಟಿಯ ವೇಳಾಪಟ್ಟಿಯನ್ನು ತಯಾರಿಸಿಕೊಂಡಿರುತ್ತಾರೆ. ಆದರೆ ಆ ವೇಳಾಪಟ್ಟಿಯಂತೆ ಕಾರ್ಯ ನಿರ್ವಹಿಸಲು ಸಾಧ್ಯವಾಗದೇ ಇರುವುದು ವಾಸ್ತವವಾಗಿರುತ್ತದೆ.

- ವಿವಿಧ ಕಾರಣಗಳಿಗಾಗಿ ರಾಜ್ಯ ಮಟ್ಟದಿಂದ ಶಾಲಾ ಮಟ್ಟದವರೆಗೂ ಮಾಹಿತಿ ಕ್ರೋಢೀಕರಿಸುವ ಕಾರ್ಯವನ್ನು ಸರಳಗೊಳಿಸಿ ಬಿ.ಆರ್.ಸಿಗಳು ಶೈಕ್ಷಣಿಕವಾಗಿ ಕಾರ್ಯ ನಿರ್ವಹಿಸಲು ಅವಕಾಶ ಕಲ್ಪಿಸಬೇಕಾಗಿರುತ್ತದೆ.

**3. ಕಳೆದ ತ್ರೈಮಾಸಿಕ ಅವಧಿಯಲ್ಲಿ ಬಿ.ಆರ್.ಸಿ. ತನ್ನ ವ್ಯಾಪ್ತಿಯಲ್ಲಿ ಬರುವ ಶಿಕ್ಷಕರಿಗೆ ನೀವು ಗುರುತಿಸಿ ನೀಡಿದ ಐದು ವೃತ್ತಿಪರ ಮಾದರಿ ಸಲಹೆಗಳು:**

- ಪ್ರತಿ ದಿನದ ತಮ್ಮ ವೃತ್ತಿಪರ ಆಚರಣೆಗಳ ಕುರಿತು ಸ್ವಾವಲೋಕನವನ್ನು ಮಾಡಿಕೊಳ್ಳುವುದು.
- ತರಗತಿ ಕೋಣೆಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳಿಗೆ ಕ್ರಿಯಾ ಸಂಶೋಧನೆ ಕೈಗೊಳ್ಳುವುದರ ಮೂಲಕ ವೃತ್ತಿಪರತೆಯನ್ನು ಹೆಚ್ಚಿಸಿಕೊಳ್ಳುವುದು.
- ಬೋಧನಾ ಮತ್ತು ಕಲಿಕೆಗೆ ಪೂರಕವಾಗಿ ತಂತ್ರಜ್ಞಾನವನ್ನು ಬಳಕೆ ಮಾಡಿಕೊಳ್ಳುವುದು.
- ಪರಿಣಾಮಕಾರಿ ಬೋಧನೆ ಮತ್ತು ಮಕ್ಕಳನ್ನು ನಾವಿನ್ಯತೆಯ ಶೋಧನೆಯಲ್ಲಿ ತೊಡಗಿಸಿಕೊಳ್ಳುವುದು.
- ಪಾಠೋಪಕರಣ ಹಾಗೂ ಕಲಿಕೋಪಕರಣದೊಂದಿಗೆ ಮಕ್ಕಳ ವಿವಿಧ ಹಂತಕ್ಕನುಗುಣವಾಗಿ ಉತ್ತೇಜಿಸುವಂತೆ ಆಸಕ್ತಿದಾಯಕವಾಗಿ ಪಾಠ ಬೋಧನೆ ಮಾಡುವುದು.
- ಶೈಕ್ಷಣಿಕ ವಿಚಾರಗಳಿಗೆ ಸಂಬಂಧಿಸಿದಂತೆ ಸಾಹಿತ್ಯ, ಪುಸ್ತಕ, ಪಠ್ಯಪುಸ್ತಕ, ಅಂತರ್‌ಜಾಲ ಬಳಕೆ ಮಾಡುವುದರ ಮೂಲಕ ಅಧ್ಯಯನ ಶೀಲತೆಯನ್ನು ಬೆಳಸಿಕೊಳ್ಳುವುದು.
- ಶೈಕ್ಷಣಿಕ ಗುಣವರ್ಧನೆಗಾಗಿ 10 ಅಂಶಗಳ ಕಾರ್ಯಕ್ರಮಗಳನ್ನು ನಿಯಮಬದ್ಧವಾಗಿ ಅಳವಡಿಸಿಕೊಂಡು ಮಕ್ಕಳಲ್ಲಿ ನಾಯಕತ್ವ ಗುಣವನ್ನು ಬೆಳೆಸುವುದು ಹಾಗೂ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿ ಶ್ರಮಿಸುವುದು. ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ ವೈಯಕ್ತಿಕ ಗಮನ ಹಾಗೂ ವಿಶೇಷ ಆಸಕ್ತಿ ವಹಿಸಿ ಇತರೆ ಮಕ್ಕಳೊಂದಿಗೆ ಸಮಾನವಾಗಿ ಬರುವಂತೆ ಮಾಡುವುದು.
- NCFಆಶಯದಲ್ಲಿ ತರಗತಿ ಕೋಣೆಯ ಕಲಿಕೆಯನ್ನು ಅನುಕೂಲಿಸುವಲ್ಲಿ ತಮ್ಮ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುವುದು.

**5.ಬಿ.ಆರ್.ಸಿ.ಗಳು ಮಕ್ಕಳ ಕಲಿಕಾ ಪ್ರಗತಿಯ ದಾಖಲೆಯನ್ನು ಹೇಗೆ ಮೇಲುಸ್ತುವಾರಿ ಮಾಡುವಿರಿ ? 5ಉದಾಹರಣೆ ನೀಡಿ.**

- ತರಗತಿಯಲ್ಲಿ ಮಕ್ಕಳನ್ನು ಭಾಷೆ, ಗಣಿತ, ಮತ್ತು ಪರಿಸರ ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರಶ್ನಿಸಿ, ಬರೆಸಿ, ಓದಿಸುವುದರ ಮೂಲಕ ಕಲಿಕೆಯ ಪ್ರಗತಿಯನ್ನು ಗಮನಿಸುವುದು
- ಮಕ್ಕಳ ವಿವಿಧ ಸೃಜನಾತ್ಮಕ ದಾಖಲೆಗಳನ್ನು ಪರಿಶೀಲಿಸುವ ಮೂಲಕ.
- ಮಕ್ಕಳನ್ನು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸುವುದರ ಮೂಲಕ.
- ಶಾಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಮಕ್ಕಳ ಕೃತಿ ಸಂಪುಟ ಹಾಗು ವೈಯಕ್ತಿಕವಾಗಿ ಕಲಿಕಾಂಶ ದೃಡ ಪಟ್ಟಿದೆಯೆ ಇಲ್ಲವೆ ಎಂಬುದನ್ನು ವಿವಿಧ ಆಯಾಮಗಳಿಂದ ಪರೀಕ್ಷಿಸಲಾಗುವುದು.
- ಮಕ್ಕಳ ವೈಯಕ್ತಿಕ ದಾಖಲೆ ವಹಿ, ಪ್ರಗತಿ ನೋಟ ಹಾಗು ರೂಪಣಾತ್ಮಕ ಮೌಲ್ಯಮಾಪನ ಕ್ರೂಢೀಕರಣ ದಾಖಲೆಯ ಘಟಕವಾರು ಪ್ರಶ್ನೆ ಪತ್ರಿಕೆ, ಉತ್ತರ ಪತ್ರಿಕೆಗಳನ್ನು ಪರಿಶೀಲಿಸಲಾಗುವುದು.
- ಮಕ್ಕಳ ಪ್ರಗತಿಯನ್ನು ಪುಸ್ತಕದಲ್ಲಿ ಬರೆದಿರುವ ಬರವಣಿಗೆ, ಉಕ್ತಲೇಖನ, ಮೌಖಿಕ ಅಭಿವ್ಯಕ್ತಿ ಮತ್ತು ಯೋಜನೆ ಇತ್ಯಾದಿಗಳನ್ನು ಅವಲೋಕಿಸುವುದರ ಮೂಲಕ ಪರೀಕ್ಷಿಸಲಾಗುವುದು.

- ನಲಿಕಲಿ ತರಗತಿಯಲ್ಲಿ ತೂಗುಹಾಕಲಾದ ಪ್ರಗತಿ ನೋಟದ ಅನ್ವಯ ಮಕ್ಕಳ ಕಲಿಕೆ ಸಾಗುತ್ತಿದೆಯೇ ಎನ್ನುವುದನ್ನು ತರಗತಿಯ ನಿರ್ವಹಣೆ ಸಂದರ್ಭದಲ್ಲಿ ಕಲಿಕಾ ಗುಂಪಿನಲ್ಲಿ ಕುಳಿತು ಗಮನಿಸಲಾಗುವುದು.

6 (a)ಕಳೆದ ತ್ರೈಮಾಸಿಕ ಅವಧಿಯಲ್ಲಿ ಸೇವಾನಿರತ ಶಿಕ್ಷಕರಿಗೆ ಬ್ಲಾಕ್/ಜಿಲ್ಲಾ ಹಂತದಲ್ಲಿ ನೀಡಿರುವ ಶಿಕ್ಷಕರ ತರಬೇತಿ ಸಂಖ್ಯೆ: 2

(b) ನಿಗದಿ ಪಡಿಸಿದ ಗುರಿಯಲ್ಲಿ ಕಳೆದ ತ್ರೈಮಾಸಿಕ ಅವಧಿಯಲ್ಲಿ ಸಾಧನೆ ಆಗಿರುವ ಶೇ% ಪ್ರಮಾಣವೆಷ್ಟು? 20%

- ರಾಜ್ಯ ಮಟ್ಟದಲ್ಲಿ ತರಬೇತಿಗಳು ತಡವಾಗಿ ಪ್ರಾರಂಭವಾದುದರಿಂದ ಜಿಲ್ಲಾಮಟ್ಟದಲ್ಲಿ ಪ್ರಥಮ ತ್ರೈಮಾಸಿಕ ಅವಧಿಯಲ್ಲಿ ಕೇವಲ 2 ತರಬೇತಿಗಳನ್ನು ಮಾತ್ರ ನಡೆಸಲಾಗಿದೆ.

(ಅ)ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಲ್ಲಿ ಇರುವ 5 ಪ್ರಮುಖ ಸಮಸ್ಯೆಗಳನ್ನು ಪಟ್ಟಿ ಮಾಡಿ.

- ಏಕ ಕಾಲದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಜಾರಿ ಮಾಡಲು ತೊಂದರೆ ಆಗುತ್ತಿರುವುದು.
- ಆಗಾಗ್ಗೆ ಬದಲಾಗುತ್ತಿರುವ ಶಿಕ್ಷಕರ ಸಂಖ್ಯೆ, ವರ್ಗಾವಣೆ, ರಜೆಗಳು ಶೈಕ್ಷಣಿಕ ಅಭಿವೃದ್ಧಿಗೆ ಅಡ್ಡಿಯಾಗುತ್ತಿವೆ.
- ಇರುವ ಸಿಬ್ಬಂದಿಯನ್ನು ಬೇರೆಡೆಗೆ ಆಗಾಗ್ಗೆ ನಿಯೋಜನೆ ಮಾಡುವುದರಿಂದ ತರಬೇತಿ ಅನುಷ್ಠಾನಕ್ಕೆ/ಅನುಪಾಲನೆಗೆ ಅಡ್ಡಿಯಾಗುತ್ತಿದೆ.
- ಕಛೇರಿಯಲ್ಲಿರುವ ಗಣಕ ಯಂತ್ರಗಳು ಸಂಖ್ಯೆಯಲ್ಲಿ ಕಡಿಮೆ ಇದ್ದು ಇನ್ನು ಕನಿಷ್ಟ ಮೂರು ಗಣಕ ಯಂತ್ರ ಅಗತ್ಯತೆ ಇದೆ.
- ಡಯಟ್, ಡಿ.ಡಿ.ಪಿ.ಐ, ಡಿ.ವೈ.ಪಿ.ಸಿ, ಡಿ.ಎಸ್.ಇ.ಆರ್.ಟಿ, ರಾಜ್ಯಹಂತದ ಕಾರ್ಯಕ್ರಮಗಳು ಒಂದೇ ದಿನಾಂಕಗಳಲ್ಲಿ ನಿಗದಿಯಾಗಿ ಒಂದಕ್ಕೊಂದು ಅನುಷ್ಠಾನ ಮಾಡುವಲ್ಲಿ ತೊಡಕಾಗುತ್ತಿದೆ.

7 a) ಕಳೆದ ತ್ರೈಮಾಸಿಕ ಅವಧಿಯಲ್ಲಿ ಪ್ರಾಥಮಿಕ ಶಾಲಾ ಸೇವಾ ನಿರತ ಶಿಕ್ಷಕರಿಗೆ ಈ ಕೆಳಕಂಡ ವಿಷಯವಾರು ಎಷ್ಟು ತರಬೇತಿ ಮತ್ತು ಕಾರ್ಯಾಗಾರಗಳನ್ನು ನಡೆಸಲಾಗಿದೆ. (ಸಂಖ್ಯೆಯನ್ನು ನಮೂದಿಸಿ)

**ಕೋಷ್ಟಕ–30:**

**ತರಬೇತಿ ಪ್ರಗತಿ 2014–15** **ಸಪ್ಟೆಂಬರ್– 2014 ರ ಅಂತ್ಯಕ್ಕೆ**

| ಹಂತ | ತರಬೇತಿ ಹೆಸರು | ಅವಧಿ | ಗುರಿ | | | ಸಾಧನೆ | | |
|---|---|---|---|---|---|---|---|---|
| | | | ಭೌತಿಕ | ಮಾನವ ದಿನ | ಆರ್ಥಿಕ | ಭೌತಿಕ | ಮಾನವ ದಿನ | ಆರ್ಥಿಕ |
| ಬ್ಲಾಕ್ | 1 ರಿಂದ 3 ವಿಷಯಾಧಾರಿತ | 5ದಿನ | 4154 | 20770 | 2077000 | 1259 | 6295 | 503600 |
| | 4 ರಿಂದ 5 ವಿಷಯಾಧಾರಿತ | 5ದಿನ | 1844 | 9220 | 92000 | 0 | 0 | 0 |
| | 6–8 ವಿಜ್ಞಾನ ವಿಷಯಾಧಾರಿತ | 5ದಿನ | 564 | 2820 | 282000 | 0 | 0 | 0 |
| | 6–8 ಗಣಿತ ವಿಷಯಾಧಾರಿತ | 5ದಿನ | 564 | 2820 | 282000 | 0 | 0 | 0 |
| | **ಒಟ್ಟು** | 5ದಿನ | **7126** | **35630** | **2733000** | **1259** | **6295** | **503600** |
| ಕ್ಲಸ್ಟರ್ | ಸಮಾಲೋಚನಾ ಸಭೆ | 5ದಿನ | 7126 | 35630 | 3563000 | 13764 | 13764 | 1101120 |
| | ಬ್ಲಾಕ್ + ಕ್ಲಸ್ಟರ್ | 5ದಿನ | **14252** | **71260** | **6296000** | **15023** | **20059** | **1604720** |

- ತರಬೇತಿಗೆ ಸಂಬಂಧಿಸಿದಂತೆ ಕ್ರಿಯಾ ಯೋಜನೆ, ಕ್ಲಸ್ಟರ್‌ವಾರು ಸಮಾಲೋಚನಾ ಸಭೆಯ ವರದಿ ಹಾಗೂ ತರಬೇತಿ ಪ್ರಗತಿಯನ್ನು ಸಕಾಲದಲ್ಲಿ ಉತ್ತಮವಾಗಿ ಒದಗಿಸುತ್ತಿದ್ದಾರೆ.
- ತರಬೇತಿಗಳನ್ನು ಉತ್ತಮ ಪೂರ್ವಸಿದ್ಧತೆಯೊಂದಿಗೆ ನಿರ್ವಹಿಸುತ್ತಿದ್ದಾರೆ.
- ಪ್ರತಿ ತಾಲ್ಲೂಕಿನಲ್ಲಿ ತರಬೇತಿ ಮಾನವ ದಿನಗಳ ಸಾಧನೆಯು ಸರಾಸರಿ 2 ದಿನಗಳಷ್ಟು ಆಗಿದೆ.
- ಸಮಾಲೋಚನಾ ಸಭೆಯ ಮಾನವ ದಿನಗಳು ಸರಾಸರಿ 2 ಆಗಿರುತ್ತದೆ.
- ಸಮಾಲೋಚನಾ ಸಭೆಗಳಲ್ಲಿ ವಿಷಯವಾರು ಶಿಕ್ಷಕರು ಗುಂಪುಗಳಲ್ಲಿ ಕುಳಿತು ಒಂದು ತಿಂಗಳಿಗೆ ಅಗತ್ಯವಿರುವ ಪಾಠಯೋಜನೆ, ಪರಿಕಲ್ಪನೆಗಳಿಗೆ ಪೂರಕವಾದ ಚಟುವಟಿಕೆ, ರೂಪಣಾತ್ಮಕ ಮೌಲ್ಯಮಾಪನ ಮಾಡಬೇಕಾದ ವಿಧಾನಗಳ ಬಗ್ಗೆ ಅರ್ಥಪೂರ್ಣವಾಗಿ ಚರ್ಚಿಸಲು ಅವಕಾಶ ಕಲ್ಪಿಸಲಾಗಿದೆ.
- ರಾಜ್ಯ ಮಟ್ಟದಲ್ಲಿ ನಿಗದಿಪಡಿಸಿರುವಂತೆ ತರಬೇತಿಗಳನ್ನು ನಡೆಸಲಾಗಿದೆ.

**(b)ಕಾರ್ಯಾಗಾರವನ್ನು ಅನುಷ್ಠಾನಗೊಳಿಸುವಲ್ಲಿ ಇರುವ 5 ಪ್ರಮುಖ ಸಮಸ್ಯೆಗಳನ್ನು ಪಟ್ಟಿ ಮಾಡಿ.**

- ಸಿಆರ್‌ಪಿಗಳು ಸಂಪನ್ಮೂಲ ವ್ಯಕ್ತಿಗಳಾಗಬೇಕಾದುದರಿಂದ ವಿಷಯವಾರು ಸಿಆರ್‌ಪಿ ಲಭ್ಯವಿಲ್ಲದಿರುವುದು.
- ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿಷಯವಾರು ಶಿಕ್ಷಕರು ಇಲ್ಲದಿರುವ ಕಡೆ ಸಮಸ್ಯೆಯಾಗುತ್ತಿದೆ.
- ಶಿಕ್ಷಕರ ಪ್ರೊಫೈಲ್ ಆಧರಿಸಿ ಶಿಕ್ಷಕರನ್ನು ತರಬೇತಿಗೆ ನಿಯೋಜಿಸುವುದು.



**ಜಿಲ್ಲಾ ಮಟ್ಟದ 4–5 ನೇ ತರಗತಿ ವಿಷಯಾಧಾರಿತ ತರಬೇತಿಯ ಐಸ್ ಬ್ರೇಕಿಂಗ್ ಕಾರ್ಯಕ್ರಮದಲ್ಲಿ ಶಿಬಿರಾರ್ಥಿಗಳು–ಡಯಟ್, ಮೈಸೂರು**

**ತರಬೇತಿಯ ಪ್ರತಿ ಹಂತದಲ್ಲೂ ಪೂರ್ವಸಿದ್ಧತೆ ಮತ್ತು ಶಿಸ್ತುಬದ್ಧತೆ ಅಗತ್ಯ.**

## ಭಾಗ – IV

1. **ಬಿ.ಆರ್.ಸಿ. ಮತ್ತು ಸಿ.ಆರ್.ಸಿ.ಗಳಿಗೆ ಶಾಲೆಗಳ ಮೇಲ್ವಿಚಾರಣೆ ಮತ್ತು ತರಗತಿ ವೀಕ್ಷಣೆ ಮಾಡುವ ಬಗ್ಗೆ ನಿಮ್ಮ ಜಿಲ್ಲೆಯಲ್ಲಿ ರಾಜ್ಯದ ಅಧಿಕೃತ ಸಂಸ್ಥೆಯಿಂದ ಮಾರ್ಗದರ್ಶನ ನೀಡಲಾಗಿದೆಯೇ** (ಡಿ.ಎಸ್.ಇ.ಆರ್.ಟಿ, ಎಸ್.ಎಸ್.ಎ)– ಹೌದು

    a) ತ್ರೈಮಾಸಿಕ ಅವಧಿಗೆ ಮೇಲ್ವಿಚಾರಣೆ ನಡೆಸಬೇಕಾದ ಕನಿಷ್ಠ ಶಾಲೆಗಳ ಸಂಖ್ಯೆ ಸಿ.ಆರ್.ಪಿ/ಬಿ.ಆರ್.ಸಿ.–20

    b) ತ್ರೈಮಾಸಿಕ ಅವಧಿಗೆ ವೀಕ್ಷಿಸಬೇಕಾದ ಕನಿಷ್ಠ ತರಗತಿಗಳ ಸಂಖ್ಯೆ (ಬೋಧನಾ ಕಲಿಕಾ ಪ್ರಕ್ರಿಯೆ ಸೇರಿ) ಸಿ.ಪಿ.ಐ ಅವರ ಆದೇಶದ ಪ್ರಕಾರ ಬಿ.ಆರ್.ಸಿ.ಗಳು: 20

- ವಿವಿಧ ಕಾರ್ಯದ ನಿಮಿತ್ತ ಅಥವಾ ಮಾಹಿತಿ ಸಂಗ್ರಹಣೆಗಾಗಿ ಶಾಲೆಗಳಿಗೆ ಭೇಟಿ ನೀಡುವುದು ಹೆಚ್ಚಾಗಿ ಕಂಡು ಬರುತ್ತಿದೆ.
- ತಮ್ಮ ಮೂಲ ಜವಾಬ್ದಾರಿ ಏನಿದೆ ಅದರ ನಿರ್ವಹಣೆ ಅಂದರೆ ಶೈಕ್ಷಣಿಕ ಮಾರ್ಗದರ್ಶನ ನೀಡುವ ಕಾರ್ಯ ಪರಿಣಾಮಕಾರಿಯಾಗಿ ನಡೆಯುತ್ತಿಲ್ಲ.

2. **ಜಿಲ್ಲಾ ಮಟ್ಟದಲ್ಲಿ ಮೇಲುಸ್ತುವಾರಿಯನ್ನು ನಡೆಸಲು ಗುಣಮಟ್ಟದಿಂದ ಕೂಡಿರುವ ಸಾಧನಗಳನ್ನು ಅಳವಡಿಸಿಕೊಳ್ಳಲಾಗಿದೆಯೇ?**

    - ಹೌದು, ಇಲಾಖೆ ನೀಡಿರುವ ಸಾಧನಗಳನ್ನೇ ಬಳಸಲಾಗುತ್ತಿದೆ. ಭೇಟಿ ವರದಿಗಳು ಕ್ರೋಡೀರಣವಾಗಬೇಕಾದುದರಿಂದ ಏಕರೂಪದ ಸಾಧನವನ್ನು ಬಳಸಬೇಕಾಗಿದೆ.
    - ಜಿಲ್ಲೆಯು ತಮ್ಮ ಅಗತ್ಯಕ್ಕನುಗುಣವಾಗಿ ಸಿದ್ಧಪಡಿಸಿದ ಗುಣಮಟ್ಟದ ಸಾಧನವನ್ನು ಬಳಸುವುದು ಸೂಕ್ತವಾಗಿದೆ.

ಹಾಗಾದರೆ,

1. **ಸಂಸ್ಥೆಗಳ ಸಹಭಾಗಿತ್ವ–**

- ಉಪನಿರ್ದೇಶಕರು(ಆಡಳಿತ), ಸಹನಿರ್ದೇಶಕರು(ಆಡಳಿತ), ಸಹನಿರ್ದೇಶಕರು(ಅಭಿವೃದ್ಧಿ), ಆರ್.ಐ.ಇ. ಮೈಸೂರು., ಆರ್.ಐ.ಇ. ಬೆಂಗಳೂರು., ಮೈಸೂರು ವಿಶ್ವವಿದ್ಯಾನಿಲಯ., ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ., ವಿಲೀಡ್ಸ್., ಅಗಸ್ತ್ಯ ಪೌಂಡೇಶನ್, ಪ್ರಜಾಯತ್ನ ಹೀಗೆ ವಿವಿಧ ಸಂಸ್ಥೆಗಳಿಗೆ ಡಯಟ್ ಮೈಸೂರು ಶಾಲಾ ಶೈಕ್ಷಣಿಕ ಅಭಿವೃದ್ಧಿಗಾಗಿ ಹಾಗೂ ಶಿಕ್ಷಕರ ಸಬಲೀಕರಣಕ್ಕೆ ಸಹಭಾಗಿತ್ವವನ್ನು ನೀಡುತ್ತಲಿದೆ/ಪಡೆಯುತ್ತಲಿದೆ.
- ಗುಣಮಟ್ಟ ಪರಿಶೀಲನೆಯ ಸದಸ್ಯರು – ಬ್ಲಾಕ್ ಹಾಗೂ ಜಿಲ್ಲಾ ಹಂತದಲ್ಲಿರುವ ಅನುಪಾಲನಾ ಅಧಿಕಾರಿಗಳು

2. **ಗುಣಮಟ್ಟ ಪರಿಶೀಲನೆಯಲ್ಲಿ ಬಿ.ಆರ್.ಸಿ/ಸಿ.ಆರ್.ಸಿ.ಗಳ ಪಾತ್ರ–**

    - ಸಿ.ಆರ್.ಪಿ ಗಳು ಶಾಲಾಭೇಟಿ ಮಾಡಿ ಶಾಲೆಯ ಗುಣಮಟ್ಟದ ಪರಿಶೀಲನೆ ಮಾಡುವಂತೆ ಮಾರ್ಗದರ್ಶನ ನೀಡಿ ಮೇಲ್ವಿಚಾರಣೆ ಮಾಡುವುದು.
    - ಸಿ.ಆರ್.ಪಿ ಗಳ ಪ್ರಗತಿಯನ್ನು ಪರಿಶೀಲಿಸುವುದು, ಚರ್ಚಿಸಿ ಹಿಮ್ಮಾಹಿತಿ ನೀಡುವುದು.

3. **ಬ್ಲಾಕಿನ ಪ್ರಗತಿಯ ಅಂತರಾವಲೋಕನ ಮಾಡಿ ಅಗತ್ಯ ಕ್ರಮ ಕೈಗೊಳ್ಳುವುದು ಮತ್ತು ಹಿಮ್ಮಾಹಿತಿ ನೀಡುವುದು**
4. **ಗುಣಮಟ್ಟ ಪರಿಶೀಲನೆಯಲ್ಲಿ ಜಿಲ್ಲಾ ನೋಡಲ್ ಅಧಿಕಾರಿಗಳ ಪಾತ್ರ–**

    - ಶಾಲಾ ಭೇಟಿಗಳ ಆಧಾರದ ಮೇಲೆ ಹಿಮ್ಮಾಹಿತಿಯನ್ನು ಸಂಬಂಧಿಸಿದ ಅನುಪಾಲನಾ ಅಧಿಕಾರಿಗಳೊಂದಿಗೆ ಚರ್ಚಿಸಲಾಗುತ್ತಿದೆ ಹಾಗೂ ಈ ಬಗ್ಗೆ ಶಾಲೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಲಾಗುತ್ತಿದೆ.
    - ತರಬೇತಿ/ಸಮಾಲೋಚನ ಸಭೆಗಳಲ್ಲಿ ಶಿಕ್ಷಕರ ಮನೋಧೋರಣೆಗಳನ್ನು ಬದಲಾಯಿಸಿಕೊಳ್ಳಲು ಹಾಗೂ ಆರ್.ಟಿ.ಇ, ಸಿ.ಸಿ.ಇ ಹಿನ್ನೆಲೆಯಲ್ಲಿ ತರಗತಿ ಪ್ರಕ್ರಿಯೆ ಅನುಷ್ಠಾನ ಮಾಡಲು ಪ್ರೋತ್ಸಾಹಿಸಲಾಗುತ್ತಿದೆ.

3. **ಕಳೆದ 3 ತಿಂಗಳಲ್ಲಿ ಜಿಲ್ಲಾ ಹಂತದಲ್ಲಿ ಗುಣಮಟ್ಟ ಸುಧಾರಣೆಗೆ ಯಾವ ವಿಧದ ಕ್ರಮ ಕೈಗೊಳ್ಳಲಾಗಿದೆ?**

a) ಪೆಡಗಾಗಿ ಮತ್ತು ಮೌಲ್ಯಾಂಕನ ಮತ್ತು ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ನೀಡಿದೆ.

b) ಶಾಲಾಭಿವೃದ್ಧಿ ಯೋಜನೆ ಸಂಬಂಧ ಎಸ್.ಡಿ.ಎಂ.ಸಿ.ಗಳಿಗೆ ತರಬೇತಿ ನೀಡಿರುವುದಿಲ್ಲ

c) ವಯೋಮಾನ ಮೀರಿದ ಮಕ್ಕಳಿಗೆ ವಿಶೇಷ ತರಬೇತಿಯನ್ನು ನೀಡಲು "Educator" ರವರಿಗೆ ತರಬೇತಿ ನೀಡಿರುವುದಿಲ್ಲ

- 1ರಿಂದ 4ನೇ ತರಗತಿಗೆ ನಲಿ–ಕಲಿಯಲ್ಲಿ ವಿಷಯಾಧಾರಿತ ಕನ್ನಡ, ಗಣಿತ, ಪರಿಸರ ವಿಜ್ಞಾನ ಮತ್ತು ಆಂಗ್ಲಭಾಷೆ – ನೀಡಲಾಗಿದೆ.
- 4 ರಿಂದ 5ನೇ ತರಗತಿಗೆ ವಿಷಯಾಧಾರಿತ ಕನ್ನಡ, ಗಣಿತ, ಪರಿಸರ ವಿಜ್ಞಾನ ಮತ್ತು ಆಂಗ್ಲಭಾಷೆ –ಜಿಲ್ಲಾ ಹಂತದ ಎಂಆರ್‌ಪಿ ತರಬೇತಿ ನೀಡಿದೆ.
- 6 ರಿಂದ 8 ನೇ ತರಗತಿಯ ವಿಷಯಾಧಾರಿತ (ವಿಜ್ಞಾನ ಮತ್ತು ಗಣಿತ) ತರಬೇತಿ ತಾಲೂಕು ಹಂತದಲ್ಲಿ ನೀಡಬೇಕಾಗಿದೆ.
- ಎಸ್.ಡಿ.ಎಂ.ಸಿ ತರಬೇತಿಯನ್ನು ಈ ವರ್ಷ ಹಮ್ಮಿಕೊಳ್ಳಲು ರಾಜ್ಯ ಕಛೇರಿಯವರು ತಿಳಿಸಿರುತ್ತಾರೆ. ರಾಜ್ಯ ಕಛೇರಿಯಿಂದ ತರಬೇತಿ ಪಡೆದ ನಂತರ ಜಿಲ್ಲೆಯಲ್ಲಿ ಕ್ರಿಯಾ ಯೋಜನೆ ಮತ್ತು ತರಬೇತಿ ವಿನ್ಯಾಸ ತಯಾರಿಸಿಕೊಂಡು ನಡೆಸಲಾಗುತ್ತದೆ.
- ಸಮಾಲೋಚನಾ ಸಭೆಯಲ್ಲಿ ವಿಷಯವಾರು ಚರ್ಚೆ ನಡೆಸಲಾಗಿದೆ.

4. **ಜಿಲ್ಲಾ ಹಂತದಲ್ಲಿರುವ ಶೈಕ್ಷಣಿಕ ತೊಡಕುಗಳ ಬಗ್ಗೆ ಬಿ.ಆರ್.ಸಿ., ಸಿ.,ಆರ್.ಸಿ ಮತ್ತು ಮುಖ್ಯ ಶಿಕ್ಷಕರ ಸಭೆಗಳನ್ನು ಆಯೋಜಿಸಲಾಗಿದೆಯೇ?** ಹಾಗಾದರೆ

- ಜಿಲ್ಲಾ ಹಂತದಲ್ಲಿ ಪ್ರತೀ ತಿಂಗಳು ಬಿ.ಆರ್.ಸಿ., ಮತ್ತು ಬಿ.ಇ.ಓ ಗಳಿಗೆ ಪ್ರಗತಿ ಪರಿಶೀಲನಾ ಸಭೆಯನ್ನು ಕರೆಯಲಾಗುತ್ತದೆ. ಈ ಸಭೆಯಲ್ಲಿ ಶಾಲೆಗಳ ಸಮಸ್ಯೆ ಹಾಗು ಅದರ ನಿವಾರಣೆಗೆ ಮಾರ್ಗದರ್ಶನ ಮಾಡಲಾಗುತ್ತದೆ. ತಾಲ್ಲೋಕುವಾರು ಕಾರ್ಯಗಳ ಕ್ರಿಯಾಯೋಜನೆ ಸಿದ್ದಪಡಿಸುವಲ್ಲಿ ಸಲಹೆಗಳನ್ನು ನೀಡಲಾಗುತ್ತದೆ.
- ಬ್ಲಾಕ್ ಹಂತದಲ್ಲಿ ಅಗತ್ಯಾನುಸಾರ ಸಾಕಷ್ಟು ಸಭೆಗಳನ್ನು ನಡೆಸಿ ಎದುರಿಸುತ್ತಿರುವ ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲಾಗುತ್ತಿದೆ.

5. **ಕಳೆದ 3 ತಿಂಗಳಲ್ಲಿ ಉಪನಿರ್ದೇಶಕರು (ಆಡಳಿತ) ಶಾಲೆಗಳಿಗೆ ಕ್ಷೇತ್ರ ಭೇಟಿ ನೀಡಿದ ವಿವರ:**

a) ಭೇಟಿ ನೀಡಿದ ಒಟ್ಟು ಶಾಲೆಗಳ ಸಂಖ್ಯೆ: 36

b) ಗುಣಮಟ್ಟ ಸುಧಾರಣೆಗೆ ರಾಜ್ಯ ಸರ್ಕಾರವು ಆದ್ಯತೆ ನೀಡಿರುವ 3 ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕ್ಷೇತ್ರದಲ್ಲಿ ನೀಡಿರುವ ಹಿಮ್ಮಾಹಿತಿ ಮತ್ತು ನಂತರದ ತ್ರೈಮಾಸಿಕ ಅವಧಿಗೆ ನೀಡಬೇಕಾಗಿರುವ ಸಲಹೆ:

1. ಶಾಲಾ ಬಿಟ್ಟ ಮಕ್ಕಳನ್ನು ಶಾಲೆಗೆ ದಾಖಲಿಸುವಂತೆ ಕ್ರಮ ಕೈಗೊಳ್ಳಲಾಗಿದೆ.
2. ಮಕ್ಕಳ ಜಾಡು ಹಿಡಿದು ಅವರು ಶಾಲೆಯಲ್ಲಿರುವದನ್ನು ಖಚಿತ ಮಾಡಿಕೊಳ್ಳಲಾಗುತ್ತಿದೆ.
3. ಎಲ್ಲ ಮಕ್ಕಳಿಗೂ ಸ್ವಚ್ಚ ಶೌಚಾಲಯ ಮತ್ತು ಶುದ್ದ ಕುಡಿಯುವ ನೀರಿನ ವ್ಯವಸ್ಥೆ ಮಾಡುವಂತೆ ಕ್ರಮ ಕೈಗೊಳ್ಳಲಾಗಿದೆ.

c) ಕಡಿಮೆ ಕಾರ್ಯಕ್ಷಮತೆ ಇರುವ ಸಿ.ಆರ್.ಸಿ.ಗಳ ಸಂಖ್ಯೆ–ಇರುವುದಿಲ್ಲ.

d) ಕಾರ್ಯಕ್ಷಮತೆ ಕಡಿಮೆ ಇರುವ ಸಿ.ಆರ್.ಸಿ.ಗಳ ಮೇಲೆ ಕೈಗೊಂಡ ಕ್ರಮಗಳೇನು? : ಅನ್ವಯಿಸುವುದಿಲ್ಲ.

- ಪ್ರಸಕ್ತ ವರ್ಷ ಹೊಸದಾಗಿ ನೇಮಕವಾದ ಸಿ.ಆರ್.ಸಿ.ಗಳಿಗೆ ಅನುಪಾಲನಾ ಕಾರ್ಯದಲ್ಲಿ ಹೆಚ್ಚಿನ ಮಾರ್ಗದರ್ಶನದ ಅವಶ್ಯಕತೆ ಇದೆ. ಸಿ.ಸಿ.ಇ., ಎನ್.ಸಿ.ಎಫ್ ಪರಿಕಲ್ಪನೆಗಳು ಸ್ಪಷ್ಟವಾಗುವಲ್ಲಿ, ಆಂಗ್ಲ ಭಾಷಾ ತರಗತಿಗಳ ಅನುಕೂಲಿಸುವಿಕೆಯಲ್ಲಿ ತರಬೇತಿಯ ಅವಶ್ಯಕತೆ ಇದೆ.

**6. ಸರ್ವ ಶಿಕ್ಷಣ ಅಭಿಯಾನದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಡಯಟ್‌ನ ನೋಡಲ್ ಅಧಿಕಾರಿಗಳು ಮತ್ತು ಡಿವೈಪಿಸಿಗಳ ಸಭೆ/ಪರಸ್ಪರರ ನಡುವಿನ ಹೊಂದಾಣಿಕೆ ಉತ್ತಮವಾಗಿದೆ.**

- ಯಾವುದಾದರೂ ಸಮಸ್ಯೆಗಳಿದ್ದರೆ ನಮೂದಿಸಿ : ಇಲ್ಲ
- ಸರ್ವ ಶಿಕ್ಷಣ ಅಭಿಯಾನದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಗಳು/ಸಮಸ್ಯೆಗಳನ್ನು ನೋಡಲ್ ಅಧಿಕಾರಿಗಳು ಮತ್ತು ಡಿವೈಪಿಸಿಯವರು ಸಭೆಯಲ್ಲಿ ಚರ್ಚಿಸುವ ಮೂಲಕ ಅಥವ ದೂರವಾಣಿ ಕರೆಯ ಮೂಲಕ ಬಗೆಹರಿಸಿಕೊಳ್ಳುತ್ತಾರೆ.

**7. ಶೈಕ್ಷಣಿಕ ಗುಣಮಟ್ಟವನ್ನು ಅಭಿವೃದ್ಧಿಪಡಿಸಲು ಪ್ರಸಕ್ತ ವರ್ಷದಲ್ಲಿ ಡಯಟ್‌ನಿಂದ ಸಹಕಾರ ಪಡೆದು, ಅಭಿವೃದ್ಧಿಪಡಿಸುವ ಕ್ಷೇತ್ರಗಳು ಯಾವುವು?**

- ಹೊಸಪಠ್ಯ ಕ್ರಮದಲ್ಲಿ ಅಳವಡಿಸಲಾಗಿರುವ ರಚನಾ ತತ್ವದ ಅನುಷ್ಠಾನ.
- ಕ್ಲಸ್ಟರ್ ಹಂತದಿಂದ ಬ್ಲಾಕ್ ಹಂತದವರೆಗಿನ ಅನುಪಾಲನ ಅಧಿಕಾರಿಗಳಿಗೆ ನಿರಂತರ ಮಾರ್ಗದರ್ಶನ ನೀಡುವುದರ ಮೂಲಕ ಗುಣಮಟ್ಟ ಹೆಚ್ಚಿಸುವುದು.

**8. ಶಾಲೆಯ ಕಟ್ಟಡದಲ್ಲಿ ಮೂಲಭೂತವಾದ ಅವಶ್ಯಕತೆಗಳನ್ನು ನೀಡಲಾಗಿದೆಯೇ?**

a) ಸುರಕ್ಷಿತ ಕುಡಿಯುವ ನೀರಿನ ಸೌಲಭ್ಯ ಇಲ್ಲದಿರುವ ಶಾಲೆಗಳ ಸಂಖ್ಯೆ: ಇರುವುದಿಲ್ಲ

b) ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇಲ್ಲದಿರುವ ಶಾಲೆಗಳ ಸಂಖ್ಯೆ: ಇರುವುದಿಲ್ಲ

c) ಉತ್ತಮ ವಾತಾವರಣ ಮತ್ತು ತೊಡಕುಗಳಿಲ್ಲದಿರುವ ಶಾಲೆಗಳ ಸಂಖ್ಯೆ: ಇರುವುದಿಲ್ಲ

d) ಆಟದ ಮೈದಾನ ಇಲ್ಲದಿರುವ ಶಾಲೆಗಳ ಸಂಖ್ಯೆ: 1032

- ಸುರಕ್ಷಿತ ಕುಡಿಯುವ ನೀರಿನ ಸೌಲಭ್ಯ, ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಹಾಗು ಉತ್ತಮ ವಾತಾವರಣವನ್ನು ಜಿಲ್ಲೆಯ ಎಲ್ಲಾ ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವ್ಯವಸ್ಥೆಮಾಡಲಾಗಿದೆ. ಆದರೆ ಇದರ ಬಳಕೆ ಮತ್ತು ನಿರ್ವಹಣೆಯಲ್ಲಿ ಇನ್ನೂ ಸುಧಾರಣೆಯನ್ನು ಕಾಣಬೇಕಾಗಿದೆ.
- 1032 ಶಾಲೆಗಳಲ್ಲಿ ಆಟದ ಮೈದಾನದ ಕೊರತೆ ಇರುತ್ತದೆ. ಪ್ರಾಥಮಿಕ ಹಂತದಲ್ಲಿ ಮಕ್ಕಳಿಗೆ ಆತ್ಮಿಕವಾದದ್ದು ಆಟ. ಆಟದ ಮೈದಾನದ ಕೊರತೆ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ತೊಡಕುಂಟುಮಾಡುತ್ತಿದೆ.
  - ಕ್ಯುಎಂಟಿ ನಮೂನೆಗಳನ್ನು ಆಧಾರವಾಗಿಟ್ಟುಕೊಂಡು ಇನ್ನೂ ಹೆಚ್ಚಿನ ಸ್ವಾವಲೋಕನ ಮಾಡಿಕೊಳ್ಳುವ ಅಗತ್ಯತೆ ಇರುತ್ತದೆ,

# ವಿಶ್ಲೇಷಣೆಯ ಒಳನೋಟಗಳು:

**ಹಾಜರಾತಿಗೆ ಸಂಬಂಧಿಸಿದಂತೆ:**

- ಪಿರಿಯಾಪಟ್ಟಣ, ಟಿ ನರಸೀಪುರ ಮತ್ತು ಹುಣಸೂರು ತಾಲ್ಲೂಕಿನ ಶಾಲೆಗಳಲ್ಲಿ ಹಾಜರಾತಿಯು ಉತ್ತಮವಾಗಿದೆ.
- ಮೈಸೂರು ಉತ್ತರ ವಲಯವನ್ನು ಹೊರತುಪಡಿಸಿ ಉಳಿದ ಎಲ್ಲಾ ತಾಲ್ಲೂಕುಗಳ ಶಾಲೆಗಳಲ್ಲಿ ಮಕ್ಕಳ ಹಾಜರಾತಿಯು ಉತ್ತಮವಾಗಿದೆ
- 6ನೇ ತರಗತಿಯಲ್ಲಿ ಹೆಚ್ಚು ಗೈರುಹಾಜರಿ ಕಂಡು ಬರುತ್ತದೆ. 4ನೇ ತರಗತಿ ಹಾಜರಾತಿಯು ಉತ್ತಮವಾಗಿದೆ
- ಲಿಂಗವಾರು ಹಾಜರಾತಿಯನ್ನು ಗಮನಿಸಿದಾಗ 7ನೇ ತರಗತಿಯನ್ನು ಹೊರತುಪಡಿಸಿ ಉಳಿದ ತರಗತಿಗಳಲ್ಲಿ ಬಾಲಕರ ಹಾಜರಾತಿ ಬಾಲಕಿಯರ ಹಾಜರಾತಿ ಉತ್ತಮವಾಗಿರುತ್ತದೆ.

**ಸಿ.ಡಬ್ಲ್ಯೂ.ಎಸ್.ಎನ್ ಮತ್ತು ಒ.ಒ.ಎಸ್.ಸಿ ಮಕ್ಕಳ ದಾಖಲಾತಿ ಮತ್ತು ಹಾಜರಾತಿ:**

- ಮೈಸೂರು ಉತ್ತರ ವಲಯ ಅತ್ಯಂತ ಚಿಕ್ಕ ತಾಲ್ಲೂಕು ಆಗಿದ್ದರೂ ವಿಶೇಷ ಅಗತ್ಯವುಳ್ಳ ಮಕ್ಕಳ ಸಂಖ್ಯೆ ಹೆಚ್ಚಾಗಿರುತ್ತದೆ.
- ಒಳಗೊಳ್ಳುವಿಕೆಯ ಶಿಕ್ಷಣ ಆಶಯವು ಉತ್ತಮವಾಗಿ ಅನುಷ್ಠಾನವಾಗುತ್ತಿದೆ. ಆದರೆ ಇದರ ಸೂಕ್ಷ್ಮಾತಿಸೂಕ್ಷ್ಮ ಅಂಶಗಳ ಬಗ್ಗೆ ಕೆಲವು ಶಿಕ್ಷಕರಿಗೆ ಇನ್ನು ಉನ್ನತ ಹಂತದ ಅರಿವನ್ನು ಮೂಡಿಸುವ ಅಗತ್ಯತೆ ಇದೆ.
- ಸಿ.ಡಬ್ಲ್ಯೂ.ಎಸ್.ಎನ್ ಮತ್ತು ಒ.ಒ.ಎಸ್.ಸಿ ಮಕ್ಕಳ ದಾಖಲಾತಿ ಮತ್ತು ಹಾಜರಾತಿಯನ್ನು ಉತ್ತಮಪಡಿಸಲು ಸಾಕಷ್ಟು ಚಟುವಟಿಕೆ ಮತ್ತು ಪ್ರಯತ್ನಗಳನ್ನು ನಡೆಸಲಾಗಿದೆ. ಮಕ್ಕಳ ದಾಖಲಾತಿ ಮತ್ತು ಹಾಜರಾತಿಯಲ್ಲಿ ಸುಧಾರಣೆಯಾಗಿದೆ.
- ಇನ್ನೂ ದಾಖಲಾಗದೆ ಉಳಿದಿರುವ ಶಾಲೆಯಿಂದ ಹೊರಗುಳಿದ ಮಕ್ಕಳ ಜಾಡು ಹಿಡಿದು ಅವರನ್ನು ಮುಖ್ಯವಾಹಿನಿಗೆ ತರುವಲ್ಲಿ ಇಲಾಖೆಯ ಎಲ್ಲರು ಮತ್ತು ಸಮುದಾಯದವರು ಹೆಚ್ಚಿನ ಪ್ರಯತ್ನವನ್ನು ಮಾಡಬೇಕಾಗಿದೆ.

**ಎಸ್‌ಡಿಎಂಸಿ ಭಾಗವಹಿಸುವಿಕೆ:**

- ಎಸ್‌ಡಿಎಂಸಿ ಭಾಗವಹಿಸುವಿಕೆಯಲ್ಲಿ ಸುಧಾರಣೆ ಕಂಡು ಬಂದಿದೆ. ಎಸ್‌ಡಿಪಿ ರಚನೆಯಲ್ಲೂ ಅವರ ಭಾಗವಹಿಸುವಿಕೆ ಉತ್ತಮವಾಗಿದೆ. ಆದರೆ ಶಾಲೆಗಳ ಎಸ್‌ಎಇಪಿ ರಚನೆಯಲ್ಲಿ ಎಸ್‌ಡಿಎಂಸಿ ಭಾಗವಹಿಸುವಿಕೆಯ/ತೊಡಗಿಸಿಕೊಳ್ಳುವಿಕೆಯ ಅಗತ್ಯತೆಯನ್ನು ಸದಸ್ಯರಲ್ಲಿ ಮನಗಾಣಿಸಬೇಕಾಗಿದೆ.
- ಸಮುದಾಯವನ್ನು ಸುಶಿಕ್ಷಿತರನ್ನಾಗಿ ಮಾಡುವ ಜವಾಬ್ದಾರಿ ತಮ್ಮದು ಎಂಬ ಧೋರಣೆ ಬೆಳೆಸುವತ್ತ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರಲ್ಲಿ ಇನ್ನೂ ಹೆಚ್ಚಿನ ಅರಿವನ್ನುಂಟುಮಾಡಬೇಕಾಗಿದೆ.

**ಕಲಿಕೆಗೆ ಸಂಬಂಧಿಸಿದಂತೆ:**

- ಶೇ.75 ರಿಂದಶೇ. 80 ರಷ್ಟು ಮಕ್ಕಳು ಶೇ.50 ಕ್ಕಿಂತ ಹೆಚ್ಚು ಸಾಧನೆ ಮಾಡಿರುವುದನ್ನು ಕಾಣಬಹುದಾಗಿದೆ (ಲಿಂಗವಾರು). ಕಲಿಕೆ ಸಾಧಾರಣವಾಗಿದೆ ಎಂದು ಹೇಳಬಹುದು.
- 1 ರಿಂದ 3ನೇ ತರಗತಿಗಳಲ್ಲಿ ಭಾಷೆ ಮತ್ತು ಪರಿಸರ ಅಧ್ಯಯನ ಕಲಿಕೆ ಉತ್ತಮವಾಗಿದೆ.
- ಸರಾಸರಿ ಶೇ 4 ರಿಂದ 7ರ ವರೆಗೆ ಒಂದರಿಂದ ಎಂಟನೆ ತರಗತಿವರೆಗೆ ಮಕ್ಕಳು ಸಿ ಗ್ರೇಡ್‌ನಲ್ಲಿರುತ್ತಾರೆ.
- 6, 7 ಮತ್ತು 8ನೇ ತರಗತಿಗಳಲ್ಲಿ ಹಿಂದಿ ವಿಷಯ ಬೋಧನೆ ಮಾಡಲು ಹಿಂದಿ ಶಿಕ್ಷಕರಿಲ್ಲದಿರುವ ಕಾರಣ ಸರಾಸರಿ ಶೇ 30% ಮಕ್ಕಳು ಸಿ ಗ್ರೇಡ್‌ನಲ್ಲಿರುತ್ತಾರೆ.

- ಒಂದೊಂದು ವಿಷಯಗಳಲ್ಲಿ ಬಾಲಕರು ಮತ್ತು ಕೆಲವೊಂದು ವಿಷಯಗಳಲ್ಲಿ ಬಾಲಕಿಯರು ಮೇಲುಗೈಯನ್ನು ಸಾಧಿಸಿರುತ್ತಾರೆ.
- ಶಿಕ್ಷಕರು ಮಗುವಾರು ಯೋಜನೆ ತಯಾರಿಸಿ, ತರಗತಿ ಪ್ರಕ್ರಿಯೆಯನ್ನು ರೂಪಿಸಿ ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸಬೇಕಾಗಿದೆ.

**ತರಬೇತಿ ಮತ್ತು ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ:**

- ಶಿಕ್ಷಕರ ಅಗತ್ಯಕ್ಕನುಗುಣವಾದ ತರಬೇತಿಗಳ ಲಭ್ಯತೆ ಕಡಿಮೆ ಇದೆ.
- ತರಗತಿಯಲ್ಲಿ ತರಬೇತಿಗಳ ಅನುಷ್ಠಾನ ಸಾಧಾರಣವಾಗಿದೆ.
- ರಚನಾವಾದದ ಕುರಿತು ಮತ್ತು ಅದನ್ನು ಪಠ್ಯಕ್ಕೆ ಅಳವಡಿಸುವ ಕುರಿತು ಹೆಚ್ಚಿನ ತರಬೇತಿಯ ಅಗತ್ಯವಿದೆ. ರಚನಾವಾದಕ್ಕೆ, ಅದರ ಕುರಿತ ತರಬೇತಿಗೆ ಮತ್ತು ಅದರ ಅನುಷ್ಠಾನಕ್ಕೆ ಹೆಚ್ಚಿನ ಒತ್ತನ್ನು ನೀಡಿದಲ್ಲಿ ಸಿಸಿಇ ತನ್ನಿಂತಾನೆ ಅರ್ಥಪೂರ್ಣವಾಗಿ ನಡೆಯುತ್ತದೆ.

**ಸಿಆರ್‌ಪಿ, ಬಿಆರ್‌ಪಿ ಮತ್ತು ಮುಖ್ಯ ಶಿಕ್ಷಕರು ಅನುಪಾಲನೆ ಮಾಡುವ ಬಗ್ಗೆ:**

- ಸಿ.ಆರ್.ಪಿ ಗಳ ಹುದ್ದೆ ಭರ್ತಿಯಾಗಿದ್ದರೂ ಸಿಆರ್‌ಪಿಗಳಿಗೆ ಬುನಾದಿ ತರಬೇತಿ ಆಗಿರುವುದಿಲ್ಲ. ಶೈಕ್ಷಣಿಕ ಮಾರ್ಗದರ್ಶಕರಾಗಿ ಕಾರ್ಯ ನಿರ್ವಹಿಸಲು ತರಬೇತಿ ಅಗತ್ಯವಿದೆ.
- ಬ್ಲಾಕ್ ಹಂತದಲ್ಲಿ ಅನುಪಾಲನಾಧಿಕಾರಿಗಳಿಗೆ ನಿರೀಕ್ಷಿತ ಮಟ್ಟದಲ್ಲಿ ಶೈಕ್ಷಣಿಕ ಮಾರ್ಗದರ್ಶನ ನೀಡಲು ಸಾಧ್ಯವಾಗುತ್ತಿಲ್ಲ. ಶಾಲಾ ಭೇಟಿ ಹಾಗೂ ಶಾಲಾ ಹಂತದ ಶೈಕ್ಷಣಿಕ ಮಾರ್ಗದರ್ಶನ ನೀಡಲು ಅನುಪಾಲಕರಿಗೆ ಹೆಚ್ಚಿನ ಅವಕಾಶಗಳನ್ನು ಒದಗಿಸಬೇಕಾಗಿದೆ.
- ತರಗತಿ ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿ ವೀಕ್ಷಣೆ ಮಾಡಿ ಸಿಸಿಇಯ ಮುಖ್ಯ ಭಾಗವಾಗಿರುವ ರೂಪಣಾತ್ಮಕ ಮೌಲ್ಯಮಾಪನದ ಬಗ್ಗೆ ಶಿಕ್ಷಕರಿಗೆ ಮಾರ್ಗದರ್ಶನ ನೀಡುವಲ್ಲಿ ಕೆಲವು ಅನುಪಾಲನಾಧಿಕಾರಿಗಳು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

**ಕ್ಯೂಎಂಟಿ ಯನ್ನು ಸ್ವಾವಲೋಕನದ ಸಾಧನವಾಗಿ ಬಳಸುವ ಬಗ್ಗೆ:**

- ಕ್ಯೂಎಂಟಿ ನಮೂನೆ ಬಳಕೆಯಲ್ಲಿ ಸ್ವಾವಲೋಕನಕ್ಕಿಂತಲೂ ಮಾಹಿತಿ ತುಂಬುವತ್ತ ಎಲ್ಲರು ಹೆಚ್ಚು ಗಮನ ಹರಿಸುತ್ತಾರೆ.
- ಇಲಾಖೆಯ ಶಿಕ್ಷಕರು ಮತ್ತು ಅನುಪಾಲನಾಧಿಕಾರಿಗಳಲ್ಲಿ ಸ್ವಾವಲೋಕನದ ಅಭ್ಯಾಸಗಳು ಕಡಿಮೆ ಇರುತ್ತದೆ. ಸ್ವಾವಲೋಕನ ಮಾಡುವುದರ ಮೂಲಕ ಹೇಗೆ ತಮ್ಮನ್ನು ವ್ಯವಸ್ಥೆಯ ಸುಧಾರಣೆಗೆ ಹೊಂದಿಸಿಕೊಳ್ಳಬೇಕು ಎನ್ನುವ ಬಗ್ಗೆ ಕಡಿಮೆ ಸ್ಪಷ್ಟತೆ ಇರುವುದನ್ನು ಗಮನಿಸಲಾಗಿದೆ.
- ಕ್ಯೂಎಂಟಿ ಸಾಧನ ಮತ್ತು ಇವುಗಳ ಬಳಕೆಯಲ್ಲಿ ಸಾಕಷ್ಟು ಸುಧಾರಣೆಗಳಾಗಬೇಕಾಗಿದೆ.

# ಅಧ್ಯಯನದ ಶೈಕ್ಷಣಿಕ ನಿಹಿತಾರ್ಥಗಳು:

- ಸಿಆರ್‌ಪಿಗಳಿಗೆ ಬುನಾದಿ ತರಬೇತಿ ನೀಡಿ ಶೈಕ್ಷಣಿಕ ಮಾರ್ಗದರ್ಶಕರಾಗಿ ಕಾರ್ಯ ನಿರ್ವಹಿಸಲು ಸಮರ್ಥರಾಗುವಂತೆ ತರಬೇತಿಯನ್ನು ಆಯೋಜಿಸುವುದು.
- ಶಾಲಾ ಭೇಟಿ, ತರಗತಿ ವೀಕ್ಷಣೆ ಮತ್ತು ಶೈಕ್ಷಣಿಕ ಮಾರ್ಗದರ್ಶನಕ್ಕೆ ಮೊದಲ ಆದ್ಯತೆ ಮತ್ತು ಶೈಕ್ಷಣಿಕ ಮಾರ್ಗದರ್ಶನ ನೀಡುವಂತೆ ಬಲವರ್ಧನೆ ಮಾಡುವುದು.
- ಮೈಸೂರು ಉತ್ತರ ವಲಯದ ಶಾಲೆಗಳಲ್ಲಿ ಮಕ್ಕಳ ಹಾಜರಾತಿಯನ್ನು ಉತ್ತಮಪಡಿಸಲು ಶಿಕ್ಷಕರು, ಅಧಿಕಾರಿಗಳು ಮತ್ತು ಸಮುದಾಯದವರು ಶ್ರಮವಹಿಸುವಂತೆ ಕ್ರಮಕೈಗೊಳ್ಳುವುದು.
- 6ನೇ ತರಗತಿಯ ಮಕ್ಕಳ ಹಾಜರಿಯನ್ನು ಹೆಚ್ಚಿಸಲು ಶಾಲೆಗಳಲ್ಲಿ ಜಾಗೃತಿ ಮತ್ತು ಉತ್ತಮ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು..
- ಒಳಗೊಳ್ಳುವಿಕೆಯ ಶಿಕ್ಷಣದ ಸೂಕ್ಷ್ಮಾತಿಸೂಕ್ಷ್ಮ ಆಶಯಗಳ ಬಗ್ಗೆ ಶಿಕ್ಷಕರಿಗೆ ಇನ್ನು ಉನ್ನತ ಹಂತದ ಅರಿವನ್ನು ಮೂಡಿಸುವಂತೆ ಕ್ರಮಕೈಗೊಳ್ಳುವುದು.
- ಇನ್ನೂ ದಾಖಲಾಗದೆ ಉಳಿದಿರುವ ಶಾಲೆಯಿಂದ ಹೊರಗುಳಿದ ಮಕ್ಕಳ ಜಾಡು ಹಿಡಿದು ಅವರನ್ನು ಮುಖ್ಯವಾಹಿನಿಗೆ ತರುವಲ್ಲಿ ಇಲಾಖೆಯ ಎಲ್ಲರು ಮತ್ತು ಸಮುದಾಯದವರು ಹೆಚ್ಚಿನ ಪ್ರಯತ್ನವನ್ನು ಮಾಡುವುದು.
- ಶಾಲೆಗಳ ಎಸ್‌ಡಿಪಿ ರಚನೆಯಲ್ಲಿ ಎಸ್‌ಡಿಎಂಸಿ ಭಾಗವಹಿಸುವಿಕೆಯ/ತೊಡಗಿಸಿಕೊಳ್ಳುವಿಕೆಯ ಅಗತ್ಯತೆಯನ್ನು ಸದಸ್ಯರಲ್ಲಿ ಮನಗಾಣಿಸುವುದು.
- ಸಮುದಾಯವನ್ನು ಸುಶಿಕ್ಷಿತರನ್ನಾಗಿ ಮಾಡುವ ಜವಾಬ್ದಾರಿ ತಮ್ಮದು ಎಂಬ ಧೋರಣೆ ಬೆಳೆಸುವತ್ತ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರಲ್ಲಿ ಇನ್ನೂ ಹೆಚ್ಚಿನ ಅರಿವನ್ನುಂಟುಮಾಡಬೇಕಾಗಿದೆ.
- ಕಲಕೆಯ ಗುಣಾತ್ಮಕತೆಯನ್ನು ಹೆಚ್ಚುಸುವತ್ತ ಗಮನವನ್ನು ಕೇಂದ್ರೀಕರಿಸಬೇಕಾಗಿದೆ.
- ಸಿ ಗ್ರೇಡ್‌ನಲ್ಲಿರುವ ಮಕ್ಕಳ ಕಲಿಕೆಯಲ್ಲಿ ಸುಧಾರಣೆ ಮಾಡಬೇಕಾದರೆ ಶಿಕ್ಷಕರು ಮಗುವಾರು ಯೋಜನೆ ತಯಾರಿಸಿ, ತರಗತಿ ಪ್ರಕ್ರಿಯೆಯನ್ನು ರೂಪಿಸಿ ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸಬೇಕಾಗಿದೆ.
- 6, 7 ಮತ್ತು 8ನೇ ತರಗತಿಗಳಲ್ಲಿ ಹಿಂದಿ ವಿಷಯ ಬೋಧನೆ ಮಾಡಲು ಹಿಂದಿ ಶಿಕ್ಷಕರ ನೇಮಕ ಅಥವಾ ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕಾಗಿದೆ.
- ಶಿಕ್ಷಕರ ಅಗತ್ಯಕ್ಕನುಗುಣವಾದ ತರಬೇತಿಗಳನು ಆಯೋಜಿಸಬೇಕಾಗಿದೆ.
- ತರಗತಿಯಲ್ಲಿ ತರಬೇತಿಗಳ ಅನುಷ್ಠಾನ ಪರಿಣಾಮಕಾರಿಯಾಗುವಂತೆ ಅನುಪಾಲನೆಯನ್ನು ಬಲಗೊಳಿಸಬೇಕಾಗಿದೆ.
- ಶಿಕ್ಷಕರ ತರಬೇತಿಯ ರೂಪುರೇಷೆಗಳಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗಿದೆ. ಸಂಪನ್ಮೂಲ ವ್ಯಕ್ತಿಗಳು ತರಬೇತಿಯನ್ನು ನೀಡುವ ಬದಲಾಗಿ ಹೆಚ್ಚು ಹೆಚ್ಚು ಓದುವ ಸಾಹಿತ್ಯಗಳನ್ನು ಒದಗಿಸುವುದು, ಅಧ್ಯಯನಶೀಲತೆಯನ್ನು ಕಡ್ಡಾಯವಾಗಿಸುವುದು, ಚರ್ಚಿಸುವುದು, ಹೊಸ ಟ್ರೆಂಡ್‌ಗಳ ಬಗ್ಗೆ ಯಶೋಗಾಥೆಗಳನ್ನು ಓದುವ, ವೀಡಿಯೋ ಕ್ಲಿಪ್ಪಿಂಗ್ ವೀಕ್ಷಣೆ ಮಾಡುವ ಮೂಲಕ ತಮ್ಮ ಜ್ಞಾನದ ರಚನೆಯನ್ನು ತಾವೇ ರಚಿಸಿಕೊಳ್ಳುವ ಅವಕಾಶಗಳನ್ನು ತರಬೇತಿಯಲ್ಲಿ ನೀಡಬೇಕಾಗಿದೆ.
- ಬದಲಾಗುತ್ತಿರುವ ವಿದ್ಯಾಮಾನಗಳಿಗನುಗುಣವಾಗಿ ಶಿಕ್ಷಕರು ಮತ್ತು ಇಲಾಖೆಯ ಎಲ್ಲರೂ ತಮ್ಮನ್ನು ವ್ಯವಸ್ಥೆಗೆ ಸಮರ್ಥಗೊಳಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವಂತೆ ಮಾಡಬೇಕಾಗಿದೆ
- ಶಾಲೆಗಳ ಮುಖ್ಯ ಶಿಕ್ಷಕರಲ್ಲಿ ಎಸ್‌ಎಂಎಫ್ ನಮೂನೆಗಳು ಶಾಲೆಯ ಗುಣಮಟ್ಟವನ್ನು ಪ್ರತಿನಿಧಿಸುವ ಸಾಧನಗಳು ಎಂಬ ಬಗ್ಗೆ ಹೆಚ್ಚು ಸ್ಪಷ್ಟತೆಯನ್ನು ಮೂಡಿಸಬೇಕಾಗಿದೆ.
- ಶಾಲಾ ಹಂತದಿಂದ ಜಿಲ್ಲಾ ಹಂತದವರೆಗೆ ಈ ನಮೂನೆಗಳನ್ನು ಭರ್ತಿಗೊಳಿಸುವಾಗ ವಾಸ್ತವವನ್ನು ನಿಖರವಾಗಿ ಅರ್ಥೈಸುವಂತೆ ಮಾರ್ಗದರ್ಶನ ನೀಡಬೇಕಾಗಿದೆ.
- ಡೈಸ್ ರೀತಿಯಲ್ಲಿ ಕ್ಯೂಎಂಟಿ ಸಾಧನ ಮತ್ತು ಇವುಗಳ ಬಳಕೆಯಲ್ಲಿ ಸಾಕಷ್ಟು ಸುಧಾರಣೆಗಳಾಗಬೇಕಾಗಿದೆ.

# ಅಧ್ಯಾಯ–3

# ಟೆಂಪ್ಲೇಟ್ಸ್‌ಗಳ ಆಧಾರದಲ್ಲಿ ವಿಶ್ಲೇಷಣೆ

# ಭಾಗ ಎ

## ಸಾಮಾನ್ಯ ಮಾಹಿತಿ

**ಕೋಷ್ಟಕ–30**

| ಕ್ರ. ಸಂ | ಬ್ಲಾಕ್‌ಗಳು | ಜಿಲ್ಲೆಯಲ್ಲಿರುವ ಒಟ್ಟು ಸಿ.ಆರ್.ಸಿ. ಕೇಂದ್ರಗಳ ಸಂಖ್ಯೆ | ಜಿಲ್ಲೆಯಲ್ಲಿರುವ ಒಟ್ಟು ಬಿ.ಆರ್.ಸಿ. ಕೇಂದ್ರಗಳ ಸಂಖ್ಯೆ | ಜಿಲ್ಲೆಯಲ್ಲಿರುವ ಒಟ್ಟು ಸರ್ಕಾರಿ ಶಾಲೆಗಳ ಸಂಖ್ಯೆ | | | | | | | ಕಿರಿಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ | | | ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | | | | | | | | | ಹಾಲಿ ಕರ್ತವ್ಯ ನಿರ್ವಹಿಸುತ್ತಿರುವವರು | | ಬೇಕಾದ | ಹಾಲಿ ಕರ್ತವ್ಯ ನಿರ್ವಹಿಸುತ್ತಿರುವವರು | | | | | | | | | | | ಆರ್.ಟಿ.ಇ. ಪ್ರಕಾರ ಬೇಕಾದ ಹುದ್ದೆಗಳು | | | | |
| | | | | | | | | | | | | | | ಖಾಯಂ | | | | | | ಅರೆಕಾಲಿಕ | | | | | ಖಾಯಂ | | | | |
| | | | | 1 ರಿಂದ 5 | 6 ರಿಂದ 8 | 1 ರಿಂದ 8 | 1 ರಿಂದ 7 | 6 ಮತ್ತು 7 | ಇತರೆ | ಒಟ್ಟು | ಖಾಯಂ | ಅರೆಕಾಲಿಕ | ಖಾಯಂ | ಭಾಷೆ | ವಿಜ್ಞಾನ | ಗಣಿತ | ಸಮಾಜ | ಇತರೆ | ಒಟ್ಟು | ಭಾಷೆ | ವಿಜ್ಞಾನ | ಗಣಿತ | ಸಮಾಜ | ಇತರೆ | ಭಾಷೆ | ವಿಜ್ಞಾನ | ಗಣಿತ | ಸಮಾಜ | ಇತರೆ |
| 1 | ಹೆಚ್.ಡಿ.ಕೆ ೋಟೆ | 176 | 9 | 171 | 0 | 40 | 94 | 0 | 1 | 306 | 322 | 0 | 27 | 344 | 113 | 0 | 0 | 191 | 648 | 0 | 0 | 0 | 0 | 0 | 154 | 11 | 135 | 0 | 0 |
| 2 | ಹುಣಸೂರು | | | 158 | 2 | 36 | 89 | 0 | 0 | 285 | 355 | 0 | 20 | 300 | 43 | 88 | 179 | 98 | 708 | 0 | 0 | 0 | 0 | 0 | 10 | 10 | 10 | 10 | |
| 3 | ಕೆ.ಆರ್.ನಗರ | | | 115 | 2 | 22 | 78 | 0 | 3 | 220 | 286 | 0 | 434 | 523 | 6 | 0 | 0 | 42 | 571 | 0 | 0 | 0 | 0 | 0 | 0 | 0 | 0 | 0 | 0 |
| 4 | ಮೈ.ಉತ್ತರ | | | 14 | 0 | 11 | 44 | 0 | 0 | 69 | 94 | 0 | 211 | 145 | 4 | 2 | 0 | 281 | 432 | 0 | 0 | 0 | 0 | 0 | 50 | 50 | 46 | 46 | 46 |
| 5 | ಮೈ.ದಕ್ಷಿಣ | | | 6 | 0 | 1 | 27 | 0 | 0 | 34 | 17 | 0 | 0 | 2 | 2 | 0 | 0 | 142 | 146 | 0 | 0 | 0 | 0 | 0 | 0 | 0 | 0 | 0 | 0 |
| 6 | ಮೈ.ಗ್ರಾವಾಂತರ | | | 95 | 0 | 37 | 84 | 0 | 1 | 217 | 238 | 0 | 378 | 567 | 51 | 22 | 147 | 38 | 825 | 3 | 0 | 0 | 0 | 0 | 58 | 31 | 28 | 26 | 28 |
| 7 | ನಂಜನಗೂಡು | | | 111 | 0 | 58 | 97 | 0 | 0 | 266 | 257 | 0 | 35 | 356 | 127 | 144 | 143 | 159 | 929 | 0 | 0 | 0 | 0 | 0 | 0 | 0 | 0 | 0 | 0 |
| 8 | ತಿ.ನರಸೀಪುರ | | | 113 | 1 | 42 | 72 | 0 | 1 | 229 | 272 | 0 | 85 | 28 | 17 | 27 | 63 | 486 | 621 | 0 | 0 | 0 | 0 | 0 | 84 | 95 | 85 | 0 | 0 |
| 9 | ಪಿರಿಯಾಪಟ್ಟಣ | | | 170 | 1 | 27 | 87 | 0 | 0 | 285 | 352 | 0 | 814 | 352 | 65 | 34 | 79 | 20 | 550 | 0 | 0 | 0 | 0 | 0 | 0 | 0 | 0 | 0 | 0 |
| | | | | 953 | 6 | 274 | 672 | 0 | 6 | 1911 | 2193 | 0 | 2004 | 2617 | 428 | 317 | 611 | 1457 | 5430 | 3 | 0 | 0 | 0 | 0 | 356 | 197 | 304 | 82 | 74 |

1. **ಜಿಲ್ಲಾ ಹಂತದಲ್ಲಿ ಕಾರ್ಯ ನಿರ್ವ ಹಿಸುತ್ತಿರುವ ಕ್ಷೇತ್ರ ಸಮನ್ವಯಾಧಿಕಾರಿ ಹುದ್ದೆಗಳು ಎಷ್ಟು ಭರ್ತಿಯಾಗಿರುತ್ತದೆ. ಕಾರ್ಯ ನಿರ್ವಹಿಸುತಿರುವ ಬಿ.ಆರ್.ಸಿಗಳು ಎಷ್ಟು ?**

**ಜಿಲ್ಲೆಯಲ್ಲಿರುವ ಒಟ್ಟು ಬಿ.ಆರ್.ಸಿ.ಗಳ ಸಂಖ್ಯೆ: 9**

- ಬಿ.ಎಂ.ಎಫ್ ನಮೂನೆಗಳನ್ನು ಭರ್ತಿ ಮಾಡಿ ಸಲ್ಲಿಸಿರುವ ಬಿ.ಆರ್.ಸಿ.ಗಳ ಸಂಖ್ಯೆ: 9
- ಮೈಸೂರು ಜಿಲ್ಲೆಯ ಒಟ್ಟು 9 ಶೈಕ್ಷಣಿಕಬ್ಲಾಕ್‌ಗಳಲ್ಲಿ ಒಟ್ಟು 8 ವಲಯಗಳಲ್ಲಿ ಬಿಆರ್‌ಸಿ ಹುದ್ದೆಗಳು ಭರ್ತಿಯಾಗಿದ್ದು ಒಟ್ಟು 8 ಬಿಆರ್‌ಸಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.
- ಮೈಸೂರು ದಕ್ಷಿಣ ವಲಯದಲ್ಲಿ ಬಿಆರ್‌ಸಿ ಹುದ್ದೆ ಭರ್ತಿಯಾಗಿಲ್ಲ, ಆದರೆಬಿಆರ್‌ಪಿಯವರುಪ್ರಭಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಈ ಹುದ್ದೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಆದರೆ ಬಿಆರ್‌ಸಿ ಹುದ್ದೆ ಭರ್ತಿಯಾದಲ್ಲಿ ಕಾರ್ಯವನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಬಹುದಾಗಿದೆ.

- ಮೈಸೂರು ಜಿಲ್ಲೆಯ ಒಟ್ಟು 9 ಶೈಕ್ಷಣಿಕ ಬ್ಲಾಕ್‌ಗಳಲ್ಲಿ ಒಟ್ಟು 8 ವಲಯಗಳಲ್ಲಿ ಬಿಆರ್‌ಸಿ ಹುದ್ದೆಗಳು ಭರ್ತಿಯಾಗಿದ್ದು ಒಟ್ಟು 8 ಬಿಆರ್‌ಸಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.
- ಹೆಚ್ಚಿನ ಗೆಜೆಟೆಡ್ ಪ್ರೊಬೇಷನರಿ ಬಿ.ಆರ್‌ಸಿಗಳು ಕಾರ್ಯನಿರ್ವಹಿಸುತ್ತಿರುವ ಕ್ಷೇತ್ರಗಳಲ್ಲಿ ಎಸ್.ಎಸ್.ಎ ಕಾರ್ಯಕ್ರಮಗಳ ಅನುಷ್ಠಾನವು ತ್ವರಿತವಾಗಿ ಮತ್ತು ವ್ಯವಸ್ಥಿತವಾಗಿ ನೆರವೇರಿಸುತ್ತಿರುವುದು ಕಂಡು ಬಂದಿದೆ. ಕೆಲವು ಕಡೆ ಗಜೆಟೆಡ್ ಪ್ರೋಬೇಷನರಿ ಬಿಆರ್‌ಸಿಗಳಿರುವಲ್ಲಿಯೂ ಕಾರ್ಯನಿರ್ವಹಣೆ ತ್ವರಿತವಾಗಿ ನಡೆಯುವುದಿಲ್ಲ.
- ಮೈಸೂರು ದಕ್ಷಿಣ ವಲಯದಲ್ಲಿ ಹುದ್ದೆ ಮಂಜೂರಾಗಿಲ್ಲ, ಆದರೆ ಬಿಆರ್‌ಪಿಯವರು ಪ್ರಭಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಬಿಆರ್‌ಪಿಯಾಗಿದ್ದರೂ ಹುದ್ದೆಯ ಜವಾಬ್ದಾರಿಯನ್ನು ಉತ್ತಮವಾಗಿ ನಿರ್ವಹಿಸುತ್ತಿದ್ದಾರೆ.
- ಎಸ್‌ಎಸ್‌ಎ ಕಾರ್ಯಕ್ರಮಗಳು ಉತ್ತಮವಾಗಿ ನೆರವೇರುವಂತೆ ಡಯಟ್ ವತಿಯಿಂದ ಮಾರ್ಗದರ್ಶನ ನೀಡಿ ಉತ್ತೇಜಿಸಲಾಗುತ್ತಿದೆ ಹಾಗೂ ನಿರೀಕ್ಷಿತ ಮಟ್ಟದ ಕಾರ್ಯವನ್ನು ಪಡೆಯಲಾಗುತ್ತಿದೆ.

## 2. ಬಿಆರ್ ಸಿ ಕಾರ್ಯ ನಿರ್ವಹಿಸುತ್ತಿರುವ ಕ್ಷೇತ್ರಗಳಲ್ಲಿ ಸರ್ವ ಶಿಕ್ಷಣ ಅಭಿಯಾನದ ಕಾರ್ಯಕ್ರಮಗಳ ಅನುಷ್ಠಾನ:

- ಬಿಆರ್.ಸಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಕ್ಷೇತ್ರಗಳಲ್ಲಿ ಸರ್ವ ಶಿಕ್ಷಣ ಅಭಿಯಾನದ ಕಾರ್ಯಕ್ರಮಗಳು ಉತ್ತಮವಾಗಿ ಅನುಷ್ಠಾನಗೊಂಡಿದೆ.
- ಕ್ಷೇತ್ರ ಸಮನ್ವಯಾಧಿಕಾರಿಗಳು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮಾರ್ಗದರ್ಶನದಲ್ಲಿ ಬ್ಲಾಕ್ ಹಂತದಲ್ಲಿ ಸರ್ವಶಿಕ್ಷಣ ಅಭಿಯಾನದ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಮತ್ತು ಅನುಷ್ಠಾನಕ್ಕೆ ತರಲು ಸೂಕ್ತ ಕ್ರಮಗಳನ್ನು ತೆಗೆದುಕೊಂಡಿರುತ್ತಾರೆ.
- ತರಬೇತಿಗೆ ಸಂಬಂಧಿಸಿದಂತೆ ಕ್ರಿಯಾ ಯೋಜನೆ, ಕ್ಲಸ್ಟರ್‌ವಾರು ಸಮಾಲೋಚನಾ ಸಭೆಯ ವರದಿ ಹಾಗೂ ತರಬೇತಿ ಪ್ರಗತಿಯನ್ನು ಸಕಾಲದಲ್ಲಿ ಉತ್ತಮವಾಗಿ ಒದಗಿಸುತ್ತಿದ್ದಾರೆ.
- ತರಬೇತಿಗಳನ್ನು ಉತ್ತಮ ಪೂರ್ವಸಿದ್ಧತೆಯೊಂದಿಗೆ ನಿರ್ವಹಿಸುತ್ತಿದ್ದಾರೆ.
- ಪ್ರತಿ ತಾಲ್ಲೂಕಿನಲ್ಲಿ ತರಬೇತಿ ಮಾನವ ದಿನಗಳ ಸಾಧನೆಯು ಸರಾಸರಿ 1 ದಿನಗಳಷ್ಟು ಆಗಿದೆ.
- ಸಮಾಲೋಚನಾ ಸಭೆಗಳಲ್ಲಿ ವಿಷಯವಾರು ಶಿಕ್ಷಕರು ಗುಂಪುಗಳಲ್ಲಿ ಕುಳಿತು ಒಂದು ತಿಂಗಳಿಗೆ ಅಗತ್ಯವಿರುವ ಪಾಠಯೋಜನೆ, ಪರಿಕಲ್ಪನೆಗಳಿಗೆ ಪೂರಕವಾದ ಚಟುವಟಿಕೆ, ರೂಪಣಾತ್ಮಕ ಮೌಲ್ಯಮಾಪನ ಮಾಡಬೇಕಾದ ವಿಧಾನಗಳ ಬಗ್ಗೆ ಅರ್ಥಪೂರ್ಣವಾಗಿ ಚರ್ಚಿಸಲು ಅವಕಾಶ ಕಲ್ಪಿಸಲಾಗಿದೆ.
- ಸಮಾಲೋಚನಾ ಸಭೆಯ ಮಾನವ ದಿನಗಳು ಸರಾಸರಿ 2 ಆಗಿರುತ್ತದೆ.
- ಶಾಲೆ ಬಿಟ್ಟ ಮಕ್ಕಳ ಜಾಡು ಹಿಡಿದು ಶಾಲೆಗೆ ದಾಖಲಿಸಲಾಗುತ್ತಿದೆ. ವಿಶೇಷ ದಾಖಲಾತಿ ಆಂದೋಲನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಓಓಎಸ್‌ಸಿ ಕೇಂದ್ರಗಳಲ್ಲಿ ಶಾಲಾಧಾರಿತ ತರಬೇತಿ (ಎಸ್.ಬಿ.ಟಿ) ಕಲಿಕಾ ಅಂತರವನ್ನು ಕಡಿಮೆಗೊಳಿಸಿ ಮುಖ್ಯ ವಾಹಿನಿಗೆ ತರಲಾಗುತ್ತಿದೆ. ಶಾಲಾ ಅನುದಾನವನ್ನು ಎಲ್ಲಾ ಶಾಲೆಗಳಿಗೂ ನೀಡಿದ್ದು ಅದರ ಸದ್ಬಳಕೆಯತ್ತ ಗಮನ ಹರಿಸಲಾಗಿದೆ.
- ಸಿ.ಡಬ್ಲ್ಯೂ.ಎಸ್.ಎನ್ ಮಕ್ಕಳಿಗೆ ಸಮನ್ವಯ ಶಿಕ್ಷಣ ನೀಡಲಾಗುತ್ತಿದ್ದು ಆ ಮಕ್ಕಳಿಗೆ ಮೆಡಿಕಲ್ ಕ್ಯಾಂಪ್ ನಡೆಸಿ ಸಾಧನ ಸಲಕರಣೆಗಳನ್ನು ನೀಡಲಾಗಿದೆ. ಗೃಹಾಧಾರಿತ ಶಿಕ್ಷಣವನ್ನು ನೀಡಲಾಗುತ್ತಿದೆ. ಚಿಣ್ಣರ ದರ್ಶನ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ.

### 3. ಬಿಆರ್‌ಸಿಗಳು ಹುದ್ದೆಗಳು ಭರ್ತಿಯಾಗದ ಕ್ಷೇತ್ರಗಳಲ್ಲಿ ಎಸ್.ಎಸ್.ಎ ಕಾರ್ಯಕ್ರಮದ ಅನುಷ್ಠಾನ:

- ಬಿಆರ್‌ಸಿಗಳು ಹುದ್ದೆಗಳು ಭರ್ತಿಯಾಗದ ಕ್ಷೇತ್ರ ಅಂದರೆ ಮೈಸೂರು ದಕ್ಷಿಣ ವಲಯ. ಇಲ್ಲಿ ಎಸ್.ಎಸ್.ಎ ಕಾರ್ಯಕ್ರಮದ ಅನುಷ್ಠಾನವಾಗಿದೆ. ಸಕಾಲದಲ್ಲಿ ಮಾಹಿತಿಯನ್ನು ಒದಗಿಸುತ್ತಿರುವುದು ಗಮನಾರ್ಹ ಅಂಶ. ಇತರೆ ಬಿಆರ್‌ಪಿಗಳ ಸಹಕಾರದಿಂದ ಉತ್ತಮವಾಗಿ ಕಾರ್ಯನಿರ್ವಹಿಸಲು ಪ್ರಯತ್ನ ನಡೆಸುತ್ತಿದ್ದಾರೆ.
- ಬಿಆರ್‌ಸಿ ಇಲ್ಲದ ಕಡೆ ಹೆಚ್ಚುವರಿ ಕೆಲಸದ ಹೊರೆಯಿಂದ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುವುದು ಕಷ್ಟಕರವಾಗುತ್ತಿದೆ.
- ಎಸ್‌ಎಸ್‌ಎ ಕಾರ್ಯಕ್ರಮಗಳು ಉತ್ತಮವಾಗಿ ನೆರವೇರುವಂತೆ ಡಯಟ್ ವತಿಯಿಂದ ಮಾರ್ಗದರ್ಶನ ನೀಡಿ ಉತ್ತೇಜಿಸಲಾಗುತ್ತಿದೆ ಹಾಗೂ ನಿರೀಕ್ಷಿತ ಮಟ್ಟದ ಕಾರ್ಯವನ್ನು ಪಡೆಯಲಾಗುತ್ತಿದೆ.

### 4. ಕ್ಲಸ್ಟರ್ ಹಂತದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿ.ಆರ್.ಸಿ ಹುದ್ದೆಗಳ ಬಗ್ಗೆ ಮಾಹಿತಿ:

- ಕ್ಲಸ್ಟರ್ ಹಂತದಲ್ಲಿ 176 ಸಿಆರ್‌ಸಿ ಹುದ್ದೆಗಳು ಮಂಜೂರಾಗಿದ್ದು, 10 ಹುದ್ದೆಗಳು ಭರ್ತಿಯಾಗಿರುವುದಿಲ್ಲ.

### 5. ಸಿ.ಆರ್.ಸಿ ಹುದ್ದೆಗಳು ಎಷ್ಟು ದಿನಗಳಿಂದ ಖಾಲಿಯಿರುತ್ತದೆ. ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮಗಳೇನು ?

- ಜೂನ್ 2014 ರಿಂದ ಕೆಲವು ಸಿಆರ್‌ಪಿ ಹುದ್ದೆಗಳು ಖಾಲಿ ಇರುತ್ತದೆ.
- ಹುದ್ದೆಗಳು ಖಾಲಿ ಇದ್ದರೂ ಇಲಾಖಾ ಕಾರ್ಯಗಳಿಗೆ ಯಾವುದೇ ರೀತಿಯ ತೊಂದರೆಯಾಗದ ರೀತಿಯಲ್ಲಿ ಹಿಂದೆ ಕಾರ್ಯ ನಿರ್ವಹಿಸಿರುವ ಸಿಆರ್‌ಪಿ ಅಥವಾ ಕ್ರಿಯಾಶೀಲ ಶಿಕ್ಷಕರನ್ನು ಬಳಸಿಕೊಂಡು ಕಾರ್ಯ ನಿರ್ವಹಿಸಲಾಗುತ್ತಿದೆ.
- ಹುದ್ದೆ ಭರ್ತಿಯಾಗಿದ್ದರೂ ಸಿಆರ್‌ಪಿಗಳಿಗೆ ಬುನಾದಿ ತರಬೇತಿ ಆಗಿರುವುದಿಲ್ಲ. ಆದರೂ ಬ್ಲಾಕ್ ಹಂತದಲ್ಲಿ ಮಾರ್ಗದರ್ಶನ ನೀಡಿ ಕಾರ್ಯ ನಿರ್ವಹಿಸಲಾಗುತ್ತಿದೆ.

### 6. ಸಿಆರ್.ಸಿ ಕಾರ್ಯ ನಿರ್ವಹಿಸುತಿರುವ ಕ್ಲಸ್ಟರ್‌ಗಳಲ್ಲಿ ಸರ್ವ ಶಿಕ್ಷಣ ಅಭಿಯಾನದ ಕಾರ್ಯಕ್ರಮಗಳು ಅನುಷ್ಠಾನ:

- ಕೆಲವು ಕ್ಲಸ್ಟರ್‌ಗಳು ಸರ್ವ ಶಿಕ್ಷಣ ಅಭಿಯಾನದ ಕಾರ್ಯಕ್ರಮಗಳ ಅನುಷ್ಠಾನ ಮಾಡುವಲ್ಲಿ **ಅತ್ಯುತ್ತಮವಾಗಿ** ಕಾರ್ಯನಿರ್ವಹಿಸುತ್ತಿವೆ.
- ಶಾಲಾ ಭೇಟಿ, ಸಮಾಲೋಚನಾ ಸಭೆಯ ನಿರ್ವಹಣೆ, ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸುವಿಕೆ, ಖರ್ಚು ವೆಚ್ಚಗಳ ಲೆಕ್ಕ ಪತ್ರ ಒಪ್ಪಿಸುವಿಕೆ, ದಾಖಲೆಗಳ ನಿರ್ವಹಣೆ, ನೀಡಿದ ಜವಾಬ್ದಾರಿಗಳ ವ್ಯವಸ್ಥಿತ ನಿರ್ವಹಣೆ ಇತ್ಯಾದಿಗಳನ್ನು ಅತ್ಯುತ್ತಮವಾಗಿ ನಿರ್ವಹಿಸುತ್ತಾರೆ. ಬಹಳ ಮುಖ್ಯವಾಗಿ ಶಿಕ್ಷಕರ ವಿಶ್ವಾಸವನ್ನು ಪಡೆದುಕೊಳ್ಳುವಲ್ಲಿ ಸಫಲರಾಗಿದ್ದಾರೆ. ಸರ್ವ ಶಿಕ್ಷಣ ಅಭಿಯಾನದ ಇತರೆ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿರುತ್ತಾರೆ.
- ಹೆಚ್ಚಿನ ಕ್ಲಸ್ಟರ್‌ಗಳಲ್ಲಿ ಸರ್ವ ಶಿಕ್ಷಣ ಅಭಿಯಾನದ ಕಾರ್ಯಕ್ರಮಗಳ ಅನುಷ್ಠಾನ **ಉತ್ತಮವಾಗಿದೆ.**
- ಹೊಸದಾಗಿ ನೇಮಕವಾಗಿರುವ ಸಿಆರ್‌ಪಿಗಳಿಗೆ ಬುನಾದಿ ತರಬೇತಿ ಆಗದಿರುವ ಕಾರಣ ಕಾರ್ಯನಿರ್ವಹಣೆಯಲ್ಲಿ ಸ್ವಲ್ಪ ಗೊಂದಲಗಳಿವೆ. ಬುನಾದಿ ತರಬೇತಿಗಾಗಿ ಕೋರಿಕೆ ವ್ಯಕ್ತಪಡಿಸಿರುತ್ತಾರೆ.
- ಇವುಗಳ ಜೊತೆಯಲ್ಲಿಯೇ ಉತ್ತಮವಾಗಿ ಕೆಲಸ ನಿರ್ವಹಿಸದ ಕೆಲವು ಕ್ಲಸ್ಟರ್‌ಗಳು ಇವೆ. ಡಯಟ್ ಹಾಗೂ ಬಿಆರ್ ಸಿಗಳು ಮಾರ್ಗದರ್ಶನ ನೀಡಿ **ತೃಪ್ತಿಕರವಾಗಿ** ಕಾರ್ಯನಿರ್ವಹಿಸುವಂತೆ ಮಾರ್ಗದರ್ಶನ ನೀಡುತ್ತಿದ್ದಾರೆ.

- ವಿಷಯಾಧಾರಿತ, ರಚನಾವಾದ ಸಿದ್ಧಾಂತ ಮತ್ತು ಸಿಸಿಇ ಕುರಿತ ಆಳವಾದ ಜ್ಞಾನ, ಧನಾತ್ಮಕ ಚಿಂತನೆ,ವೃತ್ತಿಪರ ಕಾಳಜಿ, ಬದ್ಧತೆ ಮೌಲ್ಯಗಳು, ಶಾಲಾ ಭೇಟಿ, ಶಿಕ್ಷಕರಿಗೆ ಹಿಮ್ಮಾಹಿತಿ ನೀಡುವಿಕೆ ಹಾಗೂ ವರದಿ ತಯಾರಿಕೆ ಇತ್ಯಾದಿ ಗಳಿಗೆ ಸಂಬಂಧಿಸಿದಂತೆ ತರಬೇತಿಯ ಅಗತ್ಯವಿದೆ.

7. **2013–14 ನೇ ಸಾಲಿನಲ್ಲಿ ಜಿಲ್ಲೆಯಲ್ಲಿರುವ ಒಟ್ಟು ಸರ್ಕಾರಿ ಶಾಲೆಗಳ ಸಂಖ್ಯೆ ಮತ್ತು 2014–15 ನೇ ಸಾಲಿನಲ್ಲಿ ಜಿಲ್ಲೆಯಲ್ಲಿರುವ ಸರ್ಕಾರಿ ಶಾಲೆಗಳಲ್ಲಿನ ವ್ಯತ್ಯಾಸ.**

- 2013–14 ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಒಟ್ಟು 1920 ಶಾಲೆಗಳಿದ್ದು, 2014–15 ನೇ ಸಾಲಿನಲ್ಲಿ ಈ ಸಂಖ್ಯೆ 1911 ಕ್ಕೆ ಇಳಿದಿದೆ. ಮೈಸೂರು ಉತ್ತರ ವಲಯದ ಉರ್ದು ಸೆಂಟ್ರಲ್ ಕ್ಲಸ್ಟರ್‌ನಲ್ಲಿ ಒಂದೇ ಆವರಣದಲ್ಲಿ 07 ಉರ್ದು ಶಾಲೆಗಳನ್ನು ನಡೆಸುತ್ತಿದ್ದು, ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದ ಕಾರಣದಿಂದ 2014–2015 ಶೈಕ್ಷಣಿಕ ಸಾಲಿನಿಂದ ಮಾನ್ಯ ಶ್ರೀ ಆಯುಕ್ತರ ಆದೇಶದ ಮೇರೆಗೆ 07 ಶಾಲೆಗಳನ್ನು ವಿಲೀನಗೊಳಿಸಿ ಸ.ಉ.ಹಿ.ಪ್ರಾ ಸೆಂಟ್ರಲ್ ಶಾಲೆಯಾಗಿ ಮಾರ್ಪಡಿಸಲಾಗಿದೆ.

8. **ಸರ್ಕಾರಿ ಶಾಲೆಗಳ ಸಂಖ್ಯೆ ಕಡಿಮೆಯಾಗಲು ಕಾರಣ ಇತರೆ ಶಾಲೆಗಳ ಹೆಚ್ಚಳಕ್ಕೆ ಕಾರಣ.**

- ನಮ್ಮ ಸಂವಿಧಾನದಲ್ಲಿ ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ಶಿಕ್ಷಣ ನೀಡುವ ಸಲುವಾಗಿ ಶಾಲೆ ತೆರೆಯಲು ಅವಕಾಶವಿರುವುದರಿಂದ ಇತರೆ ಶಾಲೆಗಳು ಹೆಚ್ಚಾಗುತ್ತಿವೆ. ಬದಲಾಗುತ್ತಿರುವ ಆರ್ಥಿಕ ಸನ್ನಿವೇಶಗಳೂ ವಿವಿಧ ಬಗೆಯ ಶಾಲೆಗಳ ಹುಟ್ಟಿಗೆ ಕಾರಣವಾಗಿವೆ.
- ಪೋಷಕರಲ್ಲಿ ಆಂಗ್ಲ ಮಾಧ್ಯಮ ಶಿಕ್ಷಣದ ಬಗೆಗಿನ ಒಲವು ಹೆಚ್ಚಾಗುತ್ತಿರುವುದು ಸರ್ಕಾರಿ ಶಾಲೆಗಳ ಸಂಖ್ಯೆ ಕಡಿಮೆಯಾಗಲು ಕಾರಣ.
- ಪ್ರತೀ ಸರ್ಕಾರಿ ಶಾಲೆಯ ಅಕ್ಕ–ಪಕ್ಕ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಅನುಮತಿ ನೀಡಿರುವುದು ಸಹ ಇದಕ್ಕೆ ಕಾರಣವಾಗಿದೆ. ಆರ್.ಟಿ.ಇ ಪ್ರಕಾರ ಕಿ.ಪ್ರಾ ಶಾಲೆಗಳು 1 ಕಿ.ಮೀ ವ್ಯಾಪ್ತಿ ಒಳಗೆ ಲಭ್ಯವಿರಬೇಕಾದುದರಿಂದ ಹಲವಾರು ಅನುದಾನಿತ/ಅನುದಾನರಹಿತ ಶಾಲೆಗಳನ್ನು ಕಾಣಲಾಗುತ್ತಿದೆ.
- ಸರ್ಕಾರಿ ಶಾಲೆಗಳಲ್ಲಿ ಇಂಗ್ಲೀಷನ್ನು ಒಂದನೇ ತರಗತಿಯಿಂದ ಕಡ್ಡಾಯಗೊಳಿಸಿದ್ದರೂ ಪೂರ್ಣಪ್ರಮಾಣದಲ್ಲಿ ಅನುಷ್ಠಾನಗೊಳಿಸದಿರುವುದು ಇದಕ್ಕೆ ಕಾರಣವಾಗಿದೆ.
- ಸರ್ಕಾರಿ ಶಾಲಾ ಶಿಕ್ಷಕರಿಗೆ ಸರ್ಕಾರಿ ಶಾಲೆಗಳಲ್ಲಿ ನಂಬಿಕೆ ಇಲ್ಲದೆ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸಿರುತ್ತಾರೆ.
- ಖಾಸಗಿ ಶಾಲೆಗಳಿಗೆ ಆರ್.ಟಿ.ಇ ಪ್ರಕಾರ 25% ಮೀಸಲಾತಿಗೆ ಅವಕಾಶ ನೀಡಿರುವುದು ಸಹ ಸರ್ಕಾರಿ ಶಾಲೆಗಳ ಸಂಖ್ಯೆ ಕಡಿಮೆಯಾಗಲು ಕಾರಣವಾಗಿದೆ.

9. **ಬ್ಲಾಕ್‌ನಲ್ಲಿ ಶಾಲೆಗಳ ಕೊರತೆ ಕಂಡು ಬಂದಿದೆಯೇ ? ಕೊರತೆ ಕಂಡು ಬಂದ ಕಡೆಗಳಲ್ಲಿ ಶಾಲೆಗಳನ್ನು ತೆರೆಯಲಾಗಿದೆಯೇ?**

- ಬ್ಲಾಕ್‌ನಲ್ಲಿ ಶಾಲೆಗಳ ಕೊರತೆ ಕಂಡುಬರುವುದಿಲ್ಲ, ಕೊರತೆ ಕಂಡು ಬಂದ ಕಡೆಗಳಲ್ಲಿ ಶಾಲೆಗಳನ್ನು ತೆರೆಯಲಾಗಿದೆ.

10. **ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವ ಕಡೆಗಳಲ್ಲಿ ಶಾಲೆಗಳನ್ನು ವಿಲೀನಗೊಳಿಸಲಾಗಿದೆಯೇ?**

   - ಹೆಚ್ಚಿನ ಬ್ಲಾಕ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವ ಕಡೆಗಳಲ್ಲಿ ಶಾಲೆಗಳನ್ನು ವಿಲೀನಗೊಳಿಸಲಾಗಿದೆ.
   - ಕೆಲವು ತಾಲ್ಲೂಕುಗಳಲ್ಲಿ ವಿಲೀನಗೊಳಿಸಿರುವುದಿಲ್ಲ.

**11. ಜಿಲ್ಲೆಯಲ್ಲಿರುವ ಏಕೋಪಾದ್ಯಾಯ ಶಾಲೆಗಳು ಎಷ್ಟು? ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಏಕೋಪಾದ್ಯಾಯ ಶಾಲೆಗಳು ಎಷ್ಟರ ಮಟ್ಟಿಗೆ ಅನುಕೂಲ ಮತ್ತು ಅನಾನುಕೂಲಕರವಾಗಿದೆ.**

**ಕೋಷ್ಟಕ–31**

| ತಾಲ್ಲೂಕು | ಏಕೋಪಾಧ್ಯಾಯ ಶಾಲೆಗಳು | ಕಾರಣಗಳು |
|---|---|---|
| ಹೆಚ್ ಡಿ ಕೋಟೆ | 55 | –ಮೈಸೂರು ಜಿಲ್ಲೆಯಲ್ಲಿ ಒಟ್ಟು 170 ಶಾಲೆಗಳು ವಿವಿಧ ಕಾರಣಗಳಿಂದ ಏಕೋಪಾಧ್ಯಾಯ ಶಾಲೆಗಳಾಗಿ ಪರಿಣಮಿಸಿದೆ.<br>–ಎಚ್‌ಡಿಕೋಟೆ ತಾಲ್ಲೂಕಿನಲ್ಲಿ 55 ಏಕೋಪಾಧ್ಯಾಯ ಶಾಲೆಗಳಲ್ಲದೆ 16 ಶಾಲೆಗಳಲ್ಲಿ ಮೂಲಶಿಕ್ಷಕರು ಇಲ್ಲದೆ ನಿಯೋಜನೆ ಮೇರೆಗೆ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿರುವುದು ಕಂಡು ಬಂದಿರುತ್ತದೆ.<br>–ಜಿಲ್ಲೆಯಲ್ಲಿರುವ ಎಲ್ಲಾ ಶಾಲೆಗಳಿಗೆ ಮಂಜೂರಾಗಿರುವ ಹುದ್ದೆಗಳನ್ನು ಗಮನಿಸಿದಾಗ ಯಾವುದೇ ಏಕೋಪಾದ್ಯಾಯ ಶಾಲೆಗಳಿರುವುದಿಲ್ಲ.<br>–ವಾಸ್ತವವಾಗಿ ಏಕೋಪಾಧ್ಯಾಯ ಶಾಲೆಗಳು ಕಂಡುಬರಲು ಕಾರಣ ಹುದ್ದೆಗಳು ಭರ್ತಿಯಾಗದಿರುವುದು. ಅತ್ಯಂತ ದೂರದಲ್ಲಿರುವ ಶಾಲೆಗಳಿಗೆ ಶಿಕ್ಷಕರ ನೇಮಕಾತಿ ಆಗದಿರುವುದು. |
| ಹುಣಸೂರು | 23 | |
| ಕೆ ಆರ್ ನಗರ | 1 | |
| ಮೈಸೂರು ಉತ್ತರ | 0 | |
| ಮೈಸೂರು ಗ್ರಾಮಾಂತರ | 5 | |
| ಮೈಸೂರು ದಕ್ಷಿಣ | 0 | |
| ನಂಜನಗೂಡು | 16 | |
| ಪಿರಿಯಾಪಟ್ಟಣ | 51 | |
| ಟಿ ನರಸೀಪುರ | 19 | |
| ಒಟ್ಟು | **170** | |

**ಅನನುಕೂಲಗಳು:**

- ಏಕೋಪಾಧ್ಯಾಯ ಶಾಲೆಗಳಿಂದ ಅನುಕೂಲಗಳಿರುವುದಿಲ್ಲ. ಅನನುಕೂಲಗಳೇ ಹೆಚ್ಚಾಗಿದೆ.
- ಈ ಶಾಲೆಗಳ ಶಿಕ್ಷಕರು ತರಬೇತಿಗೆ ನಿಯೋಜನೆ ಹೊಂದಬೇಕಾದಾಗ, ರಜೆ ತಗೆದುಕೊಳ್ಳಬೇಕಾದಾಗ ಹಾಗೂ ಅನ್ಯ ಕಾರ್ಯ ನಿಮಿತ್ತ ಹೋಗಬೇಕಾದಾಗ ಮಕ್ಕಳ ಕಲಿಕೆಯನ್ನು ಅನುಕೂಲಿಸಲು ಹಾಗೂ ಶಾಲೆಯಲ್ಲಿ ಮಕ್ಕಳ ಶಿಸ್ತಿನ ನಿರ್ವಹಣೆ ಮಾಡಲು ತುಂಬಾ ತೊಂದರೆಯಾಗುತ್ತಿದೆ.
- ಶಾಲೆಯಲ್ಲಿ ಶಿಕ್ಷಕರು ಇಲ್ಲದಿರುವ ಸಂದರ್ಭದಲ್ಲಿ ಬೇರೆ ಶಾಲೆಗಳಿಂದ ಶಿಕ್ಷಕರನ್ನು ನಿಯೋಜಿಸಬೇಕಾಗುತ್ತದೆ. ಆದರೆ ಇದು ಸಾಂದರ್ಭಿಕ ಹಾಗೂ ತಾತ್ಕಾಲಿಕವಾಗಿರುವುದರಿಂದ ಈ ದಿನಗಳಲ್ಲಿ ಕಲಿಕೆ ಪರಿಣಾಮಕಾರಿಯಾಗಿ ನಡೆಯುವುದಿಲ್ಲ. ಇದು ಮಕ್ಕಳ ಕಲಿಕಾ ಗುಣಮಟ್ಟದ ಮೇಲೆ ಬಹಳಷ್ಟು ಪರಿಣಾಮ ಬೀರುತ್ತದೆ.
- 5 ತರಗತಿಗಳ ವಿವಿಧ ವಿಷಯಗಳನ್ನು ನಿರ್ವಹಣೆ ಮಾಡಲು, ಪ್ರತಿ ವಿಷಯಗಳಲ್ಲೂ ವಿದ್ಯಾರ್ಥಿಗಳತ್ತ ವೈಯಕ್ತಿಕ ಗಮನ ನೀಡಲು ಶಿಕ್ಷಕರಿಗೆ ಕಷ್ಟವಾಗುತ್ತಿದೆ.
- ಒರ್ವ ಶಿಕ್ಷಕ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಜವಾಬ್ದಾರಿಯನ್ನು ಒಟ್ಟಿಗೆ  ನಿಭಾಯಿಸಲು ಸಾಧ್ಯವಿಲ್ಲ ಮತ್ತು ಆಡಳಿತಾತ್ಮಕ ಕೆಲಸಗಳಲ್ಲಿ ಮತ್ತು ತರಬೇತಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಾಧ್ಯವಿಲ್ಲ
- ಒಂದು ಶಾಲೆಯಲ್ಲಿ ಕನಿಷ್ಠ ಇಬ್ಬರು ಶಿಕ್ಷಕರಾದರೂ ಇದ್ದಲ್ಲಿ ಶೈಕ್ಷಣಿಕ ವಿಚಾರಗಳನ್ನು ಹಂಚಿಕೊಂಡು, ಶಾಲಾ ಸಮಸ್ಯೆಗಳಿಗೆ ಪರಿಹಾರಗಳನ್ನು ಒಟ್ಟಾಗಿ ಕಂಡುಕೊಳ್ಳುತ್ತಾ ಮುಂದೆ ಸಾಗಬಹುದಾಗಿದೆ.
- ಒಬ್ಬರೇ ಶಿಕ್ಷಕರಿರುವುದರಿಂದ ಶಾಲೆಯಲ್ಲೂ ವಿದ್ಯಾರ್ಥಿಗಳಿಗೆ ಏಕತಾನತೆಯ ಅನುಭವವಾಗುವ ಸಾಧ್ಯತೆಗಳು ಹೆಚ್ಚಾಗಿವೆ. ವಿದ್ಯಾರ್ಥಿಗಳು ವೈವಿಧ್ಯತೆಯನ್ನು ಅಪೇಕ್ಷೆ ಪಡುವುದು ಸಹಜವಾಗಿದೆ.
- ಶಾಲೆಯಲ್ಲಿ ಒಬ್ಬರೇ ಶಿಕ್ಷಕರು ಎಲ್ಲಾ ತರಗತಿ ನಿರ್ವಹಣೆ ಮಾಡುವುದನ್ನು ಸಮುದಾಯವೂ ಒಪ್ಪುವುದಿಲ್ಲ.
- ಸಮುದಾಯವು ಸರಕಾರಿ ಶಾಲೆಗಳಿಂದ ವಿಮುಖರಾಗಲು ಅಥವಾ ಖಾಸಗಿ ಶಾಲೆಗಳ ಬಗ್ಗೆ ಒಲವು ತೋರಿಸಲು ನಮ್ಮ ಶಾಲೆಗಳಲ್ಲಿ ತರಗತಿಗೊಬ್ಬ ಶಿಕ್ಷಕರು ಇಲ್ಲದಿರುವುದದೇ ಪ್ರಬಲ ಕಾರಣವಾಗಿದೆ.
- ಆದುದರಿಂದ ಏಕೋಪಾಧ್ಯಾಯ ಶಾಲೆಗಳಲ್ಲಿ ಅನುಕೂಲಕ್ಕಿಂತ ಅನನುಕೂಲವೇ ಹೆಚ್ಚಾಗಿದೆ.

ಬ್ಲಾಕ್‌ನ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಶಿಕ್ಷಕರು ಮತ್ತು 5 ವರ್ಷಗಳಲ್ಲಿ ಭರ್ತಿಯಾಗದೇ ಖಾಲಿ ಉಳಿದಿರುವ ಹುದ್ದೆಗಳು:

**ಕೋಷ್ಠಕ–32:**

| ಕ್ರಮ. ಸಂಖ್ಯೆ | ಬ್ಲಾಕ್‌ಗಳ ಹೆಸರು | ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಶಿಕ್ಷಕರ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|
| 1 | ಹೆಚ್.ಡಿ.ಕೋಟೆ | 941 | 261 |
| 2 | ಹುಣಸೂರು | 1041 | 48 |
| 3 | ಕೆ.ಆರ್.ನಗರ | 857 | 73 |
| 4 | ಮೈ.ಉತ್ತರ | 528 | 35 |
| 5 | ಮೈ.ದಕ್ಷಿಣ | 173 | 0 |
| 6 | ಮೈ.ಗ್ರಾಮಾಂತರ | 1055 | 53 |
| 7 | ನಂಜನ ಗೂಡು | 1214 | 214 |
| 8 | ತಿ.ನರಸೀಪುರ | 826 | 223 |
| 9 | ಪಿರಿಯಾ ಪಟ್ಟಣ | 796 | 150 |

- ಎಚ್‌ಡಿ ಕೋಟೆ, ನಂಜನಗೂಡು, ತಿನರಸೀಪುರ ತಾಲ್ಲೂಕುಗಳಲ್ಲಿ ಹೆಚ್ಚು ಹುದ್ದೆಗಳು ಖಾಲಿ ಇರುತ್ತದೆ.
- ಮೈಸೂರು ದಕ್ಷಿಣ ವಲಯದಲ್ಲಿ ಖಾಲಿ ಹುದ್ದೆಗಳ ಸಂಖ್ಯೆ ಕಡಿಮೆ ಇದೆ.

12. ಹುದ್ದೆಗಳು ಖಾಲಿ ಉಳಿದಿರುವುದರಿಂದ ಶೈಕ್ಷಣಿಕ ಗುಣಮಟ್ಟದ ಮೇಲೆ ಬೀರಿರುವ ಪರಿಣಾಮಗಳೇನು?

- ಶಿಕ್ಷಕರ ಹುದ್ದೆ ಖಾಲಿ ಇರುವ ಶಾಲೆಗಳಿಗೆ ಹೆಚ್ಚುವರಿ ಶಿಕ್ಷಕರಿರುವ ಕಡೆಯಿಂದ ಸಾಧ್ಯವಾದಷ್ಟು ಶಿಕ್ಷಕರನ್ನು ನಿಯೋಜನೆ ಮಾಡಿ ಶೈಕ್ಷಣಿಕ ಗುಣಮಟ್ಟ ಕುಸಿಯದಂತೆ ಕ್ರಮಕೈಗೊಳ್ಳಲಾಗಿದೆ.
- ಆದರೂ ಶಾಲೆಯಲ್ಲಿ ಹುದ್ದೆಗಳು ಖಾಲಿ ಇರುವುದರಿಂದ ಶಾಲೆಯ ಒಟ್ಟಾರೆ ಶೈಕ್ಷಣಿಕ ಪ್ರಗತಿಯ ಮೇಲೆ ತೀವ್ರತೆರನಾದ ದುಷ್ಪರಿಣಾಮವನ್ನು ಬೀರುತ್ತದೆ. ಹುದ್ದೆಗಳು ಖಾಲಿ ಉಳಿಯುವುದರಿಂದ ಮಾನವ ಸಂಪನ್ಮೂಲದ ಅಪವ್ಯಯವಾಗುತ್ತದೆ.
- ಶಿಕ್ಷಕರಿಗೆ ಕಾರ್ಯ ಒತ್ತಡ ಹೆಚ್ಚಾಗುವುದರಿಂದ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ತೊಂದರೆಯಾಗುತ್ತದೆ.
- ಶಾಲೆಗಳಲ್ಲಿ ಹುದ್ದೆಗಳು ಭರ್ತಿಯಾಗದಿರುವುದರಿಂದ ಬಹುವರ್ಗಬೋಧನೆ ಅನಿವಾರ್ಯವಾಗುತ್ತದೆ. ಲಭ್ಯವಿರುವ ಶಿಕ್ಷಕರು ಹೆಚ್ಚಿನ ಹೊರೆಯನ್ನು ಹೊರುವುದರಿಂದ ಗುಣಮಟ್ಟದ ಮೇಲೆ ದುಷ್ಪರಿಣಾಮ ಬೀರುತ್ತದೆ.
- ಅನೇಕ ಇಲಾಖಾ ಕೆಲಸಗಳ ಒತ್ತಡದಿಂದ ಶಿಕ್ಷಕರು ಗುಣಮಟ್ಟದ ಕಲಿಕೆ ಮೂಡಿಸುವಲ್ಲಿ ವಿಫಲರಾಗುತ್ತಾರೆ.
- ಗುಣಮಟ್ಟದ ಕಲಿಕೆಯ ಕೊರತೆ ಮುಂದೊಂದು ದಿನ ದೇಶದ ಮತ್ತು ರಾಜ್ಯದ ಪ್ರಗತಿಯ ದೃಷ್ಟಿಯಿಂದಲೂ ಮಾರಕವಾಗಬಹುದು.

13. ಬ್ಲಾಕ್‌ನಲ್ಲಿ ಅರೆಕಾಲಿಕ ಶಿಕ್ಷಕರ ನೇಮಕಾತಿಯನ್ನು ಕೊರತೆ ಇರುವ ಶಾಲೆಗಳಲ್ಲಿ ಭರ್ತಿ ಮಾಡಲಾಗಿದೆಯೇ? ಭರ್ತಿ ಮಾಡಿದ ಸಂದರ್ಭದಲ್ಲಿ ಶಾಲೆಯ ಶೈಕ್ಷಣಿಕ ಗುಣಮಟ್ಟ ಯವ ರೀತಿ ಇದೆ?

- ಹೆಚ್ಚಿನ ತಾಲ್ಲೂಕುಗಳಲ್ಲಿ ಅಗತ್ಯವಿರುವ ಕಡೆ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ. ಅತಿಥಿ ಶಿಕ್ಷಕರು ಉತ್ತಮವಾಗಿ ತೊಡಗಿಸಿಕೊಳ್ಳುವಂತೆ ಮಾರ್ಗದರ್ಶನ ನೀಡಲಾಗಿದ್ದು, ಅವರು ಉತ್ತಮ ರೀತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಆಯಾ ವರ್ಷದಲ್ಲಿ ತರಬೇತಿಗೆ ಹಾಜರಾಗಿರುವ ಸರ್ಕಾರಿ ಶಿಕ್ಷಕರು ತರಬೇತಿಯ ಮುಖ್ಯಾಂಶಗಳ ಕುರಿತಂತೆ

ಅತಿಥಿಶಿಕ್ಷಕರನ್ನು ಸಾಧ್ಯವಾದಷ್ಟು ಸುಶಿಕ್ಷಿತರನ್ನಾಗಿ ಮಾಡುತ್ತಿರುವುದು ಗಮನಾರ್ಹ ಅಂಶವಾಗಿದೆ. ನಿಜವಾಗಿಯೂ ಸರಕಾರದ ಈ ಹೆಜ್ಜೆ ಶೈಕ್ಷಣಿಕ ಪ್ರಗತಿಯನ್ನು ಹೆಚ್ಚಿಸುವಲ್ಲಿ ಹೆಚ್ಚು ಸಹಕಾರಿಯಾಗಿದೆ ಎಂದು ಹೇಳಬಹುದಾಗಿದೆ.

- ಕೆಲವು ಬ್ಲಾಕ್‌ಗಳಲ್ಲಿ ಯಾವುದೇ ಅತಿಥಿ ಶಿಕ್ಷಕರ ಹುದ್ದೆ ಮಂಜೂರಾತಿ ಮತ್ತು ನೇಮಕಾತಿ ಆಗಿರುವುದಿಲ್ಲ. ಇಂತಹ ಶಾಲೆಗಳಲ್ಲಿ ಶೈಕ್ಷಣಿಕ ಮಟ್ಟ ನಿರ್ವಹಣೆ ತುಂಬಾ ಸಮಸ್ಯಾತ್ಮಕವಾಗಿರುತ್ತದೆ. (ಕೆ.ಆರ್.ನಗರ ಬ್ಲಾಕ್‌ನಲ್ಲಿ )

## 14. ಆರ್.ಟಿ.ಇ. ಪ್ರಕಾರ ಕಿರಿಯ ಪ್ರಾಥಮಿಕ ಶಾಲೆಗಳಿಗೆ 1:30 ಪ್ರಮಾಣದಲ್ಲಿ ಅವಶ್ಯತೆ ಇರುವ ಹುದ್ದೆಗಳೆಷ್ಟು?

**ಕೋಷ್ಟಕ–33:**

| ಕ್ರ ಸಂ | ತಾಲ್ಲೂಕು | ಆರ್.ಟಿ.ಇ. ಪ್ರಕಾರ ಬೇಕಾದ ಹುದ್ದೆಗಳು | | | | | |
|---|---|---|---|---|---|---|---|
| | | ಕಿ.ಪ್ರಾ ಶಾಲಾ ಶಿಕ್ಷಕರ ಸಂಖ್ಯೆ(ಖಾಯಂ) | ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ(ಖಾಯಂ) | | | | |
| | | | ಭಾಷೆ | ವಿಜ್ಞಾನ | ಗಣಿತ | ಸಮಾಜ | ಇತರೆ |
| 1 | ಹೆಚ್.ಡಿ.ಕೋಟೆ | 27 | 154 | 11 | 135 | 0 | 0 |
| 2 | ಹುಣಸೂರು | 20 | 10 | 10 | 10 | 10 | |
| 3 | ಕೆ.ಆರ್.ನಗರ | 434 | 0 | 0 | 0 | 0 | 0 |
| 4 | ಮೈ.ಉತ್ತರ | 211 | 50 | 50 | 46 | 46 | 46 |
| 5 | ಮೈ.ದಕ್ಷಿಣ | – | – | – | – | – | – |
| 6 | ಮೈ.ಗ್ರಾಮಾಂತರ | 378 | 58 | 31 | 28 | 26 | 28 |
| 7 | ನಂಜನಗೂಡು | 35 | 0 | 0 | 0 | 0 | 0 |
| 8 | ತಿ.ನರಸೀಪುರ | 85 | 84 | 95 | 85 | 0 | 0 |
| 9 | ಪಿರಿಯಾಪಟ್ಟಣ | 814 | 0 | 0 | 0 | 0 | 0 |
| | | 2004 | 356 | 197 | 304 | 82 | 74 |

- ಸಕಿಪ್ರಾ ಶಾಲೆಗಳಿಗೆ 2004 ಹುದ್ದೆಗಳು ಆರ್‌ಟಿಇ ಪ್ರಕಾರ ಬೇಕಾಗಿದೆ.

## 15. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿಷಯವಾರು ಶಿಕ್ಷಕರ ನೇಮಕಾತಿ ಮಾಡಲಾಗಿದೆಯೇ? ಮಾಡದಿದ್ದ ಪಕ್ಷದಲ್ಲಿ ಎಷ್ಟು ಹುದ್ದೆಗಳು ಖಾಲಿ ಇರುತ್ತವೆ. ಈ ಹುದ್ದೆಗಳನ್ನು ಖಾಲಿ ಇರುವುದರಿಂದ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕುಂಠಿತವಾಗಿದೆಯೇ?

- ಎಲ್ಲಾ ಸ.ಹಿ.ಪ್ರಾ. ಶಾಲೆಗಳಲ್ಲಿ ವಿಷಯವಾರು ಶಿಕ್ಷಕರ ನೇಮಕಾತಿ ಮಾಡಿರುವುದಿಲ್ಲ, ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರೇ ಎಲ್ಲಾ ವಿಷಯಗಳನ್ನು ಹಂಚಿಕೆ ಮಾಡಿಕೊಂಡು ಬೋಧಿಸುತ್ತಿದ್ದಾರೆ. ಹುದ್ದೆ ಖಾಲಿಯಿರುವ ಶಾಲೆಗಳಲ್ಲಿ ಶೈಕ್ಷಣಿಕ ಪ್ರಗತಿ ಕುಂಠಿತವಾಗಿದೆ.
- 2002ನೇ ಸಾಲಿನಿಂದ ಆಯ್ಕೆಯಾದ ಶಿಕ್ಷಕರು ವಿಷಯವಾರು ಶಿಕ್ಷಕರಾಗಿದ್ದು, ಉಳಿದವರು ಸಾಮಾನ್ಯ ಕನ್ನಡ ಶಿಕ್ಷಕರಾಗಿರುತ್ತಾರೆ.
- ಉನ್ನತೀಕರಿಸಿದ ಸ.ಹಿ.ಪ್ರಾ.ಶಾಲೆಗಳಲ್ಲಿ ಟಿ.ಜಿ.ಟಿ ಶಿಕ್ಷಕರ ನೇಮಕಾತಿ ಮಾಡಲಾಗಿದೆ. ಟಿ.ಜಿ.ಟಿ ಶಿಕ್ಷಕರು ಇರುವ ಶಾಲೆಗಳಲ್ಲಿ ಗಣಿತ ಮತ್ತು ವಿಜ್ಞಾನ ಬೋಧನೆ ತೃಪ್ತಿಕರವಾಗಿ ನಡೆಯುತ್ತಿದೆ.
- ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಸಾಮಾನ್ಯ ಶಿಕ್ಷಕರ(ಎಲ್ಲಾ ವಿಷಯ) ಹುದ್ದೆಗಳು ಭರ್ತಿಯಾಗಿದ್ದರೂ, ಶಿಕ್ಷಕರ ನೇಮಕಾತಿಯಲ್ಲಿ ಪಿ.ಯು.ಸಿ, ಡಿ.ಇಡಿ ವಿದ್ಯಾರ್ಹತೆ ಮೇಲೆ ನೇಮಕಾತಿ ಮಾಡುವ ಕಾರಣ ಹೊಸ ಪಠ್ಯ ವಿಷಯ ನಿರ್ವಹಣೆ ಕಷ್ಟವಾಗುತ್ತಿದೆ.

- ಹಿಂದಿ ವಿಷಯ ಶಿಕ್ಷಕರ ನೇಮಕಾತಿ ಆಗದಿರುವ ಕಾರಣ ಹಿ.ಪ್ರಾ.ಶಾಲೆಗಳಲ್ಲಿ ಹಿಂದಿ ವಿಷಯ ಬೋಧನೆ ಸಮರ್ಪಕವಾಗಿ ನಡೆಯುತ್ತಿಲ್ಲ.
- 2014–15ನೇ ಸಾಲಿನಲ್ಲಿ ಪಠ್ಯಪುಸ್ತಕವನ್ನು ಆಧರಿಸಿದ ವಿಷಯಾಧಾರಿತ ತರಬೇತಿಯನ್ನು 6 ರಿಂದ 8ನೇ ತರಗತಿಯ 1/3 ಶಿಕ್ಷಕರಿಗೆ ಮಾತ್ರ ನೀಡುವ ಕಾರಣ 2/3 ಶಿಕ್ಷಕರ ಗೊಂದಲಗಳಿಗೆ ಪರಿಹಾರ ಸಿಗುತ್ತಿಲ್ಲ.
- ಆಯಾ ವಿಷಯದಲ್ಲಿ ಪರಿಣಿತಿ ಹೊಂದಿದ ವಿಷಯವಾರು ಶಿಕ್ಷಕರ ನೇಮಕದಿಂದ ಇನ್ನೂ ಹೆಚ್ಚಿನ ಗುಣಮಟ್ಟದ ಶೈಕ್ಷಣಿಕ ಪ್ರಗತಿಯನ್ನು ಸಾಧಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಹಾಲಿ ಇರುವ ಶಿಕ್ಷಕರನ್ನೂ ವಿಷಯದ ಪರಿಣಿತಿಯನ್ನು ಆಧರಿಸಿ ವರ್ಗೀಕರಿಸಿ ತರಬೇತಿ ನೀಡುವುದರಿಂದ ಪರಿಣಿತ ಶಿಕ್ಷಕರನ್ನು ಹೊಂದಬಹುದು.

### 16. ಆರ್.ಟಿ.ಇ. ಪ್ರಕಾರ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಅಗತ್ಯವಿರುವ ಹುದ್ದೆಗಳೇಷ್ಟು? (1:35) ಮೇಲಿನ ಕೋಷ್ಟಕದಲ್ಲಿದೆ.

- ಹಿರಿಯ ಪ್ರಾಥಮಿಕ ಶಾಖೆಗಳಲ್ಲಿ ಭಾಷೆ–356, ವಿಜ್ಞಾನ–197, ಗಣಿತ–304, ಸಮಾಜ–82, ಇತರೆ–74 ಹುದ್ದೆಗಳು ಅಗತ್ಯವಿದೆ.
- ಪಠ್ಯಪುಸ್ತಕಗಳು ಪರಿಷ್ಕರಣೆ ಹೊಂದಿದ್ದು ಕ್ಲಿಷ್ಟತೆಯ ಮಟ್ಟ ಹೆಚ್ಚಾಗಿರುವುದರಿಂದ ವಿಷಯವಾರು ಶಿಕ್ಷಕರ ಕೊರತೆಯಿಂದಾಗಿ ಶಿಕ್ಷಕರಿಗೆ ತರಗತಿ ನಿರ್ವಹಣೆ ತುಂಬಾ ಸಮಸ್ಯೆಯಾಗುತ್ತಿದೆ.
- ಹಿ.ಪ್ರಾ.ಶಾಲೆಗಳ ಗುಣಮಟ್ಟವನ್ನು ಹೆಚ್ಚಸಲು ಅಗತ್ಯವಾಗಿ ವಿಷಯವಾರು ಶಿಕ್ಷಕರ ನೇಮಕಾತಿ ಆಗಬೇಕಾಗಿರುತ್ತದೆ.

# ವಿಭಾಗ–ಎ ಸಾಮಾನ್ಯ ಮಾಹಿತಿ

## ಪಿಟಿಆರ್ ಹೊಂದಿರುವ ಶಾಲೆಗಳ ಸಂಖ್ಯೆ

**ಕೋಷ್ಟಕ–34:**

| ಕ್ರ. ಸಂ | ಬ್ಲಾಕ್‌ಗಳು | ಪಿ.ಟಿ.ಆರ್. ಹೊಂದಿರುವ ಶಾಲೆಗಳ ಸಂಖ್ಯೆ | | |
|---|---|---|---|---|
| | | ಕಿರಿಯ ಪ್ರಾಥಮಿಕ ಶಾಲೆ(1 –5) | ಹಿರಿಯ ಪ್ರಾಥಮಿಕ ಶಾಲೆ (6 ಮತ್ತು 7) | ಉನ್ನತೀಕರಿಸಿದ ಪ್ರಾ.ಶಾಲೆ |
| 1 | ಹೆಚ್.ಡಿ.ಕೋಟೆ | 165 | 62 | 28 |
| 2 | ಹುಣಸೂರು | 155 | 97 | 28 |
| 3 | ಕೆ.ಆರ್.ನಗರ | 2 | 2 | 0 |
| 4 | ಮೈ.ಉತ್ತರ | 15 | 46 | 7 |
| 5 | ಮೈ.ದಕ್ಷಿಣ | 6 | 26 | 1 |
| 6 | ಮೈ.ಗ್ರಾಮಾಂತರ | 94 | 85 | 27 |
| 7 | ನಂಜನಗೂಡು | 94 | 101 | 26 |
| 8 | ತಿ.ನರಸೀಪುರ | 116 | 1 | 40 |
| 9 | ಪಿರಿಯಾಪಟ್ಟಣ | 160 | 85 | 13 |
| | ಒಟ್ಟು | 807 | 505 | 170 |

**ಗ್ರಾಫ್–28**




- ಕೆಆರ್ ನಗರ, ಮೈಸೂರು ದಕ್ಷಿಣ ಮತ್ತು ಮೈಸೂರು ಉತ್ತರ ವಲಯಗಳಲ್ಲಿ ಪಿಟಿಆರ್ ಹೊಂದಿರುವ ಶಾಲೆಗಳ ಸಂಖ್ಯೆ ಕಡಿಮೆ

**ಗ್ರಾಫ್–35**

1) **ವ್ಯತಿರಿಕ್ತ ಪಿ.ಟಿ.ಆರ್. ಹೊಂದಿರುವ ಜಿಲ್ಲೆಯ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ:**

| ತಾಲ್ಲೂಕುಗಳ ಹೆಸರು | ಪಿಟಿಆರ್ 30 ಕ್ಕಿಂತ ಹೆಚ್ಚಾಗಿರುವ ಶೇಕಡಾವಾರು ಶಾಲೆಗಳ ಸಂಖ್ಯೆ | ಪಿಟಿಆರ್ 35 ಕ್ಕಿಂತ ಹೆಚ್ಚಾಗಿರುವ ಶೇಕಡಾವಾರು ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ |
|---|---|---|
| ಹೆಚ್ ಡಿ ಕೋಟೆ | 11.11 | 80 |
| ಹುಣಸೂರು | 4.43 | 76.38 |
| ಕೆ ಆರ್ ನಗರ | 0 | 51.43 |
| ಮೈಸೂರು ಉತ್ತರ | 0 | 61.82 |
| ಮೈಸೂರು ಗ್ರಾಮಾಂತರ | 3.16 | 91.8 |
| ಮೈಸೂರು ದಕ್ಷಿಣ | 0 | 28.57 |
| ನಂಜನಗೂಡು | 1.8 | 85.81 |
| ಪಿರಿಯಾಪಟ್ಟಣ | 5.88 | 70.43 |
| ಟಿ ನರಸೀಪುರ | 5.31 | 76.72 |
| ಒಟ್ಟು | **4.93** | **74.74** |

**2) ಪಿ.ಟಿ.ಆರ್. ವ್ಯತ್ಯಾಸವಿರುವ ಕಿರಿಯ ಮತ್ತು ಹಿರಿಯ ಶಾಲೆಗಳ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲು ತಾಲ್ಲೂಕು ಹಂತದಲ್ಲಿ ಕೈಗೊಂಡಿರುವ ಕ್ರಮಗಳು**

- ಆರ್.ಟಿ.ಇ ನಿಯಮಾನುಸಾರ ಮಕ್ಕಳ ಕಲಿಕೆಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ.
- ಪರಿಣಾಮಕಾರಿಯಾಗಿ ಬಹುವರ್ಗ ಬೋಧನೆ ಮಾಡಲು ಮಾರ್ಗದರ್ಶನ ಮಾಡಲಾಗಿದೆ.
- ಶಿಕ್ಷಕರ ಕೊರತೆ ಇರುವಾಗ ಬಹುವರ್ಗ ಬೋಧನೆ ಅನಿವಾರ್ಯ. ಬಹುವರ್ಗ ಬೋಧನೆಯ ಸಂದರ್ಭದಲ್ಲಿ ಬೇರೆ ಬೇರೆ ತರಗತಿಯ ವಿದ್ಯಾರ್ಥಿಗಳಿಗೆ ಏಕಕಾಲದಲ್ಲಿ ಚಟುವಟಿಕೆಗಳ ಮೂಲಕ ಕಲಿಕೆಯನ್ನು ಅನುಕೂಲಿಸುವಂತೆ ಮಾರ್ಗದರ್ಶನ ನೀಡಲಾಗಿದೆ.
- ಎನ್.ಸಿ.ಎಫ್ ಆಶಯಗಳಂತೆ ಅರ್ಥಪೂರ್ಣ ಕಲಿಕೆ–ಬೋಧನಾ ಚಟುವಟಿಕೆಗಳು ನಡೆಯುವಂತೆ ಅಗತ್ಯ ಮಾರ್ಗದರ್ಶನ ನೀಡಲಾಗಿದೆ.
- ತರಗತಿ ನಿರ್ವಹಣೆಯ ಸಂದರ್ಭಗಳಲ್ಲಿ ಹಿರೇಮಣಿಯ ಸಹಾಯವನ್ನು ತೆಗೆದುಕೊಳ್ಳಲಾಗುವುದು.

**3). ಪಿ.ಟಿ.ಆರ್ ವ್ಯತ್ಯಾಸವನ್ನು ಸರಿದೂಗಿಸಲು ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ಕೈಗೊಂಡಿರುವ ಕ್ರಮಗಳೇನು?**

- ಶಿಕ್ಷಕರ ಕೊರತೆ ಇರುವಲ್ಲಿ ಅತಿಥಿ ಶಿಕ್ಷಕರ ನೇಮಕ ಮತ್ತು ಶಿಕ್ಷಕರ ನಿಯೋಜನೆ ಮಾಡಲಾಗಿದೆ.
- ಮಕ್ಕಳ ಸಂಖ್ಯೆ ಕಡಿಮೆ ಇದ್ದು, ಶಿಕ್ಷಕರ ಸಂಖ್ಯೆ ಹೆಚ್ಚು ಇರುವ ಶಾಲೆಗಳಿಂದ ಶಿಕ್ಷಕರನ್ನು ಹೆಚ್ಚುವರಿ ಎಂದು ಗುರುತಿಸಿ ಶಿಕ್ಷಕರ ಅಗತ್ಯತೆ ಇರುವ ಕಡೆ ಅವರನ್ನು ನಿಯೋಜಿಸಲು ಕ್ರಮವಹಿಸಲಾಗಿದೆ.
- ಕೆಲವು ಊರುಗಳಲ್ಲಿ ಸಮುದಾಯದಿಂದಲೂ ಶಿಕ್ಷಕರನ್ನು ನೇಮಿಸಿರುವುದನ್ನು ಮತ್ತು ಊರಿನ ವಿದ್ಯಾವಂತ ಯುವಜನರು ಶಾಲೆಗೆ ಬಂದು ಕಲಿಕೆಗೆ ಸಹಾಯ ಮಾಡುವುದನ್ನು ಗಮನಿಸಲಾಗಿದೆ.

**4). ಪಿ.ಟಿ.ಆರ್. ಪ್ರಕಾರ ಅವಶ್ಯಕತೆಯಿರುವ ಶಿಕ್ಷಕರ ಸಂಖ್ಯೆ**

**ಕೋಷ್ಟಕ–36**

1. ತಾಲ್ಲೂಕುವಾರು ಪಿಟಿಆರ್:

| ತಾಲ್ಲೂಕುಗಳ ಹೆಸರು | ಪಿಟಿಆರ್ | | |
|---|---|---|---|
| ಹೆಚ್ ಡಿ ಕೋಟೆ | ಕಿಪ್ರಾ ಶಾಲೆ | ಹಿಪ್ರಾ ಶಾಲೆ | ಪ್ರಾಥಮಿಕ |
| ಹುಣಸೂರು | 25 | 28 | 25 |
| ಕೆ ಆರ್ ನಗರ | 26 | 27 | 26 |
| ಮೈಸೂರು ಉತ್ತರ | 23 | 23 | 23 |
| ಮೈಸೂರು ಗ್ರಾಮಾಂತರ | 28 | 28 | 28 |
| ಮೈಸೂರು ದಕ್ಷಿಣ | 23 | 24 | 23 |
| ನಂಜನಗೂಡು | 26 | 26 | 26 |
| ಪಿರಿಯಾಪಟ್ಟಣ | 28 | 28 | 28 |
| ಟಿ ನರಸೀಪುರ | 27 | 27 | 27 |
| ಒಟ್ಟು | 26 | 26 | 25 |
| | 26 | 26 | 26 |

**Source: Dise 2013**

ಕೋಷ್ಟಕ–37

| Block | No. of schools having >40 PTR | No. of schools having >50 PTR | No. of schools having >60 PTR | No. of schools having >70 PTR |
|---|---|---|---|---|
| H D Kote | 22 | 4 | 2 | 0 |
| Hunsur | 2 | 7 | 1 | 1 |
| K R Nagara | 22 | 13 | 6 | 5 |
| Mysore North | 14 | 7 | 6 | 4 |
| Mysore Rural | 16 | 11 | 6 | 3 |
| Mysore South | 0 | 1 | 0 | 0 |
| Nanjangud | 9 | 7 | 4 | 0 |
| Periyapatna | 0 | 0 | 0 | 0 |
| T Narasipura | 9 | 3 | 1 | 0 |
| Total | 94 | 53 | 26 | 13 |

**Source : DISE 2013**

- ಪಿಟಿಆರ್ ಪ್ರಕಾರ ಪ್ರತಿ ತಾಲ್ಲೂಕಿನಲ್ಲೂ 3 ಹಂತಗಳಲ್ಲಿ ಸರಾಸರಿ 26 ಶಿಕ್ಷಕರ ಅಗತ್ಯವಿದೆ.
- ಪಿರಿಯಾಪಟ್ಟಣದಲ್ಲಿ ಪಿಟಿಆರ್ ಉತ್ತಮವಾಗಿದೆ. ಕೆಆರ್ ನಗರ ತಾಲ್ಲೂಕಿನಲ್ಲಿ 46 ಶಾಲೆ, ಮೈಸೂರು ಗ್ರಾಮಾಂತರ–36 ಮತ್ತು ಎಚ್‌ಡಿಕೋಟೆಯ 28 ಶಾಲೆಗಳಲ್ಲಿ ಪಿಟಿಆರ್ ಹೆಚ್ಚಾಗಿದೆ. ಪಿರಿಯಾಪಟ್ಟಣದಲ್ಲಿ ಪಿಟಿಆರ್ ಉತ್ತಮವಾಗಿದೆ.

## ಭಾಗ–ಬಿ

**ವಿದ್ಯಾರ್ಥಿಗಳ ದಾಖಲಾತಿ ಮಾಹಿತಿಯನ್ನು ಕ್ರೋಢಿಕರಿಸಿ, ಬ್ಲಾಕ್ ಹಂತದಲ್ಲಿ ಹಾಜರಾತಿ ಕಡಿಮೆ ಇರುವ ತರಗತಿ, ಶಾಲೆ, ಕ್ಲಸ್ಟರ್‌ಗಳ ಹೆಸರು ನಮೂದಿಸಿ, ಕಾರಣಗಳನ್ನು ವಿಶ್ಲೇಷಿಸುವುದು.**

**ಅ). ಜಿಲ್ಲೆಯ ತರಗತಿವಾರು ಸರಾಸರಿ ಹಾಜರಾತಿ ವಿವರ:**

**ಕೋಷ್ಟಕ–38:**

| ತರಗತಿ | 80 % ಮೇಲ್ಪಟ್ಟು | 60% – 79% | 60% ಕ್ಕಿಂತ ಕಡಿಮೆ |
|---|---|---|---|
| 1 | 95.3 | 4.1 | 0.4 |
| 2 | 95.4 | 4 | 0.5 |
| 3 | 94.9 | 4.3 | 0.6 |
| 4 | 96.04 | 3.6 | 0.3 |
| 5 | 95.9 | 3.5 | 0.4 |
| 6 | 91.6 | 6.9 | 1.4 |
| 7 | 94.1 | 3.3 | 2.4 |
| 8 | 94.1 | 5.1 | 0.7 |

**ಗ್ರಾಫ್–29:**




- ಮೇಲಿನ ಕೋಷ್ಠಕವನ್ನು ವಿಶ್ಲೇಷಿಸಿದಾಗ 6ನೇ ತರಗತಿಯನ್ನು ಹೊರತುಪಡಿಸಿ ಎಲ್ಲಾ ತರಗತಿಗಳಲ್ಲಿ ಸರಾಸರಿ ಹಾಜರಾತಿಯು ಸರಾಸರಿ ಶೇ 95 ರಷ್ಟಿರುತ್ತದೆ.
- ಪ್ರೋತ್ಸಾಹದಾಯಕ ಯೋಜನೆಗಳು ಮತ್ತು ಶಿಕ್ಷಕರು ಕಾಳಜಿಯಿಂದ ಮಾಡುವ ಮನೆ ಮನೆ ಭೇಟಿ ಕಾರ್ಯಗಳು ಮಕ್ಕಳ ಹಾಜರಾತಿಯನ್ನು ಗಣನೀಯವಾಗಿ ಹೆಚ್ಚಿಸುವಲ್ಲಿ ಮಹತ್ವವಾದ ಪಾತ್ರವನ್ನು ವಹಿಸಿದೆ.
- ರಚನಾ ತತ್ವಾಧರಿಸಿದ ಕಲಿಕೆ, ಸಿಸಿಇ ಮೂಲಕ ಮಕ್ಕಳ ಕಲಿಕೆಯನ್ನು ಅರ್ಥ ಮಾಡಿಕೊಳ್ಳಲು ಶಿಕ್ಷಕರು ಮಾಡುವ ಪ್ರಯತ್ನ ಬಹುಶ: ಮಕ್ಕಳನ್ನು ಶಾಲೆಯತ್ತ ಬರುವಂತೆ ಮಾಡಿರಬಹುದು.
- ಆದರೆ 6ನೇ ತರಗತಿ ವಿದ್ಯಾರ್ಥಿಗಳ ಹಾಜರಾತಿ ಕಡಿಮೆಯಾಗಿರುವುದು ಗಮನಾರ್ಹ ಅಂಶವಾಗಿದೆ. ಇದಕ್ಕೆ ಹಲವು ಕಾರಣ ಗಳಿರಬಹುದು
- 1 ಕಿ. ಮೀ ವ್ಯಾಪ್ತಿಯಲ್ಲಿರುವ ಕಿರಿಯ ಪ್ರಾಥಮಿಕ ಶಾಲೆಗಳಿಗೆ ನಿರಾಳವಾಗಿ ಹೋಗುತ್ತಿದ್ದ ಮಕ್ಕಳು ಕಿರಿಯ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸ ಮುಗಿದ ಬಳಿಕ 5 ಕಿ ಮೀ ವ್ಯಾಪ್ತಿಯೊಳಗಿರುವ ಹಿರಿಯ ಪ್ರಾಥಮಿಕ ಶಾಲೆಯನ್ನು ಸೇರಿದ ವರ್ಷದಲ್ಲಿ ಬೇರೆ ಬೇರೆ ಕಾರಣಗಳಿಂದ ಶಾಲೆಗೆ ಗೈರುಹಾಜರಾಗುತ್ತಿರುವುದು ಸ್ಪಷ್ಟವಾಗುತ್ತಿದೆ. ದೂರದ ಊರುಗಳಿಂದ ಮಕ್ಕಳು ಶಾಲೆಗೆ ಬರುವಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿರಬಹುದು.
- ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳು ಪ್ರೌಢಾವಸ್ಥೆಗೆ ಬರುವುದರಿಂದ ದುಡಿಮೆಯ ಕಡೆ ಹೆಚ್ಚು ಗಮನ ನೀಡುತ್ತಿರುತ್ತಾರೆ. 6ನೇ ತರಗತಿಗೆ ಬಂದ ಹೆಣ್ಣು ಮಕ್ಕಳನ್ನು ದೊಡ್ಡವರಾದ ಕೂಡಲೇ ಶಾಲೆಗೆ ಕಳುಹಿಸಲು ನಿಲ್ಲಿಸುವ ಕೆಲಸ ಈಗಲೂ ಮುಂದುವರಿಯುತ್ತಿದೆ.
- 6ನೇ ತರಗತಿ ಕಲಿಕಾಂಶಗಳು ಕ್ಲಿಷ್ಟಕರವಾಗಿರುವುದು, 6ನೇ ತರಗತಿ ಹೊಸ ಪಠ್ಯಾಧಾರಿತ ತರಬೇತಿಯನ್ನು ಶಿಕ್ಷಕರಿಗೆ ನೀಡಲು ಅಸಾಧ್ಯವಾಗಿರುವುದು ಇದಕ್ಕೆ ಕಾರಣವಾಗಿರಬಹುದು.
- ಶಿಕ್ಷಕರ ಕೊರತೆಯಿಂದಾಗಿ ಬಹುವರ್ಗ ಬೋಧನೆ ಅನಿವಾರ್ಯವಾದಾಗ ಕಲಿಕೆ ನಿರಾಸಕ್ತಿಯನ್ನುಂಟುಮಾಡಿರಬಹುದು.
- 6 ರಿಂದ 8ನೇ ತರಗತಿಗಳಲ್ಲಿ ಒಟ್ಟಾರೆ 60% ಕ್ಕಿಂತ ಕಡಿಮೆ ಹಾಜರಾತಿ ಇರುವ ಮಕ್ಕಳ ಸಂಖ್ಯೆ ಹೆಚ್ಚಾಗಿರುತ್ತದೆ.
- ಕಲಿಕಾಂಶಗಳ ಕ್ಲಿಷ್ಟತೆ, ಶಿಕ್ಷಕರ ಕೊರತೆಯಿಂದ ಬಹುವರ್ಗ ಬೋಧನೆಯ ಅನಿವಾರ್ಯದಿಂದಾಗಿ ಮಕ್ಕಳಿಗೆ ವೈಯಕ್ತಿಕ ಗಮನ ನೀಡಲು ಅಸಾಧ್ಯವಾಗಿರುವುದು ಇದಕ್ಕೆ ಕಾರಣವಾಗಿರಬಹುದು.
- ದೂರದ ಊರಿನಿಂದ ಶಾಲೆಗೆ ಹಾಜರಾಗುವುದು ಕೆಲವು ಸಂದರ್ಭಗಳಲ್ಲಿ ಹಿರಿಯ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗಿರಬಹುದು.

ಆ). ಬ್ಲಾಕ್ ಹಂತದಲ್ಲಿ ಹಾಜರಾತಿ ಕಡಿಮೆ ಇರುವ ಕ್ಲಸ್ಟರ್, ಶಾಲೆಗಳ ಹೆಸರು ನಮೂದಿಸಿ, ಕಾರಣಗಳನ್ನು ವಿಶ್ಲೇಷಿಸುವುದು.

**ಕೋಷ್ಠಕ–39**

| ಕ್ರ. ಸಂ | ತಾಲ್ಲೂಕು ಹೆಸರು | ಕ್ಲಸ್ಟರ್ ಹೆಸರು, | ಶಾಲೆಗಳ ಹೆಸರು, | ಕಾರಣ |
|---|---|---|---|---|
| 1 | ಹೆಚ್.ಡಿ. ಕೋಟೆ | ಡಿ.ಬಿ.ಕುಪೆ | ಸಕಿಪ್ರಾಶಾ ಬಳ್ಳೆಹಾಡಿ, ಸಹಿಪ್ರಾಶಾ ಗೋಳೂರು ಹಾಡಿ | ಜೇನುಕುರುಬ ಹಾಗೂ ಕಾಡುಕುರುಬ ವಿದ್ಯಾರ್ಥಿಗಳೂ ಹೆಚ್ಚಾಗಿದ್ದು, ಕೊಡಗಿಗೆ ಕೂಲಿ ಕೆಲಸಕ್ಕೆಂದು ಹೋಗುವುದರಿಂದ ಹಾಜರಾತಿ ಕಡಿಮೆಯಿದೆ. |
| | | ಎನ್.ಬೇಗೂರು | ಸರ್ಕಾರಿ ಗಿರಿಜನ ಆಶ್ರಮ ಶಾಲೆ, ಜಕ್ಕಳ್ಳಿ ಕಾಲೋನಿ | ಕೂಲಿ ಕೆಲಸಕ್ಕೆಂದು ಮಕ್ಕಳು ಪೋಷಕರೊಡನೆ ಹೋಗುವುದರಿಂದ ಹಾಜರಾತಿ ಕಡಿಮೆಯಿದೆ |
| | | ಬಿ.ಮಟಕೆರೆ | ಸರ್ಕಾರಿ ಗಿರಿಜನ ಆಶ್ರಮ ಶಾಲೆ, ಕೆಬ್ಬೇಪುರ, ಆಶ್ರಮ ಶಾಲೆ, ಬಿ.ಮಟಕೆರೆ, ಎಸ್.ಟಿ.ಕಾಲೋನಿ | ಕೂಲಿ ಕೆಲಸಕ್ಕೆಂದು ಮಕ್ಕಳು ಪೋಷಕರೊಡನೆ ಹೋಗುವುದರಿಂದ ಹಾಜರಾತಿ ಕಡಿಮೆಯಿದೆ |
| 2 | ಕೆ.ಆರ್.ನಗರ | ತಂದ್ರೆ ಮತ್ತು ಅರಕೆರೆ ಕೊಪ್ಪಲು. | ಸಹಿಪ್ರಾ ಶಾಲೆ ತಂದ್ರೆ ಸಹಿಪ್ರಾ ಶಾಲೆ ಅರಕೆರೆ ಕೊಪ್ಪಲು | ಈ ಗ್ರಾಮಗಳಲ್ಲಿ ಕೃಷಿಕರು ಹಾಗೂ ಭೂರಹಿಕ ಕೂಲಿ ಕಾರ್ಮಿಕರು ಹೆಚ್ಚು ಇದ್ದು, ಶಿಕ್ಷಣದ ಬಗ್ಗೆ ಅರಿವು ಇಲ್ಲದೇ ಇರುವುದರಿಂದ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಳ್ಳುತ್ತಾರೆ. ಮಕ್ಕಳು ಆಗಾಗ ಗೈರು ಹಾಜರಾಗುತ್ತಾರೆ |
| 3 | ಮೈಸೂರು ಉತ್ತರ | ಹೆಬ್ಬಾಳು, ಹಾರ್ಸ್‌ಲೇನ್, ವಿನಾಯಕ ನಗರ, ರಾಜೇಂದ್ರ ನಗರ, ಎನ್.ಆರ್ಗ.ಮೊಹಲ್ಲಾ, ನಿಜಾಮಿಯಾ, ಜೆ.ಬಿ.ಪಾಳ್ಯ, ರಾಜೀವ್ ನಗರ, ಸೆಂಟ್ರಲ್ | ಸಹಿಪ್ರಾ ಶಾಲೆ ಗೌಸಿಯಾನಗರ, ಸಹಿಪ್ರಾ ಶಾಳೆ ಎಂಸಿಸಿ ಕಾಲೊನಿ, ಸಹಿಪ್ರಾ ಶಾಲೆ ಹಳೇ ಜಲಪುರಿ | ಪೌರ ಕಾರ್ಮಿಕ ಪ್ರದೇಶಗಳಲ್ಲಿ ವಿದ್ಯಾರ್ಥಿಗಳು ಗೈರುಹಾಜರಾಗಿರುತ್ತಾರೆ. ಕೂಲಿ ಕೆಲಸ ಮಾಡುವ ಪೋಷಕರು ಚಿಕ್ಕ ಮಕ್ಕಳನ್ನು ನೋಡುವ ಸಲುವಾಗಿ ಕೆಲವುಮ್ಮೆ ಕಾರ್ಯಸ್ಥಳಕ್ಕೆ ಕರೆದೊಯ್ಯುತ್ತಾರೆ. |
| 4 | ಮೈಸೂರು ಗ್ರಾಮಾಂತರ | ಇಲವಾಲ, ವರುಣ, ಕೆ ಆರ್ ಮಿಲ್ಸ್, ಶ್ರೀರಾಂಪುರ, ಹಾರೋಹಳ್ಳಿ, ಹಂಚ್ಯಾ, ಉದ್ಬೂರು | ಮದ್ದೂರು ಹುಂಡಿ,ಸಹಿ ಪ್ರಾ ಶಾಲೆ ಗೊರೂರು, ಸಕಿಪ್ರಾ ಶಾಲೆ ರಮಾಬಾಯಿ ನಗರ, | ಪೌರ ಕಾರ್ಮಿಕ ಪ್ರದೇಶಗಳಲ್ಲಿ ವಿದ್ಯಾರ್ಥಿಗಳು ಗೈರುಹಾಜರಾಗಿರುತ್ತಾರೆ. |

- ಮೇಲಿನ ಕೋಷ್ಠಕವನ್ನು ಗಮನಿಸಿದಾಗ ಹಾಡಿ ಪ್ರದೇಶ, ಕೂಲಿ ಕಾರ್ಮಿಕ ಮತ್ತು ಪೌರ ಕಾರ್ಮಿಕ ಜನಸಮುದಾಯವಿರುವ ಕ್ಲಸ್ಟರ್‌ಗಳಲ್ಲಿ ಹೆಚ್ಚು ಮಕ್ಕಳ ಗೈರುಹಾಜರಿ ಕಂಡುಬರುತ್ತಿದೆ.
- ಹಾಡಿ ಮಕ್ಕಳಿಗೆ ಮಾತೃಭಾಷೆಯಲ್ಲಿ ಶಿಕ್ಷಣ ನೀಡದಿರುವುದು ಮತ್ತು ತಮ್ಮ ಸಂಸ್ಕೃತಿಯನ್ನು ಪಠ್ಯಕ್ರಮವು ಬಿಂಬಿಸದಿರುವುದರಿಂದ ಅವರು ಸಾಮಾನ್ಯ ಶಾಲೆಗಳಿಂದ ವಿಮುಖರಾಗುತ್ತಿರಬಹುದು.
- ಹಾಡಿ ಪ್ರದೇಶ, ಕೂಲಿ ಕಾರ್ಮಿಕ ಮತ್ತು ಪೌರ ಕಾರ್ಮಿಕ ಜನಸಮುದಾಯದಲ್ಲಿ ಸ್ವತಂತ್ರವಾಗಿ ನಿರ್ಬಂಧವಿಲ್ಲದೆ ಬದುಕಿರುವ ಮಕ್ಕಳಿಗೆ ಶಾಲೆಯ ಶಿಸ್ತಿನ ಕಟ್ಟುಪಾಡುಗಳು ಹಿಂಸೆಯಾಗಿರಬಹುದು.
- ಹಾಡಿ ಪ್ರದೇಶ, ಕೂಲಿ ಕಾರ್ಮಿಕ ಮತ್ತು ಪೌರ ಕಾರ್ಮಿಕ ಪೋಷಕರಲ್ಲಿ ಮಕ್ಕಳ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುವುದು ಅತ್ಯವಶ್ಯಕವಾಗಿದೆ.

### 2). ಹಾಜರಾತಿ ಕಡಿಮೆ ಇರುವ ಬ್ಲಾಕ್‌ಗಳ ಮಾಹಿತಿ

**ಕೋಷ್ಟಕ: 40**

| ಬ್ಲಾಕ್‌ಗಳ ಹಾಜರಾತಿ | | |
|---|---|---|
| ಕ್ರಮ. ಸಂಖ್ಯೆ | ಬ್ಲಾಕ್‌ಗಳ ಹೆಸರು | ಶೇಕಡಾ ಹಾಜರಾತಿ |
| 1 | ಹೆಚ್.ಡಿ.ಕೋಟೆ | 91.2 |
| 2 | ಹುಣಸೂರು | 100 |
| 3 | ಕೆ.ಆರ್.ನಗರ | 94.1 |
| 4 | ಮೈ.ಉತ್ತರ | 75 |
| 5 | ಮೈ.ದಕ್ಷಿಣ | 93.90% |
| 6 | ಮೈ.ಗ್ರಾಮಾಂತರ | 94.40% |
| 7 | ನಂಜನ ಗೂಡು | 94.30% |
| 8 | ತಿ.ನರಸೀಪುರ | 100% |
| 9 | ಪಿರಿಯಾ ಪಟ್ಟಣ | 100% |

- ಹುಣಸೂರು, ಪಿರಿಯಾ ಪಟ್ಟಣ, ತಿ.ನರಸೀಪುರ ತಾಲ್ಲೂಕುಗಳಲ್ಲಿ 100% ಹಾಜರಾತಿ ಕಂಡು ಬರುತ್ತಿದೆ.ಈ ಮೂರು ತಾಲ್ಲೂಕುಗಳು ಗ್ರಾಮಾಂತರ ತಾಲ್ಲೂಕುಗಳಾಗಿದ್ದರೂ ಉತ್ತಮ ಹಾಜರಾತಿಯನ್ನು ಹೊಂದಿರುವುದು ಒಂದು ಉತ್ತಮ ಬೆಳವಣಿಗೆಯಾಗಿರುತ್ತದೆ.
- ಎಚ್ ಡಿ ಕೋಟೆ ಬ್ಲಾಕಿನಲ್ಲಿ ಶೇ 91 ರಷ್ಟು ಹಾಜರಾತಿ ಕಂಡುಬರುತ್ತಿದೆ. ನಗರದಿಂದ ಅತ್ಯಂತ ದೂರದಲ್ಲಿರುವ ಹಾಡಿ ಶಾಲೆಗಳ ಸ್ಥಿತಿಗತಿ, ಶಿಕ್ಷಕರ ಕೊರತೆ, ತಮ್ಮ ಸಂಸ್ಕೃತಿಯನ್ನು ಬಿಂಬಿಸದ ಪಠ್ಯ ಚಟುವಟಿಕೆಗಳು, ಶಿಕ್ಷಕರು ಮಕ್ಕಳ ಕಾಡಿನ ಬದುಕಿಗೆ ಕಲಿಕೆಯನ್ನು ಅನ್ವಯಿಸುವಲ್ಲಿ ವಿಫಲರಾಗಿರುವುದು, ಶಾಲೆಯಲ್ಲಿನ ಸ್ವಾತಂತ್ರ್ಯರಹಿತ ವಾತಾವರಣ, ಪೋಷಕರು ತಮ್ಮ ಕಾರ್ಯಸ್ಥಳಕ್ಕೆ ಮಕ್ಕಳನ್ನು ಕರೆದೊಯ್ಯುವುದು, ಕೂಲಿಗೆ ಮಕ್ಕಳನ್ನು ಉಪಯೋಗಿಸಿಕೊಳ್ಳುವುದು ಹಾಗೂ ಪೋಷಕರ ಅನಾಸಕ್ತಿ ಇದಕ್ಕೆ ಕಾರಣವಾಗಿರಬಹುದು
- ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳು ಪ್ರೌಢಾವಸ್ಥೆಗೆ ಬರುವುದರಿಂದ ದುಡಿಮೆಯ ಕಡೆ ಹೆಚ್ಚು ಗಮನ ನೀಡುತ್ತಿರುತ್ತಾರೆ. 6ನೇ ತರಗತಿಗೆ ಬಂದ ಹೆಣ್ಣು ಮಕ್ಕಳನ್ನು ದೊಡ್ಡವರಾದ ಕೂಡಲೇ ಶಾಲೆಗೆ ಕಳುಹಿಸಲು ನಿಲ್ಲಿಸುವ ಕೆಲಸ ಈಗಲೂ ಮುಂದುವರಿಯುತ್ತಿದೆ.
- ಮೈಸೂರು ಉತ್ತರ ವಲಯದಲ್ಲಿ ಕೇವಲ 75% ಹಾಜರಾತಿ ಇರುವುದು ಗಂಭೀರವಾಗಿ ಪರಿಗಣಿಸಬೇಕಾದ ಅಂಶವಾಗಿರುತ್ತದೆ.
- ಹೆಚ್ಚಿನ ಮಕ್ಕಳು ಸ್ಲಂ ಮತ್ತು ಕೂಲಿ ಕಾರ್ಮಿಕರ ಮಕ್ಕಳಾಗಿದ್ದು ಶಾಲೆಗೆ ಗೈರುಹಾಜರಾಗುತ್ತಿರುವುದು ಶಾಲಾ ಭೇಟಿಯಿಂದಲೂ ಸ್ಪಷ್ಟವಾಗುತ್ತಿದೆ.

- ಸ್ಲಂ ಪ್ರದೇಶದ ಮಕ್ಕಳು ಕೌಟುಂಬಿಕವಾಗಿ ಹೆಚ್ಚು ಮಾನಸಿಕ ತುಮುಲ ಮತ್ತು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅವರ ಹಾಜರಾತಿಯನ್ನು ಹೆಚ್ಚಿಸಬೇಕಾದರೆ ಆಪ್ತಸಮಾಲೋಚನೆಯ ಅವಶ್ಯಕತೆಯಿದೆ. ಶಾಲೆಗಳಲ್ಲಿ ಆಪ್ತ ಸಮಾಲೋಚನೆಯ ಮೂಲಕ ಮಕ್ಕಳ ತುಮುಲಗಳಿಗೆ ಪರಿಹಾರ ನೀಡುವಲ್ಲಿ ಶಿಕ್ಷಕರು ವಿಫಲರಾಗುತ್ತಿರುವುದು ಇದಕ್ಕೆ ಒಂದು ಕಾರಣವಾಗಿರಬಹುದು. ಇದಕ್ಕೆ ಶಿಕ್ಷಕರಿಗೆ ವಿಶೇಷ ತರಬೇತಿಯ ಅಗತ್ಯತೆ ಇದೆ.
- ನಗರ ವಲಯದ ಪೋಷಕರಲ್ಲಿ ಮಕ್ಕಳ ಶಿಕ್ಷಣದ ಬಗ್ಗೆ ಜಾಗೃತಿಯನ್ನು ಮೂಡಿಸಬೇಕಾಗಿದೆ. ಶಿಕ್ಷಕರೂ ಈ ನಿಟ್ಟಿನಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸಿ ಕ್ರಮಕೈಗೊಳ್ಳಬೇಕಾಗಿದೆ.

**3). ಹಾಜರಾತಿಯು ಕಡಿಮೆ ಇರುವ ತರಗತಿಗಳು ಎಲ್ಲಾ ಶಾಲೆಗಳಲ್ಲಿಯು ಇದೆಯೇ? ಎಲ್ಲಾ ಬ್ಲಾಕ್‌ಗಳಲ್ಲಿ ಕಡಿಮೆ ಇದೆಯೇ?/ಕೆಲವೇ ಬ್ಲಾಕ್‌ಗಳಲ್ಲಿ ಬೇರೆ ಬೇರೆ ತರಗತಿಗಳಲ್ಲಿ ಕಡಿಮೆ ಇದೆಯೇ ಈ ಅಂಶವನ್ನು ಲಿಂಗವಾರು ವಿಶ್ಲೇಷಿಸಿ, ಹಾಜರಾತಿ ಜನ ವಸತಿ ಪ್ರದೇಶದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಪಡಿಸ್ಥಿತಿಗೂ ಸಂಬಂಧ ಇದೆಯೇ ಎಂಬುದನ್ನು ವಿಶ್ಲೇಷಿಸಿ, ಈ ಅಂಶಗಳು ಕಲಿಕೆಯ ಮೇಲೆ ಪ್ರಭಾವ ಬೀರುತ್ತಿವೆಯೇ? ಇಲ್ಲವೇ? ಹೇಗೆ? ಕಾರಣಸಮೇತ ಪ್ರಸ್ತಾಪಿಸಿ.**

**ಸರಾಸರಿ ಹಾಜರಾತಿಯಂತೆ ಶಾಲೆಗಳ ಸಂಖ್ಯೆ:**

**ಕೋಷ್ಟಕ–41**

| ಕ್ರ. ಸಂ | ಬ್ಲಾಕ್‌ಗಳು | ಒಟ್ಟು | | | | | | | | |
|---|---|---|---|---|---|---|---|---|---|---|
| | | ಬಾಲಕರು | | | ಬಾಲಕಿಯರು | | | ಒಟ್ಟು | | |
| | | 80 % ಮೇಲ್ಪಟ್ಟು | 60% – 79% | 60% ಕ್ಕಿಂತ ಕಡಿಮೆ | 80 % ಮೇಲ್ಪಟ್ಟು | 60% – 79% | 60% ಕ್ಕಿಂತ ಕಡಿಮೆ | 80 % ಮೇಲ್ಪಟ್ಟು | 60% – 79% | 60% ಕ್ಕಿಂತ ಕಡಿಮೆ |
| 1 | ಹೆಚ್.ಡಿ.ಕೋಟೆ | 281 | 20 | 7 | 281 | 20 | 7 | 281 | 20 | 7 |
| 2 | ಹುಣಸೂರು | 286 | 0 | 0 | 286 | 0 | 0 | 286 | 0 | 0 |
| 3 | ಕೆ.ಆರ್.ನಗರ | 256 | 3 | 3 | 207 | 11 | 3 | 208 | 10 | 3 |
| 4 | ಮೈ.ಉತ್ತರ | 51 | 14 | 3 | 52 | 14 | 2 | 51 | 14 | 3 |
| 5 | ಮೈ.ದಕ್ಷಿಣ | 31 | 2 | 0 | 30 | 3 | 0 | 31 | 2 | 0 |
| 6 | ಮೈ.ಗ್ರಾಮಾಂತರ | 209 | 7 | 1 | 206 | 11 | 0 | 205 | 11 | 1 |
| 7 | ನಂಜನ ಗೂಡು | 248 | 18 | 0 | 253 | 13 | 0 | 251 | 15 | 0 |
| 8 | ತಿ.ನರಸೀಪುರ | 230 | 0 | 0 | 230 | 0 | 0 | 230 | 0 | 0 |
| 9 | ಪಿರಿಯಾ ಪಟ್ಟಣ | 285 | 0 | 0 | 285 | 0 | 0 | 285 | 0 | 0 |

- ಹಾಜರಾತಿ ಕಡಿಮೆ ಇರುವಂತಹ ತರಗತಿಗಳು ಎಲ್ಲಾ ಶಾಲೆಗಳಲ್ಲಿಯೂ ಇರುವುದಿಲ್ಲ.
- ಎಲ್ಲಾ ಕ್ಲಸ್ಟರ್‌ಗಳಲ್ಲಿಯೂ ಇರುವುದಿಲ್ಲ. ಡಿ.ಬಿ.ಕುಪ್ಪೆ, ಎನ್.ಬೇಗೂರು ಹಾಗೂ ಬಿ.ಮಟಕೆರೆ ಮುಂತಾದ ಕಾಡಂಚಿನ ಪ್ರದೇಶಗಳಲ್ಲಿ ಹಾಜರಾತಿ ಕೊರತೆ ಕಂಡುಬಂದಿದೆ.
- ಮೈಸೂರು ನಗರ ಪ್ರದೇಶದ ಸ್ಲಂ ಪ್ರದೇಶಗಳಲ್ಲಿ ಹೆಚ್ಚಿನ ಗೈರುಹಾಜರಿ ಕಂಡು ಬಂದಿದೆ.
- ಅದರಲ್ಲೂ ಕಿರಿಯ ಪ್ರಾಥಮಿಕ ಶಾಲೆಗಳಿಗಿಂತ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳು ಪ್ರೌಢಾವಸ್ಥೆಗೆ ಬರುವುದರಿಂದ ದುಡಿಮೆಯ ಕಡೆ ಹೆಚ್ಚು ಗಮನ ನೀಡುತ್ತಿರುತ್ತಾರೆ. 6ನೇ ತರಗತಿಗೆ ಬಂದ ಹೆಣ್ಣು ಮಕ್ಕಳನ್ನು ದೊಡ್ಡವರಾದ ಕೂಡಲೇ ಶಾಲೆಗೆ ಕಳುಹಿಸಲು ನಿಲ್ಲಿಸುವ ಕೆಲಸ ಈಗಲೂ ಈ ಕ್ಲಸ್ಟರ್‌ಗಳಲ್ಲಿ ನಡೆಯುತ್ತಿದೆ.
- ಮಕ್ಕಳ ಹಾಜರಾತಿಯ ಮೇಲೆ ಪೋಷಕರ ಶೈಕ್ಷಣಿಕ ಅರ್ಹತೆಯೂ ಪ್ರಭಾವವನ್ನು ಬೀರುತ್ತದೆ.
- ಆರ್ಥಿಕ ಮತ್ತು ಸಾಮಾಜಿಕ ಅಂಶಗಳು ನಿಜವಾಗಿಯೂ ಪರಿಣಾಮ ಬೀರುತ್ತವೆ. ಆರ್ಥಿಕವಾಗಿ ಹಿಂದುಳಿದ ಗ್ರಾಮಗಳಲ್ಲಿ ಹೆಚ್ಚು ಜನ ಪೋಷಕರು ಅನಕ್ಷರಸ್ಥರಾಗಿಯೇ ಉಳಿದಿರುವುದು ಒಂದು ಕಾರಣವಾಗಿರಬಹುದು.

- ವಿಶೇಷವಾಗಿ ಬಡ ಪೋಷಕರು ಶಿಕ್ಷಣದ ಬಗ್ಗೆ ಹೆಚ್ಚು ಆಸಕ್ತಿ ತೋರಿಸುವುದಿಲ್ಲ. ಶ್ರೀಮಂತ ಪೋಷಕರು ಖಾಸಗಿ ಶಾಲೆಗಳಲ್ಲಿ ಮಕ್ಕಳನ್ನು ದಾಖಲಿಸುವುದು ಕಂಡುಬರುತ್ತದೆ.

4). ಸರಾಸರಿ ಹಾಜರಾತಿ ಕಡಿಮೆ ಇರುವ ಬ್ಲಾಕ್‌ಗಳ ಇಳಿಕೆವಾರು ಪಟ್ಟಿ ತಯಾರಿಸಿ.

**ಕೋಷ್ಟಕ:42**

| ಬ್ಲಾಕ್‌ಗಳ ಹಾಜರಾತಿ | | |
|---|---|---|
| ಕ್ರಮ. ಸಂಖ್ಯೆ | ಬ್ಲಾಕ್‌ಗಳ ಹೆಸರು | ಶೇಕಡಾ ಹಾಜರಾತಿ |
| 1 | ಮೈ.ಗ್ರಾಮಾಂತರ | 94.40% |
| 2 | ನಂಜನ ಗೂಡು | 94.30% |
| 3 | ಕೆ.ಆರ್.ನಗರ | 94.1 |
| 4 | ಮೈ.ದಕ್ಷಿಣ | 93.90% |
| 5 | ಹೆಚ್.ಡಿ.ಕೋಟೆ | 91.2 |
| 6 | ಮೈ.ಉತ್ತರ | 75 |

5). ಹಾಜರಾತಿ ತೀರ ಕಡಿಮೆ ಇರುವ ಬ್ಲಾಕ್‌ಗಳ ಕಡಿಮೆ ಹಾಜರಾತಿ ಇರುವ ಕ್ಲಸ್ಟರ್‌ಗಳ ಪಟ್ಟಿ ತಯಾರಿಸಿ.

**ಕೋಷ್ಟಕ: 43**

| ಕ್ರ.ಸಂ | ತಾಲ್ಲೂಕು ಹೆಸರು | ಕ್ಲಸ್ಟರ್ ನ ಹೆಸರು |
|---|---|---|
| 1 | ಎಚ್‌ಡಿಕೋಟೆ | 1. ಡಿ.ಬಿ.ಕುಪ್ಪೆ 2. ಎನ್.ಬೇಗೂರು 3. ಬಿ.ಮಟಕೆರೆ 4. ಎಮ್.ಸಿ.ತಳಲು 5. |
| 2 | ಕೆ ಆರ್ ನಗರ | 1. ತಂದ್ರೆ ಕ್ಲಸ್ಟರ್. 2. ಅರಕೆರೆಕೊಪ್ಪಲು ಕ್ಲಸ್ಟರ್ |
| 3 | ಮೈಸೂರು ಉತ್ತರ | ಹೆಬ್ಬಾಳು, ಹಾರ್ಸ್‌ಲೇನ್, ವಿನಾಯಕ ನಗರ, ರಾಜೇಂದ್ರ ನಗರ, ಎನ್.ಆರ್ಓ.ಮೊಹಲ್ಲಾ, ನಿಜಾಮಿಯಾ, ಜಿ.ಬಿ.ಪಾಳ್ಯ, ರಾಜೀವ್ ನಗರ, ಸೆಂಟ್ರಲ್ |
| 4 | ಮೈಸೂರು ಗ್ರಾ | ಇಲವಾಲ, ವರುಣ, ಕೆ ಆರ್ ಮಿಲ್ಸ್, ಶ್ರೀರಾಂಪುರ, ಹಾರೋಹಳ್ಳಿ, ಹಂಚ್ಯಾ, ಉದ್ಬೂರು |

- ತೀರ ಕಳಪೆ ಹಾಜರಾತಿ ಇರುವ ಶಾಲೆಗಳಲ್ಲಿ ತರಗತಿವಾರು/ಲಿಂಗವಾರು/ಸಾಮಾಜಿಕ ಗುಂಪುವಾರು ಪಟ್ಟಿ ತಯಾರಿಸಿ.

7). ಮುಖ್ಯವಾಹಿನಿಗೆ ಬಂದಿರುವ ಸಿ.ಡಬ್ಲ್ಯೂ.ಎಸ್.ಎನ್ ಮತ್ತು ಓಓಎಸ್‌ಸಿ ಮಕ್ಕಳ ಹಾಜರಾತಿಯ ಶೇ ಪ್ರಮಾಣದ ಪಟ್ಟಿಯನ್ನು ಬ್ಲಾಕ್‌ವಾರು ತಯಾರಿಸಿ.

**ಕೋಷ್ಟಕ–44**

| SL No | ತಾಲ್ಲೂಕುಗಳ ಹೆಸರು | Idintifide and Enrolled |
|---|---|---|
| 1 | ಹೆಚ್ ಡಿ ಕೋಟೆ | 441 |
| 2 | ಹುಣಸೂರು | 506 |
| 3 | ಕೆ ಆರ್ ನಗರ | 496 |
| 4 | ಮೈಸೂರು ಉತ್ತರ | 693 |
| 5 | ಮೈಸೂರು ಗ್ರಾಮಾಂತರ | 698 |
| 6 | ಮೈಸೂರು ದಕ್ಷಿಣ | 537 |
| 7 | ನಂಜನಗೂಡು | 703 |
| 8 | ಪಿರಿಯಾಪಟ್ಟಣ | 383 |
| 9 | ಟಿ ನರಸೀಪುರ | 549 |
| | ಒಟ್ಟು | 5006 |

- ಮೈಸೂರು ನಗರ ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿ ಹೆಚ್ಚು ಮಕ್ಕಳನ್ನು ಗುರುತಿಸಿ ದಾಖಲಿಸಲಾಗಿದೆ.

**8). ಮೇಲಿನ ಅಂಕಿ–ಅಂಶಗಳನ್ನು ಕ್ಯೂ.ಎಂ.ಟಿ.ಯ ಆಧಾರವಾಗಿ ಬೇರೆ ಬೇರೆ ಆಧಾರದಲ್ಲಿ ವಿಶ್ಲೇಷಿಸಿ, ತೆಗೆದುಕೊಂಡಿರುವ ಪರಿಹಾರ ಕ್ರಮಗಳೇನು?**

- ಹಾಜರಾತಿ ಕಡಿಮೆ ಇರುವಂತಹ ತರಗತಿಗಳು ಎಲ್ಲಾ ಶಾಲೆಗಳಲ್ಲಿಯೂ ಇರುವುದಿಲ್ಲ. ಎಲ್ಲಾ ಕ್ಲಸ್ಟರ್‌ಗಳಲ್ಲಿಯೂ ಇರುವುದಿಲ್ಲ. ಡಿ.ಬಿ.ಕುಪ್ಪೆ, ಎನ್.ಬೇಗೂರು, ಬಿ.ಮಟಕೆರೆ ಮುಂತಾದ ಕಾಡಂಚಿನ ಪ್ರದೇಶಗಳಲ್ಲಿ ಹಾಗೂ ನಗರ ವಲಯದ ಪೌರ ಕಾರ್ಮಿಕ ಪ್ರದೇಶದಲ್ಲಿರುವ ಶಾಲೆಗಳಲ್ಲಿ ಹಾಜರಾತಿ ಕೊರತೆ ಕಂಡುಬಂದಿದೆ. ಅದರಲ್ಲೂ ಕಿರಿಯ ಪ್ರಾಥಮಿಕ ಶಾಲೆಗಳಿಗಿಂತ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳು ಪ್ರೌಢಾವಸ್ಥೆಗೆ ಬರುವುದರಿಂದ ದುಡಿಮೆಯ ಕಡೆ ಹೆಚ್ಚು ಗಮನ ನೀಡುತ್ತಿರುತ್ತಾರೆ. 6ನೇ ತರಗತಿಗೆ ಬಂದ ಹೆಣ್ಣು ಮಕ್ಕಳನ್ನು ದೊಡ್ಡವರಾದ ಕೂಡಲೇ ಶಾಲೆಗೆ ಕಳುಹಿಸಲು ನಿಲ್ಲಿಸುವ ಕೆಲಸ ಈಗಲೂ ಈ ಕ್ಲಸ್ಟರ್‌ಗಳಲ್ಲಿ ನಡೆಯುತ್ತಿದೆ.
- ಎಲ್ಲಾ ಸರ್ಕಾರಿ ಶಾಲೆಗಳ ಹಾಜರಾತಿ ವಿಶ್ಲೇಷಿಸಿದಾಗ ತೀರ ಕಳಪೆ ಹಾಜರಾತಿ ಯಾವ ಶಾಲಯಲ್ಲಿಯೂ ಇರುವುದಿಲ್ಲ. ಆದರೆ ಕಡಿಮೆ ಹಾಜರಾತಿ ಶಾಲೆಗಳಿರುವ ಕ್ಲಸ್ಟರ್‌ಗಳನ್ನು ಇಳಿಕೆ ಕ್ರಮದಲ್ಲಿ ವಿಶ್ಲೇಷಿಸಿದಾಗ ಕಡಿಮೆ ಕಂಡು ಬರುತ್ತದೆ.

**ತೆಗೆದುಕೊಂಡಿರುವ ಕ್ರಮಗಳು:**

- ಕಡಿಮೆ ಹಾಜರಾತಿ ಹೊಂದಿರುವ ಕ್ಲಸ್ಟರ್‌ನ ಶಾಲೆಗಳಲ್ಲಿ ಹಾಜರಾತಿ ಉತ್ತಮಪಡಿಸುವ ಸಲುವಾಗಿ ಮುಖ್ಯ ಶಿಕ್ಷಕರ, ಸಹ ಶಿಕ್ಷಕರ, ಪೋಷಕರ ಸಭೆಗಳನ್ನು ಏರ್ಪಡಿಸಿ ಜಾಗೃತಿ ಮೂಡಿಸಲಾಗಿದೆ., ಮನೆ ಮನೆಗೆ ಭೇಟಿ ನೀಡಿ ಮಕ್ಕಳನ್ನು ಶಾಲೆಗೆ ಕರೆ ತರುವ ಪ್ರಯತ್ನವನ್ನು ಮಾಡಲಾಗಿದೆ.
- ದಾಖಲಾತಿ ಆಂದೋಲನದ ಹಾಗೂ ವಿಶೇಷ ದಾಖಲಾತಿ ಆಂದೋಲನದಲ್ಲಿ ಕಡ್ಡಾಯ ಹಾಜರಾತಿಯ ಬಗ್ಗೆ ಮನವರಿಕೆ ಮಾಡಲಾಗಿದೆ.
- ವಿಶೇಷ ದಾಖಲಾತಿ ಆಂದೋಲನ ಮಾಡಲಾಗಿದೆ, ಸ್ಥಳೀಯ ದಿನಪತ್ರಿಕೆಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಮಾಡಿ ಪ್ರಸಾರ ಮಾಡಲಾಗಿದೆ. ವಲಸೆ ಹೋಗಿರುವ ಮಕ್ಕಳು ಬೇರೆ ತಾಲ್ಲೂಕು ಜಿಲ್ಲೆಗಳಲ್ಲಿ ಶಾಲೆಗೆ ಹಾಜರಾಗಿರುವ ಕುರಿತು ಮಕ್ಕಳ ಜಾಡುಹಿಡಿದು ಶಾಲೆಗೆ ದಾಖಲಾಗಿರುವುದನ್ನು ಖಚಿತಪಡಿಸಲಾಗಿದೆ.
- ಹಾಜರಾತಿ ಪ್ರಾಧಿಕಾರ ಅಧಿಕಾರಿ (ಇ.ಸಿ.ಓ.) ರವರಿಗೆ ಮಾಹಿತಿ ನೀಡಿ, ಅಂತಹ ಶಾಲೆಗಳ ಮನೆ ಭೇಟಿ, ನೋಟೀಸ್ ಜಾರಿ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಉತ್ತಮಪಡಿಸಲು ಕ್ರಮವಹಿಸಲಾಗಿದೆ.
- ಎಸ್.ಡಿ.ಎಮ್.ಸಿ ತರಬೇತಿಯಲ್ಲಿ ಶಾಲೆಯ ವಿದ್ಯಾರ್ಥಿಗಳಿಗೆ ದೊರಕುವ ಸರ್ಕಾರದ ಸವಲತ್ತುಗಳ ಕುರಿತು ಮನವರಿಕೆ ಮಾಡಲಾಗಿದೆ.
- ಎಸ್.ಡಿ.ಎಮ್.ಸಿ ಜೊತೆ ನಿಯಮಿತವಾಗಿ ಸಭೆ ನಡೆಸಿ, ಹಾಜರಾತಿ ಉತ್ತಮ ಪಡಿಸಲಾಗಿದೆ.
- ಗ್ರಾಮ ಕಾವಲು ಸಭೆಯ ಜೊತೆಗೂಡಿ ಓಓಎಸ್‌ಸಿ ಮಕ್ಕಳನ್ನು ಶಾಲೆಗೆ ತಂದು, ಹಾಜರಾತಿ ಉತ್ತಮ ಪಡಿಸುವ ಪ್ರಯತ್ನ ನಡೆಸಿದೆ.
- ಫೋನ್ – ಇನ್ – ಕಾರ್ಯಕ್ರಮದ ಮೂಲಕ ಪೋಷಕರ ಮನ ಒಲಿಸಲಾಗಿದೆ.
- ಸಿ.ಸಿ.ಇ ಪರಿಣಾಮಕಾರಿ ಅನುಷ್ಠಾನಕ್ಕೆ ಒತ್ತು ನೀಡಲಾಗಿದೆ. ಶಿಶು ಸ್ನೇಹಿ ವಾತಾವರಣ ಕಲ್ಪಿಸಲಾಗಿದೆ..
- ಆಕರ್ಷಣೀಯ ಶಾಲಾ ವಾತಾವರಣದ ಸೃಷ್ಠಿ ಮಾಡಲಾಗಿದೆ.

# ವಿಭಾಗ– ಬಿ

## ಸಿ.ಡಬ್ಲ್ಯೂ.ಎಸ್.ಎನ್ ಮತ್ತು ಓಓಎಸ್‌ಸಿ ಶಾಲೆಗಳ ವಿವರ:

**ಕೋಷ್ಟಕ–45**

ಸಿ.ಡಬ್ಲ್ಯೂ.ಎಸ್.ಎನ್ ಮತ್ತು ಓಓಎಸ್‌ಸಿ ಶಾಲೆಗಳ ವಿವರ

| ಕ್ರ. ಸಂ | ಬ್ಲಾಕ್‌ಗಳು | ಸಿ.ಡಬ್ಲ್ಯೂ.ಎಸ್.ಎನ್ ಮಕ್ಕಳ ಸಂಖ್ಯೆ | ಸಿ.ಡಬ್ಲ್ಯೂ.ಎಸ್.ಎನ್ ಮಕ್ಕಳು ಇರುವ ಶಾಲೆಗಳ ಸಂಖ್ಯೆ | ಓಓಎಸ್.ಸಿ ಮಕ್ಕಳನ್ನು ದಾಖಲಿಸಿದ ಮಕ್ಕಳ ಸಂಖ್ಯೆ – ಗಂಡು | ಓಓಎಸ್.ಸಿ ಮಕ್ಕಳನ್ನು ದಾಖಲಿಸಿದ ಮಕ್ಕಳ ಸಂಖ್ಯೆ – ಹೆಣ್ಣು | ಓಓಎಸ್.ಸಿ ಮಕ್ಕಳನ್ನು ದಾಖಲಿಸಿದ ಮಕ್ಕಳ ಸಂಖ್ಯೆ – ಒಟ್ಟು | ವಿಶೇಷ ತರಬೇತಿಯನ್ನು ಪಡೆಯುತ್ತಿರುವ ಕೇಂದ್ರಗಳ ಸಂಖ್ಯೆ – ಅದೇ ಶಾಲೆಯಲ್ಲಿ | ವಸತಿ ರಹಿತ – ಸರ್ಕಾರೇತರ ಸಂ | ವಸತಿ ರಹಿತ – ಸರ್ಕಾರಿ | ವಸತಿ ಸಹಿತ – ಸರ್ಕಾರೇತರ ಸಂ | ವಸತಿ ಸಹಿತ – ಸರ್ಕಾರಿ | ತರಬೇತಿ ಪಡೆಯುತ್ತಿರುವ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ | ವಿದ್ಯಾರ್ಥಿಗಳ ಹಾಜರಾತಿಯನ್ನು ಉತ್ತಮಪಡಿಸಲು ಜಿಲ್ಲೆಯಲ್ಲಿ ಕೈಗೊಂಡ ಕ್ರಮಗಳು (ಪ್ರಮುಖ 3 ನ್ನು ನಮೂದಿಸಿ) |
|---|---|---|---|---|---|---|---|---|---|---|---|---|---|
| 1 | ಹೆಚ್.ಡಿ.ಕೋಟೆ | 545 | 64 | 136 | 94 | 230 | 0 | 1 | 6 | 0 | 1 | 0 | –ಎಸ್.ಡಿ.ಎಮ್.ಸಿ ತರಬೇತಿಯಲ್ಲಿ ಶಾಲೆಯ ವಿದ್ಯಾರ್ಥಿಗಳಿಗೆ ದೊರಕುವ ಸರ್ಕಾರದ ಸವಲತ್ತುಗಳ ಮನವರಿಕೆ ಮಾಡುವುದು |
| 2 | ಹುಣಸೂರು | 506 | 89 | 147 | 167 | 314 | 0 | 0 | 0 | 1 | 0 | 52 | –ವಿಶೇಷ ದಾಖಲಾತಿ ಆಂದೋಲನ ಮಾಡಲಾಗಿದೆ, – –ಸ್ಥಳೀಯ ದಿನಪತ್ರಿಕೆಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಮಾಡಿ ಪ್ರಸಾರ ಮಾಡಲಾಗಿದೆ. –12 ಆರ್.ಎಸ್.ಡಿ ಕೇಂದ್ರ ನಡೆಯುತ್ತಿದೆ |
| 3 | ಕೆ.ಆರ್.ನಗರ | 496 | 25 | 114 | 75 | 189 | 189 | 0 | 1 | 0 | 0 | 0 | –ದಾಖಲಾತಿ ಆಂದೋಲನ ನಡೆಸಲಾಗಿದೆ. –ಸಮುದಾಯ ಜಾಗೃತಿ ಕಾರ್ಯಕ್ರಮ ನಡೆಸಲಾಗಿದೆ. – ಪೋಷಕರಿಗೆ ಈ ಸಂಬಂಧ ತರಬೇತಿ ನೀಡಲಾಗಿದೆ. |
| 4 | ಮೈ.ಉತ್ತರ | 220 | 22 | 372 | 335 | 707 | 1 | 0 | 0 | 2 | 1 | 0 | –ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಗೃಹಾಧಾರಿತ ಮತ್ತು ಎಸ್.ಆರ್.ಪಿ. ಕೇಂದ್ರಗಳ ಮೂಲಕ ಮುಖ್ಯವಾಹಿನಿಗೆ ತರಲು ಹಲವಾರು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. –ಶಾಲೆಗಳಲ್ಲಿ ಪೂರಕ ಬೋಧನೆ ಏರ್ಪಡಿಸುವುದು, ಬಲವರ್ಧನೆ ಕೈಗೊಳ್ಳುವುದು, ಪ್ರೋತ್ಸಾಹದಾಯಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. |
| 5 | ಮೈ.ದಕ್ಷಿಣ | 537 | 10 | 0 | 0 | 203 | 0 | 0 | 0 | 3 | 0 | 0 | –ಶಾಲಾ ದಾಖಲಾತಿ ಆಂದೋಲನಾ, ಪೋಷಕರ ಮನೆ ಮನೆಗೆ ಭೇಟಿ. |
| 6 | ಮೈ.ಗ್ರಾಮಾಂತರ | 262 | 70 | 89 | 77 | 166 | 12 | 0 | 1 | 0 | 0 | 0 | –ಕಂಪ್ಯೂಟರ್ ಶಿಕ್ಷಣ ನೀಡುವ ಮೂಲಕ, ಹೆಚ್ಚು ಹಾಜರಾತಿ ಹೊಂದಿರುವ ವಿದ್ಯಾರ್ಥಿಗಳಿಗೆ ಉತ್ತೇಜನ, ಮೀನಾ ತಂಡದ ಮೂಲಕ |
| 7 | ನಂಜನಗೂಡು | 703 | 42 | 110 | 90 | 200 | 9 | 0 | 0 | 0 | 0 | 0 | –ಭಿತ್ತಿ ಪತ್ರಗಳು ಹಾಗೂ ಸೂಚನಾ ಫಲಕಗಳ ಮೂಲಕ ಪ್ರಚಾರ, ವಿಶೇಷತೆಯುಳ್ಳ ಮಕ್ಕಳನ್ನು ಶಾಲೆಗೆ ಸೇರಿಸುವುದು ಕಡ್ಡಾಯ ಎನ್ನುವ ಬಗ್ಗೆ ಜಾಗೃತಿ ದಾಖಲಾತಿಯನ್ನು ಹೆಚ್ಚಿಸಲು ಸ್ವಯಂ ಸೇವಕರ ನೇಮಕ. |
| 8 | ತಿ.ನರಸೀಪುರ | 465 | 30 | 106 | 73 | 179 | 179 | 0 | 0 | 0 | 0 | 0 | –ವಿಶೇಷ ದಾಖಲಾತಿ ಆಂದೋಲನ, ಪೋಷಕರ ಸಭೆ ವೈದ್ಯಕೀಯ ತಪಾಸಣೆ, ಸಾಧನ ಸಲಕರಣೆ ವಿತರಣೆ |
| 9 | ಪಿರಿಯಾಪಟ್ಟಣ | 383 | 85 | 151 | 101 | 252 | 9 | 0 | 0 | 0 | 0 | 0 | –1ನೇ ತರಗತಿಯಿಂದಲೇ ಉತ್ತಮ ಕಲಿಕೋಪಕರಣಗಳ ಬಳಕೆ, ಇಂಗ್ಲೀಷ್ ಭೋದನೆ ಕೈಗೊಂಡಿರುವುದು, –ಹಾಜರಾತಿ ಪ್ರೋತ್ಸಾಹಧನ ವಿತರಣೆ, ಕ್ಷೀರ ಭಾಗ್ಯ ಹಾಗೂ ಅಕ್ಷರದಾಸೋಹ ಕಾರ್ಯಕ್ರಮಗಳ ಯಶಸ್ವಿಯಾಗಿ ಸದ್ಬಳಕೆ ಮಾಡಿರುವುದು, ಆಟದೊಂದಿಗೆ ಪಾಠ, ಸಮುದಾಯದ ಸಹಭಾಗಿತ್ವದ ಸಹಕಾರ ಪಡೆದು ಸರ್ಕಾರದ ಶೈಕ್ಷಣಿಕ ಯೋಜನೆಗಳನ್ನು ತಿಳಿಸುವ ಮೂಲಕ ಹಾಗೂ ಕಂಪ್ಯೂಟರ್ ಶಿಕ್ಷಣದ ಮೂಲಕ ಮಕ್ಕಳ ಹಾಜರಾತಿಯನ್ನು ಶಾಲೆಗಳಲ್ಲಿ ಉತ್ತಮಪಡಿಸಲು ಕ್ರಮಕೈಗೊಳ್ಳಲಾಗಿದೆ. |

1. ವಿಶೇಷ ಅಗತ್ಯವುಳ್ಳ ಮಕ್ಕಳ ದಾಖಲಾತಿ ಹೆಚ್ಚಿಸಲು ಶಾಲೆ/ಕ್ಲಸ್ಟರ್/ಬ್ಲಾಕ್ ಹಂತದಲ್ಲಿ ಕೈಗೊಂಡಿರುವ ಕ್ರಮಗಳೇನು ?

- ವಿಶೇಷ ದಾಖಲಾತಿ ಆಂದೋಲನ ಮಾಡಲಾಗಿದೆ, ಸ್ಥಳೀಯ ದಿನಪತ್ರಿಕೆಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಮಾಡಿ ಪ್ರಸಾರ ಮಾಡಲಾಗಿದೆ.
- ಶಿಕ್ಷಕರು ಮನೆಗಳಿಗೆ ಭೇಟಿಯನ್ನು ನೀಡಿ ಪೋಷಕರ ಮನವೊಲಿಸಿರುತ್ತಾರೆ.
- ವಲಸೆ ಹೋಗಿರುವ ಮಕ್ಕಳು ಬೇರೆ ತಾಲ್ಲೂಕು, ಜಿಲ್ಲೆಗಳಲ್ಲಿ ಶಾಲೆಗೆ ಹಾಜರಾಗಿರುವ ಕುರಿತು ಮಕ್ಕಳ ಜಾಡುಹಿಡಿದು ಶಾಲೆಗೆ ದಾಖಲಾಗಿರುವುದನ್ನು ಖಚಿತಪಡಿಸಲಾಗಿದೆ. ಆರ್.ಎಸ್.ಟಿ ಕೇಂದ್ರ ನಡೆಯುತ್ತಿದೆ. ಗೃಹಾಧಾರಿತ ಶಿಕ್ಷಣ, ಸಮನ್ವಯ ಶಿಕ್ಷಣ ಪರಿಣಾಮಕಾರಿಯಾಗಿ ನಡೆಯುವಂತೆ ಕ್ರಮವಹಿಸಲಾಗಿದೆ.
- ವೈದ್ಯಕೀಯ ತಪಾಸಣೆ, ಸರ್ಕಾರಿ ಸೌಲಭ್ಯಗಳ ವಿತರಣೆ, ಮಾಸಿಕ ವೇತನ ವಿತರಣೆ ಮಾಡಲಾಗಿದೆ.
- ಭಿತ್ತಿ ಪತ್ರಗಳು ಹಾಗೂ ಸೂಚನಾ ಫಲಕಗಳ ಮೂಲಕ ಪ್ರಚಾರ ಕೈಗೊಂಡು, ಮುಖ್ಯಶಿಕ್ಷಕರ ಸಭೆಯಲ್ಲಿ ಆರ್.ಟಿ.ಇ. ನಿಯಮಾನುಸಾರ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಶಾಲೆಗೆ ಸೇರಿಸುವುದು ಕಡ್ಡಾಯ ಎನ್ನುವುದರ ಬಗ್ಗೆ ತಿಳಿಸಿ ದಾಖಲಾತಿಯನ್ನು ಹೆಚ್ಚಿಸಲು ಸ್ವಯಂ ಸೇವಕರ ಸಹಾಯವನ್ನು ಪಡೆದು ಅಗತ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.
- ಮಕ್ಕಳ ವೈದ್ಯಕೀಯ ತಪಾಸಣೆ ಮಾಡಿ ಪರಿಕರಗಳನ್ನು ಒದಗಿಸಲಾಗಿದೆ..
- ಸಮುದಾಯ ಮತ್ತು ಸ್ವಯಂಸೇವಾ ಸಂಸ್ಥೆಗಳ ಸಹಕಾರವನ್ನು ಪಡೆಯಲಾಗಿದೆ.
- ತರಗತಿ ಕೋಣೆಯಲ್ಲಿ ಶಿಕ್ಷಕರು ಹಾಗೂ ಇತರೆ ಮಕ್ಕಳು ಪ್ರೀತಿ ವಿಶ್ವಾಸದಿಂದ ಕಾಣುವಂತೆ ವಾತಾವರಣವನ್ನು ನಿರ್ಮಿಸಲಾಗಿದೆ..
- ಎಸ್ಆರ್ಪಿ ಕೇಂದ್ರಗಳಲ್ಲಿ ಮಾರ್ಗದರ್ಶನ ನೀಡಲು ವ್ಯವಸ್ಥೆ ಮಾಡಲಾಗಿದೆ..
- ಸರ್ಕಾರದ ಪ್ರೋತ್ಸಾಹದಾಯಕ ಯೋಜನೆಗಳನ್ನು ಸಕಾಲದಲ್ಲಿ ತಲುಪಿಸುವ ಮೂಲಕ ಹಾಗೂ 1ನೇ ತರಗತಿಯಿಂದಲೇ ಉತ್ತಮ ಕಲಿಕೋಪಕರಣಗಳ ಬಳಕೆ, ಇಂಗ್ಲೀಷ್ ಭೋದನೆ ಕೈಗೊಂಡಿರುವುದು, ಹಾಜರಾತಿ ಪ್ರೋತ್ಸಾಹಧನ ವಿತರಣೆ, ಕ್ಷೀರ ಭಾಗ್ಯ ಹಾಗೂ ಅಕ್ಷರದಾಸೋಹ ಕಾರ್ಯಕ್ರಮಗಳ ಯಶಸ್ವಿಯಾಗಿ ಸದ್ಬಳಕೆ ಮಾಡಿರುವುದು, ಆಟದೊಂದಿಗೆ ಪಾಠ, ಸಮುದಾಯದ ಸಹಭಾಗಿತ್ವದ ಸಹಕಾರ ಪಡೆದು ಸರ್ಕಾರದ ಶೈಕ್ಷಣಿಕ ಯೋಜನೆಗಳನ್ನು ತಿಳಿಸುವ ಮೂಲಕ ಹಾಗೂ ಕಂಪ್ಯೂಟರ್ ಶಿಕ್ಷಣದ ಮೂಲಕ ಮಕ್ಕಳ ಹಾಜರಾತಿಯನ್ನು ಶಾಲೆಗಳಲ್ಲಿ ಉತ್ತಮಪಡಿಸಲು ಕ್ರಮಕೈಗೊಳ್ಳಲಾಗಿದೆ.

2. ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಶಾಲೆಗೆ ಕರೆತರಲು ಶಾಲಾ ಹಂತದಲ್ಲಿ ಕೈಗೊಂಡ ಕ್ರಮಗಳು

- ಈ ಮಕ್ಕಳಿಗೆ ಸರ್ಕಾರದಿಂದ ದೊರಕುವ ಸಾಧನ ಸಲಕರಣೆಗಳನ್ನು ವಿತರಿಸಲಾಗಿದೆ. ಮಕ್ಕಳನ್ನು ಗುರುತಿಸಿ ಉತ್ತಮ ಕಲಿಕೋಪಕರಣಗಳನ್ನು ಬಳಸಿ ಅವರಿಗೆ ಬೋಧನೆ ಮಾಡುವಂತೆ ಮಾರ್ಗದರ್ಶನ ನೀಡಲಾಗಿದೆ.
- ಎಸ್.ಡಿ.ಎಂ.ಸಿ ಸಭೆ ಹಾಗೂ ವಿಶೇಷ ಅಗತ್ಯತೆಯುಳ್ಳ ಮಕ್ಕಳ ಪೋಷಕರ ಸಭೆ ನಡೆಸಿ ಮಕ್ಕಳನ್ನು ಶಾಲೆಗೆ ದಾಖಲಿಸುವಂತೆ ಜಾಗೃತಿ ಮೂಡಿಸಿದೆ.
- ಶಾಲಾ ಹಂತದಲ್ಲಿ ಶಿಕ್ಷಕರು ಮನೆ–ಮನೆ ಭೇಟಿ ನೀಡಿ ದಾಖಲಾತಿ ಆಂದೋಲನ ಸಂದರ್ಭದಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಶಾಲೆಗೆ ಕರೆತರಲು ಅಗತ್ಯಕ್ರಮಗಳನ್ನು ಕೈಗೊಂಡಿರುತ್ತಾರೆ.
- ಪ್ರತಿ ಗ್ರಾಮಪಂಚಾಯಿತಿಗಳಲ್ಲಿರುವ ಗಿಖಿಫ(ಗಿುಟಟಚಿರಜ ಖಿಝುಚಿಭುಟಟಣಚಿಣುಠಿಟ ಘಾಂಡಿಇಜಡಿ) ಇವರಿಂದ ಮಾಹಿತಿ ಪಡೆದು ದಾಖಲಾತಿ ಮಾಡಿಸಲಾಗಿದೆ.

- ಪೋಷಕರಿಗೆ ಜಾಗೃತಿ ಶಿಬಿರಗಳ ಮೂಲಕ ಮತ್ತು ತರಬೇತಿಗಳ ಮೂಲಕ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಶಾಲೆಗೆ ಸೇರಿಸಲು ಕ್ರಮಕೈಗೊಳ್ಳಲಾಗಿದೆ.

**3. ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಶಾಲಾ/ಕ್ಲಸ್ಟರ್.ಬ್ಲಾಕ್ ಹಂತದಲ್ಲಿ ನೀಡುವ ವಿಶೇಷ ಸೌಲಭ್ಯಗಳೇನು? ಈ ಸೌಲಭ್ಯಗಳು ಎಲ್ಲಾ ಮಕ್ಕಳಿಗೆ ತಲುಪಿಸಲಾಗಿದೆಯೇ ?**

- ಪ್ರತಿ ಶಾಲೆಯಲ್ಲಿ ರ್‍ಯಾಂಪ್ ಸೌಲಭ್ಯ ಮತ್ತು ಮಗು ಸ್ನೇಹಿ ಶೌಚಾಲಯ, ಉಚಿತ ವೈದ್ಯಕೀಯ ತಪಾಸಣಾ ಶಿಬಿರ ಮತ್ತು ಆಯ್ಕೆಯಾದ ಮಕ್ಕಳಿಗೆ ಉಚಿತವಾಗಿ ಸಾಧನ ಸಲಕರಣೆಗಳ ವಿತರಣೆ, ತೀವ್ರ ನ್ಯೂನತೆ ಇರುವ ಮಕ್ಕಳಿಗೆ ಗೃಹಾಧಾರಿತ ಶಿಕ್ಷಣ ಮುಂತಾದ ಯೋಜನೆಗಳು ಜಾರಿಯಲ್ಲಿದೆ. ಈ ಸೌಲಭ್ಯಗಳು ಅರ್ಹ ಮಕ್ಕಳಿಗೆ ತಲುಪುತ್ತಿವೆ.
- ಹಿಯರಿಂಗ್ ಕಿಟ್, ವೀಲ್ ಚೇರ್, ಕನ್ನಡಕಗಳು, ಬ್ರೈಲ್ ಸ್ಲೇಟ್‌ಗಳು, ಉಚಿತ ತಪಾಷಣೆ ಸೌಲಭ್ಯಗಳನ್ನು ಒದಗಿಸಲಾಗಿದೆ.
- ಶಾಲಾ ಹಂತದಲ್ಲಿ ವಿದ್ಯಾರ್ಥಿವೇತನ, ಗೃಹಾಧಾರಿತ ಶಿಕ್ಷಣ, ಸಾರಿಗೆ ಭತ್ಯೆ, ಎಸ್ಕಾರ್ಟ್ ಭತ್ಯೆ, ಎಂ.ಆರ್ ಕಿಟ್‌ಗಳನ್ನು ನೀಡಲಾಗುತ್ತಿದೆ, ಪಠ್ಯಪುಸ್ತಕ, ಸಮವಸ್ತ್ರಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಬ್ಲಾಕ್ ಹಂತದಲ್ಲಿ ವೈದ್ಯಕೀಯ ದೃಢೀಕರಣ ಪತ್ರ, ಫಿಜಿಯೋಥೆರಪಿ, ವೈದ್ಯಕೀಯ ಶಿಬಿರದಲ್ಲಿ ಶಿಫಾರಸಲು ಮಾಡಿದ ಮಕ್ಕಳಿಗೆ ಸಾಧನ ಸಲಕರಣೆಗಳನ್ನು ಇಲಾಖೆಯ ಮೂಲಕ ನೀಡಲಾಗುತ್ತಿದೆ. ಇಲಾಖೆಯಿಂದ ಮಂಜೂರಾದ ಮಕ್ಕಳಿಗೆ ಸಾಧನ– ಸಲಕರಣೆಗಳನ್ನು ಸಕಾಲದಲ್ಲಿ ತಲುಪಿಸಲಾಗಿದೆ.
- ವಿಕಲ ಚೇತನ ಮಕ್ಕಳಿಗೆ ಅಂಗವಿಕಲ ಗುರ್ತಿನ ಪತ್ರ ಮಾಡಿಸಿದ್ದು, ಸಿ.ಡಿ.ಪಿ.ಓ. ಇಲಾಖೆಯಿಂದ 1–5ನೇ ತರಗತಿಗೆ 1000 ರೂ, 6–10ನೇ ತರಗತಿ 2000 ರೂ ವಿದ್ಯಾರ್ಥಿ ವೇತನ ಸೌಲಭ್ಯ ನೀಡಲಾಗಿದೆ.
- ಎಸ್.ಆರ್.ಪಿ. ಕೇಂದ್ರದಲ್ಲಿರುವ ಮಕ್ಕಳಿಗೆ ಸಾರಿಗೆ ಭತ್ಯ 250 ರೂಗಳನ್ನು ನೀಡಲಾಗಿದೆ.
- ಗೃಹಾಧಾರಿತ ಮಕ್ಕಳಿಗೆ ಸಾರಿಗೆ ಭತ್ಯ ತಿಂಗಳಿಗೆ 250 ರೂ ರೂಗಳನ್ನು ನೀಡಲಾಗಿದೆ.
- ಗೃಹಾಧಾರಿತ ಮಕ್ಕಳಿಗೆ ಫಿಜಿಯೋ ಥೆರಫಿಗಾಗಿ ತಿಂಗಳಿಗೆ 250 ರೂ ರೂಗಳನ್ನು ವಿತರಿಸಲಾಗಿದೆ.
- ಅಂಗವಿಕಲ ಗುರುತಿನ ಪತ್ರ ಇರುವ ವಿದ್ಯಾರ್ಥಿಗಳಿಗೆ ತಿಂಗಳಿಗೆ ಕಂದಾಯ ಇಲಾಖೆಯವರಿಂದ ಮಾಸಶಾಸನ ನೀಡಲಾಗುತ್ತಿದ್ದು, 40% ಯಿಂದ 75% – 400 ರೂ, 75%–100% ಗೆ 1200 ರೂ ನೀಡಲಾಗಿದೆ.
- ಮೆಡಿಕಲ್ ಕ್ಯಾಂಪ್ ಮೂಲಕ ಸಾಧಾನೋಪಕರಣ ನೀಡಲಾಗಿದೆ.
- ಕರೆಕ್ಟಿವ್ ಸರ್ಜರಿಗೆ ಒಳಪಡುವ ಮಕ್ಕಳಿಗೆ ಉಚಿತವಾಗಿ ಶಸ್ತ್ರ ಚಿಕಿತ್ಸೆ ಮಾಡಲು ಅವಕಾಶ ನೀಡಲಾಗಿದೆ.
- ಅಘಾಖಓ ಮಕ್ಕಳಿಗೆ ಉಚಿತವಾಗಿ ಪರಿಸರ ಅಧ್ಯಯನ ಪ್ರವಾಸ ಏರ್ಪಡಿಸಲಾಗಿದೆ.
- ಅಘಾಖಓ ಮಕ್ಕಳಿಗೆ ಉಚಿತವಾಗಿ ಆಪ್ತ ಸಮಾಲೋಚನೆ & ಮಾರ್ಗದರ್ಶನ ನೀಡುವುದರಿಂದ ಮಾನಸಿಕ ಧೃಡತೆ ಹೆಚ್ಚಿಸಲಾಗಿದೆ

**4. ಗೃಹಾಧಾರಿತ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಮುಖ್ಯ ವಾಹಿನಿಗೆ ತರಲು ಆರಂಭಿಸಲಾಗಿರುವ ಎಸ್.ಆರ್.ಪಿ. ಕೇಂದ್ರಗಳು ಎಷ್ಟರ ಮಟ್ಟಿಗೆ ಯಶಸ್ವಿಯಾಗಿವೆ ವಿಶ್ಲೇಷಿಸಿ.**

- ಮೈಸೂರು ಜಿಲ್ಲೆಯಲ್ಲಿ ಒಟ್ಟು 32 ಎಸ್‌ಆರ್‌ಪಿ ಕೇಂದ್ರಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಈ ಮಕ್ಕಳು ಇದರ ಸದುಪಯೋಗ ಪಡೆಯುತ್ತಿದ್ದಾರೆ. ಸೂಕ್ತ ತರಬೇತಿ ನೀಡಿರುತ್ತಾರೆ.

- ಎಸ್ಆರ್‌ಪಿ ಕೇಂದ್ರಗಳಲ್ಲಿ ವಿಕಲ ಚೇತನ ಮಕ್ಕಳ ಅಗತ್ಯಗಳನ್ನು ಪೂರೈಸಲು ಸೂಕ್ತ ಮಾರ್ಗದರ್ಶನ ನೀಡಿ ಫಿಜಿಯೋ ಥೆರಫಿ, ಗುರ್ತಿನ ಪುಸ್ತಕ, ವಿದ್ಯಾರ್ಥಿ ವೇತನ, ಭತ್ಯೆಗಳನ್ನು ನೀಡಲು ವ್ಯವಸ್ಥೆ ಮಾಡಲಾಗಿದೆ. ಮುಂತಾದ ಪ್ರೋತ್ಸಾಹದಾಯಕ ಯೋಜನೆಗಳನ್ನು ಮಕ್ಕಳಿಗೆ ನೀಡಲಾಗಿದೆ. ಸಂಪನ್ಮೂಲ ಶಿಕ್ಷಕರನ್ನು ನೇಮಿಸಿ ಮಕ್ಕಳಿಗೆ ವಿಶೇಷ ಬೋಧನೆ ಮಾಡುವಂತೆ ಮತ್ತು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸುವಂತೆ ಕ್ರಮಕೈಗೊಳ್ಳಲಾಗಿದೆ.
- ಎಸ್.ಆರ್.ಪಿ ಕೇಂದ್ರಗಳಿಗೆ ಕೆಲವು ಪೋಷಕರು ಮಕ್ಕಳನ್ನು ಕರೆತರಲು ಆಸಕ್ತಿ ತೋರುತ್ತಿಲ್ಲ. ಕಾರಣ ಕೆಲವು ಮಕ್ಕಳು ದೈಹಿಕವಾಗಿ ಬೆಳೆದಿರುವುದರಿಂದ ಶಾಲೆಗೆ ಕರೆತರಲು ಪೋಷಕರು ಹಿಂಜರಿಯುವುದು, ಪೋಷಕರು ದಿನನಿತ್ಯದ ಕೆಲಸಗಳನ್ನು ಬಿಟ್ಟು ಬರಲು ಮನಸ್ಸು ಮಾಡದಿರುವುದು. ಸಾರಿಗೆ ವೆಚ್ಚಕ್ಕಾಗಿ ಇಲಾಖೆಯಿಂದ ನೀಡುತ್ತಿರುವ ಮೊತ್ತ ಕಡಿಮೆ ಎಂದು ಪೋಷಕರು ಭಾವಿಸುತ್ತಿರುವುದು.
- ಕೆಲವು ಪೋಷಕರು ಬಹಳ ಆಸಕ್ತಿಯಿಂದ ಪಾಲ್ಗೊಳ್ಳುತ್ತಿದ್ದಾರೆ. ಆದರೆ ಎಸ್ಆರ್‌ಪಿ ಕೇಂದ್ರದಲ್ಲಿರುವ ಸೌಲಭ್ಯಗಳು ವಿವಿಧ ಹಂತದಲ್ಲಿರುವ ಅನನ್ಯತೆಯನ್ನು ಹೊಂದಿರುವ ಮಕ್ಕಳಿಗೆ ಏನೇನೂ ಸಾಲುತ್ತಿಲ್ಲ.
- ಮಕ್ಕಳ ವಿಶೇಷ ಅಗತ್ಯತೆಯನ್ನು ಪೂರೈಸುವ ವ್ಯವಸ್ಥೆಗಳು ಎಸ್ಆರ್‌ಪಿ ಕೇಂದ್ರದಲ್ಲಿಲ್ಲ.
- ಮಕ್ಕಳನ್ನು ದೂರದಿಂದ ಕರೆ ತರುವುದೇ ಪೋಷಕರಿಗೆ ದೊಡ್ಡ ಸಾಹಸವಾಗಿದೆ.
- ಕೇಂದ್ರಗಳ ನಿರ್ವಹಣೆಗೆ ಬ್ಲಾಕ್ ಹಂತದಲ್ಲಿ ಐಇಆರ್‌ಟಿಗಳ ನೇಮಕವಾಗದೇ ಇರುವುದು ಮುಖ್ಯವಾದ ಅಡಚಣೆಗಳಾಗಿವೆ.
- ಈ ಬಗ್ಗೆ ಮೈಸೂರು ಡಯಟ್‌ನಲ್ಲಿ ದೊಡ್ಡ ಅಧ್ಯಯನನ್ನು ನಡೆಸಿದ್ದು, ವರದಿಯನ್ನು ರಾಜ್ಯಮಟ್ಟಕ್ಕೆ ಸಲ್ಲಿಸಲಾಗಿದೆ. ಮಕ್ಕಳಿಗೆ ನೀಡುವ ಪರಿಕರಗಳು ಮಕ್ಕಳ ಅಳತೆಗೆ, ಬಳಕೆಗೆ ಸೂಕ್ತವಾಗದಿರುವುದನ್ನು ಸ್ಪಷ್ಟಪಡಿಸಿದೆ.
- ಆದುದರಿಂದ ಮಗುವಿನ ನಿಟ್ಟಿನಲ್ಲಿ ಆಲೋಚಿಸಿದಾಗ ಈ ಕಾರ್ಯಕ್ರಮವನ್ನು ಇನ್ನಷ್ಟು ಕಾಳಜಿಯಿಂದ ಮತ್ತು ತ್ವರಿತವಾಗಿ ಕ್ರಮಕೈಗೊಳ್ಳುವಂತೆ ಮಾಡಬೇಕಾಗಿದೆ.

## 5. 5 ವರ್ಷಗಳ ಅವಧಿಯಲ್ಲಿ ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ನೀಡಿರುವ ತರಬೇತಿ ಹಾಗೂ ಮುಖ್ಯವಾಹಿನಿಗೆ ದಾಖಲಾಗಿರುವ ಅಂಕಿ-ಅಂಶಗಳ ತುಲನಾತ್ಮಕ ಪಟ್ಟಿ

**ಕೋಷ್ಟಕ 46:**

| CWSN 5 years data | | | |
|---|---|---|---|
| year | Boys | Girls | Total |
| 2010–11 | 3937 | 2845 | 6782 |
| 2011–12 | 3024 | 2267 | 5291 |
| 2012–13 | 3799 | 2578 | 6377 |
| 2013–14 | 3473 | 2438 | 5911 |
| 2014–15 | 2936 | 2070 | 5006 |

**ಗ್ರಾಫ್–30:**




2010–11 ಮತ್ತು 2012–13ನೇ ಸಾಲಿನಲ್ಲಿ ವಿಶೇಷ ಅಗತ್ಯತೆಯುಳ್ಳ ಹೆಚ್ಚು ಮಕ್ಕಳಿಗೆ ತರಬೇತಿ ನೀಡಲಾಗಿದೆ ಮುಖ್ಯವಹಿನಿಗೆ ತರಲಾಗಿದೆ.

- ವಿಶೇಷ ಅಗತ್ಯತೆಯುಳ್ಳ ಮಕ್ಕಳಲ್ಲಿ ಹೆಚ್ಚು ಗಂಡು ಮಕ್ಕಳನ್ನು ಮುಖ್ಯವಾಹಿನಿಗೆ ತರಲಾಗಿದೆ.

### 6. ಜಿಲ್ಲೆಯಲ್ಲಿ ಸಿ.ಡಬ್ಲ್ಯೂ.ಎಸ್.ಎನ್ ಮಕ್ಕಳು ಇಲ್ಲದಿರುವ ಶಾಲೆಗಳ ಸಂಖ್ಯೆ

**ಕೋಷ್ಟಕ 47**

| ಕ್ರಮ. ಸಂಖ್ಯೆ | ಬ್ಲಾಕ್‌ಗಳ ಹೆಸರು | ಶಾಲೆಗಳ ಸಂಖ್ಯೆ |
|---|---|---|
| 1 | ಹುಣಸೂರು | 89 |
| 2 | ಪಿರಿಯಾ ಪಟ್ಟಣ | 85 |
| 3 | ತಿ.ನರಸೀಪುರ | 30 |
| 4 | ಮೈ.ಗ್ರಾಮಾಂತರ | 70 |
| 5 | ನಂಜನ ಗೂಡು | 42 |
| 6 | ಕೆ.ಆರ್.ನಗರ | 25 |
| 7 | ಮೈ.ದಕ್ಷಿಣ | 10 |
| 8 | ಹೆಚ್.ಡಿ.ಕೋಟೆ | 64 |
| 9 | ಮೈ.ಉತ್ತರ | 22 |
| | ಒಟ್ಟು | 437 |

- ಸಿಡಬ್ಲೂಎಸ್‌ಎನ್ ಮಕ್ಕಳಿಲ್ಲದಿರುವ ಶಾಲೆಗಳು ಹುಣಸೂರು, ಪಿರಿಯಾ ಪಟ್ಟಣವಲಯದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಮೈಸೂರು ನಗರದಲ್ಲಿ ಕಡಿಮೆ ಕಂಡು ಬರುತ್ತಿವೆ.

### 7.ಸಿ.ಡಬ್ಲ್ಯೂ.ಎಸ್.ಎನ್ ಮಕ್ಕಳನ್ನು ಮುಖ್ಯವಾಹಿನಿಗೆ ಕರೆತರಲು ಬ್ಲಾಕ್ ಮತ್ತು ಜಿಲ್ಲಾ ಹಂತದಲ್ಲಿ ಕೈಗೊಂಡಿರುವ ಕ್ರಮಗಳು.

- ಪೋಷಕರಿಗೆ ಜಾಗೃತಿ ಶಿಬಿರಗಳನ್ನು ನಡೆಸುವುದರ ಮೂಲಕ ಮತ್ತು ತರಬೇತಿ ನೀಡುವುದರ ಮೂಲಕ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಶಾಲೆಗೆ ಸೇರಿಸುವಂತೆ ಕ್ರಮಕೈಗೊಳ್ಳಲಾಗಿದೆ

- ಜಾಥ, ಜಾಗೃತಿ ಕಾರ್ಯಕ್ರಮ & ತರಬೇತಿಗಳ ಮೂಲಕ ಪೋಷಕರಿಗೆ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುವುದು.
- ಶಾಲೆಗೆ ಹಾಜರಾಗಲು ಅಸಾಧ್ಯವಾಗಿರುವ ಮಕ್ಕಳನ್ನು ಗೃಹಾಧಾರಿತ ಶಿಕ್ಷಣಕ್ಕೆ ಅಳವಡಿಸಲು ಪೋಷಕರ ಮನವೊಲಿಸಿದೆ. ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಗಿದೆ
- ಸಿ.ಡಬ್ಲ್ಯೂ.ಎಸ್.ಎನ್ ಮಕ್ಕಳ ಮನೆಗೆ ಭೇಟಿ ನೀಡಿ ಪೋಷಕರ ಮನವೊಲಿಸಲಾಗಿದೆ. ಸರ್ಕಾರದಿಂದ ಸಿಗುವ ಸವಲತ್ತುಗಳ ವಿತರಣೆ, ವೈದ್ಯಕೀಯ ತಪಾಸಣಾ ಶಿಬಿರಗಳನ್ನು ಹಮ್ಮಿಕೊಳ್ಳುವುದರ ಮೂಲಕ ಯಶಸ್ವಿಯಾಗಿ ಚಿಕಿತ್ಸೆ ಕೊಡಿಸಲಾಗಿದೆ.
- ಎಸ್.ಆರ್.ಪಿ ಕೇಂದ್ರಗಳ ಸ್ಥಾಪನೆ ಮಾಡಲಾಗಿದೆ. ಗೃಹಾಧಾರಿತ ಶಿಕ್ಷಣಕ್ಕೆ ಎಸ್ಕಾರ್ಟ್ ಸೌಲಭ್ಯಗಳನ್ನು ಒದಗಿಸಲಾಗಿದೆ.
- ಬ್ಲಾಕ್ ಹಂತದಲ್ಲಿ ಮುಖ್ಯಶಿಕ್ಷಕರ ಸಭೆ ನಡೆಸಿ ಅಘಖಓ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ಸಲುವಾಗಿ ಕಡ್ಡಾಯವಾಗಿ ಶಾಲೆಗೆ ಸೇರಿಸಬೇಕೆಂದು ತಿಳಿಸಲಾಗಿದೆ.
- ಕರಪತ್ರಗಳು & ಸ್ವಯಂಸೇವ ಸಂಸ್ಥೆಗಳ ಸಭೆಗಳಲ್ಲಿ ಪ್ರಚಾರ ಕೈಗೊಳ್ಳುವುದರ ಮೂಲಕ ಮಾಹಿತಿ ನೀಡಲಾಗಿದೆ.
- ಶಾಲಾ ಶಿಕ್ಷಕರಿಗೆ& ಮುಖ್ಯಶಿಕ್ಷಕರಿಗೆ ಆರ್.ಟಿ.ಇ. ಕಾಯ್ದೆ ಅನುಷ್ಠಾನದ ಬಗ್ಗೆ ತಿಳಿಸಿ, ತಪ್ಪಿದ್ದಲ್ಲಿ ಆಗಬಹುದಾದ ಪರಿಣಾಮವನ್ನು ಸೂಕ್ಷ್ಮವಾಗಿ ಮನವರಿಕೆ ಮಾಡಲಾಗಿದೆ.
- ಈ ಮಕ್ಕಳಿಗೆ ಸರ್ಕಾರದಿಂದ ದೊರಕುವ ಸಾಧನ ಸಲಕರಣೆಗಳನ್ನು ಒದಗಿಸಲಾಗಿದೆ ಮತ್ತು ಮಕ್ಕಳನ್ನು ಗುರುತಿಸಿ ಉತ್ತಮ ಕಲಿಕೋಪಕರಣಗಳನ್ನು ಬಳಸಿ ಅವರಿಗೆ ಬೋಧನೆ ಮಾಡುವಂತೆ ಮಾರ್ಗದರ್ಶಿಸಲಾಗಿದೆ.
- ಎಸ್.ಡಿ.ಎಂ.ಸಿ ಸಭೆ ಹಾಗೂ ವಿಶೇಷ ಅಗತ್ಯತೆಯುಳ್ಳ ಮಕ್ಕಳ ಪೋಷಕರ ಸಭೆ ನಡೆಸಿ ಮಕ್ಕಳನ್ನು ಶಾಲೆಗೆ ದಾಖಲಿಸುವಂತೆ ಅರಿವು ಮೂಡಿಸಿದೆ.
- ಪೋಷಕರ ಸಮಾಲೋಚನಾ ತರಬೇತಿಗಳನ್ನು ನಡೆಸಿ, ಮಕ್ಕಳನ್ನು ಸರಿಯಾಗಿ ನಿರ್ವಹಣೆ ಮಾಡಬೇಕಾದ ಕ್ರಮಗಳ ಕುರಿತು ಪೋಷಕರಿಗೆ ಮನವರಿಕೆ ಮಾಡಲಾಗುತ್ತಿದೆ.

**8.ಜಿಲ್ಲಾ ಹಂತದಲ್ಲಿ ಕಳೆದ 3 ವರ್ಷಗಳಿಂದ ಓಓಎಸ್‌ಸಿ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಕೈಗೊಂಡ ಕ್ರಮಗಳು ಮತ್ತು ಅಂಕಿ–ಅಂಶಗಳ ಹೋಲಿಕೆ ಪಟ್ಟಿ: ಓಓಎಸ್‌ಸಿ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಕೈಗೊಂಡ ಕ್ರಮಗಳು**

- ವಿಶೇಷ ದಾಖಲಾತಿ ಆಂದೋಲನ, ಚಿಣ್ಣರ ಅಂಗಳ
- 6 ತಿಂಗಳ ಋತುಮಾನ ಶಾಲೆ, 12 ತಿಂಗಳ ವಿಶೇಷ ವಸತಿ ಸಹಿತ ತರಬೇತಿ
- ಪರಿಹಾರ ಬೋಧನೆ
- ಯು.ಡಿ.ಸಿ.,ಟೆಂಟ್ ಶಾಲೆ
- ಮದರಸ
- ವಿಶಿಷ್ಟ ವರ್ಗಗಳ ವಸತಿ ಶಾಲೆ
- ಶಾಲಾಧಾರಿತ ತರಬೇತಿ
- ಕೆ.ಜಿ.ಬಿ.ವಿ. ಮತ್ತು ಕೆ.ಕೆ.ಜಿ.ಬಿ.ವಿ

## ಅಂಕಿ–ಅಂಶಗಳ ಹೋಲಿಕೆ ಪಟ್ಟಿ:

**ಕೋಷ್ಟಕ 48:**

| ಶಾಲೆಯಿಂದ ಹೊರಗುಳಿದ ಮಕ್ಕಳು | 2012–13 | 2013–14 | 2014–15 |
|---|---|---|---|
| ಗುರುತಿಸಿರುವ ಮಕ್ಕಳು | 2506 | 931 | 5512 |
| ಮುಖ್ಯವಾಹಿನಿಗೆ ಬಂದಿರುವ ಮಕ್ಕಳು | 1515 | 535 | 2885 |

**ಗ್ರಾಫ್–31, 32:**







- 2014–15 ನೇ ಸಾಲಿನಲ್ಲಿ ಹೆಚ್ಚು ಮಕ್ಕಳನ್ನು ಗುರುತಿಸಲಾಗಿದೆ ಮತ್ತು ಮುಖ್ಯವಾಹಿನಿಗೆ ತರಲಾಗಿದೆ.
  - ಮಕ್ಕಳ ಸಮೀಕ್ಷೆ, ಕುಟುಂಬ ಸಮೀಕ್ಷೆ, ಮಕ್ಕಳ ಜಾಡು ಹಿಡಿಯುವಿಕೆ, ವಿಶೇಷ ದಾಖಲಾತಿ ಆಂದೋಲನ, ವಿಶೇಷ ಜಾಗೃತಿ ಶಿಬಿರಗಳು, ಪ್ರೋತ್ಸಾಹದಾಯಕ ಯೋಜನೆಗಳು, ವಿಶೇಷ ತರಬೇತಿ ಕೇಂದ್ರಗಳ ವ್ಯವಸ್ಥೆ ಇತ್ಯಾದಿಗಳನ್ನು ನಿರ್ವಹಿಸಲಾಗಿದೆ.
  - ಶಾಲಾ ದಾಖಲಾತಿ ಆಂದೋಲನ, ಯು.ಡಿ.ಸಿ. ಕೇದ್ರಗಳ ಸ್ಥಾಪನೆ, ಹಾಜರಾತಿ ಪ್ರಾಧಿಕಾರ ರಚನೆ ಮಾಡಲಾಗಿದೆ.
  - ಶಾಲೆಯಿಂದ ಹೊರಗುಳಿದ ಮಕ್ಕಳ ಪೋಷಕರಿಗೆ ನೋಟಿಸ್ ನೀಡಲಾಗಿದೆ.
  - ಮನೆ–ಮನೆ ಭೇಟಿ ನೀಡುವುದರ ಮೂಲಕ ಪೋಷಕರ ಮನವೊಲಿಸಲಾಗಿದೆ.
  - ಭಿತ್ತಿಪತ್ರ, ಜಾಥಾ, ಜಾಗೃತಿ ಕಾರ್ಯಕ್ರಮದ ಮೂಲಕ ಶಿಕ್ಷಣದ ಮಹತ್ವವನ್ನು ಪೋಷಕರಿಗೆ ತಿಳಿಸಲಾಗಿದೆ.
  - ಸರ್ಕಾರ ಶಿಕ್ಷಣಕ್ಕಾಗಿ ನೀಡುತ್ತಿರುವ ಸೌಲಭ್ಯ & ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸಲಾಗಿದೆ.
  - ಬಾಲಕಾರ್ಮಿಕ ಪದ್ದತಿ ಹಾಗೂ ಬಾಲ್ಯ ವಿವಾಹ ಶಿಕ್ಷಾರ್ಹ ಅಪರಾಧವಾಗಿದ್ದು, ಈ ಕಾರಣಕ್ಕಾಗಿ ಮಕ್ಕಳನ್ನು ಶಿಕ್ಷಣ ವಂಚಿತರನ್ನಾಗಿ ಮಾಡುವುದು ದಂಡಾರ್ಹ ಎಂದು ಪೋಷಕರಿಗೆ ತಿಳಿಹೇಳಲಾಗಿದೆ.
  - ಸ್ವಯಂ ಸೇವಕರ & ಇಲಾಖೆಯ ಅನುಪಾಲನಾಧಿಕಾರಿಗಳ ಅವಿರತ ಪ್ರಯತ್ನದಿಂದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಅಗತ್ಯ ಕ್ರಮವಹಿಸಲಾಗಿದೆ.
  - ಚಿಣ್ಣರ ಅಂಗಳದ ಮೂಲಕ ವಿಶೇಷ ತರಬೇತಿ, ಶಾಲೆಯಲ್ಲೆ ವಿಶೇಷ ಬೋಧನೆ,

**9.ಜಿಲ್ಲೆಯಲ್ಲಿ ನಡೆಯುತ್ತಿರುವ ಸರ್ಕಾರಿ ಮತ್ತು ಸರ್ಕಾರೇತರ ವಿಶೇಷ ತರಬೇತಿ ಕೇಂದ್ರಗಳ ಅಂಕಿ–ಸಂಖ್ಯೆಗಳು, ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿವೇ ವಿಶ್ಲೇಷಿಸಿ?**

**ಕೋಷ್ಟಕ 49:**

| ಕ್ರ.ಸಂ. | ತಾಲೂಕು | ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ | ಚಿಣ್ಣರ ಅಂಗಳ ಕೇಂದ್ರದಲ್ಲಿ ದಾಖಲಾದ ಮಕ್ಕಳ ಸಂಖ್ಯೆ | ಮದರಸ | ಯು ಡಿ ಸಿ | ಆರ್ ಎಸ್ ಟಿ | ಕೆ ಜಿ ಬಿ ವಿ ಹಾಸ್ಟೆಲ್ | ಟೆಂಟ್ ಶಾಲೆ | ಗೃಹಾಧಾರಿತ ಶಿಕ್ಷಣ | ಶಾಲಾ ಸಿದ್ಧತಾ ಕೇಂದ್ರ | ಶಾಲಾಧಾರಿತ ತರಬೇತಿ | ಒಟ್ಟು ಮುಖ್ಯವಾಹಿನಿಗೆ ಬಂದಿರುವ ಮಕ್ಕಳ ಸಂಖ್ಯೆ | ಬಾಕಿ ಇರುವ ಮಕ್ಕಳು | ಶೇ. ಪ್ರಗತಿ |
|---|---|---|---|---|---|---|---|---|---|---|---|---|---|---|
| 1 | ಎಚ್ ಡಿ ಕೋಟೆ | 632 | 106 | 0 | | | | | 10 | 2 | 125 | 243 | 389 | 38.45 |
| 2 | ಹುಣಸೂರು | 692 | 187 | 0 | | 40 | | | 1 | | 96 | 324 | 368 | 46.82 |
| 3 | ಕೆ ಆರ್ ನಗರ | 274 | 0 | 0 | | | 12 | 26 | | | 187 | 225 | 49 | 82.12 |
| 4 | ಮೈಸೂರು ಉತ್ತರ | 1316 | 0 | 338 | 94 | 45 | | | | 1 | 307 | 785 | 531 | 59.65 |
| 5 | ಮೈಸೂರು ದಕ್ಷಿಣ | 314 | 0 | 0 | 84 | 0 | | 55 | 0 | | 165 | 304 | 10 | 96.82 |
| 6 | ಮೈಸೂರು ಗ್ರಾಮಾಂತರ | 634 | 9 | 0 | | | | | | | 209 | 218 | 416 | 34.38 |
| 7 | ನಂಜನಗೂಡು | 808 | 15 | 0 | | | | | | 0 | 215 | 230 | 578 | 28.47 |
| 8 | ಪಿರಿಯಾಪಟ್ಟಣ | 434 | 39 | 0 | | | | | | | 250 | 289 | 145 | 66.59 |
| 9 | ಟಿ ನರಸೀಪುರ | 408 | 44 | 0 | | | | | | | 193 | 237 | 171 | 58.09 |
| | | 5512 | 400 | 338 | 178 | 85 | 12 | 81 | 11 | 3 | 1747 | 2855 | 2657 | 51.80 |

**10.ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳಿಂದ ನಿರ್ವಹಿಸುತ್ತಿರುವ ವಿಶೇಷ ತರಬೇತಿ ಕೇಂದ್ರಗಳು ವಿದ್ಯಾರ್ಥಿಗಳನ್ನು ಮುಖ್ಯವಾಹಿನಿಗೆ ತರುವಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿವೇ ವಿಶ್ಲೇಷಿಸಿ?**

- ಹೌದು ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು ಶಾಲೆಯಿಂದ ಹೊರಗುಳಿದ ಮಕ್ಕಳನನು ಮುಖ್ಯವಾಹಿನಿಗೆ ತರುವಲ್ಲಿ ಸಹಕಾರಿಯಾಗಿದೆ.

**11.ಮುಖ್ಯವಾಹಿನಿಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಹಾಜರಾತಿಯನ್ನು ಉತ್ತಮಪಡಿಸಲು ಕ್ಲಸ್ಟರ್/ ಬ್ಲಾಕ್/ಜಿಲ್ಲಾ ಹಂತದಲ್ಲಿ ಕೈಗೊಂಡಿರುವ ಕ್ರಮಗಳೇನು? ಹಾಜರಾತಿಯನ್ನು ಹೆಚ್ಚಿಸುವಲ್ಲಿ ಕೈಗೊಂಡ ಕ್ರಮಗಳೇನು?**

- ಚಟುವಟಿಕೆ ಆಧಾರಿತ ಬೋಧನೆ, ಪ್ರೋತ್ಸಾಹಕಗಳ ವಿತರಣೆ, ಜವಾಬ್ದಾರಿ ಹಂಚಿಕೆ, ಕಂಪ್ಯೂಟರ್ ಆಧಾರಿತ ಕಲಿಕೆ, ಸ್ವಕಲಿಕೆಗೆ ಹೆಚ್ಚು ಒತ್ತು, ಗ್ರಂಥಾಲಯಗಳ ಬಳಕೆ

- ಬಿಸಿಯೂಟ, ಉಚಿತ ಪಠ್ಯಪುಸ್ತಕ, ಉಚಿತ ಸಮವಸ್ತ್ರ, ಕ್ಷೀರಭಾಗ್ಯ ಯೋಜನೆ, ಸೈಕಲ್ ವಿತರಣೆ, ಹೆಣ್ಣು ಮಕ್ಕಳಿಗೆ ವಿಶೇಷ ಹಾಜರಾತಿ ಭತ್ಯೆ, ವಿದ್ಯಾರ್ಥಿ ವೇತನ
- ಕ್ಲಸ್ಟರ್ ಹಂತದಲ್ಲಿ ಮುಖ್ಯವಾಹಿನಿಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಹಾಜರಾತಿಯನ್ನು ಉತ್ತಮ ಪಡಿಸಲು ಮಕ್ಕಳ ಹಾಗೂ ಪೋಷಕರ ಮನವೊಲಿಸಲಾಗಿದೆ. ಕಲಿಕೆಯಿಂದಾಗುವ ಅನುಕೂಲಗಳ ಬಗ್ಗೆ ತಿಳಿಸಿ ಹಾಜರಾತಿ ಉತ್ತಮ ಪಡಿಸಲು ಶ್ರಮಿಸಲಾಗಿದೆ.
- ಬ್ಲಾಕ್ ಹಂತದಲ್ಲಿ ತಂಡಗಳನ್ನು ರಚಿಸಿ ಮುಖ್ಯವಾಹಿನಿಗೆ ಬಂದಿರುವ ಮಕ್ಕಳ ಬಗ್ಗೆ ಮಾಹಿತಿ ಪಡೆಯಲು ಕ್ಷೇತ್ರ ಭೇಟಿಗೆ ಅನುಕೂಲಿಸಲಾಗಿದೆ. ಹಾಜರಾತಿ ಅಧಿಕಾರಿಗಳಾದ ಇ.ಸಿ.ಓ ಗಳಿಂದ ಸಹಾಯ ಪಡೆದು ಅಂತಹ ಮಕ್ಕಳ ಹಾಜರಾತಿಯನ್ನು ಉತ್ತಮ ಪಡಿಸಲಾಗುತ್ತಿದೆ.
- ಸಮವಸ್ತ್ರ ವಿತರಣೆ, ಊಟೋಪಚಾರ ವ್ಯವಸ್ತೆ,ಮತ್ತು ಗುಣಮಟ್ಟದ ಶಿಕ್ಷಣ,ಉಚಿತ ಪಠ್ಯ ಹಾಗೂ ನೋಟ್ ಪುಸ್ತಕ ವಿತರಣೆ.
- ಈ ಮಕ್ಕಳಿಗೆ ಸರ್ಕಾರದಿಂದ ದೊರಕುವ ಸೌಲಭ್ಯಗಳನ್ನು ಕೊಡಿಸುವುದು. ಮಕ್ಕಳನ್ನು ಗುರುತಿಸಿ ಉತ್ತಮ ಕಲಿಕೋಪಕರಣಗಳನ್ನು ಬಳಸಿ ಅವರಿಗೆ ಬೋಧನೆ, ಶಿಕ್ಷಣದ ಮಹತ್ವದ ಬಗ್ಗೆ ಜಾಗೃತಿ.
- ಶಾಲಾ ಹಂತದಲ್ಲಿ ಗುಣಮಟ್ಟದ ಬೋಧನಾ–ಕಲಿಕಾ ಪ್ರಕ್ರಿಯೆ ನಡೆಯುವಂತೆ ಮಾಡಲು ಶಿಕ್ಷಕರಿಗೆ ಗುಣಮಟ್ಟದ ತರಬೇತಿಗಳನ್ನು ನೀಡಲಾಗುತ್ತಿದೆ.
- ಶಾಲೆಗೆ ಭೇಟಿ ನೀಡಿ ಉತ್ತಮ ಅಂಶಗಳನ್ನು ಗುರುತಿಸಿ ಪ್ರಶಂಸಿಸಲಾಗುತ್ತಿದೆ. ಹಾಗೂ ಈ ಉತ್ತಮ ಅಂಶಗಳನ್ನು ಇಲಾಖೆಯ ಮೇಲಧಿಕಾರಿಗಳೊಂದಿಗೆ ಹಂಚಿಕೊಳ್ಳಲಾಗುತ್ತಿದೆ.
- ಶಾಲೆಗಳಲ್ಲಿ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಬೋಧಿಸಲು ಅವಕಾಶ ಮಾಡಲಾಗುತ್ತಿದೆ.
- ಭೇಟಿಯ ಸಂದರ್ಭದಲ್ಲಿ ಕಂಡುಬರುವ ಕೊರತೆಯ ಅಂಶಗಳಿಗೆ ಸೂಕ್ತ ಹಿಮ್ಮಾಹಿತಿ ಹಾಗೂ ಮಾರ್ಗದರ್ಶನ ನೀಡಿ ಸುಧಾರಿಸಿಕೊಳ್ಳುವ ಕ್ರಮಗಳನ್ನು ಶಿಕ್ಷಕರಿಗೆ ತಿಳಿಯಪಡಿಸಲಾಗುತ್ತಿದೆ.
- ಶಾಲೆಯ ಉತ್ತಮ ಆಚರಣೆಗಳನ್ನು ಪೋಷಕರು ಹಾಗೂ ಎಸ್.ಡಿ.ಎಂ.ಸಿ ಮತ್ತು ಸಮುದಾಯದೊಂದಿಗೆ ವಿನಿಮಯ ಮಾಡಿಕೊಳ್ಳಲಾಗುತ್ತಿದೆ.

# ಭಾಗ ಸಿ ಮತ್ತು ಡಿ

## ಪಠ್ಯಕ್ರಮದ ನಿರ್ವಹಣೆ

**ಕೋಷ್ಟಕ:50**

| ಕ್ರ. ಸಂ | ಬ್ಲಾಕ್‌ಗಳು | ಪಠ್ಯಪುಸ್ತಕ ವಿತರಿಸಿದ ಶಾಲೆಗಳ ಸಂಖ್ಯೆ | | | | ನಿಗದಿತ ಸಮಯಕ್ಕೆ ಪಠ್ಯ ಪುಸ್ತಕಗಳನ್ನು ವಿತರಿಸಲು ಉಪನಿರ್ದೇಶಕರು ಕೈಗೊಂಡ ಕ್ರಮಗಳು | ಬೋಧನಾ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ನಾವೀನ್ಯತೆಯನ್ನು ಅಳವಡಿಸಿಕೊಂಡಿರುವ ಶಾಲೆಗಳ ಪಟ್ಟಿ | ಸಿ.ಡಬ್ಲ್ಯೂ.ಎಸ್.ಎನ್ ಶಿಕ್ಷಣವನ್ನು ನೀಡಲು ಶಿಕ್ಷಕರು ತೆಗೆದುಕೊಂಡ ನಿರ್ದಿಷ್ಟ ಕ್ರಮಗಳು (ಪ್ರಮುಖ 2 ಅಂಶಗಳನ್ನು ನಮೂದಿಸಿ) | ಸಿ.ಆರ್.ಪಿ.ಗಳು ಮಕ್ಕಳ ಪ್ರಗತಿಯ ಬಗ್ಗೆ ಯಾವ ರೀತಿ ಮೇಲುಸ್ತುವಾರಿ ಮಾಡುತ್ತಿದ್ದಾರೆ |
|---|---|---|---|---|---|---|---|---|---|
| | | ಒಂದು ವಾರದ ಒಳಗೆ | ಒಂದು ತಿಂಗಳ ಒಳಗೆ | ಒಂದು ತಿಂಗಳ ನಂತರ | ಅನ್ವಯಿಸುವುದಿಲ್ಲ | | | | |
| 1 | ಹೆಚ್.ಡಿ.ಕೋಟೆ | 306 | 0 | 0 | 0 | ಬಿಇಒ ಗಳ ಸಭೆ ನಡೆಸಿ ಪಠ್ಯಪುಸ್ತಕ ವಿತರಣ ವೇಳಾಪಟ್ಟಿ ಮಾಡಲಾಯಿತು. ವೇಳಾಪಟ್ಟಿಯಂತೆಯೇ ಶಾಲೆಗಳಿಗೆ ಪಠ್ಯಪುಸ್ತಕಗಳನ್ನು ಶಾಲಾ ಆರಂಭಕ್ಕೆ ಮುಂಚೆಯೇ ತಲುಪಿಸಲಾಯಿತು. | ಸಹಿಪ್ರಾಶಾ, ಮಾಗುಡಿಲು. ಸಹಿಪ್ರಾಶಾ, ನಾಯಕನಹುಂಡಿ. ಸಹಿಪ್ರಾಶಾ, ಜಿ.ಬಿ.ಸರಗೂರು. ಸಕಿಪ್ರಾಶಾ, ಆವರೆಗೆರೆ. | ತರಗತಿಯಲ್ಲಿ ಸಮನ್ವಯತೆಯನ್ನು ಸಾಧಿಸುವುದು, ಸರ್ಕಾರದ ಸವಲತ್ತುಗಳನ್ನು ಮಕ್ಕಳಿಗೆ ಕಾಳಜಿಯಿಂದ ತಲುಪುವಂತೆ ಮಾಡುವುದು. | * ತರಗತಿ ಪ್ರಕ್ರಿಯೆಯ ವೇಳೆ ಮಕ್ಕಳ ಪ್ರಗತಿಯನ್ನು ವೀಕ್ಷಣೆ ನಡೆಸಿ, ಮಕ್ಕಳಿಗೆ ತಿಳಿಯದಂತೆಯೇ ಪರೀಕ್ಷಿಸಿ, ಪ್ರಗತಿಯನ್ನು ಖಾತ್ರಿ ಪಡಿಸಿಕೊಳ್ಳುತ್ತಿದ್ದಾರೆ. |
| 2 | ಹುಣಸೂರು | 274 | 12 | 0 | 0 | | ಸಹಿಪ್ರಾಶಾ ಹುಂಡಿಮಾಳ, ಸಹಿಪ್ರಾಶಾ ಚೋಳೇನ ಹಳ್ಳಿ | ಸಮನ್ವಯ ಶಿಕ್ಷಣ ತರಬೇತಿ ಪಡೆದ ವಿಶೇಷ ಶಿಕ್ಷಕರ ನೆರವನ್ನು ನೀಡುವುದು | ಶಾಲಾ ಭೇಟಿ |
| 3 | ಕೆ.ಆರ್.ನಗರ | 221 | 0 | 0 | 0 | | 1.ಸಕಿಪ್ರಾ ಶಾಲೆ, ಸಂಕನಹಳ್ಳಿ 2.ಸಕಿಪ್ರಾ ಶಾಲೆ, ಕಾಟ್ನಾಳು 3. ಸಹಿಪ್ರಾ ಶಾಲೆ, ಮಾವತ್ತೂರು. 4.ಸಹಿಪ್ರಾ ಶಾಲೆ(ಬಾಲಕಿಯರು) ಉರ್ದು ಮುಸ್ಲಿಂ ಬ್ಲಾಕ್. | ಸಮನ್ವಯ ಶಿಕ್ಷಣದಲ್ಲಿ 90 ದಿನಗಳ ತರಬೇತಿ ಪಡೆದ ಶಿಕ್ಷಕರು ಶಾಲಾ ಹಂತದಲ್ಲಿ ಶಾಲಾ ಸಿದ್ಧತಾ ಕೇಂದ್ರ ಮತ್ತು ಸಮನ್ವಯ ಶಿಕ್ಷಣವನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿರುತ್ತಾರೆ. | 1.ಶಾಲೆಗಳಿಗೆ ಭೇಟಿ ನೀಡಿ ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯನ್ನು ವೀಕ್ಷಿಸಿ ಮಾರ್ಗದರ್ಶನ ಮಾಡುವುದು. 2. ಕಲಿಕೆಯ ಬಗ್ಗೆ ಮಕ್ಕಳೊಂದಿಗೆ ಸಂವಾದ ಮಾಡುವುದು. |
| 4 | ಮೈ.ಉತ್ತರ | ಎಲ್ಲಾ | 0 | 0 | 0 | | ಸ.ಹಿ.ಪ್ರಾ.ಶಾಲೆ ಜಿ.ಬಿ.ಪಾಳ್ಯ, ಸ.ಉ.ಹಿ.ಪ್ರಾ.ಶಾಲೆ ಸತ್ಯನಗರ, ಸ.ಹಿ.ಪ್ರಾ.ಶಾಲೆ ಹೆಬ್ಬಾಳು | ಮಕ್ಕಳಿಗೆ ಎಲ್ಲಾ ಸೌಲಭ್ಯಗಳನ್ನು ದೊರಕಿಸಿಕೊಡುವುದು ಹಾಗೂ ಪೋಷಕರಿಗೆ ಆಪ್ತ ಸಮಾಲೋಚನೆಯ ಮೂಲಕ ನಿರ್ವಹಿಸುವ ಕ್ರಮಗಳನ್ನು ತಿಳಿಸಿಕೊಡಲಾಗುತ್ತಿದೆ. | ತರಗತಿಗಳಿಗೆ ಭೇಟಿ ನೀಡಿ ಮಕ್ಕಳ ಕಲಿಕೆಯನ್ನು ಪರಿಶೀಲಿಸಿರುತ್ತಾರೆ. |
| 5 | ಮೈ.ದಕ್ಷಿಣ | 17 | 16 | 0 | 0 | | ಸಹಿಪ್ರಾ ಶಾಲೆ ಕನಕಗಿರಿ | | ತರಗತಿಗಳಿಗೆ ಭೇಟಿ ನೀಡಿ ಮಕ್ಕಳ ಕಲಿಕೆಯನ್ನು ಪರಿಶೀಲಿಸಿರುತ್ತಾರೆ. |
| 6 | ಮೈ.ಗ್ರಾಮಾಂತರ | 217 | 0 | 0 | 0 | | ಸ.ಹಿ.ಪ್ರಾ.ಶಾಲೆ ದೇವಯ್ಯನಹುಂಡಿ, ಸ.ಕಿ.ಪ್ರಾ.ಶಾಲೆ ಮಂಡನಹಳ್ಳಿ, ಸ.ಕಿ.ಪ್ರಾ.ಶಾಲೆ ಮರಯ್ಯನಹುಂಡಿ | ತೆರೆದ ಮುಕ್ತ ಗ್ರಂಥಾಲಯ : ಭಯಮುಕ್ತ ವಾತಾವರಣ ಒದಗಿಸಿರುವುದು. ಸೂಕ್ತ ಸಾಧನ ಸಲಕರಣೆಗಳನ್ನು ಒದಗಿಸಿ ವೈಯುಕ್ತಿಕ ಗಮನವನ್ನು ನೀಡುತ್ತಿರುವುದು. | ಕೃತಿ ಸಂಪುಟ ಬಳಸಿ, ಚೆಕ್‌ಲಿಸ್ಟ್, ವೀಕ್ಷಣೆ, ಲಿಖಿತ ಮತ್ತು ಮೌಖಿಕ ಸಾಮಾರ್ಥ್ಯಾಧಾರಿತ ಪ್ರಶ್ನೆಗಳ ಮೂಲಕ |

| | | | | | | | | | | |
|---|---|---|---|---|---|---|---|---|---|---|
| 7 | ನಂಜನಗೂಡು | ಎಲ್ಲಾ | 0 | 0 | 0 | | | ಸ.ಹಿ.ಪ್ರಾ.ಶಾ. ದೇವರಾಯಶೆಟ್ಟಿಪುರ, ಸ.ಹಿ.ಪ್ರಾ.ಶಾ. ದೇಬೂರು, ಸ.ಹಿ.ಪ್ರಾ.ಶಾ. ಸುತ್ತೂರು | ವೈದ್ಯಕೀಯ ತಪಾಸಣೆ, ಸಲಕರಣೆಗಳನು ಪಡೆಯುವಲ್ಲಿ ಅಗತ್ಯ ಸಹಕಾರ ನೀಡುವುದು. | ತರಗತಿಗಳಿಗೆ ಭೇಟಿ ನೀಡಿ ಮಕ್ಕಳ ಕಲಿಕೆಯನ್ನು ಪರಿಶೀಲಿಸಿರುತ್ತಾರೆ. | |
| 8 | ತಿ.ನರಸೀಪುರ | 230 | 0 | 0 | 0 | | | | ವೈದ್ಯಕೀಯ ತಪಾಸಣೆ, ಶಿಕ್ಷಣದಲ್ಲಿ ಜಾಗೃತಿ ಮೂಡಿಸುವುದು. | ತರಗತಿ ವೀಕ್ಷಣೆ ಮತ್ತು ಮಾರ್ಗದರ್ಶನ | |
| 9 | ಪಿರಿಯಾಪಟ್ಟಣ | ಹೌದು | 0 | 0 | 0 | | | ಸಹಿಪ್ರಾ ಶಾಲೆ ಕಗ್ಗುಂಡಿ, ಸಹಿಪಾ ಶಾಲೆ ಹಬಟೂರು, ಸಹಿಪ್ರಾ ಶಾಲೆ ಕಿರನಲ್ಲಿ, ಸಕಿಪ್ರಾ ಶಾಲೆ ಕೆ ಹೊಸಹಳ್ಳಿ, ಸಹಿಪ್ರಾ ಹರವೆ ಮಲ್ಲರಾಜಪಟ್ಟಣ, ಸಕಿಪ್ರಾ ಶಾಲೆ ಆರ್ ಹರಳಹಳ್ಳಿ | ಸಮನ್ವಯ ಶಿಕ್ಷಣದ ಮಕ್ಕಳನ್ನು ಗುರುತಿಸಿ ಅವರ ದೋಷಕ್ಕನುಗುಣವಾಗಿ ವಯಕ್ತಿಕವಾಗಿ ಗಮನ ಹರಿಸಿ ಇತರ ಮಕ್ಕಳೊಂದಿಗೆ ಸಮಾನವಾಗಿ ಅವಕಾಶಗಳನ್ನು ಒದಗಿಸುತ್ತಾ ವಿಶೇಷ ಆಸಕ್ತಿ ನೀಡುವ ಮೂಲಕ ಹಾಗೂ ಅವರಿಗೆ ಸರ್ಕಾರದ ಪ್ರೋತ್ಸಾಹಕಗಳನ್ನು ಸಕಾಲದಲ್ಲಿ ನೀಡುವ ಮೂಲಕ ಮಾಡಲಾಗುತ್ತಿದೆ. | ಶಾಲಾ ಭೇಟಿ, ತರಗತಿ ವೀಕ್ಷಣೆ ಮತ್ತು ಮಾರ್ಗದರ್ಶನ | |

1. **ಪ್ರಸಕ್ತ ವರ್ಷದಲ್ಲಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಪಠ್ಯಪುಸ್ತಕಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿತ್ತು ಅದರಂತೆ ಇಲಾಖೆಯಿಂದ ಸರಬರಾಜಾದ ಪಠಪುಸ್ತಕಗಳು ನಿಗದಿತ ಸಮಯದಲ್ಲಿ ಜಿಲ್ಲೆಯ ಎಲ್ಲಾ ಶಾಲೆಗಳಿಗೂ ಪೂರೈಕೆ ಮಾಡಲಾಗಿದೆಯೇ? ಮಾಡದಿದ್ದ ಪಕ್ಷದಲ್ಲಿ ಕಾರಣಗಳು**

- ನಿಗದಿತ ಸಮಯಕ್ಕೆ ಪಠ್ಯ ಪುಸ್ತಕಗಳನ್ನು ತಾಲ್ಲೂಕಿನ ಎಲ್ಲಾ ಶಾಲೆಗಳಿಗೂ ಪೂರೈಕೆ ಮಾಡಲಾಗಿದೆ.

2. **ಜಿಲ್ಲಾ ಹಂತದಲ್ಲಿ ಪಠ್ಯಪುಸ್ತಕಗಳನ್ನು ನಿಗದಿತ ಸಮಯದಲ್ಲಿ ಶಾಲಾ ಹಂತದವರೆಗೆ ಪೂರೈಕೆ ಮಾಡಲು ಇರುವ ಸಮಸ್ಯೆಗಳೇನು?**

- ವಾಹನ ಸೌಲಭ್ಯದ ಸಮಸ್ಯೆ
- ಮುದ್ರಕರಿಂದ ನಿಗದಿತ ಸಮಯಕ್ಕೆ ಸರಬರಾಜಾಗದಿರುವುದು.
- ಪುಸ್ತಕಗಳನ್ನು ಸಕಾಲದಲ್ಲಿ ಶಾಲೆಗಳಿಗೆ ವಿತರಣೆ ಮಾಡಲು ಸಮಸ್ಯೆ ಉಂಟಾಗಿರುವುದಿಲ್ಲ.

3. **ಶೈಕ್ಷಣಿಕ ವರ್ಷದ ಆರಂಭದಲ್ಲಿಯೇ ಪಠ್ಯಪುಸ್ತಗಳನ್ನು ಶಾಲಾ ಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಕೈಗೊಳ್ಳುವ ಕ್ರಮಗಳೇನು?**

- ಕ್ಷೇತ್ರ ಶಿಕ್ಷಣಾಧಿಕಾರಿಗಳು ಬ್ಲಾಕ್ ಹಂತದಲ್ಲಿ ಒಬ್ಬ ನೋಡೆಲ್ ಅಧಿಕಾರಿಯನ್ನು ನೇಮಿಸಿ, ಅವರಿಗೆ ಜವಾಬ್ದಾರಿ ವಹಿಸಿ, ಎಲ್ಲ ಶಾಲೆಗೆ ಪಠ್ಯಪುಸ್ತಕ ಸಕಾಲದಲ್ಲ ಪೂರೈಸಿದ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದಲ್ಲದೇ, ಅಗತ್ಯ ಮಾರ್ಗದರ್ಶನ ನೀಡುವುದು.
- ಬ್ಲಾಕ್ ಹಂತದಲ್ಲಿ ಸಿ.ಆರ್.ಪಿಗಳ ಸಭೆ ಕರೆದು ಕ್ಲಸ್ಟರ್‌ವಾರು ಹಂಚಿಕೆ ಮಾಡಿರುವುದು
- ಶಾಲಾ ಶಿಕ್ಷಕರು ಶಾಲೆಯ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಬೇಡಿಕೆ ಪಟ್ಟಿ ಸಲ್ಲಿಸುವುದು.
- ನಿಗಧಿತ ಸಮಯಕ್ಕೆ ಬೇಡಿಕೆಗೆ ಅನುಗುಣವಾಗಿ ಎಲ್ಲಾ ಶಾಲೆಗಳಿಗೆ ಪಠ್ಯ ಪುಸ್ತಕಗಳು ತಲುಪುವಂತೆ ಸುವ್ಯವಸ್ಥೆ ಮಾಡಲಾಗಿದೆ.
- ಸೂಕ್ತ ಇಂಡೆಂಟ್‌ನೊಂದಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಠ್ಯಪುಸ್ತಕಗಳನ್ನು ವಿತರಿಸಲಾಗಿದೆ.

**ಶೈಕ್ಷಣಿಕ ಗುಣಮಟ್ಟವನ್ನು ಅಭಿವೃದ್ಧಿಪಡಿಸಲು ಮತ್ತು ಬೋಧನಾ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ನಾವೀನ್ಯತೆಯನ್ನು ಅಳವಡಿಸಿಕೊಂಡಿರುವ ಶಾಲೆಗಳ ಪಟ್ಟಿ**

**ಕೋಷ್ಟಕ 51:**

| ತಾಲ್ಲೂಕುಗಳು | ಶಾಲೆಗಳ ಪಟ್ಟಿ |
|---|---|
| ಎಚ್‌ಡಿ ಕೋಟೆ | 1. ಸಹಿಪ್ರಾಶಾ, ಮಾಗುಡಿಲು 2. ಸಹಿಪ್ರಾಶಾ ನಾಯಕನಹುಂಡಿ 3. ಸಕಿಪ್ರಾಶಾ ಆವರೆಗೆರೆ 4. ಸಹಿಪ್ರಾಶಾ, ಪುರ 5. ಸಹಿಪ್ರಾಶಾ ಜಿ.ಬಿ.ಸರಗೂರು. |
| ಹುಣಸೂರು | ಸಹಿಪ್ರಾಶಾ ಹುಂಡಿಮಾಳ, ಸಹಿಪ್ರಾಶಾ ಚೋಳೇನ ಹಳ್ಳಿ, ಸ.ಕಿಪ್ರಾ ಶಾಲೆ ಬಿಳಿಕೆರೆ, |
| ಕೆಆರ್‌ನಗರ | 1.ಸಕಿಪ್ರಾ ಶಾಲೆ, ಸಂಕನಹಳ್ಳಿ, 2.ಸಕಿಪ್ರಾ ಶಾಲೆ, ಕಾಟ್ನಾಳು, 3. ಸಹಿಪ್ರಾ ಶಾಲೆ, ಮಾವತ್ತೂರು., 4.ಸಹಿಪ್ರಾ ಶಾಲೆ(ಬಾಲಕಿಯರು) ಉರ್ದು ಮುಸ್ಲಿಂ ಬ್ಲಾಕ್, ಕೆಆರ್.ನಗರ., |
| ಮೈಸೂರು ಉತ್ತರ | ಸ.ಹಿ.ಪ್ರಾ.ಶಾಲೆ ಮೇದರ್ಸ್‌ಬ್ಲಾಕ್, ಸ.ಹಿ.ಪ್ರಾಶಾಲೆ ಹೆಬ್ಬಾಳು, ಸ.ಹಿ.ಪ್ರಾ ಶಾಲೆ ವಿನಾಯಕನಗರ, ಸ.ಹಿ.ಪ್ರಾ ಶಾಲೆ ಹಾರ್ಸ್‌ಲೇನ್, ಸ.ಹಿ.ಪ್ರಾ.ಶಾಲೆ ಜಿ.ಬಿಪಾಳ್ಯ, ಸ.ಹಿ.ಪ್ರಾ.ಶಾಲೆ ಹೊಸಜಲಪುರಿ, ಸ.ಉ.ಹಿ.ಪ್ರಾ.ಶಾಲೆ ಹಾರ್ಸ್‌ಲೇನ್, ಸ.ಉ.ಹಿ.ಪ್ರಾ.ಶಾಲೆ ಎನ್.ಜಿ.ಕೆಬ್ಲಾಕ್, ಸ.ಉ.ಹಿ.ಪ್ರಾ.ಶಾಲೆ ಶಾಂತಿನಗರ |
| ಮೈಸೂರು ದಕ್ಷಿಣ | ಸಹಿಪ್ರಾ ಶಾಲೆ ಕನಕಗಿರಿ |
| ಮೈಸೂರು ಗ್ರಾ. | 1.ಸ.ಹಿ.ಪ್ರಾ.ಶಾ. ದೇವಯ್ಯನ ಹುಂಡಿ, 2. ಸ.ಹಿ.ಪ್ರಾ.ಶಾ. ಮಂಡನ ಹಳ್ಳಿ, 3. ಸ.ಕಿ.ಪ್ರಾ.ಶಾ. ಮರಯ್ಯನ ಹುಂಡಿ |
| ನಂಜನಗೂಡು | ಸ.ಹಿ.ಪ್ರಾ.ಶಾ. ದೇವರಾಯಶೆಟ್ಟಿಪುರ. 2. ಸ.ಹಿ.ಪ್ರಾ.ಶಾ. ದೇಬೂರು. 3. ಸ.ಹಿ.ಪ್ರಾ.ಶಾ. ಬಂಚಹಳ್ಳಿಹುಂಡಿ. 4. ಸ.ಕಿ.ಪ್ರಾ.ಶಾ. ಆಲಂಬೂರು ಮುಂಟಿ, ಸ.ಕಿ.ಪ್ರಾ.ಶಾ. ಹಂಡುವಿನಹಳ್ಳಿ |
| ಪಿರಿಯಾಪಟ್ಟಣ | ಸಹಿಪ್ರಾ ಶಾಲೆ ಕಗ್ಗುಂಡಿ, ಸಹಿಪಾ ಶಾಲೆ ಹಬಟೂರು, ಸಹಿಪ್ರಾ ಶಾಲೆ ಕಿರನಲ್ಲಿ, ಸಕಿಪ್ರಾ ಶಾಲೆ ಕೆ ಹೊಸಹಳ್ಳಿ, ಸಹಿಪ್ರಾ ಹರವೆಮಲ್ಲರಾಜಪಟ್ಟಣ, ಸಕಿಪ್ರಾ ಶಾಲೆ ಆರ್ ಹರಳಹಳ್ಳಿ, ಸಕಿಪ್ರಾ ಶಾಲೆ ಹರೀನ ಹಳ್ಳಿ |
| ತಿ. ನರಸೀಪುರ | ಸಹಿಪ್ರಾ ಶಾಲೆ ಬೆಟ್ಟದ ಹೊಸೂರು, |

4. **ಬೋಧನಾ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ನಾವೀನ್ಯತೆಯನ್ನು ಅಳವಡಿಸಿಕೊಂಡಿರುವ ಶಿಕ್ಷಕರ ಸೇವೆಯನ್ನು ಸೂಕ್ತ ಸಂದರ್ಭಗಳಲ್ಲಿ ಬಳಸಿಕೊಳ್ಳಲಾಗಿದೆಯೇ? ವಿವರಣೆ ನೀಡುವುದು.**

- ತರಗತಿ ಕೋಣೆಯ ಆಚರಣೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿರುವ ಶಿಕ್ಷಕರ ಯಶೋಗಾಥೆಗಳನ್ನು ಬರೆವಣಿಗೆಯ ರೂಪದಲ್ಲಿ ದಾಖಲಿಸುವಂತೆ ಪ್ರೋತ್ಸಾಹಿಸಲಾಗಿದೆ.
- ವೀಡಿಯೋ ದಾಖಲೆಗಳನ್ನು ತರಬೇತಿಗಳಲ್ಲಿ ಬಳಸುವ ಪ್ರಯತ್ನಗಳನ್ನು ಮಾಡಲಾಗಿದೆ.
- ಡಯಟ್ ಬ್ಲಾಗ್ 'ವಸಂತಯಾನ'ದಲ್ಲಿ ಸಂಕ್ಷಿಪ್ತ ವಿವರ ಮತ್ತು ತರಗತಿ ಪ್ರಕ್ರಿಯೆಯ ಚಿತ್ರಗಳನ್ನು ಹಾಕಲಾಗಿದೆ.
- ಬೋಧನಾ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ನಾವಿನ್ಯ ವಿಧಾನಗಳನ್ನು ಅಳವಡಿಸಿಕೊಂಡಿರುವ ಶಿಕ್ಷಕರನ್ನು ಗುರ್ತಿಸಿ, ಅವರ ಅನುಭವಗಳನ್ನು ಸಮಾಲೋಚನಾ ಸಭೆಗಳಲ್ಲಿ ಹಂಚಿಕೊಳ್ಳಲು ಅವಕಾಶ ನೀಡುವುದಲ್ಲದೇ, ಅಗತ್ಯವೆನಿಸಿದರೆ ಸಂಪನ್ಮೂಲ ವ್ಯಕ್ತಿಯಾಗಿ ಬಳಸಿಕೊಳ್ಳುವುದು.
- ಶಿಕ್ಷಕರನ್ನು ಗುರುತಿಸಲಾಗಿದ್ದು ಇತರೆ ಶಾಲೆಗಳಿಗೆ ಸಂಪನ್ಮೂಲ ಶಾಲೆಯಾಗಿ ಮತ್ತು ಸಂಪನ್ಮೂಲ ಶಿಕ್ಷಕರಾಗಿ ಬಳಸಿಕೊಳ್ಳಲಾಗಿದೆ.

- ಶಿಕ್ಷಕರ ತರಬೇತಿಗಳು, ಸಮಾಲೋಚನಾ ತರಬೇತಿಗಳು, ಬ್ಲಾಕ್ ಹಂತದ ಕಾರ್ಯಗಾರಗಳಲ್ಲಿ ಅಂತಹ ಶಿಕ್ಷಕರನ್ನು ಕರೆಸಿ ವಿಚಾರ ವಿನಿಮಯ ಮಾಡಿಕೊಳ್ಳಲು ಹಾಗೂ ಶಿಕ್ಷಕರೊಂದಿಗೆ ಸಂವಾದಕ್ಕೆ ಅವಕಾಶ ಮಾಡಿಕೊಡಲಾಗುತ್ತಿದೆ. ಉದಾ: ನಲಿ–ಕಲಿ ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿಯಾದ ಶ್ರೀಮತಿ ಲಿಲ್ಲಿ ಜೋಸೆಫ್, ಸ.ಪ್ರೌ.ಶಾಲೆ, ಮೇಲೂರು ಇವರನ್ನು ಪ್ರಸಕ್ತ ಸಾಲಿನ ಶಿಕ್ಷಕರ ತರಬೇತಿಗಳಲ್ಲಿ ಮಾರ್ಗದರ್ಶಕರಾಗಿ ಆಹ್ವಾನಿಸಲಾಗುತ್ತಿದೆ.

5. **ಬೋಧನೆಯಲ್ಲಿ ನಾವೀನ್ಯತೆಯನ್ನು ಅಳವಡಿಕೊಂಡಿರುವ ಶಿಕ್ಷಕರ ಸೇವೆಯನ್ನು ಇತರೆ ಶಾಲೆಗಳಲ್ಲಿ ಸಂಪನ್ಮೂಲ ಶಾಲೆಯಾಗಿ ಬಳಸಿಕೊಳ್ಳಲಾಗಿದೆಯೇ?**

- ಹೌದು ಕ್ಲಸ್ಟರ್ ವ್ಯಾಪ್ತಿಯಲ್ಲಿ ಕಲಿಕಾ ಪ್ರಕ್ರಿಯೆಯಲ್ಲಿ ನಾವಿನ್ಯತೆಯನ್ನು ಅಳವಡಿಸಿಕೊಂಡು ಉತ್ತಮ ಬೋಧನೆ ಮಾಡುವ ಶಿಕ್ಷಕರುಗಳ ಶಾಲೆಗೆ, ಇತರೆ ಶಾಲಾ ಶಿಕ್ಷಕರು ಭೇಟಿ ನೀಡಿ ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳಲು ಅವಕಾಶ ನೀಡಲಾಗಿದೆ. ಉದಾ: ಸಕಿಪ್ರಾ ಶಾಲೆ ಸಂಕನಹಳ್ಳಿಗೆ ಬೇರೆ ಬೇರೆ ತಾಲ್ಲೂಕುಗಳಿಂದ ಶಿಕ್ಷಕರು ಭೇಟಿ ನೀಡಿ ಪ್ರೇರೇಪಣೆಯನ್ನು ಪಡೆದಿರುತ್ತಾರೆ.
- ಸಿಆರ್‌ಜಿ ತಂಡಗಳಲ್ಲಿ ಇಂತಹ ಶಿಕ್ಷಕರನ್ನು ಸೇರಿಸಲಾಗಿದ್ದು ಇತರೆ ಶಾಲೆಗೆ ಅವರ ಸೇವೆಯನ್ನು ಒದಗಿಸಲಾಗಿದೆ.
- ಬೋಧನಾ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ನಾವಿನ್ಯ ವಿಧಾನಗಳನ್ನು ಅಳವಡಿಸಿಕೊಂಡಿರುವ ಶಿಕ್ಷಕರನ್ನು ಗುರ್ತಿಸಿ, ಅವರ ಅನುಭವಗಳನ್ನು ಸಮಾಲೋಚನಾ ಸಭೆಗಳಲ್ಲಿ ಹಂಚಿಕೊಳ್ಳಲು ಅವಕಾಶ ನೀಡುವುದಲ್ಲದೇ, ಅಗತ್ಯವೆನಿಸಿದರೆ ಸಂಪನ್ಮೂಲ ವ್ಯಕ್ತಿಯಾಗಿ ಬಳಸಿಕೊಳ್ಳುವುದು.
- ಪ್ರಾತ್ಯಕ್ಷಿಕೆ ಪಾಠ ನೀಡಲು, ಶಿಕ್ಷಕರ ಅಗತ್ಯತೆಯನ್ನಾಧರಿಸಿದ ಪ್ರಶ್ನೆಗಳಿಗೆ ಉತ್ತರಿಸಲು, ಸಮಾಲೋಚನಾ ಸಭೆಗಳಲ್ಲಿ ಮಾಹಿತಿ ವಿನಿಮಯ ಮಾಡಿಕೊಳ್ಳಲು ಬಳಕೆ ಮಾಡಿಕೊಳ್ಳಲಾಗುತ್ತಿದೆ.

6. **ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ನಾವೀನ್ಯತೆಯನ್ನು ಅಳವಡಿಕೊಳ್ಳಲು ಬಿ.ಆರ್.ಸಿ/ಸಿ.ಆರ್.ಪಿ/ಡಯಟ್ ನೋಡಲ್ ಅಧಿಕಾರಿಗಳು ನೀಡಿರುವ ಮಾರ್ಗದರ್ಶನ ಮತ್ತು ಸಧ್ಬಳಕೆ ಬಗ್ಗೆ ಮಾಹಿತಿ ಸಹಿತ ವಿವರಣೆ.**

- ಅತಿ ಮುಖ್ಯವಾಗಿ ತರಗತಿ ವೀಕ್ಷಣೆ ಮಾಡಿರುವ ಅನುಪಾಲನಾಧಿಕಾರಿಗಳು ಶಿಕ್ಷಕರನ್ನು ತಮ್ಮ ತರಗತಿ ಅನುಕೂಲಿಸುವಿಕೆಯ ಬಗ್ಗೆ ಸ್ವಾವಲೋಕನಕ್ಕೆ ಹಚ್ಚುವ ಪ್ರಯತ್ನ ಮಾಡುತ್ತಾರೆ. ಆದರೆ ಈ ಬಗ್ಗೆ ಹೆಚ್ಚು ಹೆಚ್ಚು ಅನುಪಾಲನಾಧಿಕಾರಿಗಳೂ ಬೆಳೆಯಬೇಕಾಗಿದೆ.
- ಯಶೋಗಾಥೆಗಳ ವಿಡಿಯೋ ದಾಖಲೀಕರಣ, ಬರೆವಣಿಗೆಯನ್ನು ಸಿದ್ಧಪಡಿಸಿ ಜಿಲ್ಲಾ ಹಂತದಲ್ಲಿ ಚರ್ಚಿಸಲಾಗುತ್ತದೆ.
- ಬೋಧನಾ & ಕಲಿಕಾ ಪ್ರಕ್ರಿಯೆಗಳಲ್ಲಿ ಅಳವಡಿಸಲಾಗಿರುವ ರಚನಾವಾದ ಅಂತರ್ಗತ ವಿಧಾನ & ಸುರುಳಿ ಆಕಾರದ ವಿಧಾನಗಳು–5ಇ ಮಾದರಿಗಳನ್ನು ಸಮರ್ಪಕವಾಗಿ ಬಳಸಲು ಅಗತ್ಯ ಮಾರ್ಗದರ್ಶನವನ್ನು ನೋಡೆಲ್ ಅಧಿಕಾರಿಗಳು, ಬಿ.ಆರ್.ಸಿ, ಬಿ.ಆರ್.ಪಿ, ಸಿ.ಆರ್.ಪಿಗಳು ಶಾಲಾ ಭೇಟಿಯ ಸಂದರ್ಭದಲ್ಲಿ ನೀಡಿರುತ್ತಾರೆ.
- ಅಗತ್ಯವಿದ್ದಲ್ಲಿ ಪ್ರಾತ್ಯಕ್ಷಿಕೆ ಪಾಠ ನೀಡಲು, ಶಿಕ್ಷಕರ ಅಗತ್ಯತೆಯನ್ನಾಧರಿಸಿದ ಪ್ರಶ್ನೆಗಳಿಗೆ ಉತ್ತರಿಸಲು, ಸಮಾಲೋಚನಾ ಸಭೆಗಳಲ್ಲಿ ಮಾಹಿತಿ ವಿನಿಮಯ ಮಾಡಿಕೊಳ್ಳಲು ಸಿದ್ಧರಾಗಿರುತ್ತಾರೆ.
- ಒಂದು ಶಾಲೆಯಲ್ಲಿನ ಯಶೋಗಾಥೆಯನ್ನು ಮತ್ತೊಂದು ಶಾಲೆಯೊಳಗೆ ಹಂಚಿಕೊಂಡು ಪ್ರೇರೇಪಣೆಯನ್ನು ನೀಡುವ ಪ್ರಯತ್ನ ಅನುಪಾಲನಾಧಿಕಾರಿಗಳಿಂದ ನಡೆಯುತ್ತಿದೆ.
- ಇದು ಶಿಕ್ಷಕರು ಮತ್ತು ಅಧಿಕಾರಿಗಳೊಂದಿಗೆ ಸ್ನೇಹದ ವಾತಾವರಣ ಬೆಳೆದು ಉತ್ತಮ ಕಲಿಕೆಗೆ ಸಹಾಯಕವಾಗಿದೆ.

## 7. ಸಿ.ಡಬ್ಲ್ಯೂ.ಎಸ್.ಎನ್ ವಿದ್ಯಾರ್ಥಿಗಳಿಗೆ ಶಿಕ್ಷಕರು ಕೈಗೊಂಡಿರುವ ಪ್ರಮುಖ ಕ್ರಮಗಳು

- ಶಿಕ್ಷಕರು ಸಿ.ಡಬ್ಲ್ಯೂ.ಎಸ್.ಎನ್ ಮಕ್ಕಳನ್ನು ಅಕ್ಕರೆ, ಮತ್ತು ತಾಳ್ಮೆಯಿಂದ ನೋಡಿಕೊಳ್ಳುವ ಮನಸ್ಥಿತಿಯನ್ನು ಉಳ್ಳವರಾಗಿದ್ದಾರೆ. ಅವರ ಅಗತ್ಯತೆಯನ್ನು ಗುರುತಿಸಿ ಅದಕ್ಕನುಗುಣವಾಗಿ ಸ್ಪಂದಿಸುತ್ತಿದ್ದಾರೆ. ಉದಾ: ಸ್ಪಷ್ಟ ಉಚ್ಚಾರಣೆ ಇಲ್ಲದಿರುವ ಮಗುವನ್ನು ಹೆಚ್ಚು ಮಾತನಾಡಿಸುವುದು, ಉಚ್ಚಾರಣೆಯ ಮೂಲ ಸ್ಥಾನದ ಬಗ್ಗೆ ಪರಿಚಯ ಮಾಡಿಕೊಡುವುದು ಇತ್ಯಾದಿ. ಆತ್ಮ ವಿಶ್ವಾಸ ಕೊರತೆಯಿಂದ ಕಲಿಕೆಯಲ್ಲಿ ಹಿಂದುಳಿದಿರುವ ಮಗುವಿಗೆ ಹೆಚ್ಚು ಅವಕಾಶ ಕಲ್ಪಿಸುವುದು.
- ಮಗುವಿನ ಸಮಗ್ರ ಬೆಳೆವಣಿಗೆಯ ಕುರಿತಾಗಿ ಪೋಷಕರೊಂದಿಗೆ ಚರ್ಚಿಸುವುದು, ಅವರಿಗೆ ಹಿಮ್ಮಾಹಿತಿ ನೀಡುವುದು ಇತ್ಯಾದಿಗಳನ್ನು ಶಿಕ್ಷಕರು ಮಾಡುತ್ತಿದಾರೆ.
- ತರಗತಿಯಲ್ಲಿ ಸಿ.ಡಬ್ಲ್ಯೂ.ಎಸ್.ಎನ್ ಮಕ್ಕಳನ್ನು ಅವರ ದೋಷಕ್ಕೆ ತಕ್ಕಂತೆ ಮಗುವಿಗೆ ಅನುಕೂಲವಾಗುವ ರೀತಿಯಲ್ಲಿ ಕೂರಿಸುವುದು, ಬೋಧನಾ ಸಮಯದಲ್ಲಿ ಹೆಚ್ಚು ಮಕ್ಕಳ ಅಗತ್ಯಾಧಾರಿತ ಪಾಠೋಪಕರಣಗಳನ್ನು ಮತ್ತು ಕಪ್ಪು ಹಲಗೆಯನ್ನು ಬಳಸುವುದು.
- ವಿದ್ಯಾರ್ಥಿಗಳಿಗೆ ಅಂಗವಿಕಲ ಗುರ್ತಿನ ಪುಸ್ತಕ ಮಾಡಿಸಲು, ವಿದ್ಯಾರ್ಥಿ ವೇತನ ಮತ್ತು ಸಾರಿಗೆ ವ್ಯವಸ್ಥೆ ಮಾಡಿಸುವ ಬಗ್ಗೆ ಮಾರ್ಗದರ್ಶನ ಮಾಡಲಾಗುವುದು.
- ಮೆಡಿಕಲ್ ಕ್ಯಾಂಪ್‌ನಲ್ಲಿ ಮಗುವು ಭಾಗವಹಿಸುವಂತೆ ಪೋಷಕರಿಗೆ ಮಾರ್ಗದರ್ಶನ ಮಾಡುವುದು.
- ಗೃಹಾಧಾರಿತ ಶಿಕ್ಷಣಕ್ಕೆ ಅಳವಡಿಸಲು ಪೋಷಕರ ಮನವೊಲಿಸಿದೆ. ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಗಿದೆ
- ಪೋಷಕರ ಮನೆಗಳಿಗೆ ಭೇಟಿ ನೀಡಿ ಸಮಾಲೋಚಿಸಿ ಮಕ್ಕಳ ಕಲಿಕೆಯ ಬಗೆಗಿನ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುತ್ತಿರುತ್ತಾರೆ.

## 8. ಶಿಕ್ಷಕರು ನೀಡುತ್ತಿರುವ ಸಲಹೆ, ಸಹಾಯ, ಮಾರ್ಗದರ್ಶನಗಳು ಸಮನ್ವಯ ಶಿಕ್ಷಣವನ್ನು ಉತ್ತಮಗೊಳಿಸಲು ಸಹಕಾರಿಯಾಗಿದೆಯೇ? ಬ್ಲಾಕ್ ಮತ್ತು ಜಿಲ್ಲಾ ಹಂತದಲ್ಲಿ ಸಮನ್ವಯ ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗಿರುವರೇ?

- ಹೌದು, ಶಿಕ್ಷಕರು ನೀಡುತ್ತಿರುವ ಸಲಹೆ, ಸಹಾಯ, ಮಾರ್ಗದರ್ಶನಗಳು ಸಮನ್ವಯ ಶಿಕ್ಷಣವನ್ನು ಉತ್ತಮಗೊಳಿಸಲು ಸಹಕಾರಿಯಾಗಿದೆ. ಹಾಗೆಯೇ ಬ್ಲಾಕ್ ಮತ್ತು ಜಿಲ್ಲಾ ಹಂತದಲ್ಲಿ ಸಮನ್ವಯ ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗಿರುತ್ತಾರೆ.
- ಶಿಕ್ಷಕರು ಮತ್ತು ಮಾರ್ಗದರ್ಶಕರು ಈ ಮಕ್ಕಳನ್ನು ವಿಶೇಷ ಕಾಳಜಿ ಮತ್ತು ಪ್ರೀತಿ ವಿಶ್ವಾಸದಿಂದ ಕಾಣುತ್ತಾರೆ ಮತ್ತು ಆತ್ಮವಿಶ್ವಾಸ ಬೆಳೆಯುವ ರೀತಿಯಲ್ಲಿ ನಡೆಸಿಕೊಳ್ಳುತ್ತಾರೆ. ಬೋಧನೆಯಲ್ಲಿ ಅವರ ಅಗತ್ಯತೆಗಳನ್ನು ಪರಿಗಣಿಸಿ, ಅದಕ್ಕನುಗುಣವಾಗಿ ಸ್ಪಂದಿಸುವ ಪ್ರಯತ್ನ ಮಾಡಿರುತ್ತಾರೆ. ಕೆಲವು ಮಕ್ಕಳು ಕನಿಷ್ಟ ಜೀವನ ಕೌಶಲಗಳನ್ನು ಕಲಿಯುವ ರೀತಿಯಲ್ಲಿ ಮಾರ್ಗದರ್ಶನ ನೀಡಿರುತ್ತಾರೆ.
- ಶಿಕ್ಷಕರು ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸಾಧನೋಪಕರಣ ನೀಡಲು ಸಹಕಾರ ನೀಡುತ್ತಾರೆ.
- ಸಾಮಾನ್ಯ ತೊಂದರೆಯಾದರೆ ಎಸ್.ಆರ್.ಪಿ. ಕೇಂದ್ರದ ಮೂಲಕವೂ ಮಾರ್ಗದರ್ಶನ ಮಾಡುತ್ತಾರೆ.
- ನಡೆದಾಡಲೂ ಸಾಧ್ಯವಿಲ್ಲದ ಮಕ್ಕಳಿಗೆ ಹೆಚ್.ಬಿ.ಇ. ಗೆ ಸೇರಿಸಲು ಮಾರ್ಗದರ್ಶನ ನೀಡಿರುತ್ತಾರೆ.
- ಥೆರಫಿ, ಸಾರಿಗೆ ಭತ್ಯೆ, ವಿದ್ಯಾರ್ಥಿ ವೇತನ, ಸಾಧನೋಪಕರಣ, ಬೆಂಗಾವಲು ಭತ್ಯೆ ಮುಂತಾದಾವುಗಳ ಬಗ್ಗೆ ಮಾರ್ಗದರ್ಶನ ನೀಡುವರು.

9. **ಇಲಾಖೆ ನಿಗದಿಪಡಿಸಿರುವ ಸಿ.ಸಿ.ಇ ಮಾದರಿ ಅನುಸಾರ ಸಿ.ಆರ್.ಪಿ.ಗಳು ಮಕ್ಕಳ ಕಲಿಕೆಯ ಬಗ್ಗೆ ಮೇಲ್ವಿಚಾರಣೆ ನಡೆಸುತ್ತಿದ್ದಾರೆಯೇ**

- ಸಿಸಿಇ ಪರಿಷ್ಕರಣೆ ಹೊಂದಿದಂತೆ ಪಕ್ವವಾದ ತರಬೇತಿಯನ್ನು ಸಿಆರ್‌ಪಿಗಳಿಗೆ ನೀಡಿರುವುದಿಲ್ಲ.
- ಆದರೂ ಸಿಆರ್‌ಪಿಗಳು ಇಲಾಖೆ ನಿಗದಿಪಡಿಸಿರುವ ಸಿ.ಸಿ.ಇ ಮಾದರಿ ಅನುಸಾರ ಮಕ್ಕಳ ಕಲಿಕೆಯ ಬಗ್ಗೆ ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಕಲಿಕೆಯ ರಚನೆ ಮತ್ತು ರೂಪುಗೊಳ್ಳುವಿಕೆಯ ಕುರಿತಂತೆ ಮಾರ್ಗದರ್ಶನ ಮಾಡಲು ಇನ್ನಷ್ಟು ತರಬೇತಿ ಬೇಕಾಗಿದೆ.
- ಬ್ಲಾಕ್ ಹಂತದಲ್ಲಿ ಡಯಟ್ ನೋಡೆಲ್ ಅಧಿಕಾರಿಗಳ ಉಪಸ್ಥಿತಿಯಲ್ಲಿ ಸಿಆರ್‌ಪಿಗಳಿಗೆ ಸಿಸಿಇ ಕುರಿತ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು. ಸಿಆರ್‌ಪಿಗಳು ಪರಸ್ಪರ ವಿಚಾರ ವಿನಿಮಯ ಮಾಡುವುದರ ಮೂಲಕ, ಸಾಹಿತ್ಯ ಓದುವುದರ ಮೂಲಕ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡಿರುತ್ತಾರೆ.
- ಕೆಲವೊಮ್ಮೆ ನುರಿತ ಶಿಕ್ಷಕರ ಪಾಠ ವೀಕ್ಷಣೆ ಮಾಡುವುದರ ಮೂಲಕವೂ ತಮ್ಮನ್ನು ತಾವು ಸದೃಢಗೊಳಿಸುವ ಪ್ರಯತ್ನ ಮಾಡಿರುತ್ತಾರೆ.
- ತಾವೂ ಕಲಿಯುತ್ತಾ ಸಂದರ್ಭ ಬಂದಾಗ ತರಗತಿ ವೀಕ್ಷಣೆ ಮಾಡಿ ಮಾರ್ಗದರ್ಶನ ನೀಡುತ್ತಿದ್ದಾರೆ.
- ಸಿಆರ್‌ಪಿಗಳಿಗೆ ರೂಪಣಾತ್ಮಕ ಮೌಲ್ಯಮಾಪನದ ಬಗ್ಗೆ ಆಳವಾದ ತರಬೇತಿ ಅಗತ್ಯವಿದೆ.

10. **ವಿದ್ಯಾರ್ಥಿಗಳ ಮೌಲ್ಯಮಾಪನವನ್ನು ಮಾಡಲು ಸಿ.ಆರ್.ಪಿ.ಗಳು ಅನುಸರಿಸುತ್ತಿರುವ ಕ್ರಮಗಳೇನು? ಸಿ.ಆರ್.ಪಿ.ಗಳು ಶಿಕ್ಷಕರಿಗೆ ಮಾರ್ಗದರ್ಶನ ನೀಡಲು ಸಂಪೂರ್ಣವಾಗಿ ತೊಡಗಿಸಿಕೊಂಡಿರುವರೇ?**

- ಸಿಆರ್‌ಪಿಗಳು ಶಾಲಾ ಭೇಟಿ ಸಂದರ್ಭದಲ್ಲಿ ನಲಿಕಲಿ ತರಗತಿಯಲ್ಲಿ ಆರಂಭಿಕ ತರಗತಿ ನಿರ್ವಹಣೆಯನ್ನು ವೀಕ್ಷಣೆ ಮಾಡುತ್ತಾರೆ. ವಿದ್ಯಾರ್ಥಿಗಳು ತಮ್ಮ ತಮ್ಮ ಕಲಿಕಾ ತಟ್ಟೆಯಲ್ಲಿ ಕುಳಿತ ಬಳಿಕ ಸಿಆರ್‌ಪಿಗಳು ಒಂದು ತಟ್ಟೆಯಲ್ಲಿ ಕುಳಿತು ಮಕ್ಕಳ ಕಲಿಕೆಯನ್ನು ಅವರವರ ಕಾರ್ಡ್‌ಗಳ ಆಧಾರದಲ್ಲಿ ಪರಿಶೀಲಿಸುತ್ತಾರೆ. ಭಾಷೆ, ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳಿಗೆ ಸಂಬಂಧಿಸಿದಂತೆ ಕಲಿಕೆಯ ಮಟ್ಟವನ್ನು ಗುರುತಿಸಿ ಪ್ರಗತಿ ನೋಟದೊಂದಿಗೆ ತಾಳೆ ನೋಡುತ್ತಾರೆ. ವ್ಯತ್ಯಾಸವಿದ್ದಲ್ಲಿ ಶಿಕ್ಷಕರಿಗೆ ಲಿಖಿತ ಮತ್ತು ಮೌಖಿಕ ಹಿಮ್ಮಾಹಿತಿ ನೀಡುತ್ತಾರೆ.
- ಇತರೆ ತರಗತಿಗಳಲ್ಲಿ ಭೇಟಿ ದಿನದಂದು ನಿರ್ವಹಣೆ ಮಾಡುತ್ತಿರುವ ಕಲಿಕಾ ಸಾಮರ್ಥ್ಯಕ್ಕೆ ಅನುಗುಣವಾಗಿ ಚಟುವಟಿಕೆ ನೀಡಿ ಕಲಿಕೆಯ ಮೌಲ್ಯಮಾಪನ ಮಾಡುತ್ತಾರೆ. ಭಾಷೆಯಲ್ಲಿ ತರಗತಿ ಮಟ್ಟಕ್ಕನುಸಾರ ಉಕ್ತಲೇಖನ, ಓದುವಿಕೆ, ಸರಳ ಲೆಕ್ಕಾಚಾರ ಇತ್ಯಾದಿಗಳನ್ನು ವಿದ್ಯಾರ್ಥಿವಾರು ಪರಿಶೀಲಿಸಿ ಹೆಸರು ಸಮೇತ ವರದಿಯಲ್ಲಿ ದಾಖಲಿಸುತ್ತಾರೆ.
- ಸಿ.ಆರ್.ಪಿ.ಗಳು ಶಾಲಾ ಭೇಟಿಯ ಸಂದರ್ಭದಲ್ಲಿ ತರಗತಿಗೆ ಭೇಟಿ ನೀಡಿ ಮಕ್ಕಳಿಗೆ ಉಕ್ತ ಲೇಖನ ನೀಡುವುದು, ಕಪ್ಪು ಹಲಗೆಯ ಮೇಲೆ ಬರಹಗಳನ್ನು ಬರೆಸುವುದು, ಮೌಖಿಕ ಪ್ರಶ್ನೆಗಳನ್ನು ಕೇಳಿ ಉತ್ತರವನ್ನು ಪಡೆಯುವುದು, ಸರಳ ಲೆಕ್ಕಗಳನ್ನು ಮಾಡಿಸುವುದು, ವಾಕ್ಯಗಳನ್ನು ಓದಿಸುವುದು, ಔಪಚಾರಿಕ & ಅನೌಪಚಾರಿಕ ಸನ್ನಿವೇಶಗಳನ್ನು ನೀಡಿ ಮಾತನಾಡಿಸುವು. ಹೀಗೆ ಮಕ್ಕಳ ಕಲಿಕೆಯನ್ನು ಮೇಲ್ವಿಚಾರಣೆ ಮಾಡುತ್ತಿರುತ್ತಾರೆ.
- ಸಿ.ಆರ್.ಪಿ.ಗಳು ಶಾಲಾ ಭೇಟಿಯ ಸಂದರ್ಭದಲ್ಲಿ ತರಗತಿ ವೀಕ್ಷಣೆಯಲ್ಲಿ ಶಿಕ್ಷಕರು ತರಗತಿಯನ್ನು ಹೇಗೆ? ಚಟುವಟಿಕೆ ಆಧಾರಿತವಾಗಿ ರಚನಾವಾದದ ಹಿನ್ನೆಲೆಯಲ್ಲಿ ಅನುಕೂಲಿಸಬೇಕು ಹಾಗೂ ಅದರ ಜೊತೆಯಲ್ಲಿಯೇ ಮೌಲ್ಯಮಾಪನ ಸಾಗುವ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡುವುದನ್ನು ಗಮನಿಸುತ್ತಾರೆ.

- ಶಿಕ್ಷಕರು ನಿರ್ವಹಿಸಿರುವ ಸಿಸಿಇ ದಾಖಲೆಗಳನ್ನು ಅನುಸರಿಸಿ ಕೃತಿ ಸಂಪುಟ, ಸಾಂದರ್ಭಿಕ ದಾಖಲೆ, ಸಾಧನ ತಂತ್ರಗಳ ಬಳಕೆಯನ್ನು ಗಮನಿಸಿ ಮಕ್ಕಳ ಪ್ರಗತಿಯನ್ನು ಗುರುತಿಸಿಕೊಳ್ಳುತ್ತಾರೆ.
- ಸಿ.ಆರ್.ಪಿ.ಗಳು ಶಿಕ್ಷಕರಿಗೆ ಅಗತ್ಯ ಮಾರ್ಗದರ್ಶನ ನೀಡುವುದಲ್ಲದೆ ಶಿಕ್ಷಕರು ಎದುರಿಸಿದ ಸವಾಲುಗಳಿಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಿರುತ್ತಾರೆ.

11. **ಕಲಿಕಾ ಮತ್ತು ಬೋಧನಾ ಪ್ರಕ್ರಿಯೆಯನ್ನು ಮೌಲ್ಯಮಾಪನ ಮಾಡಲು ಸಿ.ಆರ್.ಪಿ.ಗಳಿಗೆ ತರಬೇತಿ ಅವಶ್ಯಕತೆ ಇದೆಯೇ?:ಹೌದು**

- ಶಿಕ್ಷಕರ ತರಗತಿ ವೀಕ್ಷಣೆ ಮಾಡಿ ಶಿಕ್ಷಕರಿಗೆ ಮಾರ್ಗದರ್ಶನ ನೀಡಲು ಸಿಆರ್‌ಪಿಗಳಿಗೆ ಉನ್ನತ ಮಟ್ಟದ ತರಬೇತಿಯ ಅಗತ್ಯವಿದೆ.
- ವಿಕೇಂದ್ರೀಕೃತ ವ್ಯವಸ್ಥೆಯೊಳಗೆ ಶಿಕ್ಷಕರಿಗೆ ಶಾಲಾ ಹಂತದ ತರಬೇತಿ ನೀಡಬೇಕಾದವರು ಸಿಆರ್‌ಪಿಗಳು. ಆದುದರಿಂದ ಜ್ಞಾನ ರಚನೆಯ ತಾತ್ವಿಕ ತಳಹದಿ ಮತ್ತು ಅದರ ಪ್ರಾಯೋಗಿಕ ನಿರ್ವಹಣೆ ಕುರಿತ ಕಾಣ್ಕೆಯ ಸ್ಪಷ್ಟ ಅರಿವು ಸಿಆರ್‌ಪಿಗಳಿಗೆ ಇರಬೇಕಾದುದು ಅತೀ ಅಗತ್ಯವಾಗಿದೆ.
- ಪ್ರತಿಯೊಂದಕ್ಕೂ ಇಲಾಖೆಯ ತರಬೇತಿಯನ್ನೇ ಕಾಯುವುದು ಸೂಕ್ತವಾಗದು. ಅಧ್ಯಯನಶೀಲತೆ ಅತೀ ಅಗತ್ಯವಾಗಿದೆ. ತರಬೇತಿ ಇಲ್ಲದೆ ಅಧ್ಯಯನಶೀಲತೆಯನ್ನು ಪೋಷಿಸುವಂತಹ ಕಾರ್ಯಕ್ರಮಗಳಲ್ಲಿ ಅನುಪಾಲನಾಧಿಕಾರಿಗಳನ್ನು ತೊಡಗಿಸಿಕೊಳ್ಳಬೇಕಾಗಿದೆ. ಉದಾ: ಕಡ್ಡಾಯವಾಗಿ ಓದಲು ಉತ್ತಮ ಸಾಹಿತ್ಯಗಳನ್ನು ಒದಗಿಸುವುದು, ತರಗತಿ ಪ್ರಕ್ರಿಯೆಯ ಕುರಿತ ಯಶೋಗಾಥೆಗಳನ್ನು ಒದಗಿಸುವುದು, ವಿಡಿಯೋ ಕ್ಲಿಪ್ಪಿಂಗ್ ಒದಗಿಸುವುದು, ತರಗತಿ ವೀಕ್ಷಣೆ ಮಾಡಿದ ವಿಶೇಷ ಸಂಗತಿಗಳನ್ನು ದಾಖಲಿಸುವಂತೆ ಪ್ರೇರೇಪಿಸುವುದು. ಉತ್ತಮ ಆಚರಣೆಗಳನ್ನು ಮಾಡಿರುವ ಶಿಕ್ಷಕರ ದಿನಚರಿಯ ಆಯ್ದ ಭಾಗಗಳನ್ನು ಪ್ರಕಟಿಸುವುದು, ಓದಲು ಪ್ರೇರೇಪಿಸುವುದು, ವಿಚಾರ ವಿನಿಮಯ ಮಾಡುವುದು, ಮಾಹಿತಿಯನ್ನು ಇತರ ಮೂಲಗಳಿಂದ ಸಂಗ್ರಹಿಸುವುದು ಇತ್ಯಾದಿಗಳಿಂದ ಅನುಪಾಲನಾಧಿಕಾರಿಗಳ ಜ್ಞಾನವನ್ನು ಎತ್ತರಿಸಬೇಕಾಗಿದೆ.

12. **ತಮ್ಮ ಜಿಲ್ಲೆಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳನ್ನು ಮೌಲಿಕರಿಸಲು ಬಳಸುತ್ತಿರುವ ಸಾಧನಗಳೇನು?**

- ಮಕ್ಕಳ ದೈನಂದಿನ ಚಟುವಟಿಕೆಗಳಲ್ಲಿ ಅವರ ವ್ಯಕ್ತಿತ್ವ ರೂಪುಗೊಳ್ಳುವುದನ್ನು ಗಮನಿಸಲು ಪ್ರಧಾನವಾದ ಸಾಧನವೆಂದರೆ ಅವಲೋಕನ.
- ಮಕ್ಕಳ ರೂಪಣಾತ್ಮಕ ಮೌಲ್ಯಮಾಪನದಲ್ಲಿ ಪಾಲಕರು ಮತ್ತು ಪೋಷಕರ ಪಾತ್ರ ಅಪಾರ. ಆದುದರಿಂದ ಪೋಷಕರೊಂದಿಗೆ ಅನೌಪಚಾರಿಕ ಸಂದರ್ಶನ ನಡೆಸುತ್ತಾರೆ.
- ಶಿಕ್ಷಕರು ತರಗತಿಯಲ್ಲಿ ಕಲಿಕೆಯ ಪ್ರಕ್ರಿಯೆಯ ಜೊತೆಗೆ ಮೌಲ್ಯಮಾಪನವನ್ನು ಮಾಡುತ್ತಿದ್ದು, ಪ್ರಶ್ನೆಪತ್ರಿಕೆ, ಪ್ರಶ್ನಾವಳಿ, ದರ್ಜಾಮಾಪನ, ತಾಳೆಪಟ್ಟಿ ಅವಲೋಕನ ನಮೂನೆ, ಸಂದರ್ಶನ ನಮೂನೆಗಳು, ನಿಯೋಜಿತ ಕಾರ್ಯಗಳು ಇತ್ಯಾದಿ ಸಾಧನಗಳನ್ನು ಬಳಸಿ ಮೌಲ್ಯಮಾಪನ ಮಾಡುತ್ತಿದಾರೆ.
- ಸಾಧನ ತಂತ್ರಗಳನ್ನು ಬಹಳ ಅರ್ಥಪೂರ್ಣವಾಗಿ ಬಳಕೆ ಮಾಡುವಲ್ಲಿ ಶಿಕ್ಷಕರಿಗೆ ಇನ್ನೂ ಹೆಚ್ಚಿನ ತಜ್ಞತೆ ಬೇಕಾಗಿದೆ.
- ರೂಬ್ರಿಕ್ಸ್ ಅಥವಾ ಮೌಲ್ಯಮಾಪನ ಸೂಚಿ ಆಧಾರದಲ್ಲಿ ಮಕ್ಕಳ ಮೌಲ್ಯಮಾಪನ ಮಾಡುವಂತೆ ತರಬೇತಿಯ ಅಗತ್ಯವಿದೆ. ಇನ್ನೂ ಇದನ್ನು ಪರಿಚಯ ಮಾಡಿರುವುದಿಲ್ಲ.

14. **ವಿದ್ಯಾರ್ಥಿಗಳನ್ನು ಮೌಲ್ಯಮಾಪನಕ್ಕೆ ಒಳಪಡಿಸಿದ ನಂತರ ಶಿಕ್ಷಕರು ನಿರ್ವಹಿಸುತ್ತಿರುವ ದಾಖಲೆಗಳನ್ನು ಸಿ.ಆರ್.ಪಿ.ಗಳು ಪರಿಶೀಲಿಸಿ ಮಾರ್ಗದರ್ಶನ ನೀಡಲಾಗುತ್ತಿರುವುದೇ ವಿವರಿಸಿ.**:ಹೌದು

- ದಾಖಲೆಗಳು ಅತಿ ಮುಖ್ಯವಾದುದು. ಆದರೆ ಮಕ್ಕಳ ವ್ಯಕ್ತಿತ್ವದ ರೂಪಿಸುವಿಕೆಗಾಗಿ ದಾಖಲೆಗಳನ್ನು ಮೀರಿದ ಮೌಲ್ಯಮಾಪನ ಆಗಬೇಕಿದೆ ಎನ್ನುವುದು ಆಶಯವಾಗಿದೆ.
- ಸಂದರ್ಶಕರ ಭಯದಿಂದಾಗಿ ಶಿಕ್ಷಕರು ಅವರನ್ನು ಮೆಚ್ಚಿಸುವ ನಿಟ್ಟಿನಲ್ಲಿ ದಾಖಲೆ ನಿರ್ವಹಣೆಯತ್ತ ಹೆಚ್ಚು ವಾಲುತ್ತಿರುವುದನ್ನು ಗಮನಿಸಿದ್ದೇವೆ. ಆದುದರಿಂದ ಮೊದಲು ತರಗತಿ ಪ್ರಕ್ರಿಯೆಯ ವೀಕ್ಷಣೆ, ಕೊನೆಯ ಆದ್ಯತೆಯನ್ನು ದಾಖಲೆ ವೀಕ್ಷಣೆಗೆ ನೀಡಿದೆ. ತರಗತಿಪ್ರಕ್ರಿಯೆಗಳು ಅದ್ಭುತವಾಗಿದ್ದು ಮಕ್ಕಳ ಕಲಿಕೆ ಅತ್ಯುತ್ತಮವಾಗಿದ್ದಲ್ಲಿ ದಾಖಲೆಗಳನ್ನು ವೀಕ್ಷಿಸದಿರುವ ಸಾಧ್ಯತೆಗಳು ಇವೆ ಮತ್ತು ಈ ಹಂತಕ್ಕೆ ನಮ್ಮ ಪ್ರಕ್ರಿಯೆಗಳು ಬೆಳೆಯಬೇಕಾಗಿದೆ.
- ಅದಾಗ್ಯೂ ಶಾಲಾ ಭೇಟಿಯ ಸಂದರ್ಭದಲ್ಲಿ ಸಿ.ಆರ್.ಪಿ.ಗಳು, ಶಿಕ್ಷಕರು ನಿರ್ವಹಿಸಿರುವ ದಾಖಲೆಗಳನ್ನು ಪರಿಶೀಲಿಸಿರುತ್ತಾರೆ ಮತ್ತು ಮಾರ್ಗದರ್ಶನ ನೀಡುತ್ತಾರೆ.
- ಈ ಬಗ್ಗೆ ಅವರ ಶಾಲಾ ಭೇಟಿಯನ್ನು ಪರಿಶೀಲಿಸಿದಾಗ ಅವರು ಪ್ರಕ್ರಿಯೆ ಪರಿಶೀಲಿಸಿ ಅಗತ್ಯ ಮಾರ್ಗದರ್ಶನ ನೀಡಿರುವ ಬಗ್ಗೆ ಪುರಾವೆಗಳಿವೆ. ಘಟಕ ಯೋಜನೆ ತಯಾರಿಸುವುದು, ಮಕ್ಕಳ ವೈಯಕ್ತಿಕ ನಮೂನೆ & ಶಿಕ್ಷಕರ ವೈಯಕ್ತಿಕ ನಮೂದುಗಳು ಹಾಗೂ ಮಕ್ಕಳಿಗೆ ಅಗತ್ಯ ಸಮಯದಲ್ಲಿ ನೀಡಿದ ಹಿಮ್ಮಾಹಿತಿಗಳ ಉಲ್ಲೇಖಗಳನ್ನು ಶಾಲಾ ಭೇಟಿ ವರದಿಯಲ್ಲಿ ಹಾಗೂ ಸಿ.ಆರ್.ಪಿ, ಬಿ.ಆರ್.ಪಿ ಸಭೆಯಲ್ಲಿ ಹಂಚಿಕೊಂಡಿರುತ್ತಾರೆ. ನಂತರದ ಭೇಟಿಗಳಲ್ಲಿ ಹಿಂದಿನ ಭೇಟಿಯ ಅನುಪಾಲನೆಯನ್ನು ಉಲ್ಲೇಖಿಸಿರುತ್ತಾರೆ. ಕ್ಲಸ್ಟರ್ ವ್ಯಾಪ್ತಿಯಲ್ಲಿರುವ ಶಾಲೆಗಳಲ್ಲಿರುವ ಕಲಿಕೆ/ಬೋಧನಾ ಪ್ರಕ್ರಿಯೆಯಲ್ಲಿರುವ ಉತ್ತಮ ಅಭ್ಯಾಸಗಳನ್ನು ಶಿಕ್ಷಕರಲ್ಲಿ ಹಂಚಿಕೊಳ್ಳುವ ಪ್ರವೃತ್ತಿಗಳನ್ನೂ ಬೆಳೆಸಿಕೊಂಡಿರುತ್ತಾರೆ.

# ಭಾಗ–ಇ ಮತ್ತು ಎಫ್

## ಶಿಕ್ಷಕರ ತರಬೇತಿ ವಿವರ ಮತ್ತು ಎಸ್.ಡಿ.ಎಂ.ಸಿ.ರಚನೆ

1. **ಶಿಕ್ಷಕರ ಅಗತ್ಯತೆಗೆ ಅನುಗುಣವಾಗಿ ಕ್ಲಸ್ಟರ್ ಹಾಗೂ ಬ್ಲಾಕ್ ಹಂತದಲ್ಲಿ ತರಬೇತಿಗಳು ಎಷ್ಟು ಪ್ರಮಾಣದಲ್ಲಿ ನಡೆದಿವೇ? ನಡೆಯದಿದ್ದಲ್ಲಿ ಕಾರಣಗಳೇನು? ಎಂಬುದನ್ನು ಪಟ್ಟಿ ಮಾಡಿ ಮತ್ತು ವಿಶ್ಲೇಷಿಸಿ.**

- ತರಬೇತಿಗಳು ಅಗತ್ಯತೆಗನುಗುಣವಾಗಿ ಶಾಲೆ ಮತ್ತು ಕ್ಲಸ್ಟರ್ ಹಂತದಲ್ಲಿ ಹುಟ್ಟಿಕೊಳ್ಳಬೇಕು ಮತ್ತು ಅವುಗಳನ್ನು ನಿರ್ವಹಿಸುವ ಸಾಮರ್ಥ್ಯ ಸಿಆರ್‌ಪಿಗಳಲ್ಲಿ ಬೆಳೆಯಬೇಕು. ಕನಿಷ್ಠ ಪಕ್ಷ ಜಿಲ್ಲೆಯ ಅಗತ್ಯತೆಗಳನ್ನು ಜಿಲ್ಲಾ ಮಟ್ಟದಲ್ಲಿ ಗುರುತಿಸಿಕೊಂಡು ನಿರ್ವಹಿಸಲು ಸ್ವಾಯತ್ತತೆ ನೀಡಬೇಕಾಗಿದೆ.
- ಈ ನಿಟ್ಟಿನಲ್ಲಿ ಚಿಂತನೆ ನಡೆಸಿದಾಗ ಕೆಲವು ತರಬೇತಿಗಳು ಕೆಲವು ಶಿಕ್ಷಕರಿಗೆ ಹೊಂದಿಕೆ ಆಗಿರಬಹುದು. ಆದರೆ ಹೆಚ್ಚಿನ ಶಿಕ್ಷಕರ ಅಗತ್ಯತೆಗೆ ತಕ್ಕಂತೆ ತರಬೇತಿಗಳು ಆಯೋಜನೆ ಆಗದಿರುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ..
- ಕೆಲವು ಪ್ಯಾಕೇಜ್‌ಗಳು ಶಿಕ್ಷಕರ ಇಚ್ಛೆಗೆ ಅನುಗುಣವಾಗಿರುವುದಿಲ್ಲ. ಬಲವಂತವಾಗಿ ತರಬೇತಿ ನೀಡಲಾಗುತ್ತಿದ್ದು ಅನುಷ್ಠಾನವಾಗದೇ ಅನುಪಯುಕ್ತವಾಗಿರುತ್ತದೆ.
- ಶಿಕ್ಷಕರ ಆಗತ್ಯತೆಗಳನ್ನು ಪರಿಗಣಿಸಿ ತಳಹಂತದಿಂದ ಹುಟ್ಟಿಕೊಂಡ ತರಬೇತಿಗಳು ಫಲಪ್ರದವಾಗಬಲ್ಲದು.

1. **ಶಿಕ್ಷಕರು ಪಡೆದ ತರಬೇತಿಗಳು ತರಗತಿಗಳಲ್ಲಿ ಅನುಷ್ಠಾನವಾಗುತ್ತಿವೆ ಎಂಬುದನ್ನು ತಿಳಿಯಲು ಅನುಸರಿಸಿದ ವಿಧಾನ/ಕ್ರಮಗಳನ್ನು ಬ್ಲಾಕ್‌ವಾರುಪಟ್ಟಿ ಮಾಡಿ**

**ಕೋಷ್ಟಕ 52:**

| ಕ್ರ. ಸಂ | ಬ್ಲಾಕ್‌ಗಳು | ತರಬೇತಿಗಳು ತರಗತಿಗಳಲ್ಲಿ ಅನುಷ್ಠಾನವಾಗುತ್ತಿವೆ ಎಂಬುದನ್ನು ತಿಳಿಯಲು ಅನುಸರಿಸಿದ ವಿಧಾನ/ಕ್ರಮಗಳನ್ನು |
|---|---|---|
| 1 | ಹೆಚ್.ಡಿ.ಕೋಟೆ | –ಶಾಲಾ ಭೇಟಿಯ ಸಂದರ್ಭದಲ್ಲಿ ತರಗತಿ ವೀಕ್ಷಣೆ ಮಾಡುವುದು. |
| 2 | ಹುಣಸೂರು | –ಸಮಾಲೋಚನಾ ತರಬೇತಿಯಲ್ಲಿ ಚರ್ಚಿಸುವುದು. |
| 3 | ಕೆ.ಆರ್.ನಗರ | –ಇಡೀ ದಿನ ಹಲವು ಶಾಲೆಗಳಿಗೆ ತಂಡದಲ್ಲಿ ಶಾಲೆಗಳಿಗೆ ಭೇಟಿ ನೀಡುವುದು. |
| 4 | ಮೈ.ಉತ್ತರ | –ಭೇಟಿ ಬಳಿಕ ಕ್ಲಸ್ಟರ್‌ನ ಶಾಲೆಯ ಮುಖ್ಯಸ್ಥರೆಲ್ಲಾ ಸೇರಿ ಬ್ಲಾಕ್ ಹಂತದಲ್ಲಿ ಚರ್ಚಿಸುವುದು. |
| 5 | ಮೈ.ದಕ್ಷಿಣ | –ನಿಗದಿತ ನಮೂನೆ ರಚಿಸಿ, ಶಾಲೆಗಳಿಗೆ ನೀಡಿ ಮಾಹಿತಿ ಸಂಗ್ರಹಿಸುವುದು ಮತ್ತು ದಾಖಲೆಗಳ ನಿರ್ವಹಣೆ ಮಾಡಿರುವುದನ್ನು ಪರಿಶೀಲಿಸುವುದು. |
| 6 | ಮೈ.ಗ್ರಾಮಾಂತರ | |
| 7 | ನಂಜನಗೂಡು | –ತರಬೇತಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಶಿಕ್ಷಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಪಟ್ಟಿ ಮಾಡುವುದು ಮತ್ತು ಸಮಾಲೋಚನಾ ಸಭೆಗಳಲ್ಲಿ ಬೇರೆ ಶಾಲೆಗಳ ಶಿಕ್ಷಕರ ಮೂಲಕ ಪರಿಹಾರಗಳನ್ನು ಕಂಡುಕೊಳ್ಳುವುದು. |
| 8 | ತಿ.ನರಸೀಪುರ | |
| 9 | ಪಿರಿಯಾಪಟ್ಟಣ | –ಇವೆಲ್ಲವನ್ನೂ ಬ್ಲಾಕ್ ಮತ್ತು ಜಿಲ್ಲಾ ಹಂತದಲ್ಲಿ ಚರ್ಚಿಸಿ ಕ್ರಮ ತೆಗೆದುಕೊಳ್ಳಲಾಗುತ್ತದೆ. |

2. **ತರಬೇತಿಗಳು ತರಗತಿ ಪ್ರಕ್ರಿಯೆಗಳಲ್ಲಿ ಯಾವ ಪ್ರಮಾಣದಲ್ಲಿ ಅನುಷ್ಠಾನಗೊಳ್ಳುತ್ತಿವೆ. ಎಂಬುದನ್ನು ಮತ್ತು ಅದು ಆ ಶಾಲೆಯ/ಬ್ಲಾಕ್‌ನ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾಗಿರುವ ಅಂಶಗಳನ್ನು ವಿಶ್ಲೇಷಿಸಿ.**

- ತರಬೇತಿಗಳನ್ನು ಕ್ರಮಬದ್ಧವಾಗಿ ಹಾಗೂ ಪರಿಣಾಮಕಾರಿಯಾಗಿ ಆಯೋಜನೆ ಮಾಡಲಾಗುತ್ತಿದ್ದು, ಶಿಕ್ಷಕರು ತರಬೇತಿಗಳ ಬಗ್ಗೆ ಹೆಚ್ಚು ಧನಾತ್ಮಕವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.
- ಶಿಕ್ಷಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮುಕ್ತ ಚರ್ಚೆಗೆ ಅವಕಾಶ ಕಲ್ಪಿಸಿ, ಸಮಸ್ಯೆಗಳನ್ನು ಬಗೆಹರಿಸಿಕೊಂಡು ಹೋಗಲು ಕ್ಲಸ್ಟರ್ ಮತ್ತು ಬ್ಲಾಕ್ ಹಂತದ ತರಬೇತಿಗಳಲ್ಲಿ ಹೆಚ್ಚಿನ ಅವಕಾಶ ಕಲ್ಪಿಸಿರುವುದರಿಂದ ಶಿಕ್ಷಕರು ತರಬೇತಿಯ ಹೆಚ್ಚಿನ ಅಂಶಗಳನ್ನು ತಮ್ಮ ತರಗತಿ ಬೋಧನೆಗೆ ಅಳವಡಿಸಿಕೊಳ್ಳಲು ಅವಕಾಶ ಒದಗಿದೆ.
- ಕ್ಲಸ್ಟರ್ ಹಂತದಲ್ಲಿ ಪರಸ್ಪರ ವಿಷಯಗಳನ್ನು ಚರ್ಚಿಸಿ ಬಗೆಹರಿಸಿಕೊಳ್ಳಲು, ಅಗತ್ಯ ಹೊಸ ವಿಚಾರಗಳನ್ನು ತಿಳಿದುಕೊಳ್ಳಲು ಮುಕ್ತ ಅವಕಾಶವಿರುವುದರಿಂದ ಹೆಚ್ಚು ಪ್ರಯೋಜನಕಾರಿಯಾಗಿದೆ.
- ಶಿಕ್ಷಕರು ತರಬೇತಿ ಪಡೆದ ನಂತರ ಶಾಲೆಗಳಲ್ಲಿ ತರಗತಿ ಪ್ರಕ್ರಿಯೆಯ ಸಂದರ್ಭದಲ್ಲಿ ತರಬೇತಿಯಲ್ಲಿ ಪಡೆದ ನಾವೀನ್ಯ ವಿಧಾನಗಳು ಹಾಗೂ ಕೌಶಲಗಳನ್ನು ಅನುಷ್ಠಾನಗೊಳಿಸುತ್ತಿದ್ದಾರೆ.

- ಇದು ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಸುಲಭ ಮಾರ್ಗದಿಂದ ಕಲಿಸುವುದಕ್ಕೆ ಸಹಾಯಕವಾಗುವುದಲ್ಲದೇ ಶೈಕ್ಷಣಿಕ ಪ್ರಗತಿಗೆ ಪೂರಕವಾಗಿದೆ. ಹೀಗೆ ಶಾಲೆಗಳ ಪ್ರಗತಿಯಿಂದ ಬ್ಲಾಕ್‌ನ ಶೈಕ್ಷಣಿಕ ಪ್ರಗತಿ ಸಾಧ್ಯವಾಗುತ್ತದೆ.

3. **ತರಬೇತಿ/ಸಮಾಲೋಚಕರು ಸಭೆಗಳನ್ನು ಆಯೋಜಿಸುವಾಗ ಕ್ಲಸ್ಟರ್/ಬ್ಲಾಕ್ ಹಂತಗಳಲ್ಲಿ ಎದುರಿಸಿದ ತೊಂದರೆಗಳನ್ನು ವಿಶ್ಲೇಷಿಸಿ ಯಾವ ರೀತಿಯ ತೊಂದರೆಗಳ ತೀವ್ರತೆ ಹೆಚ್ಚಾಗಿ ಕಂಡು ಬರುತ್ತದೆ ಎಂಬುದನ್ನು ಉಲ್ಲೇಖಿಸಿ ಮತ್ತು ಕೈಗೊಂಡ ಕ್ರಮಗಳನ್ನು ಪರಿಹಾರೋಪಾಯಗಳನ್ನು ಪಟ್ಟಿ ಮಾಡಿ.**

**ತೊಂದರೆಗಳು.**

- ಸಮಾಲೋಚನಾ ತರಬೇತಿಗಳಲ್ಲಿ ಪಾಲೊಳ್ಳುವ ಶಿಕ್ಷಕರ ಸಂಖ್ಯೆ ಕಡಿಮೆಯಿರುವುದರಿಂದ ಚರ್ಚೆಯು ಅಷ್ಟೊಂದು ಪರಿಣಾಮಕಾರಿಯಾಗಿರುವುದಿಲ್ಲ.
- 6–8 ವಿಜ್ಞಾನ / ಗಣಿತದಲ್ಲಿ ಕ್ಲಸ್ಟರ್‌ನಲ್ಲಿ 2 ಅಥವಾ 3 ಜನ ಶಿಕ್ಷಕರು ಇರುವುದರಿಂದ ಸಮಾಲೋಚನಾ ತರಬೇತಿಯಲ್ಲಿ ಅರ್ಥಪೂರ್ಣ ಚರ್ಚೆ ನಡೆಯುವುದಿಲ್ಲ.
- ತರಬೇತಿಗಳಲ್ಲಿ ಎಲ್ಲಾ ಶಿಕ್ಷಕರು ಆಸಕ್ತಿಯಿಂದ ಭಾಗವಹಿಸುವುದಿಲ್ಲ.
- ತರಬೇತಿಗಳಲ್ಲಿ ಶಿಕ್ಷಕರ ಮನಸ್ಥಿತಿಯನ್ನು ಹೊಂದಿಸುವುದು ಸವಾಲಾಗಿ ಪರಿಣಮಿಸಿದೆ. ಇದಕ್ಕೆ ಕಾರಣ ಅವರ ಇಚ್ಛೆಗೆ ಅನುಗುಣವಾದ ತರಬೇತಿಯನ್ನು ನೀಡದಿರುವುದು. ಆದುದರಿಂದ ಅವರಿಗೆ ಅಗತ್ಯತೆಯನ್ನರಿತು ತರಬೇತಿಯನ್ನು ನೀಡುವುದು ಸೂಕ್ತ.

**ಪರಿಹಾರೋಪಾಯಗಳು:**

- ಶಿಕ್ಷಕರ ಅಗತ್ಯತೆಗಳನ್ನು ಆಧರಿಸಿದ ತರಬೇತಿಗಳನ್ನು ಆಯೋಜಿಸುವುದು.
- ತರಬೇತಿಗಳನ್ನು ರೂಪಿಸಲು ಜಿಲ್ಲೆಗೆ, ಬ್ಲಾಕ್‌ಗೆ ಸ್ವಾಯತ್ತತೆ ನೀಡುವುದು
- ಸ್ವಾಯತ್ತತೆಯನ್ನು ಬಲವಾಗಿ ರೂಢಿಸಿಕೊಳ್ಳುವಲ್ಲಿ ಕ್ಲಸ್ಟರ್, ಬ್ಲಾಕ್ ಮತ್ತು ಜಿಲ್ಲಾ ತರಬೇತಿ ಕೇಂದ್ರಗಳನ್ನು ಸಶಕ್ತಗೊಳಿಸುವುದು.
- ತರಬೇತಿಗಳಲ್ಲಿ ಮನೋಧೋರಣೆಗಳಿಗೆ ಸಂಬಂಧಿಸಿದ ಅಂಶಗಳನ್ನು ಜೋಡಿಸಿಕೊಳ್ಳುವುದು.
- ಕೆಲವು ವಿಶೇಷ ಅವಧಿಗಳನ್ನು ಬಾಹ್ಯ ಸಂಪನ್ಮೂಲ ವ್ಯಕ್ತಿಗಳಿಂದ ನೀಡುವುದು. ನಿರ್ವಹಣೆ, ನಾಯಕತ್ವಕ್ಕೆ ಸಂಬಂಧಿಸಿದ ಅವಧಿಗಳು.
- ಶಾಲಾ ಹಂತದ ತರಬೇತಿಗೆ ಆದ್ಯತೆ ನೀಡುವುದು. ಶಾಲಾ ಹಂತದ ತರಬೇತಿಗೆ ತಂಡ ರಚನೆ ಮಾಡುವುದು.
- ಸಿಆರ್‌ಪಿ ಬಲವರ್ಧನೆ ಮತ್ತು ಶೈಕ್ಷಣಿಕ ಕಾರ್ಯಗಳಿಗೆ ಮಾತ್ರ ಬಳಸಿಕೊಳ್ಳುವುದು.
- ಶಾಲಾ ಹಂತದ ತರಬೇತಿ ಮತ್ತು ಸಮಾಲೋಚನಾ ಸಭೆಗಳನ್ನು ಹೆಚ್ಚು ಅರ್ಥಪೂರ್ಣಗೊಳಿಸುವಂತೆ ಕ್ರಮಕೈಗೊಳ್ಳುವುದು. ಯಾಕೆಂದರೆ ಸಮಾಲೋಚನಾ ಸಭೆ ಮತ್ತು ಶಾಲಾ ಹಂತದ ತರಬೇತಿಗಳು ಮಾತ್ರ ಶಿಕ್ಷಕರನ್ನು ಬೇಗನೆ ತಲುಪಬಲ್ಲದು.

**4. ಪ್ರತಿಯೊಬ್ಬರೂ (ಶಿಕ್ಷಕರಿಂದ ಹಿಡಿದು ಕ್ಷೇತ್ರ ಶಿಕ್ಷಣಾಧಿಕಾರಿಗಳು) ತಮ್ಮ ವೃತ್ತಿಪರ ಬೆಳವಣಿಗೆಗೆ ಮಾಡಿರುವ ಪ್ರಯತ್ನಗಳೇನು? ಅವು ಎಷ್ಟ ಮಟ್ಟಿಗೆ ಯಶಸ್ವಿಯಾಗಿವೆ ಎಂಬುದನ್ನು ಚರ್ಚಿಸಿ.**

ವೃತ್ತಿಪರ ಬೆಳವಣಿಗೆ.

- ಶಿಕ್ಷಕರ ಪಾಠ ವೀಕ್ಷಣೆ ಮಾಡುವುದು, ಚಚಿಸುವುದು ಮತ್ತು ಸ್ವಾವಾಲೋಕನ ಮಾಡಿಕೊಳ್ಳುವುದು.
- ತರಬೇತಿಗಳನ್ನು ಪಡೆಯುವುದು ಮತ್ತು ತರಬೇತಿ ಸಾಹಿತ್ಯಗಳನ್ನು ಓದುವುದು
- ಶೈಕ್ಷಣಿಕ ವಿಚಾರ ಗೋಷ್ಠಿಯ ಆಯೋಜನೆ, ಪ್ರಬಂಧ ಮಂಡನೆ ಮತ್ತು ಶೈಕ್ಷಣಿಕ ವಿಚಾರಗಳ ಬಗ್ಗೆ ಚರ್ಚೆ
- ನಾವೀನ್ಯ ಅನುಕೂಲಿಸುವ ವಿಧಾನಗಳನ್ನು ರೂಪಿಸಿ ಚರ್ಚಿಸುವುದು.
- ಉತ್ತಮ ವಿಧಾನಗಳನ್ನು ವಿನಿಮಯ ಮಾಡಿಕೊಳ್ಳುವುದು
- ಉನ್ನತ ವ್ಯಾಸಂಗ ಮಾಡುವುದು ಮತ್ತು ಅಧ್ಯಯನ ಶೀಲತೆ
- ಕ್ರಿಯಾ ಸಂಶೋಧನೆಗಳನ್ನು ಕೈಗೊಳ್ಳುವುದು ಮತ್ತು ವಿಚಾರ ಹಂಚಿಕೆ ಮಾಡುವುದು.
- ಸಂಶೋಧನೆಯನ್ನು ಆಧರಿಸಿದ ಅಧ್ಯಯನಗಳನ್ನು ಕೈಗೊಳ್ಳುವುದು.
- ಹೊಸ ಟ್ರೆಂಡ್‌ಗಳಿಗೆ ಸಂಬಂಧಿಸಿದಂತೆ ಬೇರೆ ರಾಜ್ಯ ಮತ್ತು ರಾಷ್ಟ್ರಗಳ ಬೆಳವಣಿಗೆಗಳನ್ನು ತಿಳಿಯಲು ಅಂತರ್ಜಾಲ ಬಳಕೆ ಮಾಡುವುದು.

# ವಿಭಾಗ–ಜಿ

**ಕಲಿಕಾ ಮಾಪನ (1 ರಿಂದ 8 ನೇ ತರಗತಿ)**

ಡಿಎಂಎಫ್ ವಿಶ್ಲೇಷಣಾ ವರದಿಯಲ್ಲಿಯೇ ಸವಿವರವಾಗಿ ನೀಡಿದೆ.

# ಭಾಗ–2

**ಪ್ರಸ್ತುತ ವರ್ಷದ ತ್ರೈಮಾಸಿಕ ಅವಧಿಯಲ್ಲಿ ಸಿ.ಆರ್.ಪಿಗಳು ವೀಕ್ಷೀಸಿದ ಕನಿಷ್ಠ ಮತ್ತು ಗರಿಷ್ಠ ತರಗತಿಗಳು ಎಷ್ಟು?**

- ಎಲ್ಲಾ ಸಿಆರ್‌ಪಿಗಳು ಸರಾಸರಿಯಾಗಿ 17 ರಿಂದ 38 ತರಗತಿಗಳನ್ನು ವೀಕ್ಷಣೆ ಮಾಡಿರುತ್ತಾರೆ.

**ಇಲಾಖೆಯ ನಿಯಾಮಾನುಸಾರ ಸಿ.ಆರ್.ಪಿಗಳು ತರಗತಿಯನ್ನು ವೀಕ್ಷಣೆ ಮಾಡುತ್ತಿರುವರೇ? ಭೇಟಿಯ ಸಮಯದಲ್ಲಿ ಶಿಕ್ಷಕರಿಗೆ ವೃತ್ತಿ ಸಂಬಂಧಿತ ಸಲಹೆ ಸೂಚನೆಗಳನ್ನು ನೀಡುತ್ತಿರುವರೇ ?:_ಹೌದು**

- ಹೌದು ಸಿ.ಆರ್.ಪಿ.ಗಳು ಇಲಾಖಾ ನಿಯಮಾನುಸಾರ ಗುಣಮಟ್ಟದ ಶಿಕ್ಷಣಕ್ಕಾಗಿ ತರಗತಿಯನ್ನು ವೀಕ್ಷಣೆ ಮಾಡುತ್ತಿದ್ದಾರೆ.
- ಹೆಚ್ಚಿನ ಸಿಆರ್‌ಪಿಗಳು ಹೊಸದಾಗಿ ನೇಮಕವಾಗಿರುವುದರಿಂದ ಅವರಿಗೆ ಮಾರ್ಗರ್ಶಕರಾಗಿ ಕಾರ್ಯ ನಿರ್ವಹಿಸುವ ಬಗ್ಗೆ ಮತ್ತು ಹಿಮ್ಮಾಹಿತಿ ನೀಡುವ ಬಗ್ಗೆ ತರಬೇತಿ ನೀಡಬೇಕಾಗಿದೆ. ಈ ಕಾರಣದಿಂದಾಗಿ ಮಾರ್ಗದರ್ಶನ ಅಷ್ಟೊಂದು ಪಕ್ವತೆಯಿಂದ ಕೂಡಿರುವುದಿಲ್ಲ.
- 10 ಅಂಶಗಳ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ವಿಶೇಷ ಕಾರ್ಯಕ್ರಮವನ್ನು ಕೈಗೊಂಡಿದ್ದು, ತರಗತಿಯ ವೀಕ್ಷಣೆಯ ಸಂದರ್ಭದಲ್ಲಿ ಒತ್ತು ನೀಡಲಾಗಿದೆ.
- ಕೆಲವು ಸಿಆರ್‌ಪಿಗಳು ಭೇಟಿಯ ಸಮಯದಲ್ಲಿ ಶಿಕ್ಷಕರ ಸಂಪನ್ಮೂಲವನ್ನು ಹೆಚ್ಚಿಸಲು ಅಧ್ಯಯನ ಸಾಮಾಗ್ರಿಗಳನ್ನು ಕ್ರೋಢಿಕರಿಸಿ ನೀಡಿರುತ್ತಾರೆ.
- ಹೆಚ್ಚಿನ ಅಧ್ಯಯನ ಕೈಗೊಳ್ಳಲು ಅವಶ್ಯಕ ಮಾರ್ಗದರ್ಶನವನ್ನು ನೀಡಿರುತ್ತಾರೆ.
- ಸಿಆರ್‌ಪಿಗಳನ್ನು ತಮ್ಮ ಜವಾಬ್ದಾರಿ ನಿರ್ವಹಣೆಯ ಬಗ್ಗೆ ಸ್ವಾವಲೋಕನ ಮಾಡಲು ಅವಕಾಶ ನೀಡಬೇಕಾಗಿದೆ.

**ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ತೆರೆಯಲಾಗಿರುವ ವಿಶೇಷ ತರಬೇತಿ ಕೇಂದ್ರಗಳಿಗೆ ನಿಗದಿತ ಸಮಯದಲ್ಲಿ ಭೇಟಿ ನೀಡಿ ವ್ಯವಸ್ಥೆಯ ಲೋಪದೋಷಗಳ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆಯೇ ?**

- ಹೌದು ಬಿ.ಆರ್.ಪಿ, ಬಿ.ಆರ್.ಸಿ. ಸಿ.ಆರ್.ಪಿಗಳು ನಿಗದಿತ ಸಮಯದಲ್ಲಿ ಭೇಟಿ ನೀಡಿ ವ್ಯವಸ್ಥಿತವಾಗಿ ಪರಿಶೀಲನೆ ಮಾಡಿರುತ್ತಾರೆ.

**ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ತೆರೆಯಲಾಗಿರುವ ವಿಶೇಷ ತರಬೇತಿ ಕೇಂದ್ರಗಳಿಂದ ಮಕ್ಕಳನ್ನು ಮುಖ್ಯವಾಹಿನಿಗೆ ಸೇರಿಸುವಲ್ಲಿ ಸಹಕಾರಿಯಾಗಿರುವುದೇ?ತಮ್ಮ ಜಿಲ್ಲಾ ಹಂತದಲ್ಲಿ ಆಗಿರುವ ಪ್ರಗತಿಯ ವಿವರವನ್ನು ನಮೂದಿಸುವುದು.**

- ಹೌದು, ಮೇಲೆ ಕೇಳಲಾದ ಪ್ರಶ್ನೆಗಳಲ್ಲೇ ಉತ್ತರಿಸಲಾಗಿದೆ.

**ಸಿ.ಆರ್.ಪಿ ಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳಿಗೆ ಭೇಟಿ ನೀಡುತ್ತಿರುವರೇ**

- ಹೌದು, ಎಲ್ಲಾ ಸಿ.ಆರ್.ಪಿ ಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳಿಗೆ ಭೇಟಿ ನೀಡಿ ಶಾಲಾ ಶೈಕ್ಷಣಿಕ ಮೌಲ್ಯಾಮಾಪನ ಕಾರ್ಯ ಕೈಗೊಂಡಿರುತ್ಥಾರೆ.

**ಸಿ.ಆರ್.ಪಿ ಗಳ ಶಾಲಾ ಭೇಟಿಯಿಂದ ಶಾಲೆಯ ಗುಣಮಟ್ಟದಲ್ಲಿ ಆಗಿರುವ ಬದಲಾವಣೆಗಳೇನು ?**

- ತರಬೇತಿಗಳ ಅನುಷ್ಠಾನ, ಕಲಿಕಾ ಪ್ರಗತಿ, ಅಘಖಓ ಮಕ್ಕಳ ಕಲಿಕೆ ಮತ್ತು ಔಔಖಅ ಮಕ್ಕಳನ್ನು ಮುಖ್ಯವಾಹಿನಿಗೆ ತರುವುದು ಇತ್ಯಾದಿ
- ಸಮಯಪಾಲನೆ, ಶಾಲಾ ಸ್ವಚ್ಛತೆ, ಶಾಲಾ ಸರ್ಕಾರದ ಕಾರ್ಯಕ್ರಮಗಳ ಜಾರಿ, ದಾಖಲೆಗಳ ನಿರ್ವಹಣೆ, ಮಕ್ಕಳ ಕಲಿಕೆಗೆ ಪೂರಕವಾದ ವಾತಾವರಣ ನಿರ್ಮಾಣ, ಶಿಕ್ಷಕರ ನಡುವಿನ ಬಾಂಧವ್ಯ ಉತ್ತಮಪಡಿಸುವ ಕಾರ್ಯಗಳನ್ನು ನಿರ್ವಹಿಸಿರುತ್ತಾರೆ.
- ಶಿಕ್ಷಕರು ಕೇಳಿರುವ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳುತ್ತಾರೆ.
- ಮುಖ್ಯ ಶಿಕ್ಷಕರಿಗೆ ಮಾರ್ಗದರ್ಶನ ಮಾಡುತ್ತಾರೆ.
- ಪ್ರತಿಭಾ ಕಾರಂಜಿ, ಕ್ರೀಡೋತ್ಸವ ಕಾರ್ಯಕ್ರಮಗಳನ್ನು ಕ್ಲಸ್ಟರ್ ಹಂತದಲ್ಲಿ ಸಂಘಟಿಸುತ್ತಾರೆ, ಶಾಲಾ ಹಂತ ಮತ್ತು ಜಿಲ್ಲಾ ಹಂತದ ಕಾರ್ಯಕ್ರಮಗಳಿಗೆ ಮಾರ್ಗದರ್ಶನ ನೀಡುತ್ತಾರೆ.
- ಶಾಲೆಗೆ ಬೇಕಾದ ಎಲ್ಲಾ ಮಾಹಿತಿಗಳನ್ನು ಒದಗಿಸುತ್ತಾರೆ.
- ಇಲಾಖೆ ನಿಗದಿಪಡಿಸಿರುವ ಕಾರ್ಯಚಟುವಟಿಕೆಗಳು ನಿಗದಿತ ಅವಧಿಯಲ್ಲಿ ನಿರ್ವಹಣೆಯಾಗುವಂತೆ ಮೇಲ್ವಿಚಾರಣೆ ಮಾಡುತ್ತಾರೆ.
- ಸಿಆರ್‌ಪಿಯವರ ಈ ಎಲ್ಲಾ ಕಾರ್ಯಗಳು ಶೈಕ್ಷಣಿಕ ಗುಣಮಟ್ಟದ ಮೇಲೆ ಪ್ರತ್ಯಕ್ಷ ಅಥವಾ ಪರೋಕ್ಷ ಪ್ರಭಾವವನ್ನು ಬೀರಿರುತ್ತದೆ.

**ಕಲಿಕಾ ಪ್ರಕ್ರಿಯೆಯನ್ನು ಉತ್ತಮಪಡಿಸಲು ಸಿ.ಆರ್.ಪಿಗಳು ಕೈಗೊಂಡ ಕ್ರಮಗಳೇನು ?ಅವರ ವ್ಯಾಪ್ತಿಯಲ್ಲಿ ಕೈಗೊಂಡ ಕ್ರಮಗಳು ಎಷ್ಟು ಫಲಪ್ರದವಾಗಿದೆ.**

- ಕ್ಲಸ್ಟರ್ ಹಂತದ ದಾಖಲಾತಿಗೆ ಹಾಜರಾತಿಗೆ ಸೂಕ್ತ ಕ್ರಮಕೈಗೊಂಡಿರುತ್ತಾರೆ.
- ಶಿಕ್ಷಕರ ಪಾಠ ವೀಕ್ಷಿಸಿ ಅಗತ್ಯ ಹಿಮ್ಮಾಹಿತಿ ಮತ್ತು ಮಾರ್ಗದರ್ಶನ ನೀಡುತ್ತಿರುತ್ತಾರೆ.
- ಅಗತ್ಯವಿದ್ದಲ್ಲಿ ಪ್ರಾತ್ಯಕ್ಷಿಕೆ ಪಾಠ ನೀಡುತ್ತಾರೆ. ಕಲಿಕೋಪಕರಣಗಳನ್ನು ಬಳಸುವ ಬಗ್ಗೆ ಮಾರ್ಗದರ್ಶಿಸುತ್ತಾರೆ.
- ತರಗತಿಗಳಲ್ಲಿ ತರಬೇತಿ ಅನುಷ್ಠಾನದ ಬಗ್ಗೆ ಮಾರ್ಗದರ್ಶನ ನೀಡುತ್ತಾರೆ.
- ತರಗತಿ ಪ್ರಕ್ರಿಯೆಗಳಲ್ಲಿ ತರಗತಿ ಜ್ಞಾನವನ್ನು ನಿತ್ಯ ಬದುಕಿಗೆ ಹೊಂದಿಸುವ ಬಗ್ಗೆ ಸಲಹೆ ನೀಡುತ್ತಾರೆ.
- ಒಂದು ಶಾಲೆಯ ಪ್ರಕ್ರಿಯೆಗಳಲ್ಲಿ ಕಂಡು ಬಂದಿರುವ ಯಶಸ್ಸನ್ನು ಉಳಿದ ಶಾಲೆಗಳಿಗೆ ಹಂಚುತ್ತಾರೆ.
- ಮಕ್ಕಳ ಕಲಿಕಾ ಪ್ರಗತಿಯ ದಾಖಲೆಗಳನ್ನು ಪರಿಶೀಲಿಸಿ ಅಗತ್ಯ ಸಲಹೆಗಳನ್ನು ನೀಡುತ್ತಿರುತ್ತಾರೆ.
- ಶಿಕ್ಷಕರು ಹೆಚ್ಚಿನ ವಿದ್ಯಾರ್ಹತೆಯುಳ್ಳವರನ್ನು ಶಾಲಾ ಮೇಲುಸ್ತುವಾರಿಗೆ ನೇಮಿಸಿಕೊಳ್ಳುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

**ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಎಲ್ಲ ಶಾಲೆಯಲ್ಲಿ ವಿದ್ಯಾರ್ಥಿಗಳ ಪ್ರಗತಿಯನ್ನು ದಾಖಲಿಸಲಾಗಿತ್ತಿದೆಯೇ? ವಿದ್ಯಾರ್ಥಿಗಳ ದಾಖಲಾತಿಗಾಗಿ ಅನುಸರಿಸುತ್ತಿರುವ ದಾಖಲೆಗಳು ಯಾವುವು, ?ಹೌದು,**

- ವಿದ್ಯಾರ್ಥಿಗಳ ಪ್ರಗತಿಯನ್ನು ಎಲ್ಲಾ ಶಾಲೆಗಳಲ್ಲಿ ದಾಖಲಿಸಲಾಗುತ್ತಿದೆ. ಪ್ರಗತಿ ನೋಟ, ಸಂಚಿತ ಪ್ರಮಾಣ ಪತ್ರ, ವೈಯಕ್ತಿಕ ಅಂಕವಹಿ, ಪೋರ್ಟ್‌ಪೋಲಿಯೋ, ಚಟುವಟಿಕೆಗಳ ವಿವರ ಇತ್ಯಾದಿಗಳನ್ನು ನಿರ್ವಹಿಸಲಾಗಿದೆ.
- ಕೆಲವು ಶಾಲೆಗಳಲ್ಲಿ ಕೃತಿ ಸಂಪುಟಗಳನ್ನು ಉತ್ತಮವಾಗಿ ನಿರ್ವಹಿಸಲಾಗಿದೆ.
- ಸಾಂದರ್ಭಿಕ ದಾಖಲೆಯನ್ನೂ ನಿರ್ವಹಿಸಲಾಗಿದೆ.
- ಮಕ್ಕಳ ಕೃತಿ ಸಂಪುಟವನ್ನು ವ್ಯಕ್ತಿತ್ವ ರೂಪಿಸುವಿಕೆಯಲ್ಲಿ ಹೇಗೆ ಬಳಸಬೇಕು, ಮಗುವಿನ ಕಲಿಕೆಯ ಪ್ರಗತಿ ಕೃತಿಸಂಪುಟದಲ್ಲಿ ಬಿಂಬಿತವಾಗುವಂತೆ ಹೇಗೆ ನಿರ್ವಹಿಸಬೇಕು ಎನ್ನುವತ್ತ ಹೆಚ್ಚಿನ ಒಲವನ್ನು ತೋರಬೇಕಾಗಿದೆ.

**ವಿದ್ಯಾರ್ಥಿಗಳ ದಾಖಲಾತಿ ಅನುಸರಿಸದ ಶಾಲೆಗಳ ಸಂಖ್ಯೆ ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಎಷ್ಟು ಶಾಲೆಗಳಿವೆ. ಅಂತಹ ಶಾಲೆಗಳ ವಿರುದ್ದ ಕ್ರಮಕೈಗೊಳ್ಳಲಾಗಿದೆಯೇ ?**

- ಅನ್ವಯಿಸುವುದಿಲ್ಲ

**ಶೇ 60% ಕ್ಕಿಂತ ಕಡಿಮೆ ಪಠ್ಯಕ್ರಮ ಬೋಧಿಸಿರುವ ಶಾಲೆಗಳ ಸಂಖ್ಯೆ ಎಷ್ಟು? ಅಂತಹ ಶಾಲೆಗಳ ವಿರುದ್ದ ಸಿ.ಆರ್.ಪಿ ಮತ್ತು ಬೀ.ಅರ್‌ಶಿಸಿ ಗಳು ಕೈಗೊಂಡ ಕ್ರಮಗಳೇನು ?**

- ಅನ್ವಯಿಸುವುದಿಲ್ಲ.

**ಶೇ 60% ಕ್ಷಿಂತ ಕಡಿಮೆ ಪಠ್ಯಕ್ರಮ ಬೋದಿಸಲು ಪ್ರಮುಖ ಕಾರಣಗಳನ್ನು ಪಟ್ಟಿ ಮಾಡಿ, ಅದಕ್ಕೆ ತಾವು ನೀಡಿರುವ ಪರಿಹಾರಗಳನ್ನು ನೀಡಿರಿ**

- ಅನ್ವಯಿಸುವುದಿಲ್ಲ.

# ಭಾಗ–3

### 1. ತಮ್ಮ ಬ್ಲಾಕ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿ.ಆರ್.ಸಿ.ಗಳು ನಿರ್ವಹಿಸಿದ ಶೈಕ್ಷಣಿಕ ಉತ್ತಮಕಾರ್ಯಗಳು.

- ಶಾಲಾ ನಾಯಕತ್ವ ನಿರ್ಹಹಣೆಯ ಜವಾಬ್ದಾರಿ ನಿರ್ವಹಿಸುತ್ತಿರುವ
- ಮುಖ್ಯ ಶಿಕ್ಷಕರಿಗೆ ಪರಿಣಾಮಕಾರಿ ಮಾರ್ಗದರ್ಶನ ನೀಡಲಾಗಿದೆ.
- ಶಾಲಾ ಹಂತದಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಪರಿಣಾಮಕಾರಿ ಮಾರ್ಗದರ್ಶನ ಮತ್ತು ಹಿಮ್ಮಾಹಿತಿ ನೀಡಲಾಗಿದೆ.
- ಎಲ್ಲ ಬಗೆಯ ಶೈಕ್ಷಣಿಕ ಚಟುವಟಿಕೆಗಳನ್ನು ನಿಗದಿತ ಸಮಯದೊಳಗೆ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲಾಗುತ್ತಿದೆ.
- ತರಬೇತಿಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲಾಗುತ್ತಿದೆ.
- ಅನುಪಾಲನಾ ಅಧಿಕಾರಿಗಳಿಗೆ ಮತ್ತು ಶಾಲಾ ಮುಖ್ಯಸ್ಥರುಗಳಿಗೆ ಸೂಕ್ತ ಪ್ರೇರಣೆ ಹಾಗೂ ನಿರ್ದೇಶನಗಳನ್ನು ಕಾಲಕಾಲಕ್ಕೆ ಒದಗಿಸುತ್ತಾ ಬರಲಾಗುತ್ತಿದೆ.
- ಶಾಲೆ ಬಿಟ್ಟ ಮಕ್ಕಳ ಮಾಹಿತಿ ಹಾಗೂ ಮುಖ್ಯವಾಹಿನಿಗೆ ತರುವ ಕಾರ್ಯ.
- ವಿಜ್ಞಾನ ಮತ್ತು ಗಣಿತ ವಿಷಯಗಳ 6 ರಿಂದ 8ನೇ ತರಗತಿಯ ಸಮಾಲೋಚನಾ ತರಬೇತಿಯನ್ನು ತಾಲ್ಲೂಕು ಹಂತದಲ್ಲಿ ಆಯೋಜಿಸಿ, ತರಗತಿವಾರು, ಘಟಕವಾರು, ಕ್ಲಿಷ್ಟಾಂಶಗಳನ್ನು ಪಟ್ಟಿ ಮಾಡಿಸಲಾಗಿದೆ.
- ಮಕ್ಕಳಿಗೆ ಅರ್ಥೈಸುವ ವಿಧಾನಗಳನ್ನು, ಬೋಧನ ಕಲಿಕಾ ಪ್ರಕ್ರಿಯೆಗಳನ್ನು, ಪುಸ್ತಕದ ರೂಪದಲ್ಲಿ ಹೊರತರುವಲ್ಲಿ ಯೋಜನೆ ರೂಪಿಸಿ ಕಾರ್ಯಪ್ರವೃತ್ತರಾಗಿರುವುದು.
- ಅಆಇ ಪದ್ಧತಿಯಂತೆ ಮಕ್ಕಳಿಗೆ ಮೂಲ ಸಾಮರ್ಥ್ಯಗಳನ್ನು ಬೋಧಿಸಲು ಬೇಕಾದ ಎಲ್ಲಾ ರೀತಿಯ ಸೌಲಭ್ಯಗಳನ್ನು ಕಲೆಹಾಕಿ ಉತ್ತಮ ಕಲಿಕಾವಾತಾವರಣ ಶೈಕ್ಷಣಿಕ ಗುಣವರ್ಧನ ವರ್ಷವನ್ನು ಅರ್ಥಪೂರ್ಣವಾಗಿ ಅನುಷ್ಠಾನಗೊಳಿಸುವುದು.
- ಇಲಾಖೆಯು ಶೈಕ್ಷಣಿಕ ಬಲವರ್ಧನೆಗಾಗಿ ನೀಡುವ ಎಲ್ಲಾ ಕಾರ್ಯಕ್ರಮಗಳನ್ನು ಆಯೋಜಿಸಿ ಸಕಾಲದಲ್ಲಿ ಶಾಲೆಗಳಿಗೆ ತನ್ಮೂಲಕ ಮಕ್ಕಳಿಗೆ ತಲುಪಿಸಿ, ಶಾಲಾ ಕಲಿಕಾ ಪ್ರಕ್ರಿಯೆಗಳನ್ನು ಬಲಪಡಿಸುವುದು.
- ನಲಿ–ಕಲಿ ಪ್ರಗತಿಯನ್ನು ವೀಕ್ಷಿಸಿ ಮಕ್ಕಳ ಪ್ರಗತಿಯನ್ನು ದಾಖಲಿಸಿರುವ ಬಗ್ಗೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

### 2. ಬಿ.ಆರ್.ಸಿ.ಗಳು ತಾಲ್ಲೂಕು ವ್ಯಾಪ್ತಿಯಲ್ಲಿ ಶಿಕ್ಷಕರ ವೃತ್ತಿಪರತೆ ಹೆಚ್ಚಿಸಲು ಕೈಗೊಂಡ ಕ್ರಮಗಳು ಮತ್ತು ಯಶೋಗಾಥೆಗಳು

- ತಾಲ್ಲೂಕಿನಲ್ಲಿ ಪ್ರಯೋಗಶೀಲರಾಗಿ ಯಶಸ್ಸು ಕಂಡಿರುವ ಶಿಕ್ಷಕರನ್ನು ಕರೆಸಿ ಇತರೆ ಶಿಕ್ಷಕರುಗಳೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳಲು ಮತ್ತು ಸಮಸ್ಯೆ ಬಗೆಹರಿಸಿಕೊಳ್ಳಲು ಅವಕಾಶ ಒದಗಿಸಲಾಗಿದೆ.
- ತರಬೇತಿಗಳಲ್ಲಿ ನೇರವಾಗಿ ಶಿಕ್ಷಕರೊಂದಿಗೆ ಸಂವಾದ ನಡೆಸಿ ಕ್ಲಿಷ್ಟ ಅಂಶಗಳನ್ನು ತಿಳಿದುಕೊಂಡು ಅವುಗಳಿಗೆ ಪರಿಹಾರ ಒದಗಿಸಲು ಕ್ರಮವಹಿಸಲಾಗಿದೆ.
- ತರಬೇತಿಗಳನ್ನು ಪರಿಣಾಮಕಾರಿಯಾಗಿ ಆಯೋಜಿಸಿ ಅವುಗಳ ಪೂರ್ಣ ಪ್ರಯೋಜನ ಪಡೆದುಕೊಳ್ಳಲು ಸಹಾಯಕವಾಗುವಂತೆ ಪ್ರಾತ್ಯಕ್ಷಿಕೆ ಒದಗಿಸಲಾಗುತ್ತಿದೆ.
- ಶಿಕ್ಷಕರು ತರಬೇತಿಗಳಿಗೆ ಗೈರುಹಾಜರಾಗದಂತೆ ಕ್ರಮವಹಿಸಿರುವುದು. ವೇಳಾ ಪಟ್ಟಿ ಮತ್ತು ಶಿಕ್ಷಕರ ಪ್ರೊಫೈಲ್‌ಗಳಲ್ಲಿ ನಿಗದಿಪಡಿಸಿರುವ ಶಿಕ್ಷಕರೇ ತರಬೇತಿಗೆ ಹಾಜರಾಗುವಂತೆ ಸಿದ್ಧತೆ ಮಾಡಿಕೊಂಡಿರುವುದು.
- ಮೊದಲನೆ ಮತ್ತು ಎರಡನೆ ಸಮಾಲೋಚನಾ ಸಭೆಗಳಲ್ಲಿ ಶೇ 99 ರಷ್ಟು ಸಾಧನೆ ಮಾಡಿರುವುದು.

- ಸಮಾಲೋಚನಾ ಸಭೆಗಳಲ್ಲಿ ವಿಷಯಾಧಾರಿಸಿದ ಗುಂಪು ರಚನೆ ಮಾಡಿ ಶಿಕ್ಷಕರು ಮುಂದಿನ ತಿಂಗಳಿಗೆ ಅಗತ್ಯವಿರುವ ಕಲಿಕೆಗೆ ಸಂಬಂಧಿಸಿದ ಯೋಜನೆಗಳನ್ನು ಸಿದ್ಧಪಡಿಸುವಲ್ಲಿ ಸಫಲರಾಗಿರುವುದು.
- ಕ್ಲಸ್ಟರ್ ಸಮಾಲೋಚನಾ ಸಭೆಗಳ ಕ್ಲಸ್ಟರ್‌ವಾರು ವರದಿ, ಛಾಯಾಚಿತ್ರ ಮತ್ತು ಸಲಹೆ, ಸವಾಲುಗಳನ್ನೊಳಗೊಂಡಂತೆ ಉತ್ತಮ ವರದಿಗಳನ್ನ ಕ್ರೋಡೀಕರಿಸಿ ಜಿಲ್ಲಾ ಹಂತಕ್ಕೆ ಸಲ್ಲಿಸಿರುವುದು.

### 3. ಶೈಕ್ಷಣಿಕ ಗುಣಮಟ್ಟ ಹೆಚ್ಚಳಕ್ಕೆ ಬಿ.ಆರ್.ಸಿ. ಮತ್ತು ಸಿ.ಆರ್.ಸಿ.ಗಳ ಸಹಯೋಗ ಚಟುವಟಿಕೆಗಳು

- ಸಾಮಾನ್ಯವಾಗಿ ಬ್ಲಾಕಿನ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳು ಬಿಆರ್‌ಸಿ ಮತ್ತು ಸಿಆರ್‌ಪಿಗಳ ಸಹಯೋಗದಲ್ಲಿಯೇ ನಡೆಯುತ್ತದೆ. ಇಡೀ ಬ್ಲಾಕಿನ ಶೈಕ್ಷಣಿಕ ಗುಣವರ್ಧನೆಗೆ ಈ ಅನ್ಯೋನ್ಯ ಸಂಬಂಧಗಳಿಂದ ಕೂಡಿದ ಕಾರ್ಯ ನಿರ್ವಹಣೆ ಉತ್ತಮ ಬುನಾದಿಯನ್ನು ಹಾಕಿಕೊಡುತ್ತದೆ.
- ಬಿಆರ್‌ಸಿ ಕಛೇರಿಗಳಲ್ಲಿ ಪ್ರತಿ ತಿಂಗಳು ಕಡ್ಡಾಯವಾಗಿ 3–4 ಸಿಆರ್‌ಪಿಗಳ ಸಭೆ, ಅನಿವಾರ್ಯ ಸಂದರ್ಭಗಳಲ್ಲಿ ಇದಕ್ಕಿಂತಲೂ ಹೆಚ್ಚು ಸಭೆಗಳನ್ನು ನಡೆಸಲಾಗುತ್ತದೆ. .
- ಮೂಲತ: ಪ್ರತಿ ಮಾಹೆ ಒಂದು ಬಾರಿ ಸಿಆರ್‌ಪಿಗಳ ಪ್ರಗತಿ ಪರಿಶೀಲನೆಯನ್ನು ಮಾಡಿ ಶಾಲಾ ಭೇಟಿ, ತರಬೇತಿ, ಸಮಾಲೋಚನಾ ತರಬೇತಿ ಪ್ರಗತಿ ಮತ್ತು ಶೈಕ್ಷಣಿಕ ಪ್ರಗತಿ ಬಗ್ಗೆ ಚರ್ಚಿಸಲಾಗುತ್ತದೆ.
- ಇಲಾಖೆಯ ಪ್ರತಿ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವಾಗಲೂ ಸಿಆರ್‌ಪಿಗಳ ಜೊತೆ ಆಳವಾದ ಚರ್ಚೆ ಮಾಡಲಾಗುವುದು ಕಾರಣ ತಳಹಂತದ ಅಧಿಕಾರಿಗಳಾಗಿದ್ದು ಯಾವುದೇ ಲೋಪವಿಲ್ಲದೆ ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ಇದು ಸಹಾಯ ಮಾಡುತ್ತದೆ.
- ಕ್ಲಸ್ಟರ್‌ವಾರು ಶಿಕ್ಷಕರ ಪ್ರೊಫೈಲ್ ತಯಾರಿ, ಸಮಾಲೋಚನಾ ತರಬೇತಿಗಾಗಿ ಯೋಜನೆ, ನಿರ್ವಹಣೆ ಮಾಡಬಹುದಾದ ಅಂಶಗಳ ಬಗ್ಗೆ ಚರ್ಚೆ ಇತ್ಯಾದಿಗಳನ್ನು ಕೆಲವು ಬ್ಲಾಕ್‌ಗಳಲ್ಲಂತೂ ತುಂಬಾ ಪರಿಣಾಮಕಾರಿಯಾಗಿ ಮಾಡಿರುತ್ತಾರೆ.
- ಒಓಎಸ್‌ಸಿ ಮಕ್ಕಳನ್ನು ಮುಖ್ಯವಾಹಿನಿಗೆ ತರುವಲ್ಲಿ ಬಿಆರ್‌ಸಿ ಮತ್ತು ಸಿಆರ್‌ಪಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.
- ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಚರ್ಚಿಸುವುದು ಮಾತ್ರವಲ್ಲದೆ ಅದರ ಅನುಷ್ಠಾನದ ಯೋಜನೆಯನ್ನು ತಯಾರಿಸಲಾಗುತ್ತದೆ.
- ಕಾರ್ಯಕ್ರಮದ ಅನುಷ್ಠಾನದ ನಂತರ ಪುನರಾವಲೋಕನ ಮಾಡಲಾಗುತ್ತಿದೆ.
- ಸ್ವಾವಲೋಕನ ಮಾಡುತ್ತಾ ಸುಧಾರಣೆಗೆ ಅವಕಾಶ ಕಲ್ಪಿಸಲಾಗುತ್ತಿದೆ.
- ಈ ಸಭೆಗಳಲ್ಲಿ ಮಾಹಿತಿಯನ್ನು ಪಡೆಯಲಾಗುತ್ತದೆ. ಮಾಹಿತಿ ಸರಿಯಾಗಿರದಿದ್ದರೆ ಬಿಆರ್‌ಸಿಯಲ್ಲಿಯೇ ಸರಿಪಡಿಸಿಕೊಂಡು ನೀಡುವಂತೆ ಮಾರ್ಗದರ್ಶನ ನೀಡಲಾಗುತ್ತಿದೆ.
- ಮೇಲಧಿಕಾರಿಗಳ ನಿರ್ದೇಶನದಂತೆ ಕ್ಷೇತ್ರಗಳಿಗೆ ಭೇಟಿಯನ್ನು ನೀಡಿ ಅನುದಾನ ವ್ಯವಸ್ಥಿತ ರೀತಿಯಲ್ಲಿ ವೆಚ್ಚ ಮಾಡುವ ಬಗ್ಗೆ ಪರಿಶೀಲನೆಯನ್ನು ಮಾಡಲಾಗುತ್ತದೆ. ತರಬೇತಿ ಕೇಂದ್ರಗಳಿಗೂ ಹಾಜರಾಗಿ ಅಲ್ಲಿನ ವ್ಯವಸ್ಥೆ ಹಾಗೂ ತರಬೇತಿಯ ಗುಣಮಟ್ಟದ ಬಗ್ಗೆ ಖಾತ್ರಿಯನ್ನು ಮಾಡಿಕೊಳ್ಳಲಾಗುತ್ತಿದೆ.
- ಮೇಲಿನ ಎಲ್ಲಾ ಅಂಶಗಳು ವಾಸ್ತವವಾಗಿ ನಡೆಯುತ್ತವೆಯಾದರೂ ಹೆಚ್ಚು ವ್ಯವಸ್ಥಿತವಾಗಿ ನಡೆಯಬೇಕಾಗುತ್ತದೆ. ಇದಕ್ಕಾಗಿ ಸಮಯ ನಿರ್ವಹಣೆ, ಮತ್ತು ವ್ಯಕ್ತಿ ನಿರ್ವಹಣೆ ಕುರಿತ ತರಬೇತಿ ಬೇಕಾಗಿದೆ.

4. ಬಿ.ಆರ್.ಸಿ.ಗಳು ತಮ್ಮ ವ್ಯಾಪ್ತಿಗೆ ಬರುವ ಶಾಲೆಗಳಿಗೆ ಭೇಟಿ ನೀಡಲು ವಾರ್ಷಿಕ/ಮಾಸಿಕ ವೇಳಾಪಟ್ಟಿಯನ್ನು ಸಿದ್ಧಪಡಿಸಿಕೊಂಡಿರುವರೇ

- ಹೌದು

ನಿಗದಿಪಡಿಸಿದ ವೇಳಾಪಟ್ಟಿಯಂತೆ ಎಷ್ಟು ಜನ ಬಿ.ಆರ್.ಸಿ.ಗಳು ಶಾಲೆಗಳಿಗೆ ಭೇಟಿ ನೀಡುತ್ತಿದ್ದಾರೆ.

- 9 ಮಂದಿ ಬಿಆರ್‌ಸಿಗಳು ಶಾಲೆಗೆ ಭೇಟಿ ನೀಡಿ ಮಾರ್ಗದರ್ಶನ ನೀಡುತ್ತಿದ್ದಾರೆ. ಅನಿವಾರ್ಯ ಕೆಲಸಗಳ ಒತ್ತಡದಿಂದ ಎಲ್ಲಾ ಸಂದರ್ಭಗಳಲ್ಲೂ ನಿಗದಿ ಪಡಿಸಿದ ವೇಳಾಪಟ್ಟಿಯಂತೆ ಶಾಲಾ ಭೇಟಿಯನ್ನು ಮಾಡಲಾಗುತ್ತಿಲ್ಲ.
- ಬಿಆರ್‌ಸಿಯವರನ್ನೊಳಗೊಂಡಂತೆ ಒಬ್ಬರು ವಿಜ್ಞಾನ, ಕಲಾ ಮತ್ತು ಒಬ್ಬರು ಭಾಷಾ ವಿಷಯಗಳನ್ನು ಹೊಂದಿರುವ ತ್ರಿಸದಸ್ಯ ಸಮಿತಿಯನ್ನು ರಚನೆ ಮಾಡಿ ಶಾಲಾ ಭೇಟಿ ಮಾಡಲಾಗಿದೆ.
- ಆಯುಕ್ತರ ಸುತ್ತೋಲೆಯಂತೆ ಶಾಲೆಗೆ ಭೇಟಿ ನೀಡಿ ಶೈಕ್ಷಣಿಕವಾಗಿ ಮಾರ್ಗದರ್ಶನ ನೀಡಲಾಗುತ್ತಿದೆ.
- ಆದರೆ ಇತರೆ ಕೆಲಸಗಳ ಒತ್ತಡದಿಂದ ಹೆಚ್ಚು ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.

5. ಶಾಲಾ ಭೇಟಿಯ ಸಂದರ್ಭದಲ್ಲಿ ಶಿಕ್ಷಕರಿಗೆ ಬಿ.ಆರ್.ಸಿ.ಗಳು ನೀಡಿರುವ ವೃತ್ತಿಪರ ಮಾದರಿ ಸಲಹೆಗಳು ಸಹಾಯಕವಾಗುವುದೇ ? ಬಿ.ಆರ್./ಸಿ.ಆರ್.ಸಿ.ಗಳ ಮಾರ್ಗದರ್ಶನವನ್ನು ಶಾಲೆಯಲ್ಲಿ ಅನುಸರಿಸುತ್ತಿರುವರೇ?

- ಹೌದು, ಶಾಲಾ ಭೇಟಿಯ ಸಂದರ್ಭದಲ್ಲಿ ಶಿಕ್ಷಕರಿಗೆ ಬಿ.ಆರ್.ಸಿ.ಗಳು ನೀಡಿರುವ ವೃತ್ತಿಪರ ಮಾದರಿ ಸಲಹೆಗಳು ಸಹಾಯಕವಾಗಿವೆ.
- ತರಗತಿ ಅನುಕೂಲಿಸುವ ವಿಧಾನವನ್ನು ಅನುಷ್ಠಾನಗೊಳಿಸಲು 5ಇ ಮಾದರಿ ಬಳಸಲು ಮತ್ತು ಸಿಸಿಇ ಅನುಷ್ಠಾನಕ್ಕೆ ಸೂಕ್ತ ಮಾರ್ಗದರ್ಶನ ನೀಡಿರುವುದನ್ನು ಶಿಕ್ಷಕರು ಅನುಸರಿಸುತ್ತಿದ್ದಾರೆ.
- 10 ಅಂಶಗಳ ಕಾರ್ಯಕ್ರಮದ ಅನುಷ್ಠಾನ, ಪ್ರತಿಭಾ ಕಾರಂಜಿ, ಶಾಲಾ ಪ್ರಾರ್ಥನೆ, ಶಾಲಾ ಸಹಪಠ್ಯ ಚಟುವಟಿಕೆಗಳು, ತರಗತಿ ಪ್ರಕ್ರಿಯೆ, ಕೆಎಸ್‌ಕ್ಯೂಎಎಸಿ ಮೌಲ್ಯಮಾಪನ, ಬಿಸಿ ಊಟ, ಪ್ರೋತ್ಸಾಹ ದಾಯಕ ಯೋಜನೆ ಇತ್ಯಾದಿಗಳ ಕುರಿತು ಸಮಗ್ರವಾಗಿ ಬಿಆರ್‌ಸಿಯವರು ನೀಡಿರುವ ಸಲಹೆ ಸೂಚನೆಗಳನ್ನು ಶಿಕ್ಷಕರು ಅನುಸರಿಸುತ್ತಾರೆ.

6. ಬಿ.ಆರ್.ಸಿ.ಗಳು ಶಾಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ವಿದ್ಯಾರ್ಥಿಗಳ ಕಲಿಕಾ ಪ್ರಗತಿಯ ದಾಖಲೆಯನ್ನು ಯಾವ ರೀತಿ ಮೇಲುಸ್ತುವಾರಿ ಮಾಡುತ್ತಿದ್ದಾರೆ

- ತರಗತಿಯಲ್ಲಿ ಮಕ್ಕಳೊಡನೆ ನೇರ ಸಂವಾದ, ಉಕ್ತ ಲೇಖನ ನೀಡುವುದು, ಓದಿಸುವುದು, ಸರಳ ಲೆಕ್ಕಗಳ ಮೂಲಕ ಕಲಿಕಾ ಪ್ರಗತಿಯ ಮೇಲುಸ್ತುವಾರಿ ಮಾಡಲಾಗಿದೆ.
- ತರಗತಿ ಪ್ರಕ್ರಿಯೆಯನ್ನು ವೀಕ್ಷಣೆ ಮಾಡಿ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಗಮನಿಸುವುದರ ಮೂಲಕ ಮಕ್ಕಳ ಕಲಿಕೆಯನ್ನು ಖಚಿತಪಡಿಸಲಾಗಿದೆ.
- ಈ ಎಲ್ಲಾ ಹಂತಗಳನ್ನು ಮುಗಿಸಿದ ಬಳಿಕ ದಾಖಲೆಗಳನ್ನು ಪರಿಶೀಲಿಸಿ ಮಾರ್ಗದರ್ಶನ ನೀಡಲಾಗುತ್ತದೆ.
- ಕೊರತೆಗಳು ಕಂಡು ಬಂದಲ್ಲಿ ಮಾರ್ಗದರ್ಶನ ನೀಡಿ ಸರಿಪಡಿಸಿಕೊಳ್ಳುವಂತೆ ತಿಳಿಯಪಡಿಸುತ್ತಾರೆ. ಅನುಸರಿಸುವ ಬಗ್ಗೆ ಅನುಪಾಲನೆಯನ್ನು ಮಾಡಲಾಗುತ್ತದೆ.

7. ನಿಗದಿಪಡಿಸಿದ ಗುರಿಯಂತೆ ತಾಲ್ಲೂಕು/ಜಿಲ್ಲಾ ಹಂತದಲ್ಲಿ ಶಿಕ್ಷಕರಿಗೆ ತರಬೇತಿ ನೀಡಲಾಗಿದೆಯೇ?

- ಹೌದು, ರಾಜ್ಯಮಟ್ಟದ ತರಬೇತಿ ಆದ ತಕ್ಷಣ ಜಿಲ್ಲಾ ಮಟ್ಟದಲ್ಲಿ ಎಂಆರ್‌ಪಿ ತರಬೇತಿಯನ್ನು ನಡೆಸಲಾಗಿದೆ.

- ರಾಜ್ಯ ಮಟ್ಟದ ತರಬೇತಿ ಪಡೆದುಕೊಂಡು ಬಂದಿರುವ ಸಂಪನ್ಮೂಲ ವ್ಯಕ್ತಿಗಳು ಜಿಲ್ಲಾ ಮಟ್ಟದ ತರಬೇತಿಗೆ ಅವಧಿವಾರು ವಿಶೇಷ ತರಬೇತಿ ವಿನ್ಯಾಸವನ್ನು ಸಿದ್ಧಪಡಿಸಿರುತ್ತಾರೆ.
- ಪ್ರಾತ್ಯಕ್ಷಿಕೆ, ವಿಡಿಯೋ ಕ್ಲಿಪ್ಪಿಂಗ್ಸ್ ಗಳನ್ನು ವ್ಯವಸ್ಥೆಗೊಳಿಸಿ ತೋರಿಸಲಾಗಿದೆ.
- ತರಬೇತಿ ಅಂತ್ಯದಲ್ಲಿ ಭಗವಹಿಸಿದವರ ಹಿಮ್ಮಾಹಿತಿಯನ್ನು ಪಡೆದು ಮುಂದಿನ ತರಬೇತಿ ಗುಣಮಟ್ಟವನ್ನು ಹೆಚ್ಚಿಸುವತ್ತ ಗಮನವನ್ನು ನೀಡಲಾಗಿದೆ.
- ಜಿಲ್ಲಾ ಹಂತದ ತರಬೇತಿ ಮುಗಿದ ತಕ್ಷಣ ತಾಲ್ಲೂಕು ಹಂತದ ತರಬೇತಿಯನ್ನು ಪೂರ್ಣಪ್ರಮಾಣದ ಸಿದ್ಧತೆಯೊಂದಿಗೆ ಮಾಡಲು ಮಾರ್ಗದರ್ಶನ ನೀಡಲಾಗಿದೆ. ಜಿಲ್ಲಾ ಹಂತದಲ್ಲಿ ಬಿಆರ್‌ಸಿಗಳ ಸಹಯೋಗದಲ್ಲಿ ಬ್ಲಾಕ್ ಮತ್ತು ಕ್ಲಸ್ಟರ್ ಹಂತದ ತರಬೇತಿಗಳಿಗೆ ತಾತ್ಕಾಲಿಕವಾದ ವೇಳಾ ಪಟ್ಟಿಯನ್ನು ಸಿದ್ಧಪಡಿಸಿ ಮಾರ್ಗದರ್ಶನ ನೀಡಲಾಗಿದೆ.
- ಎಲ್ಲಾ ಹಂತದ ತರಬೇತಿಯಲ್ಲೂ ಸ್ವಚ್ಛತೆ, ಪೂರ್ವಸಿದ್ಧತೆ ಹಾಗೂ ಶಿಸ್ತಿಗೆ ಆದ್ಯತೆಯನ್ನು ನೀಡಲಾಗಿದೆ.
- ಬ್ಲಾಕ್ ಹಂತದ ತರಬೇತಿ ಮತ್ತು ಕ್ಲಸ್ಟರ್ ಹಂತದ ಸಮಾಲೋಚನಾ ತರಬೇತಿಗಳು ನಡೆಯುವ ಕೇಂದ್ರಕ್ಕೆ ಡಯಟ್ ನೋಡೆಲ್ ಅಧಿಕಾರಿಗಳು ಮತ್ತು ಪ್ರಾಂಶುಪಾಲರು ಭೇಟಿ ನೀಡುವ ಮೂಲಕ ಶಿಕ್ಷಕರ ಭಾಗವಹಿಸುವಿಕೆ, ಸಂಪನ್ಮೂಲ ವ್ಯಕ್ತಿಗಳ ನಿರ್ವಹಣಾ ಸಾಮರ್ಥ್ಯ ಮತ್ತು ತರಬೇತಿಯ ಗುಣಮಟ್ಟವನ್ನು ಖಾತ್ರಿಪಡಿಸಿಕೊಳ್ಳಲಾಗುತ್ತದೆ.
- ತರಬೇತಿಗಳು ವ್ಯವಸ್ಥಿತವಾಗಿ ನಡೆಯುವಂತೆ ಜಿಲ್ಲಾ ಹಂತದಲ್ಲಿ ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಂಡಿದ್ದು ಅದೇ ಕ್ರಮದಲ್ಲಿ ಬ್ಲಾಕ್ ಮತ್ತು ಕ್ಲಸ್ಟರ್ ಹಂತದಲ್ಲೂ ನಿರ್ವಹಣೆಯಾಗುವಂತೆ ಉಸ್ತುವಾರಿಯನ್ನು ನಡೆಸಲಾಗಿದೆ.

**8. ಇಲಾಖೆಯಿಂದ ನೀಡಿರುವ ತರಬೇತಿಗಳನ್ನು ಶಾಲಾ ಕೊಠಡಿಯಲ್ಲಿ ಅನುಷ್ಠಾನಗೊಳಿಸುವ ಜೊತೆಗೆ ಶಿಕ್ಷಕರು ಬೋಧನೆಗೆ ನವೀನ ತಂತ್ರಗಳನ್ನು ಅಳವಡಿಸಿಕೊಂಡಿರುವರೇ?**

- ಹೌದು, ತರಬೇತಿಯಲ್ಲಿ ಕಲಿತಿರುವ ಸುಲಭ ವಿಧಾನದ ಜೊತೆಗೆ ತಮ್ಮ ಸೃಜನಾತ್ಮಕ ಕೌಶಲ ಬಳಸಿ ಪರಿಕಲ್ಪನೆಯನ್ನು ಸುಲಭವಾಗಿ ಮೂಡಿಸುವ ಪ್ರಯತ್ನ ಮಾಡಲಾಗುತ್ತಿದೆ.
- ಬಹಳ ಮುಖ್ಯವಾಗಿ ಶಿಕ್ಷಕರು ಪಠ್ಯ ಪುಸ್ತಕದಿಂದಾಚೆಗೆ ಹೋಗುವ ಪ್ರಯತ್ನ ಮಾಡಿರುತ್ತಾರೆ. ಹೊಸ ಹೊಸ ಕಲಿಕಾ ಸನ್ನಿವೇಶಗಳನ್ನು ಸೃಜಿಸಿರುತ್ತಾರೆ. ಕೆಲವು ಶಿಕ್ಷಕರು ಈ ನಿಟ್ಟಿನಲ್ಲಿ ಸಫಲರಾದರೆ ಇನ್ನು ಹೆಚ್ಚಿನವರು ಈ ನಿಟ್ಟಿನಲ್ಲಿ ಹೆಚ್ಚು ವೃತ್ತಿಪರರಾಗಬೇಕಾಗಿದೆ. 6 ಮತ್ತು 7ನೇ ತರಗತಿಗಳ ಹೊಸಪಠ್ಯ ಪುಸ್ತಕಾಧಾರಿತ ತರಬೇತಿಯನ್ನು ಶಿಕ್ಷಕರಿಗೆ ನೀಡದಿರುವುದು ಇದಕ್ಕೆ ಕಾರಣವಾಗಿರಬಹುದು.
- ಕೆಲವರು ತಂತ್ರಜ್ಞಾನ ಬಳಕೆಯ ಪ್ರಯತ್ನ ಮಾಡಿರುತ್ತಾರೆ.

**9. ತರಬೇತಿ ಕಾರ್ಯಗಳು ಅನುಷ್ಠಾನಗೊಳಿಸುವಲ್ಲಿ ಇರುವ ಸಮಸ್ಯೆಗಳೇನು? ಇದಕ್ಕೆ ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ಪರಿಹಾರ ಸೂಚಿಸಲಾಗಿದೆಯೇ?**

- ತರಬೇತಿಗಳು ಶಿಕ್ಷಕರ ಇಚ್ಛೆಗೆ ಅನುಗುಣವಾಗಿಲ್ಲದಿರುವುದು.
- 6–8 ನೇ ತರಗತಿ ಗಣಿತ ಮತ್ತು ವಿಜ್ಞಾನ ತರಬೇತಿಯು ತರಗತಿ ಬೋಧನೆ ಮಾಡುವ ಎಲ್ಲಾ ಶಿಕ್ಷಕರಿಗೆ ಬೇಕಾಗಿತ್ತು. ಆದರೆ ಇದು ಕೆಲವೇ ಶಿಕ್ಷಕರಿಗೆ ಲಭ್ಯವಾಗಿರುತ್ತದೆ.
- ನಲಿಕಲಿ ತರಬೇತಿಯು ತರಗತಿ ನಿರ್ವಹಣೆ ಮಾಡುವ ನಲಿಕಲಿ ಶಿಕ್ಷಕರಿಗೆ ಮಾತ್ರ ಅಗತ್ಯವಿತ್ತು. ಆದರೆ ತರಗತಿ ನಿರ್ವಹಣೆ ಮಾಡದವರಿಗೂ ನೀಡಲಾಗಿದೆ.

- ತಜ್ಞ ಸಂಪನ್ಮೂಲ ವ್ಯಕ್ತಿಗಳ ಕೊರತೆ.
- ಈ ವರ್ಷದಲ್ಲಿ ಸಿಆರ್‌ಪಿಗಳು ಮತ್ತು ಬಿಆರ್‌ಪಿಗಳೇ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸಬೇಕಾಗಿರುವುದರಿಂದ ಮತ್ತು ಇದು ಹೆಚ್ಚಿನವರಿಗೆ ಮೊದಲ ಬಾರಿಯಾದುದರಿಂದ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸುವಲ್ಲಿ ಸಮಸ್ಯೆಯನ್ನು ಎದುರಿಸಲಾಗಿದೆ. ಉದಾ 6–8ನೇ ತರಗತಿ ವಿಷಯಾಧಾರಿತ ತರಬೇತಿಗೆ ಪದವಿಯಲ್ಲಿ ವಿಜ್ಞಾನ ಓದಿರುವ ಸಿಆರ್‌ಪಿ/ಬಿಆರ್‌ಪಿಗಳ ಲಭ್ಯತೆ ತುಂಬಾ ಕಡಿಮೆ ಇತ್ತು. ನಲಿಕಲಿ ತರಬೇತಿಯಾಗಿರುವ ಸಂಪನ್ಮೂಲ ವ್ಯಕ್ತಿಗಳು ಸಾಕಷ್ಟು ಲಭ್ಯವಿರಲಿಲ್ಲ.
- ನಮ್ಮ ಹಂತದಲ್ಲಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗಿದೆ. ಅಂದರೆ ವಿಜ್ಞಾನಕ್ಕೆ ಶಿಕ್ಷಕರನ್ನು ಸಂಪನ್ಮೂಲ ವ್ಯಕ್ತಿಯಾಗಿ ಬಳಸಬಾರದೆಂದು ನಿರ್ಬಂಧವಿದ್ದರೂ ಟಿಜಿಟಿ ಶಿಕ್ಷಕರನ್ನು ಬಳಸಿಕೊಳ್ಳಲಾಗಿದೆ.
- ಹಿಂದೆ ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯ ನಿರ್ವಹಿಸಿರುವ ಶಿಕ್ಷಕರನ್ನು ತರಬೇತಿಯ ಪ್ರತಿ ಬ್ಯಾಚಿಗೆ ಹಂಚಿಕೆ ಮಾಡಿ ಸಮಸ್ಯೆ ಬಂದಾಗ ಅಲ್ಲಲ್ಲೇ ಪರಿಹಾರ ಕಂಡುಕೊಳ್ಳುವಂತೆ ಸೂಚಿಸಲಾಗಿದೆ.
- ಕೆಲವು ಕಡೆಯಲ್ಲಿ ಡಯಟ್ ನೋಡೆಲ್ ಅಧಿಕಾರಿಗಳು ಖುದ್ದಾಗಿ ತರಬೇತಿ ಕೇಂದ್ರಗಳಲ್ಲಿ ಮಾರ್ಗದರ್ಶನ ನೀಡಿರುತ್ತಾರೆ.
- ಎಲ್ಲರ ಮೊದಲ ಬಾರಿಯ ಪ್ರಯೋಗಗಳು ಗೊಂದಲದಿಂದ ಕೂಡಿರುತ್ತದೆ. ಆದುದರಿಂದ ಸಿದ್ಧತೆ ಮತ್ತು ಅಧ್ಯಯನಶೀಲರಾಗಿ ಉತ್ತಮ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸುವಂತೆ ಸಿಆರ್‌ಪಿ/ ಬಿಆರ್‌ಪಿಗಳಿಗೆ ಮಾರ್ಗದರ್ಶನ ನೀಡಲಾಗಿದೆ. ಕೆಲವರು ಯಶಸ್ವಿಯಾಗಿದ್ದಾರೆ ಕೂಡಾ.

**10. ಹಿರಿಯ ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ ವಿಷಯವಾರು ಕಾರ್ಯಾಗಾರ/ತರಬೇತಿ ನೀಡುತ್ತಿರುವುದರಿಂದ ಮಕ್ಕಳ ಕಲಿಕಾ ಮಟ್ಟ ಸುಧಾರಣೆಯಾಗಿರುವುದೇ?**

- ಹೌದು, 6–8 ವಿಜ್ಞಾನ & ಗಣಿತ ತರಬೇತಿಗಳನ್ನು ನೀಡಿರುವುದು, ಸಮಾಲೋಚನಾ ತರಬೇತಿಗಳಲ್ಲಿ ವಿಷಯವಾರು ಯೋಜನೆಗಳನ್ನು ಸಿದ್ಧಪಡಿಸಿ ಮಂಡಿಸುವುದು ಇತ್ಯಾದಿಗಳು ಶಿಕ್ಷಕರು ಬೋಧಿಸುವ ವಿಷಯದಲ್ಲಿ ಆಳವಾದ ಜ್ಞಾನವನ್ನು ಪಡೆಯಲು ಮತ್ತು ಮಕ್ಕಳಲ್ಲಿ ಉತ್ತಮ ಕಲಿಕೆಯನ್ನು ಉಂಟುಮಾಡಲು ಸಹಾಯಕವಾಗಿದೆ.
- ಆದರೆ 6–8 ನೇ ತರಗತಿ ಗಣಿತ ಮತ್ತು ವಿಜ್ಞಾನ ತರಬೇತಿ ಮತ್ತು ನಲಿಕಲಿ ತರಬೇತಿಗೆ ಕಲಿಕಾ ಪ್ರಕ್ರಿಯೆಯ ಅನುಭವವುಳ್ಳ ತಜ್ಞ ಶಿಕ್ಷಕರನ್ನೇ ಸಂಪನ್ಮೂಲ ವ್ಯಕ್ತಿಯಾಗಿ ಬಳಸಿಕೊಳ್ಳಲು ಅವಕಾಶ ನೀಡಬೇಕಾಗಿತ್ತು ಮತ್ತು 6–8 ನೇ ತರಗತಿವಿಷಯಾಧಾರಿತ ತರಬೇತಿಯನ್ನು ಗಣಿತ ಮತ್ತು ವಿಜ್ಞಾನ ಬೋಧಿಸುವ ಎಲ್ಲಾ ಶಿಕ್ಷಕರಿಗೆ ನೀಡಬೇಕಾಗಿತ್ತು.
- ತರಬೇತಿಯಾಗದಿರುವ ವಿಜ್ಞಾನ ಮತ್ತು ಗಣಿತ ಶಿಕ್ಷಕರು ತರಬೇತಿ ಪಡೆಯಲು ತುದಿಗಾಲಿನಲ್ಲಿ ನಿಂತಿರುವುದು ನಮಗೆ ಕ್ಷೇತ್ರದಿಂದ ಬಂದಿರುವ ಹಿಮ್ಮಾಹಿತಿಯಾಗಿದೆ.
- ರಾಜ್ಯ ಮಟ್ಟದ ತರಬೇತಿಯಲ್ಲಿ ವಿಷಯಾಧಾರಿತವಾಗಿ ಹೆಚ್ಚು ಒತ್ತನ್ನು ನೀಡಲಾಗಿದ್ದು, ನಮ್ಮ ಜಿಲ್ಲೆಯಲ್ಲಿ ರಚನಾ ತತ್ವ ಅಳವಡಿಕೆ ಮತ್ತು ರೂಪಣಾತ್ಮಕ ಮೌಲ್ಯಮಾಪನಕ್ಕೂ ಹೆಚ್ಚು ಒತ್ತು ನೀಡಿ ಸಂಯೋಜಿಸಲಾಗಿದೆ.
- ಖಂಡಿತವಾಗಿಯೂ ಇದು ಮಕ್ಕಳ ಕಲಿಕೆಯ ಮೇಲೆ ಗುಣಾತ್ಮಕ ಪರಿಣಾಮ ಬೀರಿದೆ.

**11. ತರಬೇತಿಗಳು ಬೋದನಾ ಕ್ರಮದ ಜೊತೆಗೆ ಚಟುವಟಿಕೆ ಆಧಾರಿತವಾಗಿರಬೇಕೆ?**

- ಖಂಡಿತವಾಗಿಯೂ ತರಬೇತಿಗಳು ಚಟುವಟಿಕೆ ಆಧಾರಿತವಾಗಿದ್ದರೆ ಶಿಕ್ಷಕರಿಗೆ ಅನುಷ್ಠಾನ ಸುಲಭವಾಗುತ್ತದೆ.
- ತರಬೇತಿಗಳು ಕೂಡಾ ಸಾಂಪ್ರದಾಯಿಕ ವಿಧಾನಗಳಿಂದ ಹೊರಬಂದು ಶಿಬಿರಾರ್ಥಿಗಳ ಜ್ಞಾನ ರಚನೆ, ಸ್ವಾವಾಲೋಕನಗಳಿಗೆ ಅವಕಾಶ ನೀಡಬೇಕು.
- ಸಂಪನ್ಮೂಲ ವ್ಯಕ್ತಿಗಳು ವಿವರಣೆ ನೀಡುವುದಕ್ಕೆ ಬದಲಾಗಿ ಉತ್ತಮೋತ್ತಮ ತರಬೇತಿ, ಓದುವ ಸಾಹಿತ್ಯಗಳನ್ನು ಸಿದ್ಧಪಡಿಸಿ ಓದುವಂತೆ, ಗುಂಪಿನಲ್ಲಿ ಚರ್ಚಿಸುವಂತೆ, ತರಗತಿ ಪ್ರಕ್ರಿಯೆಗಳ ಕುರಿತಾದ ಹೊಳವುಗಳನ್ನು ತಾವೇ ಸೃಜಿಸುವಂತೆ ಮಾಡಬಹುದು.
- ಈಗಿನ ಹೊಸ ಟ್ರೆಂಡ್‌ಗಳ ಕುರಿತ ರೆಫರೆನ್ಸ್ ಪುಸ್ತಕಗಳನ್ನು ಅಥವಾ ಪರಾಮರ್ಷನ ಸಾಹಿತ್ಯಗಳನ್ನು ಇಲಾಖೆ ಒದಗಿಸಬೇಕು. ಈ ಮೂಲಕ ಇಲಾಖೆಯ ಎಲ್ಲರ ಅಧ್ಯಯನ ಶೀಲತೆ ಹೆಚ್ಚಾಗಬೇಕು.
- ಶಾಲಾ ಭೇಟಿ, ಪ್ರಾತ್ಯಕ್ಷಿಕೆಗಳಿಗೆ ಅವಕಾಶ ನೀಡಬಹುದು.
- ಓದುವ, ವಿಷಯ ಕಲೆ ಹಾಕುವ ನಿಯೋಜಿತ ಕಾರ್ಯಗಳನ್ನು ನೀಡುವುದು ಉತ್ತಮ.
- ಜಿಲ್ಲೆಯ/ಬ್ಲಾಕಿನ/ಕ್ಲಸ್ಟರ್‌ನ ಯಶಸ್ವಿ ತರಗತಿ ಪ್ರಕ್ರಿಯೆಗಳ ವಿಡಿಯೋ ಕ್ಲಿಪ್ಪಿಂಗ್ ಬಳಸಿ ಚರ್ಚಿಸುವುದು.
- ಯಶೋಗಾಥೆಗಳ ಸಂಗ್ರಹ ಮತ್ತು ಅವುಗಳ ಅಧ್ಯಯನ ಮತ್ತು ಒಳನೋಟಗಳನ್ನು ಪಡೆಯುವಂತೆ ಅವಕಾಶ ಕಲ್ಪಿಸಬೇಕು.
- ತರಬೇತಿ ಕೇಂದ್ರಗಳು ಶಿಕ್ಷಕರ ಸ್ವಾವಾಲೋಕನದ ಅಭ್ಯಾಸಗಳನ್ನು ವೃದ್ಧಿಸುವ ತಾಣಗಳಾಗಬೇಕು.

# ಭಾಗ 4

1). **ಬಿ.ಆರ್.ಸಿ. ಮತ್ತು ಸಿ.ಆರ್.ಸಿ.ಗಳಿಗೆ ಶಾಲೆಗಳ ಮೇಲ್ವಿಚಾರಣೆ/ತರಗತಿ ವೀಕ್ಷಣೆ ಬಗ್ಗೆ ಇಲಾಖೆಯಿಂದ ಮಾರ್ಗದರ್ಶನ ನೀಡಲಾಗಿದ್ದು, ಇಲಾಖೆಯ ನಿಯಮಾನುಸಾರವೇ ಮೇಲ್ವಿಚಾರಣೆ/ವೀಕ್ಷಣೆ ಮಾಡಲಾಗುತ್ತಿದೆಯೇ?**

- ಇಲಾಖೆಯ ಮಾರ್ಗದರ್ಶನದಂತೆ ಇಲಾಖೆಯ ನಿಯಮಾನುಸಾರವೇ ಬಿ.ಆರ್.ಸಿ. ಮತ್ತು ಸಿ.ಆರ್.ಸಿ.ಗಳು ಶಾಲಾ ಮೇಲ್ವಿಚಾರಣೆ/ವೀಕ್ಷಣೆ ಮಾಡಲಾಗುತ್ತಿದ್ದಾರೆ

2). **ಬಿ.ಆರ್.ಸಿ. ಮತ್ತು ಸಿ.ಆರ್.ಸಿ.ಗಳು ಪ್ರತಿ ತ್ರೈಮಾಸಿಕ ಅವಧಿಗೆ ಕಾರ್ಯಬಾಹುಳ್ಯದ ನಡುವೆ ಎಷ್ಟು ಶಾಲೆಗಳಿಗೆ ಭೇಟಿ ನೀಡುತ್ತಿದ್ದಾರೆ.**

- ಬಿ.ಆರ್.ಸಿ. ಮತ್ತು ಸಿ.ಆರ್.ಸಿ.ಗಳು ಪ್ರತಿ ತ್ರೈಮಾಸಿಕ ಅವಧಿಗೆ ಕಾರ್ಯಬಾಹುಳ್ಯದ ನಡುವೆ ಸರಾಸರಿ 20 ರಿಂದ 45 ರಷ್ಟು ಶಾಲೆಗಳಿಗೆ ಭೇಟಿಯನ್ನು ನೀಡುತ್ತಾರೆ. ಸಿಆರ್‌ಪಿಗಳು ಪ್ರತಿ ಮಾಹೆ ತಮ್ಮ ವ್ಯಾಪ್ತಿಯಲ್ಲಿರುವ ಎಲ್ಲಾ ಶಾಲೆಗಳಿಗೆ ಕನಿಷ್ಟ ಒಂದು ಬಾರಿ ಭೇಟಿಯನ್ನು ನೀಡುತ್ತಾರೆ.

3). **ಶಾಲೆಗಳಿಗೆ ಭೇಟಿ ನೀಡಿದಾಗ ಕೇವಲ ಭೌತಿಕ ಸಲಕರಣೆ ವೀಕ್ಷಸದೇ, ಬೌದ್ಧಿಕ ಆಯಾಮಗಳಿಗೆ ಒತ್ತು ನೀಡಲಾಗುತ್ತಿದೆಯೇ?**

- ಹೌದು, ಬರೇ ಭೌತಿಕ ಸೌಲಭ್ಯಗಳನ್ನಷ್ಟೇ ವೀಕ್ಷಣೆ ಮಾಡದೆ ಗುಣಾತ್ಮಕ ಆಯಾಮಗಳ ಅವಲೋಕನವನ್ನೂ ಮಾಡುತ್ತಾರೆ.

- ತರಗತಿ ವೀಕ್ಷಣೆ ಮಾಡಿ ಕಲಿಕಾ ಸನ್ನಿವೇಶ, ಕಲಿಕೋಪಕರಣಗಳ ಬಳಕೆ, ಮಕ್ಕಳ ಭಾಗವಹಿಸುವಿಕೆ, ಮಕ್ಕಳ ಕಲಿಕೆ, ಶಿಕ್ಷಕರ ತರಗತಿ ಅನುಕೂಲಿಸುವಿಕೆ, ತರಗತಿಯಲ್ಲಿ ವಾಸ್ತವವಾಗಿ ನಡೆಯುತ್ತಿರುವ ಮಕ್ಕಳ ರೂಪಣಾತ್ಮಕ ಮೌಲ್ಯಮಾಪನದ ನಿರ್ವಹಣೆ ಇತ್ಯಾದಿಗಳನ್ನು ಗಮನಿಸುತ್ತಾರೆ. ಮತ್ತು ಮಾರ್ಗದರ್ಶನವನ್ನೂ ನೀಡುತ್ತಾರೆ.
- ಪಾಠಗಳಿಗೆ ಪೂರಕವಾಗಿ ಮಕ್ಕಳ ಪೂರ್ವ ಸಿದ್ಧತೆಯನ್ನು ಗಮನಿಸಲಾಗುತ್ತದೆ.
- ತರಗತಿ ಪ್ರಕ್ರಿಯೆಯೊಳಗೆ ತರಬೇತಿ ಅನುಷ್ಠಾನವನ್ನು ಗಮನಿಸಿ ಹಿಮ್ಮಾಹಿತಿಯನ್ನು ನೀಡಲಾಗುತ್ತಿದೆ.

4). **ಜಿಲ್ಲಾ ಮಟ್ಟದಲ್ಲಿ ಶಾಲೆಗಳ ಮೇಲುಸ್ತುವಾರಿ ನಡೆಸಲು ಸಾಧನ ಸಲಕರಣೆಗಳನ್ನು ಪ್ರತ್ಯೇಕವಾಗಿ ರಚಿಸಿಕೊಳ್ಳಲಾಗಿದೆಯೇ? ಅಥವಾ ಇಲಾಖಾ ನಿರ್ದೇಶನದಂತೆ ಮಾತ್ರ ಮೇಲುಸ್ತುವಾರಿ ನಡೆಸಲಾಗುತ್ತಿದೆಯೇ?**

- ಜಿಲ್ಲಾ ಮಟ್ಟದಲ್ಲಿ ಶಾಲೆಗಳ ಮೇಲುಸ್ತುವಾರಿ ನಡೆಸಲು ಕ್ಯೂಎಂಟಿ ನಮೂನೆ ಆಧರಿಸಿದ ಶಾಲಾ ಭೇಟಿ ನಮೂನೆಯನ್ನು ಪ್ರತ್ಯೇಕವಾಗಿ ರಚಿಸಿಕೊಳ್ಳಲಾಗಿದೆ ಆದರೆ ಬಳಸುತ್ತಿಲ್ಲ.
- ಆದುದರಿಂದ ಇಲಾಖಾ ನಿರ್ದೇಶನದಂತೆ ಮೇಲುಸ್ತುವಾರಿ ನಡೆಸಲಾಗುತ್ತಿದೆ.

5). **ಗುಣಮಟ್ಟ ಪರಿಶೀಲನೆಗಾಗಿ ಬಿ.ಆರ್.ಸಿ/ಸಿ.ಆರ್.ಸಿ. ಡಯಟ್ ಅಧಿಕಾರಿಗಳ ಪಾತ್ರವೇನು?**

- ಡಯಟ್‌ನ ಬಹಳ ಮುಖ್ಯವಾದ ಪಾತ್ರ ಅದರ ತಕ್ಷಣದ ಕೆಳಹಂತದ ಶಾಖೆಯಾದ ಬಿಆರ್‌ಸಿ ಮತ್ತು ಅದರ ತಂಡದ ಬಲವರ್ಧನೆಯನ್ನು ಮಾಡುವುದು.
- ಬ್ಲಾಕ್ ತಂಡದ ಕಾರ್ಯಕ್ಷಮತೆಯನ್ನು ಮತ್ತು ಸಾಧನೆಯನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಈ ಮೂಲಕ ಶಾಲಾ ಹಂತದ ಪ್ರಗತಿಯ ಉಸ್ತುವಾರಿ ಮಾಡುವುದಾಗಿದೆ.
- ಬ್ಲಾಕ್ ಹಂತದ ಅಧಿಕಾರಿಗಳು ಸಿಆರ್‌ಪಿಗಳ ಬಲವರ್ಧನೆ ಮಾಡುವ ಮೂಲಕ ಮೂಲ ಆಶಯಗಳ ಶಾಲೆಗಳಲ್ಲಿ ಈಡೇರುವಂತೆ ಕ್ರಮವಹಿಸುವುದು.
- ಕ್ಷೇತ್ರ ಭೇಟಿ ಕೈಗೊಂಡು ಬ್ಲಾಕ್ ಹಂತದಲ್ಲಿ ಸಂವಾದಗಳನ್ನು ಏರ್ಪಡಿಸಿ ಯಶಸ್ಸು, ಸಮಸ್ಯೆ, ಸವಾಲು ಮತ್ತು ಪರಿಹಾರಗಳನ್ನು ಕಂಡುಕೊಳ್ಳುವುದು.
- ಈ ಎಲ್ಲಾ ಕಾರ್ಯಗಳಿಗೆ ಕ್ಯೂಎಂಟಿ ಸಾಧನಗಳು ಉತ್ತಮ ಸಾಧನಗಳಾಗಬಹುದು.
- ಈ ಸಾಧನಗಳನ್ನು ಬಳಸಿ ಪ್ರತಿ ಹಂತದಲ್ಲಿ ಸ್ವಾವಲೋಕನವನ್ನು ಆಧರಿಸಿದ ಚಿಂತನೆ ಮತ್ತು ಆಚರಣೆಗಳನ್ನು ಮಾಡುವಂತೆ ಅವಕಾಶ ಕಲ್ಪಿಸುವುದು.
- ಎಸ್‌ಎಂಎಫ್, ಸಿಎಂಎಫ್ ಮತ್ತು ಡಿಎಂಎಫ್ ಆಧರಿಸಿಯೇ ಶೈಕ್ಷಣಿಕ ಕ್ರಿಯಾಯೋಜನೆ ತಯಾರಿಸುವಲ್ಲಿ ಮಾರ್ಗದರ್ಶನ ನೀಡುವುದು.
- ಸಂಶೋಧನೆಗಳನ್ನು ಆಧರಿಸಿದ ಅಧ್ಯಯನಗಳು ಮತ್ತು ಕ್ರಿಯಾ ಸಂಶೋಧನೆಗಳನ್ನು ಕೈಗೊಂಡು, ವಾಸ್ತವವನ್ನು ಅರ್ಥೈಸಿಕೊಂಡು, ಕ್ಷೇತ್ರದಲ್ಲಿನ ಆಚಣೆಗಳಲ್ಲಿ ಗುಣಮಟ್ಟದ ಬದಲಾವಣೆಗಳನ್ನು ಮಾಡುವುದು
- ಪ್ರಗತಿಯನ್ನು ಪರಿಶೀಲಿಸುವುದು. ಶಾಲಾ ಭೇಟಿ ಕುರಿತಂತೆ ಹಿಮ್ಮಾಹಿತಿಯನ್ನು ಪಡೆದುಕೊಳ್ಳುವುದು.
- ಶಾಲಾ ಭೇಟಿ ನೀಡಿ ಗುಣಮಟ್ಟವನ್ನು ಪರಿಶೀಲಿಸಿ ಮಾರ್ಗದರ್ಶನ ನೀಡುವುದು.

6). **ತಮ್ಮ ಜಿಲ್ಲಾ ಹಂತದಲ್ಲಿ ಶೈಕ್ಷಣಿಕ ತೊಡಕುಗಳ ಬಗ್ಗೆ ಬಿ.ಆರ್.ಸಿ/ಸಿ.ಆರ್.ಸಿ.ಗಳ ಸಭೆಯನ್ನು ಎಷ್ಟು ಬಾರಿ ಆಯೋಜಿಸಲಾಗಿದೆ. ಇದರಿಂದ ಸಮಸ್ಯೆಗಳಿಗೆ ಪರಿಹಾರಗಳು ದೊರಕಿತೇ?**

- ಪ್ರತಿ ಮಾಹೆ ಜಿಲ್ಲಾ ಹಂತದಲ್ಲಿ ಬಿಆರ್‌ಸಿಗಳ ಸಭೆಗಳನ್ನು ಕರೆಯಲಾಗುವುದು. ಕೆಲವೊಮ್ಮೆ ಜಿಲ್ಲೆಯ ಇಬ್ಬರು ಉಪನಿರ್ದೇಶಕರ ಜಂಟಿ ಉಪಸ್ಥಿತಿಯಲ್ಲಿ ಜಿಲ್ಲೆಯ ಶೈಕ್ಷಣಿಕ ಪ್ರಗತಿಯ ಕುರಿತು ಪ್ರಗತಿಯನ್ನು ಪರಿಶೀಲನೆ ಮಾಡಲಾಗುವುದು ಮತ್ತು ಕಂಡುಕೊಂಡಿರುವ ಶೈಕ್ಷಣಿಕ ತೊಡಕುಗಳಿಗೆ ಪರಿಹಾರವನ್ನು ಕಂಡುಕೊಳ್ಳಲಾಗಿದೆ.
- ಆಡಳಿತ ಮತ್ತು ಶೈಕ್ಷಣಿಕ ವಿಚಾರಗಳಿಗೆ ಸಂಬಂಧಿಸಿದಂತೆ ಕೆಲವೊಮ್ಮೆ ಪ್ರತ್ಯೇಕವಾಗಿ ಸಭೆ ಕರೆದು ಸಮಸ್ಯೆಗಳ ಬಗ್ಗೆ ಚರ್ಚಿಸಿ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದು.
- ಸಭೆಗಳಲ್ಲಿ ಸಿಆರ್‌ಪಿಗಳಿಗೆ ತರಬೇತಿ ನೀಡುವಂತೆ ಬಿಆರ್‌ಸಿಗಳು ಕೇಳಿಕೊಂಡಿರುತ್ತಾರೆ. ಆದರೆ ಇದು ಸಾಧ್ಯವಾಗಿಲ್ಲ.ಶೈಕ್ಷಣಿಕವಾಗಿ ಬೆಳೆಯಲು ಎರಡು ದಿನಗಳ ಕಾಲ ಪ್ರತಿ ಬ್ಲಾಕಿನಲ್ಲಿ ಡಯಟ್ ನೋಡೆಲ್ ಅಧಿಕಾರಿಗಳ ನೇತ್ರತ್ವದಲ್ಲಿ ಪಠ್ಯಪುಸ್ತಕ ಅಧ್ಯಯನವನ್ನು ಕೈಗೊಳ್ಳಲಾಗಿತ್ತು ಮತ್ತು ಇದು ಪರಿಣಾಮಕಾರಿಯಾಗಿತ್ತು ಕೂಡಾ. ಇನ್ನು ಎರಡು ದಿನಗಳ ಕಾಲ ರಚನಾವಾದ, ಸಿಸಿಇ ಮತ್ತು ತರಗತಿ ವೀಕ್ಷಣೆ ಮಾಡಿ ಹಿಮ್ಮಾಹಿತಿ ನೀಡುವ ಬಗ್ಗೆ ಚರ್ಚೆಯನ್ನು ಪ್ರತಿ ಬ್ಲಾಕ್‌ನಲ್ಲಿ ಏರ್ಪಡಿಸಬೇಕೆಂದು ನಿರ್ಧರಿಸಲಾಗಿದೆ.
- ಸಮಾಲೋಚನಾ ತರಬೇತಿ ನಿರ್ವಹಣೆ ಬಗ್ಗೆ ಗೊಂದಲಗಳಿತ್ತು. ಇದಕ್ಕೆ ಪೂರಕವಾಗಿ ಟಿಪ್ಪಣೆ ಸಿದ್ಧಪಡಿಸಿ ಮಾಹಿತಿಯನ್ನು ಒದಗಿಸಿ ಚರ್ಚಿಸಲಾಗಿದೆ.
- ಸಮಾಲೋಚನಾ ಸಭೆಗಳಲ್ಲಿ ಶಿಕ್ಷಕರು ತರಗತಿಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಪಟ್ಟಿಯನ್ನು ತೆಗೆದುಕೊಂಡು ಕ್ಲಸ್ಟರ್‌ನಲ್ಲಿ, ಅಲ್ಲಿ ಪರಿಹಾರ ಸಿಗದಿದ್ದಲ್ಲಿ ಬ್ಲಾಕ್ ಹಂತದಲ್ಲಿ ಮತ್ತು ಬ್ಲಾಕ್ ಹಂತದಲ್ಲಿ ಪರಿಹಾರ ಸಿಗದಿದ್ದಲ್ಲಿ ಜಿಲ್ಲಾ ಹಂತದಲ್ಲಿ ಪರಿಹಾರವನ್ನು ಕಂಡುಕೊಳ್ಳವಂತೆ ನಿರ್ಧರಿಸಿ ಕಾರ್ಯ ರೂಪಕ್ಕೆ ತರಲಾಗಿದೆ.
- 2013–14 ನೇ ಸಾಲಿನಲ್ಲಿ ಎಲ್ಲಾ ಅನುಪಾಲನಾಧಿಕಾರಿಗಳಿಗಾಗಿ ಶೈಕ್ಷಣಿಕ ಸಮಾವೇಶವನ್ನು ಏರ್ಪಡಿಸಿ ಚರ್ಚೆ ಮಾಡಲಾಗಿತ್ತು. ಈ ಸಾಲಿನಲ್ಲಿ ಸಿಆರ್‌ಪಿಗಳ ಸಭೆಯನ್ನು ಜಿಲ್ಲಾ ಹಂತದಲ್ಲಿ ಮಾಡಿರುವುದಿಲ್ಲ. ಆದರೆ ಬ್ಲಾಕ್ ನೋಡೆಲ್ ಅಧಿಕಾರಿಗಳು ಬಿಆರ್‌ಸಿ ಕೇಂದ್ರದಲ್ಲಿ ಆಯಾ ಬ್ಲಾಕಿನ ಎಲ್ಲಾ ಸಿಆರ್‌ಪಿಗಳೊಡನೆ ಸಮಾಲೋಚನೆ ನಡೆಸಿರುತ್ತಾರೆ.

7). **ಜಿಲ್ಲಾ ಉಪನಿರ್ದೇಶಕರು ಶಾಲೆಗಳಿಗೆ ಭೇಟಿ ನೀಡಿ, ಕಾಲಕಾಲಕ್ಕೆ ಮಾಹಿತಿ/ಪರಿಶೀಲನೆ/ಮಾರ್ಗದರ್ಶನ ನೀಡುತ್ತಿರುವರೇ?**

- ಹೌದು, ಜಿಲ್ಲಾ ಉಪನಿರ್ದೇಶಕರು ಶಾಲೆಗಳಿಗೆ ಖುದ್ದಾಗಿ ಭೇಟಿ ನೀಡಿ, ಕಾಲಕಾಲಕ್ಕೆ ಮಾಹಿತಿ/ಪರಿಶೀಲನೆ/ಮಾರ್ಗದರ್ಶನ ನೀಡಿರುತ್ತಾರೆ.
- ಜಿಲ್ಲಾ ಹಂತದಲ್ಲಿ ಬಿಇಒ ಮತ್ತು ಬಿಆರ್‌ಸಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ತಾವು ಮಾಡಿರುವ ಶಾಲಾ ಭೇಟಿಯ ಪ್ರಸ್ತಾಪವೆತ್ತಿ ಒಳಿತು ಕೆಡುಕುಗಳಿಗೆ ಕಾರಣವನ್ನು ವಿಶ್ಲೇಷಿಸುತ್ತಾರೆ.
- ಅಗತ್ಯವಿದ್ದಲ್ಲಿ ಬಿಇಒ, ಬಿಆರ್‌ಸಿ, ಸ್ವಯಂ ಸೇವಾ ಸಂಸ್ಥೆ ಅಥವಾ ಸ್ಥಳೀಯ ಪ್ರಾಧಿಕಾರವನ್ನು ಸಂಪರ್ಕಿಸಿ ಶಾಲೆಗಳಿಗೆ ಮೂಲ ಸೌಲಭ್ಯ ಒದಗಿಸುವಂತೆ ಮಾಹಿತಿ ನೀಡಿರುತ್ತಾರೆ.
- ಶಾಲಾ ಭೇಟಿಗಳಲ್ಲಿ ಕಂಡುಕೊಂಡಂತಹ ಉತ್ತಮ ಅಂಶಗಳನ್ನು ಮತ್ತು ಆಚರಣೆಗಳನ್ನು ಸಭೆಗಳಲ್ಲಿ ಹಂಚಿಕೆ ಮಾಡುತ್ತಾರೆ.

8). **ಭೇಟಿ ನೀಡಿ ಪರಿಶೀಲಿಸಿದ ಶಾಲೆಗಳಿಗೆ ಸೂಕ್ತ ಮಾರ್ಗದರ್ಶನ ಮತ್ತು ಹಿಮ್ಮಾಹಿತಿ ನೀಡಲಾಗುತ್ತಿದೆಯೇ?**

- ಹೌದು, ಭೇಟಿ ನೀಡಿ ಎಲ್ಲಾ ಅಂಶಗಳನ್ನು ಪರಿಶೀಲಿಸಿ ವಸ್ತುನಿಷ್ಠವಾಗಿ ಮಾರ್ಗದರ್ಶನವನ್ನು ನೀಡಲಾಗುತ್ತದೆ.

# ಭಾಗ 4ಎ

1). **ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮ ಅನುಷ್ಠಾನದಲ್ಲಿ ಡಯಟ್/ಡಿವೈಪಿಸಿಗಳ ಪರಸ್ಪರ ಹೊಂದಾಣಿಕೆಯಿಂದ ಯಾವ ರೀತಿ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ.**

- ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮಗಳನ್ನು ಡಯಟ್ ಅಧಿಕಾರಿಗಳ/ಡಿವೈಪಿಸಿಗಳ ಪರಸ್ಪರ ಹೊಂದಾಣಿಕೆಯಿಂದ ಅನುಷ್ಠಾನಗೊಳಿಸಲಾಗುತ್ತಿದೆ.
- ಎಸ್‌ಎಸ್‌ಎಯ ಎಡಬ್ಲ್ಯೂಪಿ ಯೋಜನೆ ಜಂಟಿಯಾಗಿ ನಡೆಯುತ್ತದೆ. ಇಬ್ಬರು ಡಿಡಿಪಿಐ ಮತ್ತು ಇಬ್ಬರು ಡಿವೈಪಿಸಿಗಳ ಉಪಸ್ಥಿತಿಯಲ್ಲಿ ಬ್ಲಾಕ್‌ವಾರು ಪ್ಲಾನ್‌ಗಳ ಪಿಪಿಟಿ ಪ್ರಸ್ತುತಿ ಮತ್ತು ಮಾಹಿತಿಗಳನ್ನು ಜೊತೆಯಾಗಿ ಪರಿಶೀಲಿಸಲಾಗುತ್ತದೆ.
- ಅಧ್ಯಯನಗಳ ಸಾಧನ ತಯಾರಿ, ಪರಿಷ್ಕರಣೆ ಮತ್ತು ವರದಿ ತಯಾರಿಕೆಯಲ್ಲಿ ಸಹಭಾಗಿತ್ವವನ್ನು ಪಡೆದುಕೊಳ್ಳಲಾಗುತ್ತದೆ. ಈ ಬಾರಿ ಎಲ್ಲಾ ಅಧ್ಯಯನಗಳು ಎಸ್‌ಎಸ್‌ಎ ಮಧ್ಯವರ್ತನೆಗಳ ಮೌಲ್ಯಮಾಪನವಾಗಿರುವುದರಿಂದ ಅಗತ್ಯ ಸಹಕಾರವನ್ನು ಡಿವೈಪಿಸಿ ತಂಡದಿಂದ ಪಡೆದುಕೊಳ್ಳಲಾಗಿದೆ.
- ಅಧ್ಯಯನದ ಒಳ ನೋಟಗಳನ್ನು ಹಂಚಿಕೆ ಮಾಡಲಾಗುತ್ತದೆ.
- ಶೈಕ್ಷಣಿಕ ಸಂಸ್ಥೆಯಾಗಿರುವ ಡಯಟ್ ಸಾಂಖ್ಯಿಕವಾಗಿ ಡಿವೈಪಿಸಿ ಕಛೇರಿಯಿಂದ ಮಾಹಿತಿ ಮತ್ತು ಮಾರ್ಗದರ್ಶನವನ್ನು ಪಡೆಯುತ್ತದೆ.
- ಎಸ್‌ಎಸ್‌ಎ ನೀಡುವ ತರಬೇತಿಗೆ ಡಯಟ್ ಸಂಪನ್ಮೂಲ ಸಹಕಾರ ನೀಡುತ್ತದೆ.

2). **ಇಲಾಖೆಯು ಒದಗಿಸಿರುವ ಭೌತಿಕ ಸೌಲಭ್ಯಗಳು ಎಲ್ಲಾ ಶಾಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆಯೇ? ಭೌತಿಕ ಸೌಲಭ್ಯಗಳಿಂದ ವಂಚಿತವಾಗಿರುವ ಶಾಲೆಗಳ ಪಟ್ಟಿ ಪ್ರತ್ಯೇಕವಾಗಿ ಸಿದ್ಧಪಡಿಸಿ, ಕಾರಣಗಳನ್ನು ಸೂಚಿಸಿ.**

- ಹೌದು

## ಅಧ್ಯಾಯ–4

# ಕ್ಷೇತ್ರ ಭೇಟಿ ಆಧರಿಸಿದ ವಿಶ್ಲೇಷಣೆ

## ಬಳಸಿರುವ ಸಾಧನ ಮತ್ತು ತಂತ್ರಗಳು

1) ಎಸ್.ಎಂ.ಎಫ್, ಎಸ್.ಎಂ.ಸಿ.ಎಫ್, ಬಿ.ಎಂ.ಎಫ್ ಮತ್ತು ಡಿ.ಎಂ.ಎಫ್ ನಮೂನೆಗಳು
2) ಶಾಲಾ ಸಾಮಾನ್ಯ ಮಾಹಿತಿ ನಮೂನೆಗಳು
3) ಶಾಲಾ ಮುಖ್ಯ ಶಿಕ್ಷಕರಿಗಾಗಿ ಪ್ರಶ್ನಾವಳಿಗಳು
4) ತರಗತಿವಾರು, ವಿಷಯವಾರು ಮೌಖಿಕ ಮತ್ತು ಲಿಖಿತ ಪ್ರಶ್ನೆಪತ್ರಿಕೆಗಳು
5) ಅನುಪಾಲಕರಿಗಾಗಿ ಪ್ರಶ್ನಾವಳಿಗಳು
6) ಸಮುದಾಯದವರಿಗಾಗಿ ಸಂದರ್ಶನ ನಮೂನೆ
7) ತರಗತಿ ವೀಕ್ಷಣಾ ನಮೂನೆಗಳು
8) ಪ್ರೋತ್ಸಾಹದಾಯಕ ಯೋಜನೆಗಳ ಸಾಫಲ್ಯತೆಯ ವೀಕ್ಷಣಾ ನಮೂನೆ
9) ದಾಖಲೆಗಳ ವೀಕ್ಷಣೆ

## ಪ್ರತಿದರ್ಶ ಮತ್ತು ಪ್ರತಿಚಯನ ವಿಧಾನ :–

ಕೆ.ಎಸ್.ಕ್ಯೂ.ಎ.ಎ.ಸಿ 2013–14 ರ ಫಲಿತಾಂಶವನ್ನು ವಿಶ್ಲೇಷಣೆಗೆ ಒಳಪಡಿಸಿ ಈ ಫಲಿತಾಂಶದಲ್ಲಿ 05 ಕ್ಷೇತ್ರಗಳಲ್ಲಿ ಹೆಚ್ಚಿನ ಸಾಧನೆ ಹಾಗೂ ಕಡಿಮೆ ಸಾಧನೆ ಮಾಡಿರುವ ಬ್ಲಾಕ್‌ಗಳಲ್ಲಿ ಆಯ್ಕೆ ಮಾಡಲಾಯಿತು.ಇದರಲ್ಲಿ ಮೈಸೂರು ಉತ್ತರವಲಯದ ಎಲ್ಲಾ ಕ್ಷೇತ್ರ ಹಾಗೂ ಮಕ್ಕಳ ಕಲಿಕಾ ಸಾಧನೆಯಲ್ಲಿ 'ಡಿ' ಗ್ರೇಡ್ ಪಡೆದಿರುವ ಶಾಲೆಗಳ ಸಂಖ್ಯೆ ಹೆಚ್ಚಾಗಿದ್ದರಿಂದ ನಗರ ಹಾಗೂ ಹಿಂದುಳಿದ ಬ್ಲಾಕ್‌ನ ಸ್ಯಾಂಪಲ್ ಎಂದು ಮೈಸೂರು ಉತ್ತರ ವಲಯವನ್ನು ಆಯ್ಕೆ ಮಾಡಲಾಯಿತು. ನಂತರ ಗ್ರಾಮೀಣಾ ಹಾಗೂ ಮುಂದುವರೆದ ಬ್ಲಾಕ್‌ನ್ನು ಆಯ್ಕೆ ಮಾಡುವಾಗ ಗ್ರಾಮೀಣಾ ಪ್ರದೇಶಗಳಿಗೆ ಹೆಚ್ಚಿನ ಆದ್ಯತೆ ನೀಡಿ ಕೆ.ಆರ್.ನಗರ ತಾಲ್ಲೂಕನ್ನು ಆಯ್ಕೆ ಮಾಡಲಾಗಿತ್ತು. ನಂತರ ಬಿ.ಎಂ.ಎಫ್‌ನ ಮಕ್ಕಳ ಕಲಿಕಾ ಸಾಧನೆಯನ್ನು ಗುರಿಯಾಗಿಟ್ಟುಕೊಂಡು ವಿಶ್ಲೇಷಣೆಗೆ ಒಳಪಡಿಸಲಾಯಿತು.ಇದರಲ್ಲಿಯೂ ಮೈಸೂರು ಉತ್ತರ ವಲಯವನ್ನು ಅಧ್ಯಯನದ ಕಾರ್ಯಕ್ಷೇತ್ರವನ್ನಾಗಿ ಆಯ್ಕೆ ಮಾಡಲಾಯಿತು.ಮುಂದುವರಿದ ತಾಲ್ಲೂಕನ್ನು ಆಯ್ಕೆ ಮಾಡುವಾಗ ಮೈಸೂರು ದಕ್ಷಿಣದ ಫಲಿತಾಂಶ ಉತ್ತಮವಾಗಿತ್ತು.ಆ ನಂತರದ ಸ್ಥಾನ ಮೈಸೂರು ಗ್ರಾಮಾಂತರ ವಲಯದಾಗಿತ್ತು.ಆದರೆ ಇವೆರಡೂ ಬ್ಲಾಕ್‌ಗಳಲ್ಲಿ ನಗರ ಹಾಗೂ ನಗರ ಪ್ರದೇಶದ ಪ್ರಭಾವ ಹೆಚ್ಚಾಗಿದ್ದರಿಂದ ಗ್ರಾಮೀಣ ಪ್ರದೇಶಗಳ ಆಯ್ಕೆಗೆ ಹೆಚ್ಚು ಒತ್ತನ್ನು ನೀಡಲಾಯಿತು. ಅಂತಿಮವಾಗಿ ಕೆ.ಆರ್.ನಗರ ಬ್ಲಾಕ್‌ನ್ನು ಗ್ರಾಮೀಣ ಹಾಗೂ ಮುಂದುವರಿದ ಬ್ಲಾಕ್ ಆಗಿ ಅಧ್ಯಯನಕ್ಕೆ ಆಯ್ಕೆ ಮಾಡಲಾಯಿತು.

ಈ ಎರಡು ತಾಲ್ಲೂಕುಗಳ ಬಿ.ಎಂ.ಎಫ್‌ನ್ನು ಆಧರಿಸಿ ಪ್ರತಿ ತಾಲ್ಲೂಕಿನಲ್ಲಿಯೂ ಮುಂದುವರಿದ ಹಾಗೂ ಹಿಂದುಳಿದ ಕ್ಲಸ್ಟರ್‌ಗಳನ್ನು ಆಯ್ಕೆ ಮಾಡಲಾಯಿತು. ಪ್ರತಿ ಕ್ಲಸ್ಟರ್‌ನಲ್ಲಿಯೂ ಒಂದು ಕಿ.ಪ್ರಾ.ಶಾಲೆ, ಒಂದು ಹಿ.ಪ್ರಾ.ಶಾಲೆ ಹಾಗೂ ಒಂದು ಉನ್ನತೀಕರಿಸಿದ ಹಿ.ಪ್ರಾ.ಶಾಲೆಯನ್ನು ಆಯ್ಕೆ ಮಾಡಲಾಯಿತು. ಈ ಸಂದರ್ಭದಲ್ಲಿ ಮೈಸೂರು ಉತ್ತರ ವಲಯದ ಹಿಂದುಳಿದ ಕ್ಲಸ್ಟರ್‌ನಲ್ಲಿ ಈ ಶೈಕ್ಷಣಿಕ ವರ್ಷದ ಆರಂಭದಲ್ಲಿ ಉನ್ನತೀಕರಿಸಿದ ಹಿ.ಪ್ರಾ.ಶಾಲೆಯಲ್ಲಿ 8ನೇ ತರಗತಿಯನ್ನು ಬೇರ್ಪಡಿಸಿ ಸಮೀಪದ ಪ್ರೌಢಶಾಲೆಗೆ ವರ್ಗಾವಣೆ ಮಾಡಲಾಗಿತ್ತು. ಆದರೂ ಸದರಿ ಕ್ಲಸ್ಟರ್ ಹಿಂದುಳಿಯಲು ಕಾರಣವನ್ನು ತಿಳಿಯಲೇ ಬೇಕಾದ್ದರಿಂದ ಹಾಗೂ ಉತ್ತಮ ಸ್ಯಾಂಪಲ್ ಅಧ್ಯಯನದಲ್ಲಿ ಕೈ ತಪ್ಪುವುದನ್ನು ತಪ್ಪಿಸಲು ಸದರಿ ಕ್ಲಸ್ಟರ್‌ನಲ್ಲಿಯೇ ಮತ್ತೊಂದು ಹಿ.ಪ್ರಾ.ಶಾಲೆಯನ್ನು ಅಧ್ಯಯನಕ್ಕೆ ಆಯ್ಕೆ ಮಾಡಲಾಗಿದೆ. ಇದೇ ರೀತಿ ಮುಂದುವರಿದ ಕ್ಲಸ್ಟರ್‌ನಲ್ಲಿ ಸ.ಹಿ.ಪ್ರಾ.ಶಾಲೆ ರಾಜೇಂದ್ರನಗರ ಇಲ್ಲಿಯೂ 8ನೇ ತರಗತಿಗೆ ಪ್ರೌಢಶಾಲಾ ಶಿಕ್ಷಕರೇ ಬೋಧನೆ ಮಾಡುತ್ತಿರುವುದರಿಂದ ವಿಶ್ಲೇಷಣೆಯಲ್ಲಿ ಹೆಚ್ಚಿನ ಆದ್ಯತೆಯನ್ನು ನೀಡಿರುವುದಿಲ್ಲ.

ಕೆ.ಆರ್.ನಗರ ತಾಲ್ಲೂಕಿನ ಮುಂದುವರಿದ ಕ್ಲಸ್ಟರ್‌ನಲ್ಲಿಯೂ ಕೂಡ ಉನ್ನತೀಕರಿಸಿದ ಹಿ.ಪ್ರಾ.ಶಾಲೆ ಇಲ್ಲದಿದ್ದರಿಂದ ಎರಡು ಹಿರಿಯ ಪ್ರಾಥಮಿಕ ಶಾಲೆಗಳನ್ನೇ ಅಧ್ಯಯನಕ್ಕೆ ಆಯ್ಕೆ ಮಾಡಲಾಗಿದೆ.

**ಕೋಷ್ಟಕ 53:**

| ಬ್ಲಾಕ್‌ಗಳ ಸಂಖ್ಯೆ | ಕ್ಲಸ್ಟರ್‌ಗಳ ಸಂಖ್ಯೆ | ಕಿ.ಪ್ರಾ. ಶಾಲೆ | ಹಿ.ಪ್ರಾ. ಶಾಲೆ | ಉ.ಹಿ.ಪ್ರಾ. ಶಾಲೆ | ತರಗತಿ ವೀಕ್ಷಣೆ ಮಾಡಲಾದ ಶಿಕ್ಷಕರ ಸಂಖ್ಯೆ | | ಕಲಿಕೆ ಮೌಲ್ಯಾಂಕನ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | |
|---|---|---|---|---|---|---|---|---|
| | | | | | ನಲಿಕಲಿ | ಇತರೆ | ದಾಖಲಾತಿ | ಹಾಜರಾತಿ |
| ಗ್ರಾಮೀಣ (1) | 2 | 2 | 3 | 1 | 6 | 18 | 537 | 462 |
| ನಗರ (1) | 2 | 2 | 3 | 1 | 6 | 24 | 1709 | 1394 |
| 2 | 4 | 4 | 6 | 2 | 12 | 42 | 2246 | 1856 |

### ಅಧ್ಯಯನಕ್ಕೆ ಒಳಪಡಿಸಿರುವ ಶಾಲೆಗಳು:

1. ಸರ್ಕಾರಿ ಕಿ.ಪ್ರಾ.ಶಾಲೆ ಕಲ್ಯಾಣಪುರ, ಹಂಪಾಪುರ ಕ್ಲಸ್ಟರ್, ಕೆ.ಆರ್.ನಗರ ತಾ॥ ಮೈಸೂರು ಜಿಲ್ಲೆ
2. ಸರ್ಕಾರಿ ಹಿ.ಪ್ರಾ.ಶಾಲೆ ಅರ್ಜುನಹಳ್ಳಿ, ಹಂಪಾಪುರ ಕ್ಲಸ್ಟರ್, ಕೆ.ಆರ್.ನಗರ ತಾ॥ ಮೈಸೂರು ಜಿಲ್ಲೆ
3. ಸರ್ಕಾರಿ ಉನ್ನತೀಕರಿಸಿದ ಹಿ.ಪ್ರಾ.ಶಾಲೆ ದೊಡ್ಡಕೊಪ್ಪಲು, ಹಂಪಾಪುರ ಕ್ಲಸ್ಟರ್, ಕೆ.ಆರ್.ನಗರ ತಾ॥ ಮೈಸೂರು
4. ಸರ್ಕಾರಿ ಕಿ.ಪ್ರಾ.ಶಾಲೆ ಕುಂಬಾರಕೊಪ್ಪಲು, ಅರಕೆರೆಕೊಪ್ಪಲು ಕ್ಲಸ್ಟರ್, ಕೆ.ಆರ್.ನಗರ ತಾ॥ ಮೈಸೂರು ಜಿಲ್ಲೆ
5. ಸರ್ಕಾರಿ ಹಿ.ಪ್ರಾ.ಶಾಲೆ ದೊಡ್ಡೇಕೊಪ್ಪಲು, ಅರಕೆರೆಕೊಪ್ಪಲು ಕ್ಲಸ್ಟರ್, ಕೆ.ಆರ್.ನಗರ ತಾ॥ ಮೈಸೂರು ಜಿಲ್ಲೆ
6. ಸರ್ಕಾರಿ ಹಿ.ಪ್ರಾ.ಶಾಲೆ ಅರಕೆರೆಕೊಪ್ಪಲು, ಅರಕೆರೆಕೊಪ್ಪಲು ಕ್ಲಸ್ಟರ್, ಕೆ.ಆರ್.ನಗರ ತಾ॥ ಮೈಸೂರು ಜಿಲ್ಲೆ
7. ಸರ್ಕಾರಿ ಕಿ.ಪ್ರಾ.ಶಾಲೆ ಕಲ್ಯಾಣಗಿರಿ, ಜಿ.ಬಿ.ಪಾಳ್ಯ ಕ್ಲಸ್ಟರ್, ಮೈಸೂರು ಉತ್ತರ ವಲಯ, ಮೈಸೂರು ಜಿಲ್ಲೆ
8. ಸರ್ಕಾರಿ ಹಿ.ಪ್ರಾ.ಶಾಲೆ ಸಾತಗಳ್ಳಿ, ಜಿ.ಬಿ.ಪಾಳ್ಯ ಕ್ಲಸ್ಟರ್, ಮೈಸೂರು ಉತ್ತರ ವಲಯ, ಮೈಸೂರು ಜಿಲ್ಲೆ
9. ಸರ್ಕಾರಿ ಹಿ.ಪ್ರಾ.ಶಾಲೆ ಗೌಸಿಯಾನಗರ, ಜಿ.ಬಿ.ಪಾಳ್ಯ ಕ್ಲಸ್ಟರ್, ಮೈಸೂರು ಉತ್ತರ ವಲಯ, ಮೈಸೂರು ಜಿಲ್ಲೆ
10. ಸರ್ಕಾರಿ ಕಿ.ಪ್ರಾ.ಶಾಲೆ ಹೊಸಜಲಪುರಿ, ರಾಜೇಂದ್ರನಗರ ಕ್ಲಸ್ಟರ್, ಮೈಸೂರು ಉತ್ತರ ವಲಯ, ಮೈಸೂರು
11. ಸರ್ಕಾರಿ ಹಿ.ಪ್ರಾ.ಶಾಲೆ ಹಳೇಜಲಪುರಿ, ರಾಜೇಂದ್ರನಗರ ಕ್ಲಸ್ಟರ್, ಮೈಸೂರು ಉತ್ತರ ವಲಯ, ಮೈಸೂರು
12. ಉನ್ನತೀಕರಿಸಿದ ಹಿ.ಪ್ರಾ.ಶಾಲೆ ರಾಜೇಂದ್ರನಗರ, ರಾಜೇಂದ್ರನಗರ ಕ್ಲಸ್ಟರ್, ಮೈಸೂರು ಉತ್ತರ ವಲಯ,

### ದತ್ತಾಂಶ ಸಂಗ್ರಹಣೆ

1) ಎಸ್.ಎಂ.ಎಫ್. ನಮೂನೆ ಹಾಗೂ ವಿವಿಧ ಆಯಾಮಗಳ ಪ್ರಶ್ನಾವಳಿಗಳನ್ನು ಪ್ರಮುಖ ಸಾಧನವಾಗಿಟ್ಟುಕೊಂಡು ಡಯಟ್‌ನ ಹಿರಿಯ ಉಪನ್ಯಾಸಕರು, ಉಪನ್ಯಾಸಕರು, ಬೋಧಕರು ಹಾಗೂ ಆಯಾ ಬ್ಲಾಕ್‌ನ ಬಿ.ಆರ್.ಪಿ ಮತ್ತು ಸಿ.ಆರ್.ಪಿ ಗಳನ್ನೊಳಗೊಂಡ ತಂಡಗಳಲ್ಲಿ ಶಾಲೆಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.
2) ವಿದ್ಯಾರ್ಥಿಗಳಿಗೆ ಸಾಮಾರ್ಥ್ಯಾಧಾರಿತ ಲಿಖಿತ ಹಾಗೂ ಮೌಖಿಕ ಪರೀಕ್ಷೆಗಳನ್ನು ಮಾಡಿ ಅವರ ವಾಸ್ತವ ಕಲಿಕೆಯನ್ನು ಗುರ್ತಿಸಲಾಗಿದೆ.
3) ತರಗತಿಯ ಕಲಿಕಾ ಪ್ರಕ್ರಿಯೆಗಳು ಎನ್.ಸಿ.ಎಫ್–2005/ಆರ್,ಟಿ.ಇ–2009/ಸಿ.ಸಿ.ಇ ಆಶಯಗಳನ್ವಯ ನಡೆಯುತ್ತಿವೆಯೆ ಎನ್ನುವುದನ್ನು ತರಗತಿಯನ್ನು ವೀಕ್ಷಣೆ ಮಾಡುವುದರ ಮೂಲಕ ಖಾತ್ರಿಪಡಿಸಿಕೊಳ್ಳಲಾಗಿದೆ.
4) ಮುಖ್ಯ ಶಿಕ್ಷಕರಿಗೆ, ಸಮುದಾಯದವರಿಗೆ ಹಾಗೂ ಅನುಪಾಲಕರಿಗೆ ಪ್ರಶ್ನಾವಳಿಗಳನ್ನು ನೀಡಿ ಮಾಹಿತಿ ಕಲೆ ಹಾಕಲಾಗಿದೆ. ಶಾಲೆಯ ವಾಸ್ತವ ಸಂಗತಿಗಳನ್ನು ವೀಕ್ಷಣೆಯ ಮೂಲಕ ದಾಖಲಿಸಿಕೊಳ್ಳಲಾಗಿದೆ.

## ದತ್ತಾಂಶ ವಿಶ್ಲೇಷಣೆ

1) ಅಧ್ಯಯನ ತಂಡ ಸಂಗ್ರಹಿಸಿರುವ ಮಾಹಿತಿಯನ್ನು ಆಧರಿಸಿ ವಿಶ್ಲೇಷಿಸಿದೆ.
2) ಕೋಷ್ಟಕಗಳು, ಸ್ಥಂಭಲೇಖ ಹಾಗೂ ರೇಖಾಂಶಲೇಖ ನಕ್ಷೆಗಳನ್ನು ಬಳಸಿ ದಾಖಲಿಸಿಕೊಂಡ ದತ್ತಾಂಶಗಳನ್ನು ವಿಶ್ಲೇಷಿಸಿದೆ.
3) ಬ್ಲಾಕ್‌ವಾರು ಹಾಗೂ ತರಗತಿವಾರು ಹಾಜರಾತಿಯನ್ನು ವಿಶ್ಲೇಷಿಸಿದೆ
4) ತರಗತಿ ಕೋಣೆಯ ಕಲಿಕಾ ಪ್ರಕ್ರಿಯೆಗಳನ್ನು ಬ್ಲಾಕ್‌ವಾರು ವಿಶ್ಲೇಷಿಸಲಾಗಿದೆ.
5) ವಿಷಯವಾರು, ತರಗತಿವಾರು ಮಾಹಿತಿ ವಿಶ್ಲೇಷಣೆ ನಡೆಸಿ ಅಗತ್ಯ ಒಳನೋಟಗಳನ್ನು ಪಡೆದುಕೊಂಡಿದೆ

## ಕ್ಷೇತ್ರ ಭೇಟಿಯನ್ನು ಆಧರಿಸಿ ವಿಶ್ಲೇಷಣೆಮತ್ತು ಅರ್ಥೈಸುವಿಕೆ

### ಶಾಲೆಯ ಭೌತಿಕ ಸೌಲಭ್ಯಗಳು :–

ಶಾಲೆಯು, ಔಪಚಾರಿಕ ಕಲಿಕೆಯ ಅವಕಾಶಗಳ ಕೇಂದ್ರಸ್ಥಳ.ಇದು ಕಲಿಕಾರ್ಥಿಯನ್ನು ಆಕರ್ಷಿಸುವ, ಕಲಿಕೆಗೆ ಪ್ರೇರಣೆಯನ್ನು ಒದಗಿಸುವ, ಕಲಿವಿನ ವಾತಾವರಣವನ್ನು ಸೃಜಿಸುವ ಜೊತೆಗೆ ಸಂತಸ ಹಾಗೂ ಹರ್ಷದಾಯಕ ಕಲಿಕಗೆ ಅವಕಾಶ ಕಲ್ಪಿಸುವ ಸ್ಥಳವಾಗಿರುತ್ತದೆ.

ಒಂದು ಶಾಲೆಯ ಬಾಹ್ಯ ಮತ್ತು ಆಂತರಿಕ ಗುಣಮಟ್ಟ ಆ ಶಾಲೆಯ ಭೌತಸೌಲಭ್ಯಗಳನ್ನು ಮೂಲಭೂತವಾಗಿ ಅವಲಂಬಿಸಿರುತ್ತದೆ.ಮಗುವಿನ ಕಲಿಕೆಗೆ ಪೂರಕವಾದ ವಾತಾವರಣ, ಪೀಠೋಪಕರಣ, ಕಲಿಕೋಪಕರಣ, ಕ್ರೀಡಾಸಾಮಾಗ್ರಿಗಳು, ಸುಸಜ್ಜಿತ ತರಗತಿ ಕೋಣೆಗಳು, ಹೊರಾಂಗಣ ಸನ್ನಿವೇಶಗಳು ಮತ್ತು ಆಟದ ಮೈದಾನ ಅತ್ಯಾವಶ್ಯಕವಾದದು.ಪಠ್ಯ ಸಾಮಾಗ್ರಿಗಳೊಂದಿಗೆ ಕಲಿಕೆಯ ಬೆಳವಣಿಗೆ ವಿಕಸನಗೊಳ್ಳುವುದಿಲ್ಲ. ಪೂರಕವಾದ ಭೌತಸಾಮಾಗ್ರಿಗಳು ಬೆಳವಣಿಗೆ ಮತ್ತು ವಿಕಸನಕ್ಕೆ ನಾಂದಿಯಾಗುತ್ತವೆ. ಶಾಲೆಯೊಂದು ಸರ್ವತೋಮುಖ ಬೆಳವಣಿಗೆಯ ಕೇಂದ್ರ ಅಷ್ಟೇ ಅಲ್ಲದೇ ವಿದ್ಯಾರ್ಥಿಗಳನ್ನು ಸಾಮಾಜಿಕರಣಗೊಳ್ಳಲು ಪ್ರಚೋದಿಸುವಂತಹ ಸ್ಥಳವೂ ಹೌದು.ಕಲಿಕೆಯ ಪ್ರಗತಿಯಲ್ಲಿ ಪ್ರತಿಶತ ನೂರರಷ್ಟು ಸಾಧನೆಯನ್ನು ಶಾಲೆ ಮಾಡಿದ್ದು, ಅದು ತನ್ನ ಭೌತ ಸೌಲಭ್ಯದಲ್ಲಿ ಸಾಕಷ್ಟು ಸಾಧನೆ ಮಾಡದೇ ಹೋದಲ್ಲಿ ಉತ್ತಮ ಶಾಲೆ ಎನಿಸಿಕೊಳ್ಳದು, ಇದನ್ನೇ ತಿರುಗು/ಮುರುಗು ಮಾಡಿದರೂ ಆ ಶಾಲೆಯು ಉತ್ತಮ ಶಾಲೆ ಎನ್ನಿಕೊಳ್ಳದು, ಪ್ರಜಾಸತ್ತಾತ್ಮಕವಾಗಿ ಮತ್ತು ಸಾಂಸ್ಥಿಕವಾಗಿ ಶಾಲೆ ಸಂಘಟಿತವಾಗಿರಬೇಕು.ಅಗತ್ಯ ಸಂಪನ್ಮೂಲಗಳನ್ನು ಕ್ರೋಢಿಕರಣ ಮಾಡಲು ಮತ್ತು ಅವುಗಳನ್ನು ಸದ್ಬಳಕೆ ಮಾಡಿಕೊಳ್ಳುವಲ್ಲಿಯೂ ಸಫಲತೆಯನ್ನು ಕಾಣಬೇಕು.ಸಮುದಾಯದ ವಿವಿಧ ಭಾಗೀದಾರರಿಗೆ ಒಂದು ಉತ್ತಮ ಶಾಲೆಯ ಆಕರ್ಷಣೆಯು ಭೌತ ಸೌಲಭ್ಯದತ್ತ ಮುಖ ಮಾಡುವುದು ಸಾಮಾನ್ಯ ಸಂಗತಿ.ಆದರೆ ಶಿಕ್ಷಣ ಪರಿಭಾಷೆಯಲ್ಲಿ ಭೌತ ಸೌಲಭ್ಯ ಶಾಲೆಯೊಂದರ ಸಮಗ್ರ ಅಭಿವೃದ್ದಿಯ ಒಂದು ಭಾಗ ಎನಿಸಿಕೊಳ್ಳುತ್ತದೆ.

**ಶೇಕಡಾವಾರು ಹಾಜರಾತಿ:**

**ಕೋಷ್ಟಕ 54:**

| ತಾಲ್ಲೂಕು | 1 | | 2 | | 3 | | 4 | | 5 | | 6 | | 7 | | 8 | |
|---|---|---|---|---|---|---|---|---|---|---|---|---|---|---|---|---|
| | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ |
| ಮೈಸೂರು ಉತ್ತರ | 54 | 60 | 76 | 86 | 69 | 74 | 82 | 91 | 90 | 86 | 84 | 91 | 85 | 90 | 100 | 98 |
| ಕೆ.ಆರ್ .ನಗರ | 86 | 83 | 86 | 93 | 84 | 70 | 93 | 94 | 81 | 97 | 87 | 84 | 77 | 87 | 80 | 92 |

**ಗ್ರಾಫ್–33:**




- ಮೈಸೂರು ಉತ್ತರದ 1ಮತ್ತು3ನೇ ತರಗತಿ(ಬಾಲಕ,ಬಾಲಕಿಯರು) ಹಾಗೂ 2ನೇ ತರಗತಿ ಬಾಲಕರ ಹಾಜರಾತಿ ಶೇ.80 ಕ್ಕಿಂತ ಕಡಿಮೆ ಇರುವುದನ್ನು ಗುರ್ತಿಸಲಾಗಿದೆ. 8ನೇ ತರಗತಿಯಲ್ಲಿ ಹಾಜರಾತಿ ಉತ್ತಮವಾಗಿದೆ. (ಸ.ಹಿ.ಪ್ರಾ.ಶಾಲೆ ರಾಜೇಂದ್ರನಗರ) 2ನೇ ತರಗತಿಯಲ್ಲಿ ಲಿಂಗವಾರು ಹೆಚ್ಚಿನ ಹಾಜರಾತಿಯ ವ್ಯತ್ಯಾಸವನ್ನು (ಬಾಲಕಿಯರ ಹಾಜರಾತಿ ಬಾಲಕರಿಗಿಂತ ಹೆಚ್ಚಾಗಿದೆ.) ಗುರ್ತಿಸಲಾಗಿದೆ.
- ಕೆ.ಆರ್.ನಗರದ 3ನೇ ತರಗತಿ ಬಾಲಕಿಯರು ಹಾಗೂ 7ನೇ ತರಗತಿಯ ಬಾಲಕರ ಹಾಜರಾತಿ ಶೇ.80 ಕ್ಕಿಂತ ಕಡಿಮೆಯಿದೆ. ಇದೇ ತಾಲ್ಲೂಕಿನ ಬಾಲಕ/ಬಾಲಕಿಯರ ಹಾಜರಾತಿಯ ವ್ಯತ್ಯಾಸ ಹೆಚ್ಚಾಗಿದೆ.
- ಹಾಜರಾತಿ ಕಡಿಮೆಯಿರುವ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸತಕ್ಕದ್ದು,

## ಶಾಲೆಯಲ್ಲಿ ಲಭ್ಯವಿರುವ ಭೌತಿಕ ಸೌಲಭ್ಯ:

**ಕೋಷ್ಟಕ 55**

| ಕ್ರಮ ಸಂಖ್ಯೆ | ಪ್ರಶ್ನೆಗಳು | ಮೈಸೂರು ಉತ್ತರ | ಕೆ.ಆರ್.ನಗರ |
|---|---|---|---|
| | | ಹೌದು | ಹೌದು |
| 1 | ತರಗತಿ ಕೊಠಡಿಗಳಲ್ಲಿ ಎಲ್ಲಾ ಮಕ್ಕಳೂ ಸರಿಯಾಗಿ ಕುಳಿತುಕೊಳ್ಳಲು ಅವಕಾಶವಿದೆಯೇ? | 5 | 3 |
| 2 | ತರಗತಿ ಕೋಣೆಯಲ್ಲಿ ಪ್ರದರ್ಶಿಸಿದ ಕಲಿಕಾ ಸಾಮಗ್ರಿ ಬೋಧನಾ ಕಲಿಕಾ ಪ್ರಕ್ರಿಯೆಗೆ ಸೂಕ್ತವಾಗಿದೆಯೇ ಮತ್ತು ಅದನ್ನು ಬಳಸಲಾಗಿದೆಯೇ? | 1 | 1 |
| 3 | ವೇಳಾಪಟ್ಟಿಗೆ ಅನುಗುಣವಾಗಿ ತರಗತಿಗಳು ನಡೆಯುತ್ತಿವೆಯೇ? | 3 | 3 |
| 4 | ಪ್ಯಾನಲ್‌ಬೋರ್ಡ್‌ನಲ್ಲಿ ವಿದ್ಯಾರ್ಥಿಗಳು ಚಿತ್ರ/ಬರಹ/ಸಾಮಾನ್ಯ ಜ್ಞಾನ ಇತ್ಯಾದಿ ಸೃಜನಾತ್ಮಕ ಚಿಂತನೆಗಳನ್ನು ಪ್ರದರ್ಶಿಸಿರುತ್ತಾರೆಯೇ? | 1 | 1 |
| 5 | ಶಾಲಾ ಶೈಕ್ಷಣಿಕ ಯೋಜನೆ ಅನುಷ್ಠಾನಗೊಳ್ಳುತ್ತಿದ್ದೆಯೇ? | 3 | 4 |
| 6 | ಶಾಲಾ ಮಂತ್ರಿಮಂಡಲವು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆಯೇ? | 5 | 4 |
| 7 | ಉತ್ತಮವಾದ ಕಪ್ಪು/ಹಸಿರು ಹಲಗೆ ತರಗತಿ ಕೋಣೆಯಲ್ಲಿ ಲಭ್ಯವಿದೆಯೇ? | 6 | 4 |
| 8 | ಶಾಲೆಯಲ್ಲಿರುವ ರ್‍ಯಾಂಪ್ ಬಳಸಲು ಯೋಗ್ಯವಾಗಿದೆಯೇ? | 3 | 4 |
| 9 | ಶುದ್ದ ಕುಡಿಯುವ ನೀರಿನ ಸೌಲಭ್ಯವಿದೆಯೇ? | 4 | 4 |
| 10 | ಶೌಚಾಲಯಕ್ಕೆ ನೀರಿನ ಸೌಲಭ್ಯವಿದೆಯೇ? | 4 | 4 |
| 11 | ಅಗ್ನಿನಂದಕದ ಬಳಕೆಯ ಬಗ್ಗೆ ಶಿಕ್ಷಕರಿಗೆ/ಅಡುಗೆಯವರಿಗೆ ತಿಳುವಳಿಕೆ ಇದೆಯೇ? | 3 | 5 |
| 12 | ಹೊರಾಂಗಣ ಮತ್ತು ಒಳಾಂಗಣ ಆಟಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳು ಕ್ರೀಡಾ ಸಾಮಾಗ್ರಿಗಳನ್ನು ಬಳಸುತ್ತಿದ್ದಾರೆಯೇ? | 2 | 4 |
| 13 | ಶಿಕ್ಷಕರು ರೇಡಿಯೋ ಕಾರ್ಯಕ್ರಮವನ್ನು ತರಗತಿ ಪ್ರಕ್ರಿಯೆಯಲ್ಲಿ ಬಳಸಿಕೊಂಡಿದ್ದಾರೆಯೇ? | 5 | 5 |
| 14 | ಶಿಕ್ಷಕರು ಕಂಪ್ಯೂಟರ್ ಸೌಲಭ್ಯವನ್ನು ಬೋಧನೆಗೆ ಪೂರಕವಾಗಿ ಬಳಸುತ್ತಿದ್ದಾರೆ? | 0 | 1 |

**ಗ್ರಾಫ್–34:**




- ಕೆ.ಆರ್.ನಗರ ತಾಲ್ಲೂಕಿನ 06 ಶಾಲೆಗಳಲ್ಲಿ 03 ಶಾಲೆಗಳಲ್ಲಿ ಮಾತ್ರ ತರಗತಿ ಕೊಠಡಿಗಳಲ್ಲಿ ಎಲ್ಲಾ ಮಕ್ಕಳು ಸರಿಯಾಗಿ ಕುಳಿತುಕೊಳ್ಳಲು ಅವಕಾಶವಿದೆ. ಮೈಸೂರು ಉತ್ತರದ 05 ಶಾಲೆಗಳಲ್ಲಿ ಕುಳಿತುಕೊಳ್ಳಲು ಅವಕಾಶವಿದೆ. ಆದರೆ ಇವು ಧೂಳು,

ಕಸ, ಕಡ್ಡಿಯಿಂದ ಮುಕ್ತವಾಗಿರುವುದಿಲ್ಲ. ಎರಡು ತಾಲ್ಲೂಕಿನಎಲ್ಲಾ ಶಾಲೆಗಳಲ್ಲಿ ಗಾಳಿ–ಬೆಳಕಿನ ವ್ಯವಸ್ಥೆ ಉತ್ತಮವಾಗಿರುವುದನ್ನು ಗಮನಿಸಿದೆ.

- ಕಲಿಕೆಯ ಮೇಲೆ ಬೋಧನಾ ಕಲಿಕಾ ಸಾಮಾಗ್ರಿಗಳು ಪರಿಣಾಮ ಬೀರುವಂತಿದ್ದರೂ, ಎರಡೂ ಬ್ಲಾಕಿನ ತಲಾ ಐದು ಶಾಲೆಗಳಲ್ಲಿ ಸಿದ್ದತೆ, ಬಳಕೆ ಮತ್ತು ನಿರ್ವಹಣೆ ತೃಪ್ತಿಕರವಾಗಿರುವುದಿಲ್ಲ. ಆದ ಕಾರಣ ಇದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ ಮತ್ತು ಪ್ರದರ್ಶಿಸಿದ ಕಲಿಕಾ ಸಾಮಾಗ್ರಿಗಳಲ್ಲಿ ಸ್ವಂತಿಕೆ ಇರುವುದಿಲ್ಲ.
- ಶೇ.50 ರಷ್ಟು ಶಾಲೆಗಳಲ್ಲಿ ಮಾತ್ರ ವೇಳಾಪಟ್ಟಿಗೆ ಅನುಗುಣವಾಗಿ ತರಗತಿಗಳು ನಡೆಯುತ್ತಿರುವುದು ಅಧ್ಯಯನದಿಂದ ತಿಳಿದು ಬಂದಿದೆ. ಉಳಿದ ಶಾಲೆಗಳಲ್ಲಿ ವೇಳಾಪಟ್ಟಿಗೆ ಅನುಗುಣವಾಗಿ ತರಗತಿಗಳು ನಡೆಯದಿರುವುದರಿಂದ ಶಿಕ್ಷಕರು ಪೂರ್ವಸಿದ್ದತೆ ಇಲ್ಲದೆ ತರಗತಿ ಪ್ರವೇಶಿಸುತ್ತಿರುವುದು ಕಲಿಕಾ ಸಾಧನೆ ಇಳಿಮುಖವಾಗಲು ಕಾರಣವಾಗಿದೆ.
- ಸಾಂಧರ್ಭಿಕವಾಗಿ ಕೆಲವು ತರಗತಿಗಳಲ್ಲಿ ಫ್ಲಾನಲ್‌ಬೋರ್ಡ್ ಅಳವಡಿಸಿರುತ್ತಾರೆ. ವಿದ್ಯಾರ್ಥಿಗಳು ಚಿತ್ರ ಮತ್ತು ಬರಹಗಳನ್ನು ತಿಂಗಳಿಗೊಮ್ಮೆ ಪ್ರದರ್ಶಿಸುತ್ತಿದ್ದು, ಸಾಮಾನ್ಯ ಜ್ಞಾನ ಹಾಗೂ ಸೃಜನಾತ್ಮಕ ಚಿಂತನೆಗಳನ್ನು ಯಾವುದೇ ಶಾಲೆಯಲ್ಲಿಯೂ ಪ್ರದರ್ಶಿಸಿರುವುದಿಲ್ಲ. ವಿದ್ಯಾರ್ಥಿಗಳ ಪ್ರತಿಭೆಯನ್ನು ಅಭಿವ್ಯಕ್ತಗೊಳಿಸಲು ಎಲ್ಲಾ ತರಗತಿಗಳಲ್ಲೂ ಫ್ಲಾನಲ್‌ಬೋರ್ಡ್ ವ್ಯವಸ್ಥೆ ಮಾಡಬೇಕಾಗಿದೆ ಹಾಗೂ ಸೃಜನಾತ್ಮಕ ಚಿಂತನೆಗಳಿಗೆ ಮಾರ್ಗದರ್ಶನ ನೀಡಬೇಕಾಗಿದೆ.
- ಶಾಲಾ ಶೈಕ್ಷಣಿಕ ಯೋಜನೆ ದಾಖಲೆಗಳಲ್ಲಿ ಲಭ್ಯವಾಗಿದ್ದರೂ ಅನುಷ್ಠಾನದಲ್ಲಿ ವಿಫಲವಾಗಿದೆ. ಮೈಸೂರು ಉತ್ತರದ ಕೆಲವು ಶಾಲೆಗಳಲ್ಲಿ ಸಾಫಲ್ಯ ಪರೀಕ್ಷೆಯನ್ನು ಮಾಡದೇ ಕಲಿಕಾ ಮಟ್ಟವನ್ನು ದಾಖಲಿಸಲಾಗಿದೆ. ಕಲಿಕಾ ಸಾಧನೆಯ ವಿಫಲತೆಗೆ ಇದೂ ಒಂದು ಕಾರಣವಾಗಿದೆ.
- ಶಾಲಾ ಮಂತ್ರಿಮಂಡಲವು ಎರಡು ಬ್ಲಾಕ್‌ನ ಹೆಚ್ಚು ಶಾಲೆಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ.
- ಮೈಸೂರು ಉತ್ತರದ ಅಧ್ಯಯನಕ್ಕೊಳಪಟ್ಟ ಶಾಲೆಗಳ ಎಲ್ಲಾ ತರಗತಿಗಳಲ್ಲಿಯೂ ಕಪ್ಪುಹಲಗೆ ಲಭ್ಯವಿದೆ.
- ಮೈಸೂರು ಉತ್ತರದ 03 ಶಾಲೆಗಳಲ್ಲಿ ರ್‍ಯಾಂಪ್ಸ್ ಬಳಸಲು ಯೋಗ್ಯವಾಗಿದ್ದರೆ, ಕೆ.ಆರ್.ನಗರದ 04 ಶಾಲೆಗಳಲ್ಲಿ ಉತ್ತಮವಾದ ರ್‍ಯಾಂಪ್ಸ್ ಇದ್ದು, ಬಳಸಲು ಯೋಗ್ಯವಾಗಿದೆ.
- ಎರಡು ಬ್ಲಾಕ್‌ನ ತಲಾ 04 ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರಿನ ಸೌಲಭ್ಯವಿದ್ದು, ಶೌಚಾಲಯಕ್ಕೂ ಕೂಡ ನೀರಿನ ವ್ಯವಸ್ಥೆ ಇರುವುದು ಉತ್ತಮವಾದ ಅಂಶವಾಗಿದೆ.
- ಅಗ್ನಿನಂದಕದ ಬಳಕೆಯ ಬಗ್ಗೆ ಮುಖ್ಯಶಿಕ್ಷಕರಿಗೆ ಹಾಗೂ ಅಡಿಗೆಯವರಿಗೆ ತಿಳುವಳಿಕೆ ಇದ್ದು, ಶಿಕ್ಷಕರಿಗೆ ಈ ಬಗ್ಗೆ ಅರಿವು ಇರುವುದಿಲ್ಲಎಂಬ ಅಂಶವು ಭೇಟಿಯ ಸಮಯದಲ್ಲಿ ತಿಳಿದುಬಂದಿದೆ.
- ಮೈಸೂರು ಉತ್ತರದ ಶಾಲೆಗಳಲ್ಲಿ ಆಟದ ಮೈದಾನದ ಕೊರತೆಯಿಂದಾಗಿ ಕ್ರೀಡಾ ಸಾಮಾಗ್ರಿಗಳನ್ನು ಬಳಸದಿರುವುದು ಕಂಡು ಬಂದಿದೆ.
- ಎರಡು ತಾಲ್ಲೂಕುಗಳಲ್ಲಿಯೂ ರೇಡಿಯೋ ಕಾರ್ಯಕ್ರಮವನ್ನು ತರಗತಿ ಪ್ರಕ್ರಿಯೆಯಲ್ಲಿ ಉತ್ತಮವಾಗಿ ಬಳಸಿಕೊಂಡಿರುವುದು ಕಂಡು ಬಂದಿದೆ. ರೇಡಿಯೋಕಾರ್ಯಕ್ರಮದ ಚಟುವಟಿಕೆಗಳನ್ನು ಬೇರೆ ವಿಷಯಗಳಿಗೆ ಸಂಯೋಜನೆ ಮಾಡುತ್ತಿರುವುದು ಉತ್ತಮವಾದ ಅಂಶವಾಗಿದೆ.
- ಶಾಲೆಯಲ್ಲಿ ಗಣಕಯಂತ್ರ ಸೌಲಭ್ಯವಿದ್ದರೂ ಮೈಸೂರು ಉತ್ತರದ ಯಾವುದೇ ಶಾಲೆಯಲ್ಲಿಯೂ ಇದನ್ನು ಬೋಧನೆಗೆ ಪೂರಕವಾಗಿ ಬಳಸುತ್ತಿರುವುದಿಲ್ಲ. ಕೆ.ಆರ್.ನಗರ ತಾಲ್ಲೂಕಿನಲ್ಲಿಯೂ ಇದೇ ಪರಿಸ್ಥಿತಿ ಮುಂದುವರೆದಿದೆ.

15. **ಮೀನಾ ತಂಡಗಳ ಮೂಲಕ ಯಾವ ಸಾಮಾಜಿಕ ಶೈಕ್ಷಣಿಕ ಚಟುವಟಿಕೆಗಳನ್ನು ಕೈಗೊಂಡಿರುತ್ತೀರಿ.**

- ನಿರಂತರವಾಗಿ ಗೈರುಹಾಜರಾಗುವ ಹೆಣ್ಣುಮಕ್ಕಳ ಮನೆಗೆ ಭೇಟಿ ನೀಡಿ ಪೋಷಕರ ಮನವೊಲಿಸುವುದು
- ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಜಾಗೃತಿಯನ್ನು ಸಮುದಾಯದಲ್ಲಿ ಮೂಡಿಸಲು ಸ.ಹಿ.ಪ್ರಾ.ಶಾಲೆ ಅರ್ಜುನಹಳ್ಳಿ, ಕೆ.ಆರ್.ನಗರ ಇಲ್ಲಿ ಬೀದಿ ನಾಟಕಗಳನ್ನು ಪ್ರದರ್ಶಿಸಲಾಗಿದೆ.
- ಮೈಸೂರು ಉತ್ತರ ವಲಯ ಶಾಲೆಗಳಲ್ಲಿ ತಂಡ ರಚನೆಯಾಗದಿರುವುದು ಹಾಗೂ ತಂಡವಿರುವ ಕಡೆ ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳದಿರುವುದು ಕಂಡು ಬಂದಿದೆ.

16. **ಕಂಪ್ಯೂಟರ್ ಸೌಲಭ್ಯವನ್ನು ಬಳಸುತ್ತಿದ್ದಲ್ಲಿ ಉದಾಹರಣೆಯೊಂದಿಗೆ ವಿವರಿಸುವುದು.**

- ಸ.ಹಿ.ಪ್ರಾ.ಶಾಲೆ ಅರ್ಜುನಹಳ್ಳಿ ಶಾಲೆಯಲ್ಲಿ ಇಂಗ್ಲೀಷ್ ಭಾಷೆಯಲ್ಲಿ ರೈಮ್ಸ್ ಹಾಗೂ ಪಠ್ಯವಿಷಯಗಳನ್ನು ಸುಲಭವಾಗಿ ಬೋಧಿಸುವಲ್ಲಿ ಬಳಸಲಾಗುತ್ತಿದೆ.
- ಇದೇ ಶಾಲೆಯಲ್ಲಿ ದೈನಂದಿನ ಜೀವನದಲ್ಲಿ ರಾಸಾಯನಿಕಗಳು ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಯೋಗಗಳನ್ನು ತೋರಿಸಲಾಗಿದೆ.
- ಶಾಲೆಯಲ್ಲಿ ರಾಸಾಯನಿಕಗಳು ಲಭ್ಯವಿಲ್ಲದಿದ್ದರೂ ಕಂಪ್ಯೂಟರ್ ಸಹಾಯದಿಂದ ಅಮೂರ್ತ ಕಲ್ಪನೆಗಳನ್ನು ಮೂರ್ತಿಕರಿಸುತ್ತಿರುವುದು ಉತ್ತಮವಾದ ಅಂಶವಾಗಿದೆ.

17. **ವಿಜ್ಞಾನ ಪ್ರಯೋಗಾಲಯದ ಉಪಕರಣಗಳನ್ನು ತರಗತಿ ಪ್ರಕ್ರಿಯೆಯಲ್ಲಿ ಬಳಸಿರುವ ಎರಡು ಉದಾಹರಣೆ ಕೊಡಿ:**

- ಗಾಳಿಯಲ್ಲಿ ಆಮ್ಲಜನಕ ಪ್ರಮಾಣ, 6 ಮತ್ತು 7ನೇ ತರಗತಿಗೆ ಗಾಳಿಯ ಗುಣಲಕ್ಷಣಗಳು ಲಿಟ್ಮಸ್ ಕಾಗದದ ತಯಾರಿಕೆ.
- ನ್ಯೂಟನ್ ಚಲನೆಯ ನಿಯಮಗಳು– ಜಡತ್ವದ ಪರಿಕಲ್ಪನೆ
- ಹೆಚ್ಚಿನ ಶಾಲೆಗಳಲ್ಲಿ ಪ್ರಯೋಗಾಲಯದ ಉಪಕರಣಗಳು ಲಭ್ಯವಿರುವುದಿಲ್ಲ ಎಂದು ತಿಳಿಸಿರುತ್ತಾರೆ.
- ಸೌಲಭ್ಯ ಸಂಪನ್ಮೂಲಗಳನ್ನು ಬಳಸಿಕೊಂಡು ಪ್ರಯೋಗದ ಮೂಲಕ ಜ್ಞಾನವನ್ನು ನೀಡುವುದರಿಂದ ಜ್ಞಾನದ ಸಂರಚನೆ ಸಾಧ್ಯವಿದೆ. ಈ ನಿಟ್ಟಿನಲ್ಲಿ ಮುಖ್ಯ ಶಿಕ್ಷಕರು ಹಾಗೂ ಸಂಬಂಧಪಟ್ಟ ಶಿಕ್ಷಕರು ಆಲೋಚಿಸಬೇಕಾಗಿದೆ.

18. **ಪಡೆದ ತರಬೇತಿಯನ್ನು ತರಗತಿ ಬೋಧನೆಯಲ್ಲಿ ಅನುಷ್ಠಾನ ಮಾಡುವಾಗ ಎದುರಿಸಿದ ತೊಡಕುಗಳನ್ನು ಹೆಸರಿಸಿ.**

- ಗುಂಪು ಚಟುವಟಿಕೆ ನಿರ್ವಹಣೆ – ನೈಸರ್ಗಿಕ ಸಂಪನ್ಮೂಲಗಳು
- ಐ.ಸಿ.ಟಿ ತರಬೇತಿ – ತರಗತಿಯಲ್ಲಿ ಆಂಗ್ಲಭಾಷೆಯ ಬಳಕೆ
- ಕೆಲವು ಮಕ್ಕಳು ಆಗಾಗ್ಗೆ ಗೈರು ಹಾಜರಾರುವುದು

19. **ಎಷ್ಟು ವಿದ್ಯಾರ್ಥಿಗಳು ಗ್ರಂಥಾಲಯದ ಪುಸ್ತಕಗಳನ್ನು ಓದಿದ ನಂತರ ವಿಷಯವನ್ನು ಹಂಚಿಕೊಂಡಿದ್ದಾರೆಯೇ?**

- ಎಲ್ಲಾ ಶಾಲೆಗಳಲ್ಲಿಯೂ ಪ್ರಾರ್ಥನಾ ಸಮಯದಲ್ಲಿ ಗ್ರಂಥಾಲಯದ ಪುಸ್ತಕದಲ್ಲಿನ ಅಂಶಗಳ ಬಗ್ಗೆ ವಿಷಯವನ್ನು ಹಂಚಿಕೊಂಡಿರುವುದು ತಿಳಿದು ಬಂದಿದೆ.6 ಮತ್ತು 7ನೇ ತರಗತಿಗಳಲ್ಲಿ ಕೆಲವು ಮಕ್ಕಳು ಗ್ರಂಥಾಲಯದ ಪುಸ್ತಗಳನ್ನು ಓದಿದ ನಂತರ ವಿಷಯವನ್ನು ಹಂಚಿಕೊಂಡಿರುವುದು ಕಂಡುಬಂದಿದೆ.ಆದರೆ ಈ ಮಕ್ಕಳ ಸಂಖ್ಯೆ ತೀರಾ ಕಡಿಮೆಯಿದೆ.
- ಎಲ್ಲಾ ಶಾಲೆಗಳಲ್ಲಿಯೂ ಪುಸ್ತಕದ ಅಭಿರುಚಿ ಬೆಳೆಸಿ ಜ್ಞಾನದ ಹಂಚಿಕೆಗೆ ಸೂಕ್ತ ಮಾರ್ಗದರ್ಶನ ನೀಡುವ ಅಗತ್ಯವಿದೆ.

20.ನೀರಿನ ಮರು ಬಳಕೆ ಯಾವ ರೀತಿಯಲ್ಲಿ ಆಗುತ್ತಿದೆ?

- ಯಾವುದೇ ಶಾಲೆಯಲ್ಲಿಯೂ ಸ್ವಚ್ಚತಾ ಕಾರ್ಯಗಳಿಗೆ ಬಳಸಿರುದ ನೀರನ್ನು ಸೂಕ್ತ ರೀತಿಯಲ್ಲಿ ಮರುಬಳಕೆ ಮಾಡಿರುವುದಿಲ್ಲ. ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರು ಮಕ್ಕಳಲ್ಲಿ ಜಾಗೃತಿ ಮೂಡಿಸಿ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ.







ಮಕ್ಕಳ ಇಚ್ಛೆಯಂತೆ–ಕ್ರೀಡೋಪಕರಣಗಳ ಖರೀದಿಸಿಎಎಲ್‌ಸಿ ಶಾಲೆ ದೊಡ್ಡೇಕೊಪ್ಪಲು–ಗಣಕ ಯಂತ್ರ ಕೊಠಡಿ

ಸಹಿಪ್ರಾ ಶಾಲೆ ಕಡೇಮನುಗನ ಹಳ್ಳಿ, ಹುಣಸೂರು





ಕೈತೊಳೆಯುವ ನೀರಿನ ವ್ಯವಸ್ಥೆ

ಸ್ವಚ್ಚ ಶೌಚಾಲಯ





ಹ್ಯಾಂಡ್ಸ್ ಆನ್ ಮತ್ತು ಮೈಂಡ್ಸ್ ಆನ್ ಕಲಿಕೋಪಕರಣಗಳು

ಶಿಸ್ತಿನಿಂದ ಶೌಚಾಲಯದೆಡೆಗೆ ಸಾಗುತ್ತಿರುವ ರತ್ನಪುರಿ ಕಾಲೊನಿಯ ಮಕ್ಕಳು

## ಮುಖ್ಯ ಶಿಕ್ಷಕರು

ನಾಯಕತ್ವದ ಪರಿಕಲ್ಪನೆ ಎಲ್ಲಾ ಹಂತದಲ್ಲಿಯೂ ಮತ್ತು ಎಲ್ಲೆಡೆಯಲ್ಲಿಯೂ ಕಾಣಿಸಿಕೊಳ್ಳುವಂತದ್ದು, ಅದರಲ್ಲೂ ಶೈಕ್ಷಣಿಕ ವ್ಯವಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುವಂತಹವರಿಗೆ ಇದು ಯಾವತ್ತೂ ಜೊತೆ ನಿಲ್ಲಬೇಕು.ಈ ಹಿನ್ನೆಲೆಯಲ್ಲಿ ಶಾಲಾ ಹಂತದ ಶೈಕ್ಷಣಿಕ ನಾಯಕತ್ವ ಶಾಲೆಯೊಂದರ ಸಮಗ್ರ ಪ್ರಗತಿಗೆ ಪ್ರಧಾನವಾದದ್ದು, ಇದರಲ್ಲೂ ಮೂರು ಆಯಾಮಗಳಿವೆ. ಶೈಕ್ಷಣಿಕ ನಾಯಕತ್ವ, ಆಡಳಿತಾತ್ಮಕ ನಾಯಕತ್ವ ಮತ್ತು ಸಮುದಾಯ ಆಧಾರಿತ ನಾಯಕತ್ವ.ಪ್ರಜಾಸತ್ತಾತ್ಮಕ, ಜಾತ್ಯತೀತ ಹಾಗೂ ಸಮತೆ–ಸಮಾಜವಾದದ ಪ್ರಮುಖ ಗುಣಲಕ್ಷಣಗಳನ್ನು ನಾಯಕತ್ವ ಹೊಂದಿದೆ.ಸರ್ವಾಧಿಕಾರಿ ಧೋರಣೆಯಿಂದ ಅಪೇಕ್ಷಿತ ಗುರಿ ಸಾಧನೆಯನ್ನು ತಲುಪಲು ಸಾಧ್ಯವಾಗದು. ಕಡ್ಡಾಯ ಮೂಲಭೂತ ಶಿಕ್ಷಣ ಹಕ್ಕು : 2009 ರ ಪ್ರಕಾರ ಮೇಲ್ಕಾಣಿಸಿದ ಗುಣಲಕ್ಷಣಗಳೊಂದಿಗೆ ಶಾಲೆಗಳಲ್ಲಿ ಮುಖ್ಯ ಶಿಕ್ಷಕರು ಕರ್ತವ್ಯ ನಿರ್ವಹಿಸುವುದು ಬಹು ಮುಖ್ಯ ಈ ಬಗ್ಗೆ ನಿರಂತರವಾಗಿ ಬದ್ಧತೆಯನ್ನು ವ್ಯಕ್ತಪಡಿಸಬೇಕಾಗಿದೆ.

ಮಾನವ ಸಂಪನ್ಮೂಲ ಮತ್ತು ಆರ್ಥಿಕ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಶಾಲೆಯ ಗುಣಮಟ್ಟವನ್ನು ಉನ್ನತೀಕರಿಸುವುದು ಅಂತಿಮವಾಗಿ ಆ ಶಾಲೆಯ ನಾಯಕರಾದ ಮುಖ್ಯ ಶಿಕ್ಷಕರದ್ದಾಗಿರುತ್ತದೆ.

**ಕೋಷ್ಟಕ 56:**

| ಕ್ರಮ ಸಂಖ್ಯೆ | ಪ್ರಶ್ನೆಗಳು | ಮೈಸೂರು ಉತ್ತರ | ಕೆ.ಆರ್.ನಗರ |
|---|---|---|---|
| | | ಹೌದು | ಹೌದು |
| 1 | ಎಸ್.ಎಂ.ಎಫ್ ನಮೂನೆ ಬಳಸಿ ಶಾಲೆಯ ಸ್ವಾವಲೋಕನ ಮಾಡಿಕೂಂಡಿರುವಿರೆ? | 3 | 3 |
| 2 | ಇದುವರೆಗೆ ಎಸ್.ಎಂ.ಎಫ್ ಅವಲೋಕನದಲ್ಲಿ ಕಂಡುಕೊಂಡ ಕೊರತೆಗಳನ್ನು ಪರಿಹರಿಸುವ ಪ್ರಯತ್ನ ನಡೆದಿದೆಯೇ? | 2 | 3 |
| 3 | ಎಸ್.ಎಂ.ಎಫ್ ಸ್ವಾವಲೋಕನದಿಂದ ದೊರೆತ ಅಂಶಗಳ ಬಗ್ಗೆ ಶಿಕ್ಷಕರೊಂದಿಗೆ ಚರ್ಚಿಸಿ ಶೈಕ್ಷಣಿಕ ಗುರಿ ನಿಗದಿಯಾಗಿದೆಯೇ? | 2 | 3 |
| 4 | ವೇಳಾಪಟ್ಟಿಗೆ ಅನುಗುಣವಾಗಿ ತರಗತಿಗಳು ನಡೆಯುತ್ತಿವೆಯೇ? | 3 | 3 |
| 5 | ಎಸ್.ಡಿ.ಪಿ/ ವಾರ್ಷಿಕ ಕ್ರಿಯಾಯೋಜನೆ ತಯಾರಿಸುವಾಗ ಎಸ್.ಎಂ.ಎಫ್ ಸ್ವಾವಲೋಕನದ ಅಂಶಗಳಿಗೆ ಆದ್ಯತೆ ನೀಡಲಾಗಿದೆಯೇ? | 4 | 3 |
| 6 | ಶಾಲಾ ಅನುದಾನ ಮತ್ತು ಸಂಪನ್ಮೂಲ ಬಳಕೆಯಲ್ಲಿ ಶಿಕ್ಷಕರು ಹಾಗೂ ಮಕ್ಕಳ ಅಭಿಪ್ರಾಯಗಳಿಗೆ ಅವಕಾಶ ನೀಡಿದ್ದಾರೆಯೇ? | 3 | 5 |
| 7 | ಎಲ್ಲಾ ಶಿಕ್ಷಕರ ಪಾಠಬೋಧನೆಯನ್ನು ಪ್ರತಿ ಮಾಹೆಗೊಮ್ಮೆ ವೀಕ್ಷಿಸಿ ಹಿಮ್ಮಾಹಿತಿ ನೀಡಲಾಗುತ್ತಿದ್ದೆಯೆ? | 1 | 2 |
| 8 | ಶೈಕ್ಷಣಿಕ ಗುಣಮಮಟ್ಟಕ್ಕೆ ಸಂಬಂಧಿಸಿದಂತೆ ವಾರಕೊಮ್ಮೆ, ಶಿಕ್ಷಕರ ಸಭೆಯಲ್ಲಿ ಚರ್ಚಿಸಲಾಗುತ್ತಿದೆಯೇ? | 4 | 3 |
| 9 | ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳಿಗೆ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದೆಯೇ? | 3 | 3 |
| 10 | ಶಾಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಿ.ಆರ್.ಪಿ. ಗಳು ಶಿಕ್ಷಕವಾರು, ವಿಷಯವಾರು, ತರಗತಿವಾರು ಹಿಮ್ಮಾಹಿತಿ ನೀಡಿರುತ್ತಾರೆಯೇ? | 2 | 3 |
| 11 | ದಾಖಲಾದ ಒ.ಒ.ಎಸ್.ಸಿ ಮಕ್ಕಳ ಹಾಜರಾತಿ ಸಮರ್ಪಕವಾಗಿದೆಯೇ? | 2 | 1 |
| 12 | ಸಿ.ಡಬ್ಲೂ.ಎಸ್.ಎನ್ ಮಕ್ಕಳ ಹಾಜರಾತಿ ಸಮರ್ಪಕವಾಗಿದೆಯೇ? | 4 | 2 |
| 13 | ಗಂಡು ಮತ್ತು ಹೆಣ್ಣು ಮಕ್ಕಳ ಹಾಜರಾತಿಯಲ್ಲಿ ಹೆಚ್ಚಿನ ವ್ಯತ್ಯಾಸವಿದೆಯೇ? | 0 | 0 |

**ಮುಖ್ಯಶಿಕ್ಷಕರ ಪ್ರಶ್ನಾವಳಿಯ ವಿಶ್ಲೇಷಣೆ:**

- ಎಸ್ಎಮ್ಎಫ್ ನಮೂನೆಯನ್ನು ಬಳಸಿ ಶಾಲೆಯ ಸ್ವಾವಲೋಕನ ಮಾಡಿಕೊಂಡಿರುವುದಾಗಿ ಶೇ50ರಷ್ಟುಮುಖ್ಯ ಶಿಕ್ಷಕರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.ಆದರೆ ಶಾಲಾ ಭೇಟಿ ವೇಳೆಯಲ್ಲಿ ಮುಖ್ಯ ಶಿಕ್ಷಕರ ಜೊತೆ ಚರ್ಚಿಸಿದಾಗ ಸ್ವಾವಲೋಕನದ ಬಗ್ಗೆ ಸ್ಪಷ್ಟತೆ ಇಲ್ಲದಿರುವುದನ್ನು ಅಧ್ಯಯನ ತಂಡವು ಗಮನಿಸಿದೆ.
- ಸ್ವಾವಲೋಕನವೇ ಸ್ಪಷ್ಟವಾಗದಿರುವುದರಿಂದ ಅವುಗಳು ಶಾಲೆಯ ಯೋಜನೆಗಳಲ್ಲಿ ಅಡಕವಾಗದಿರುವುದು ಅಧ್ಯಯನದಿಂದ ಕಂಡು ಬಂದಿದೆ.
- ಮುಖ್ಯ ಶಿಕ್ಷಕರು ಎಸ್ಎಮ್ಎಫ್ ಸ್ವಾವಲೋಕನದಿಂದ ದೊರೆತ ಅಂಶಗಳನ್ನು ಶಿಕ್ಷಕರು, ಎಸ್‌ಡಿಎಂಸಿ ಮತ್ತು ಸಮುದಾಯದವರೊಂದಿಗೆ ಚರ್ಚಿಸಿರುವುದಿಲ್ಲ. ಎಲ್ಲಿಯವರೆಗೆ ಈ ಅಂಶಗಳು ಭಾಗೀದಾರರೊಂದಿಗೆ ಚರ್ಚೆಯಾಗುವುದಿಲ್ಲವೋ ಅಲ್ಲಿಯವರೆಗೆ ಗುಣಮಟ್ಟದಲ್ಲಿ ಸುಧಾರಣೆ ಮಾಡಲು ಸಾಧ್ಯವಿಲ್ಲ.
- ಅಧ್ಯಯನಕ್ಕೊಳಪಟ್ಟ ಶಾಲೆಗಳಲ್ಲಿ ಮೈಸೂರು ಉತ್ತರದ ಕೇವಲ ಒಂದು ಶಾಲೆಯಲ್ಲಿ ಹಾಗೂ ಕೆ.ಆರ್. ನಗರದ ಎರಡು ಶಾಲೆಗಳಲ್ಲಿ ಎಲ್ಲಾ ಶಿಕ್ಷಕರ ಪಾಠಬೋಧನೆಯನ್ನು ಪ್ರತಿ ಮಾಹೆಗೊಮ್ಮೆ ವೀಕ್ಷಿಸಿ ಹಿಮ್ಮಾಹಿತಿ ನೀಡಲಾಗುತ್ತಿದ್ದು ಸೂಕ್ತ ಮಾರ್ಗದರ್ಶನದ ಅವಶ್ಯಕತೆಯಿದೆ.
- ಅಧ್ಯಯನಕ್ಕೊಳಪಟ್ಟ ಶಾಲೆಗಳಲ್ಲಿ ಶೈಕ್ಷಣಿಕ ಗುಣಮಟ್ಟಕ್ಕೆ ಸಂಬಂಧಿಸಿದಂತೆ ವಾರಕೊಮ್ಮೆ, ಶೇ50ರಷ್ಟುಶಾಲೆಗಳಲ್ಲಿ ಮಾತ್ರಚರ್ಚಿಸಲಾಗುತ್ತಿದ್ದು ಉಳಿದಶಾಲೆಗಳಲ್ಲಿ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆಹೆಚ್ಚಾಗಿ ಚರ್ಚಿಸಲಾಗುತ್ತಿದೆ.
- ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳಿಗೆ ವಿಶೇಷ ತರಗತಿಗಳನ್ನು ಶಾಲಾ ಅವಧಿಯಲ್ಲಿ ನಡೆಸಲಾಗುತ್ತಿದೆ.
- ಶಾಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಿ.ಆರ್.ಪಿ.ಗಳು ಶಿಕ್ಷಕವಾರು, ವಿಷಯವಾರು, ತರಗತಿವಾರು ಹಿಮ್ಮಾಹಿತಿ ನೀಡುತ್ತಿರುವುದಾಗಿ ತಿಳಿಸಿದ್ದರೂ ದಾಖಲೆಗಳಲ್ಲಿ ಲಭ್ಯವಿರುವುದಿಲ್ಲ. ಗುಣಾತ್ಮಕ ಕಲಿಕೆಗೆ ಸೂಕ್ತ ಹಿಮ್ಮಾಹಿತಿ ಅಗತ್ಯವಿದೆ.
- ದಾಖಲಾದ ಒ.ಒ.ಎಸ್.ಸಿ ಮಕ್ಕಳ ಹಾಜರಾತಿ ಮತ್ತು ಸಿ.ಡಬ್ಲ್ಯೂ.ಎಸ್.ಎನ್ ಮಕ್ಕಳ ಹಾಜರಾತಿ ಸಮರ್ಪಕತೆಯು ಅತೃಪ್ತಿಕರವಾಗಿದೆ.
- ಆದರೆಗಂಡು ಮತ್ತು ಹೆಣ್ಣು ಮಕ್ಕಳ ಹಾಜರಾತಿಯಲ್ಲಿ ಹೆಚ್ಚಿನ ವ್ಯತ್ಯಾಸವಿರುವುದಿಲ್ಲ.

**ಎಸ್ಎಮ್ಎಫ್ ನಮೂನೆಯ ಬಗ್ಗೆ ಅಭಿಪ್ರಾಯಗಳು:**

- ಎ+ ಶ್ರೇಣಿಯನ್ನು ಹೊರತು ಪಡಿಸಿ ಉಳಿದ ಶ್ರೇಣಿಯಲ್ಲಿರುವ ಮಕ್ಕಳಿಗೆ ನಿಗದಿತ ಸಾಮರ್ಥ್ಯ ಗಳಿಸಲು ಯೋಜಿಸಿಕೊಳ್ಳಲು ಅನುಕೂಲವಾಗಿದೆ.
- ಅನಗತ್ಯ ತರಬೇತಿಗಳಿಗೆ ಶಿಕ್ಷಕರು ಹೆಚ್ಚಾಗಿ ಹಾಜರಾಗಬೇಕಾದುದರಿಂದ ಶಾಲೆಗಳಲ್ಲಿ ಮಕ್ಕಳಿಗೆ ಕಲಿಕಾ ಕೊರತೆ ಉಂಟಾಗುತ್ತಿದೆ.ಶಿಕ್ಷಕರು ಶಾಲೆಯಲ್ಲಿ ಹೆಚ್ಚಾಗಿ ಉಳಿಯುವಂತಾಗಬೇಕು.
- ಈ ಸಾಲಿನ ಎಸ್ಎಮ್ಎಫ್ ನಮೂನೆಯು ಸರಳವಾಗಿದ್ದು, ತರಗತಿವಾರು, ವಿಷಯವಾರು ಹಾಗೂ ಲಿಂಗವಾರು ಕಲಿಕಾ ಪ್ರಗತಿಯನ್ನು ದಾಖಲಿಸುವುದು ಸುಲಭವಾಗಿದೆ.
- ಶಾಲೆಯ ಭೌತಿಕ ಸೌಲಭ್ಯಗಳ ಕೊರತೆಯ ಬಗ್ಗೆ ಎಸ್‌ಡಿಎಂಸಿಯವರ ಜೊತೆ ಚರ್ಚಿಸಲಾಗಿದೆ.

- ಆದರೆ ಕಲಿಕೆಯ ಪ್ರಗತಿ, ಮಕ್ಕಳ ಗೈರುಹಾಜರಿ ಹಾಗೂ ಮಕ್ಕಳ ಶಾಲೆ ಬಿಡುವಿಕೆಯನ್ನು ಎಸ್‌ಡಿಎಂಸಿಯವರು ಗಂಭೀರವಾಗಿ ಪರಿಗಣಿಸಿರುವುದಿಲ್ಲ. ಇದು ಕೇವಲ ಶಿಕ್ಷಕರ ಜವಾಬ್ದಾರಿ ಮಾತ್ರ ಆಗಿದೆ.

1. ಶಾಲೆಯ ಹಾಜರಾತಿ ಹೆಚ್ಚಿಸುವಲ್ಲಿ ನಿಮ್ಮ ಶಾಲೆಯ ಆಕರ್ಷಣೆ ವಿಷಯಗಳಾವುವು?
    - ನಿರಂತರವಾಗಿ ಮೂರು ದಿನ ಗೈರುಹಾಜರಾಗುವ ಮಕ್ಕಳ ಮನೆಗೆ ಭೇಟಿ ನೀಡುವುದು.
    - ಪ್ರೋತ್ಸಾಹಕ ಯೋಜನೆಗಳನ್ನು ಕಾಳಜಿಯಿಂದ ಜಾರಿಗೊಳಿಸುವುದು.
    - ತರಗತಿಯಲ್ಲಿ ಸಹಪಠ್ಯ ಚಟುವಟಿಕೆಗಳನ್ನು ಆಯೋಜಿಸುವುದು.
    - ತರಗತಿಯಲ್ಲಿ ಹೆಚ್ಚು ಹೆಚ್ಚು ಚಟುವಟಿಕೆಗಳನ್ನು ಮಕ್ಕಳಿಂದಲೇ ಮಾಡಿಸುವುದು.
2. ಎಸ್.ಡಿ.ಪಿ ಅನುಷ್ಠಾನದಲ್ಲಿ ಭಾಗೀದಾರರ ತೊಡಗಿಸಿಕೊಳ್ಳುವಿಕೆ ಹೇಗಿದೆ?
    - ಎಸ್‌ಡಿಪಿ ಅನುಷ್ಠಾನದಲ್ಲಿ ಭಾಗೀದಾರರ ಭಾಗವಹಿಸುವಿಕೆಯು ಸಾಧಾರಣವಾಗಿದೆ.
    - ಶೈಕ್ಷಣಿಕವಾಗಿ ತೊಡಗಿಕೊಳ್ಳುವಲ್ಲಿ ಸಮುದಾಯದ ಜನತೆ ವಿಫಲರಾಗುತ್ತಿದ್ದಾರೆ.
3. ಸಮುದಾಯವನ್ನು ವಿದ್ಯಾರ್ಥಿಗಳ ಕಲಿಕಾಕೇಂದ್ರವಾಗಿಸಲು ನೀವು ಕೈಗೊಂಡಿರುವ ಕ್ರಮಗಳು
    - ಸಮಾರಂಭ ಮತ್ತು ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಪೋಷಕರ ಹಾಜರಾತಿ ಕಡ್ಡಾಯ
    - ಆರ್‌ಎಫ್‌ಟಿ ಸಂಸ್ಥೆಯವರು ಸಂಜೆ ವೇಳೆಯಲ್ಲಿ ವಿದ್ಯಾರ್ಥಿಗಳಿಗೆ ಪರಿಹಾರ ಬೋಧನೆ ಕೈಗೊಳ್ಳುತ್ತಿದ್ದಾರೆ.
4. ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಮುಖ್ಯ ವಾಹಿನಿಗೆ ತರಲು ನಿಮ್ಮ ಪ್ರಯತ್ನಗಳೇನು?
    - ಗೈರು ಹಾಜರಾಗುವ ವಿದ್ಯಾರ್ಥಿಗಳ ಮನೆಗೆ ಭೇಟಿ ನೀಡಿ ಮಕ್ಕಳು ಶಾಲೆಗೆ ಹಾಜರಾಗುವಂತೆ ಮನವೊಲಿಸಲಾಗಿದೆ.



**ಸ್ವಾವಲೋಕನ ಏಕಿಲ್ಲ? ಮುಖ್ಯ ಶಿಕ್ಷಕರೊಂದಿಗೆ ಅಧ್ಯಯನ ತಂಡ**

**ಕೋಷ್ಟಕ 57:**

| ಕ್ರಮ ಸಂಖ್ಯೆ | ಪ್ರಶ್ನೆಗಳು | ಮೈಸೂರು ಉತ್ತರ | ಕೆ.ಆರ್.ನಗರ |
|---|---|---|---|
| | | ಹೌದು | ಹೌದು |
| 1 | ವಿದ್ಯಾರ್ಥಿಗಳು ಸರ್ಕಾರ ಒದಗಿಸುವ ಸವಲತ್ತುಗಳನ್ನು ಸದುಪಯೋಗ ಪಡಿಸಿಕೊಂಡಿದ್ದಾರೆಯೇ? | 6 | 6 |
| 2 | ಅಕ್ಷರ ದಾಸೋಹ ಯೋಜನೆ ಜಾರಿಯಾದ ನಂತರ ಮಕ್ಕಳ ಹಾಜರಾತಿಯಲ್ಲಿ ಉಂಟಾದ ಶೇಕಡಾ ಹೆಚ್ಚಳ | 45% | 56% |
| 3 | ಅಕ್ಷರ ದಾಸೋಹ ನಿರ್ವಹಣೆಗೆ ತಂದೆ ತಾಯಿಯರು ಮತ್ತು ದಾನಿಗಳಿಂದ ನೇರವು ದೊರಕಿದೆಯೇ? | 0 | 1 |
| 4 | ಹೆಣ್ಣು ಮಕ್ಕಳ ವಿದ್ಯಾರ್ಥಿ ವೇತನ ಜಾರಿಯಾದ ನಂತರ ಹೆಣ್ಣು ಮಕ್ಕಳ ದಾಖಲಾತಿ ಉತ್ತಮಗೊಂಡಿದೆಯೇ? | 3 | 5 |
| 5 | ಇಲಾಖೆ ಜಾರಿಗೊಳಿಸಿರುವ ಯೋಜನೆ/ಶಾಲಾ ಚಟುವಟಿಕೆಗಳು ಪೋಷಕರಿಗೆ ಹಾಗೂ ಸಮುದಾಯಕ್ಕೆ ತೃಪ್ತಿ ತಂದಿದೆಯೇ? | 6 | 6 |

- ಅಧ್ಯಯನ ಕೈಗೊಂಡಿರುವ ಎರಡು ತಾಲ್ಲೂಕುಗಳ 6 ಶಾಲೆಗಳಲ್ಲೂ ವಿದ್ಯಾರ್ಥಿಗಳು ಸರ್ಕಾರ ಒದಗಿಸುವ ಸವಲತ್ತುಗಳನ್ನು ಸದುಪಯೋಗ ಪಡಿಸಿಕೊಂಡಿರುವುದು ಧನಾತ್ಮಕ ಅಂಶವಾಗಿರುತ್ತದೆ.
- ಅಕ್ಷರ ದಾಸೋಹ ಯೋಜನೆ ಜಾರಿಯಾದ ನಂತರ ಮಕ್ಕಳ ಹಾಜರಾತಿಯಲ್ಲಿ ಸರಾಸರಿ ಶೇ 50 ರಷ್ಟು ಹೆಚ್ಚಳ ಕಂಡು ಬಂದಿರುತ್ತದೆ. ನಗರ ವಲಯಕ್ಕಿಂತ ಕೆ.ಆರ್ ನಗರ ತಾಲ್ಲೂಕಿನಲ್ಲಿ ಅಕ್ಷರ ದಾಸೋಹದ ಪ್ರಭಾವ ಹೆಚ್ಚಾಗಿರುವುದು ಕಂಡು ಬಂದಿದೆ.
- ಅಕ್ಷರ ದಾಸೋಹ ನಿರ್ವಹಣೆಗೆ ತಂದೆ ತಾಯಿಯರು ಮತ್ತು ದಾನಿಗಳಿಂದ ನೆರವು ಎರಡು ತಾಲ್ಲೂಕುಗಳಲ್ಲೂ ಅತ್ಯಂತ ಕಡಿಮೆ ಇರುವುದು ಸ್ಪಷ್ಟವಾಗಿದೆ. ಈ ನಿಟ್ಟಿನಲ್ಲಿ ಶಾಲಾ ಶಿಕ್ಷಕರು ಪೋಷಕರ ಮನವನ್ನು ಒಲಿಸಬೇಕಾಗಿದೆ.
- ಹೆಣ್ಣು ಮಕ್ಕಳ ವಿದ್ಯಾರ್ಥಿ ವೇತನ ಜಾರಿಯಾದ ನಂತರ ಉತ್ತರ ವಲಯದ 3 ಶಾಲೆಗಳಲ್ಲಿ ಮತ್ತು ಕೆ.ಆರ್ ನಗರದ 5 ಶಾಲೆಗಳಲ್ಲಿ ಹೆಣ್ಣು ಮಕ್ಕಳ ದಾಖಲಾತಿ ಉತ್ತಮಗೊಂಡಿದೆ.
- ಇಲಾಖೆ ಜಾರಿಗೊಳಿಸಿರುವ ಯೋಜನೆ/ಶಾಲಾ ಚಟುವಟಿಕೆಗಳು 100% ಶಾಲೆಗಳ ಪೋಷಕರಿಗೆ ಹಾಗೂ ಸಮುದಾಯಕ್ಕೆ ತೃಪ್ತಿ ತಂದಿದೆ. ಶಿಕ್ಷಕರು ಪ್ರೋತ್ಸಾಹದಾಯಕ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ ವಿತರಣೆ ಮಾಡಿರುವುದು ಮತ್ತು ಶಿಕ್ಷಕರು ಈ ಬಗ್ಗೆ ಪೋಷಕರಲ್ಲಿ ಜಾಗೃತಿ ಮೂಡಿಸಿರುವುದು ಇದಕ್ಕೆ ಕಾರಣವಾಗಿರಬಹುದು.



ನಾನೂ ಓದಬಲ್ಲೆ..........





ಶಾಲಾ ಕಿಚನ್ ಗಾರ್ಡನ್‌ನಲ್ಲಿ- ಸಾಂಬಾರು ಈರುಳ್ಳಿ ಮತ್ತು ಮಂಗಳೂರು ಸೌತೆಕಾಯಿ- ಸಹಿಪ್ರಾ ಶಾಲೆ ಚಿಕ್ಕೇಗೌಡನ ಕೊಪ್ಪಲು






ಶುಚಿ-ರುಚಿಯಾದ ಬಿಸಿಯೂಟ






ಬಿಸಿಯೂಟದಿಂದ ಮಕ್ಕಳ ಹಾಜರಾತಿ ಹೆಚ್ಚಾಗಿದೆಯೇ?ಶಾಲೆಗೊಂದು ಅಕ್ಷಯ ಜೋಳಿಗೆ-ಊರವರ ದೇಣಿಗೆ

## ಎಸ್.ಡಿ.ಎಂ.ಸಿ/ಸಮುದಾಯದವರಿಗೆ ಪ್ರಶ್ನಾವಳಿ

### ಶಾಲೆ ಮತ್ತು ಸಮುದಾಯದ ಪಾಲ್ಗೊಳ್ಳುವಿಕೆ:

ಶಾಲೆಯ ಸಮುದಾಯದ ಅವಿಭಾಜ್ಯ ಅಂಗ.ಶಾಲಾಭಿವೃದ್ದಿ ಪ್ರಕ್ರಿಯೆಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ ಅರ್ಥಪೂರ್ಣ ಹಾಗೂ ಪರಿಣಾಮಕಾರಿಯಾಗಿದ್ದರೆ ಸಂಸ್ಥೆಯ ಪ್ರಗತಿ ಸಾಧ್ಯ.ಈ ನಿಟ್ಟಿನಲ್ಲಿ ಶಾಲಾಭಿವೃದ್ದಿಯಲ್ಲಿ ಸಮುದಾಯದ ಸಹಭಾಗಿತ್ವದ ಮಹತ್ವವನ್ನು ತಿಳಿದುಕೊಳ್ಳುವ ಅಗತ್ಯವಿದೆ.ಈ ಅಂಶವನ್ನು ಖಾತರಿಪಡಿಸಿಕೊಳ್ಳಬೇಕಾದರೆ ಶಾಲೆಗಳಲ್ಲಿ ಎಸ್.ಡಿ.ಎಂ.ಸಿಯ ರಚನೆ, ಪೋಷಕ ಶಿಕ್ಷಕ ಸಮಿತಿ ರಚನೆ, ಜನಪ್ರತಿನಿಧಿಗಳು, ಶಿಕ್ಷಣಾಸಕ್ತರು, ದಾನಿಗಳು, ಶಿಕ್ಷಣ ತಜ್ಞರು ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಸಕ್ರಿಯವಾಗಿ ಶಾಲಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು.

**ಕೋಷ್ಟಕ 58:**

| ಕ್ರಮ ಸಂಖ್ಯೆ | ಪ್ರಶ್ನೆಗಳು | ಮೈಸೂರು ಉತ್ತರ | ಕೆ.ಆರ್. ನಗರ |
|---|---|---|---|
| | | ಹೌದು | ಹೌದು |
| 1 | ಎಸ್.ಎಂ.ಎಫ್ ಸ್ವಾವಲೋಕನದಲ್ಲಿ ಕಂಡುಕೊಂಡ ಅಂಶಗಳನ್ನು ಮುಖ್ಯ ಶಿಕ್ಷಕರು ನಿಮ್ಮೊಡನೆ ಚರ್ಚಿಸಿದ್ದಾರೆಯೇ? | 5 | 2 |
| 2 | ಶಾಲೆಗೆ ಸಂಬಂದಿಸಿದ ಕಾರ್ಯಗಳಲ್ಲಿ ನೀವು ಸಕ್ರಿಯವಾಗಿ ಭಾಗವಹಿಸುತ್ತಿದ್ದೀರಾ? | 5 | 6 |
| 3 | ಪೋಷಕರು ತಮ್ಮ ಮಕ್ಕಳ ಪ್ರಗತಿ ಬಗ್ಗೆ ನಿರಂತರವಾಗಿ ಶಾಲೆಯೊಂದಿಗೆ ಸಂಪರ್ಕದಲ್ಲಿದ್ದಾರೆಯೇ? | 5 | 6 |
| 4 | ನೀವು ನಿಗದಿತವಾಗಿ ಸಭೆ ಸೇರಿ ಶಾಲಾ ಪ್ರಗತಿಯ ಬಗ್ಗೆ ಚರ್ಚಿಸಿ ಅದರಂತೆ ಕಾರ್ಯನಿರ್ವಹಿಸುತ್ತಿರುವಿರಾ? | 5 | 6 |
| 5 | ನೀವು ಹಾಗೂ ಸಹ ಶಿಕ್ಷಕರ ಸಹಕಾರದೊಂದಿಗೆ ಸಮಗ್ರ ಶಾಲಾಭಿವೃದ್ದಿ ಯೋಜನೆ ತಯಾರಿಸಲಾಗಿದೆಯೇ? | 2 | 4 |
| 6 | ನಿಮ್ಮ ಜೊತೆ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರು ಅಗತ್ಯ ಬಾಂಧವ್ಯ ಹೊಂದಿರುವರೇ? | 5 | 6 |
| 7 | ಶಿಕ್ಷಕರು ನಿಮ್ಮ ಮಗುವಿನ ಕಲಿಕೆ ಮತ್ತು ಹಾಜರಾತಿಯ ಬಗ್ಗೆ ಆಗಾಗ್ಗೆ ನಿಮಗೆ ಹಿಮ್ಮಾಹಿತಿಯನ್ನು ನೀಡುತ್ತಿರುವರೇ? | 6 | 6 |

### ಸಮುದಾಯದವರ ಪ್ರಶ್ನಾವಳಿ, ವಿಶ್ಲೇಷಣೆ ಮತ್ತು ಅರ್ಥೈಸುವಿಕೆ

- ಎಸ್.ಎಂ.ಎಫ್ ಸ್ವಾವಲೋಕನದಲ್ಲಿ ಕಂಡುಕೊಂಡ ಅಂಶಗಳನ್ನು ಮೈಸೂರು ಉತ್ತರದ 06 ಶಾಲೆಗಳಲ್ಲಿ 05 ಶಾಲೆಗಳ ಎಸ್.ಡಿ.ಎಂ.ಸಿ/ಸಮುದಾಯದವರು ತಮ್ಮೊಡನೆ ಚರ್ಚಿಸಿರುವ ಬಗ್ಗೆ ತಿಳಿಸಿರುತ್ತಾರೆ. ಆದರೆ ಪೂರಕ ದಾಖಲೆಗಳಿರುವುದಿಲ್ಲ. ಕೆ.ಆರ್.ನಗರದಲ್ಲಿ ಕೇವಲ 02 ಶಾಲೆಗಳಲ್ಲಿ ಎಸ್.ಎಂ.ಎಫ್‌ನಲ್ಲಿ ಕಂಡುಕೊಂಡ ಕೆಲವು ಅಂಶಗಳನ್ನು ಮಾತ್ರ ಮುಖ್ಯ ಶಿಕ್ಷಕರು ಚರ್ಚಿಸಿರುವುದು ಭೇಟಿಯ ಸಂದರ್ಭದಲ್ಲಿ ತಿಳಿದು ಬಂದಿದೆ.
- ಶಾಲೆಗೆ ಸಂಬಂಧಿಸಿದ ಕಾರ್ಯಗಳಲ್ಲಿ 11 ಶಾಲೆಗಳಲ್ಲಿ ಸಕ್ರಿಯವಾಗಿ ಸಮುದಾಯದವರು ಭಾಗವಹಿಸುತ್ತಿರುವುದಾಗಿ ಸಂದರ್ಶನ ಸಮಯದಲ್ಲಿ ತಿಳಿಸಿರುತ್ತಾರೆ. ಇದು ಉತ್ತಮ ಅಂಶವಾಗಿದ್ದು ಶಾಲೆಯ ಪ್ರಗತಿಗೆ ಪೂರಕವಾಗಿದೆ.
- ಶಾಲೆಗಳಲ್ಲಿ ನಡೆಯುವ ಆಚರಣೆಗಳು ಹಾಗೂ ಸಮುದಾಯ ದತ್ತ ಶಾಲಾ ಕಾರ್ಯಕ್ರಮದಲ್ಲಿ ಮಾತ್ರ ಪಾಲ್ಗೊಳ್ಳುವುದು ಸಕ್ರಿಯವಾಗಿ ಭಾಗವಹಿಸುವಿಕೆ ಎಂಬುದಲ್ಲ. ಶಾಲಾ ಚಟುವಟಿಕೆಗಳನ್ನು ಆಕರ್ಷಣೀಯಗೊಳಿಸಿದ್ದಲ್ಲಿ ಸಮುದಾಯದವರನ್ನು ಶಾಲಾ ಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಬಹುದು.

- ಆಚರಣೆಗಳಲ್ಲೇ ಶೈಕ್ಷಣಿಕ ಸಂದೇಶ ನೀಡಬಹುದೇ ಅಥವಾ ಚಟುವಟಿಕೆಯನ್ನು ಆಕರ್ಷಣೀಯಗೊಳಿಸಿ ಸಮುದಾಯದವರನ್ನು ಬರಮಾಡಬಹುದೇ ಎನ್ನುವುದನ್ನು ಶಿಕ್ಷಕ ವೃಂದ ಚಿಂತನೆ ಮಾಡಬೇಕಾಗಿದೆ.ಈ ನಿಟ್ಟಿನಲ್ಲಿ ಶಿಕ್ಷಕರು ಕಾರ್ಯನಿರ್ವಹಿಸಬೇಕಾಗಿದೆ.
- ಅಧ್ಯಯನ ಕೈಗೊಂಡ 12 ಶಾಲೆಗಳಲ್ಲಿ ಒಟ್ಟು 11 ಶಾಲೆಗಳ ಪೋಷಕರು ತಮ್ಮ ಮಕ್ಕಳ ಪ್ರಗತಿ ಬಗ್ಗೆ ನಿರಂತರವಾಗಿ ಶಾಲೆಯೊಂದಿಗೆ ಸಂಪರ್ಕದಲ್ಲಿರುವುದು ಪೋಷಕರು ಧನಾತ್ಮಕವಾಗಿರುವುದು ಸ್ಪಷ್ಟವಾಗುತ್ತದೆ.
- ಸಮುದಾಯವೇ ಕಲಿಕಾ ಕೇಂದ್ರ.ಈ ನಿಟ್ಟಿನಲ್ಲಿ ಅವಿಷ್ಕಾರ ಮಾಡುವಂತೆ ಮತ್ತು ಪೋಷಕರನ್ನು ಬಳಸಿಕೊಳ್ಳುವಂತೆ ಶಿಕ್ಷಕರು ವೈವಿಧ್ಯಮಯ ಚಟುವಟಿಕೆಗಳನ್ನು ರೂಪಿಸಿಕೊಳ್ಳಬೇಕಾಗಿದೆ.ಶಾಲೆಯಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಅರ್ಥ ಮಾಡಿಸಲು ಇದೇ ಸುಲಭವಾದ ವಿಧಾನವಾಗಿದೆ.
- ಅಧ್ಯಯನ ಕೈಗೊಂಡ ಕೆ.ಆರ್.ನಗರದ 04 ಶಾಲೆಗಳಲ್ಲಿ ಹಾಗೂ ಮೈಸೂರು ಉತ್ತರದ ವಲಯದ 02 ಶಾಲೆಗಳಲ್ಲಿ ಮಾತ್ರ ಎಸ್.ಡಿ.ಎಂ.ಸಿ ಹಾಗೂ ಸಹ ಶಿಕ್ಷಕರ ಸಹಕಾರದೊಂದಿಗೆ ಸಮಗ್ರ ಶಾಲಾಭಿವೃದ್ದಿ ಯೋಜನೆ ರೂಪಿಸಿರುವುದು ಕಂಡುಬಂದಿದೆ. ನಗರ ಪ್ರದೇಶದ ಶಾಲೆಗಳಲ್ಲಿ ಶಾಲಾಭಿವೃದ್ದಿ ಯೋಜನೆ ರೂಪಿಸುವಲ್ಲಿ ಭಾಗೀದಾರರ ಸಹಕಾರ ಸಾಧರಣವಾಗಿದ್ದು ಗರಿಷ್ಠ ಮಟ್ಟದಲ್ಲಿ ಸಹಕಾರ ಪಡೆಯುವ ಅಗತ್ಯವಿದೆ.
- ಅಧ್ಯಯನ ಕೈಗೊಂಡ ಎಲ್ಲಾ ಶಾಲೆಗಳ ಶಿಕ್ಷಕರು ಮಗುವಿನ ಕಲಿಕೆ ಮತ್ತು ಹಾಜರಾತಿಯ ಬಗ್ಗೆ ಆಗಾಗ್ಗೆ ಹಿಮ್ಮಾಹಿತಿಯನ್ನು ನೀಡುತ್ತಿರುವುದಾಗಿ ಕೋಷ್ಟಕದಿಂದ ತಿಳಿದು ಬರುತ್ತದೆ. ಪೂರಕ ದಾಖಲೆಗಳಿಂದ ಹಾಗೂ ಭೇಟಿಯ ಸಂದರ್ಭದಲ್ಲಿ ಹಿಮ್ಮಾಹಿತಿ ನೀಡಿರುವುದು ತೃಪ್ತಿಕರವಾಗಿರುವುದಿಲ್ಲ. ಹೆಚ್ಚು ಗುಣಾತ್ಮಕ ಶಿಕ್ಷಕರು ಮತ್ತು ಪಾಲಕರು ಸಮಾಲೋಚಿಸಿ ಮಗುವನ್ನು ಸಮಗ್ರವಾಗಿ ಮತ್ತು ಇಡಿಯಾಗಿ ಅರ್ಥಮಾಡಿಕೊಂಡಾಗ ಮಗುವಿನ ವ್ಯಕ್ತಿತ್ವ ಅರ್ಥಪೂರ್ಣವಾಗಿ ಅರಳುತ್ತದೆ. ಆದ್ದರಿಂದ ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಬೇಕಾಗಿದೆ.
- ಅಧ್ಯಯನ ಕೈಗೊಂಡ 11 ಶಾಲೆಗಳಲ್ಲಿ ಎಸ್.ಡಿ.ಎಂ.ಸಿ ಸದಸ್ಯರು ನಿಗದಿತವಾಗಿ ಸಭೆ ಸೇರಿ ಶಾಲಾ ಪ್ರಗತಿಯ ಬಗ್ಗೆ ಚರ್ಚಿಸಿ ಅದರಂತೆ ಕಾರ್ಯನಿರ್ವಹಿಸುತ್ತಿರುವುದಾಗಿ ಹಾಗೂ ಮುಖ್ಯ ಶಿಕ್ಷಕರೊಡನೆ ಅಗತ್ಯ ಬಾಂಧವ್ಯ ಹೊಂದಿರುವುದಾಗಿ ತಿಳಿಸಿದ್ದರೂ ನಡಾವಳಿಯಲ್ಲಿ ಕೇವಲ ಆಡಳಿತಾತ್ಮಕ ಅಂಶಗಳಿಗೆ ಸಂಬಂಧಿಸಿದಂತೆ ಚರ್ಚಿಸಿರುವುದು ಕಂಡುಬಂದಿದೆ. ಶೈಕ್ಷಣಿಕ ಪ್ರಗತಿಯ ಬಗ್ಗೆ ಆವಿಷ್ಕೃತ ಚಟುವಟಿಕೆಗಳಿಗೆ ಆಧ್ಯತೆ ನೀಡಿ ಕ್ರಿಯಾಯೋಜನೆ ರೂಪಿಸಿ ಇದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಭೆಗಳಲ್ಲಿ ಚರ್ಚಿಸುವುದು ಅಗತ್ಯವಾಗಿದೆ.

**8. ಶಾಲಾ ದಾಖಲಾತಿಯನ್ನು ಉತ್ತಮಪಡಿಸಲು ನೀವು ಯಾವ ಕ್ರಮ ಕೈಗೊಂಡಿರುವಿರಿ?**

ಜಾಗೃತಿ ಶಿಬಿರ ಆಯೋಜನೆ, ಸಮುದಾಯದವರು ಹಾಗೂ ಪೋಷಕರೊಂದಿಗೆ ಚರ್ಚೆ, ಪ್ರೋತ್ಸಾಹದಾಯಕ ಸೌಲಭ್ಯಗಳ ಬಗ್ಗೆ ತಿಳುವಳಿಕೆ, ಮಕ್ಕಳ ಕಲಿಕೆಯ ಬಗೆ ಪೋಷಕರಿಗೆ ಅರಿವು ಮೂಡಿಸುವುದು

**9. ಎಸ್.ಡಿ.ಎಂ.ಸಿ/ಸಮುದಾಯದ ಭಾಗವಹಿಸುವಿಕೆಯಿಂದಾಗಿ ಶಾಲೆಯಲ್ಲಿ ಆಗಿರುವ ಎರಡು ಅಭಿವೃದ್ದಿ ಕಾರ್ಯಗಳನ್ನು ನಮೂದಿಸಿ**

- ಮೂಲಭೂತ ಸೌಕರ್ಯಗಳ ಉತ್ತಮ ನಿರ್ವಹಣೆ
- ಚರಾಸ್ತಿಗಳನ್ನು ನೀಡಿರುವುದು
- ಮಕ್ಕಳಿಗೆ ಶೂ, ಬೆಲ್ಟ್, ಟೈ ಗಳನ್ನು ನೀಡಿರುವುದು.

### 10. ಶಾಲೆಯ ಬಗ್ಗೆ ನಿಮ್ಮ ಅಭಿಪ್ರಾಯ:

- ಅಧ್ಯಯನ ಕೈಗೊಂಡ ಎಲ್ಲಾ ಶಾಲೆಗಳಲ್ಲಿ ಎಸ್.ಡಿ.ಎಂ.ಸಿ ಸದಸ್ಯರು ಉತ್ತಮ ಕಲಿಕಾ ವಾತಾವರಣವಿರುವುದಾಗಿ ತಿಳಿಸಿರುತ್ತಾರೆ.
- ಶಿಕ್ಷಕರು ಹಾಗೂ ಮುಖ್ಯ ಶಿಕ್ಷಕರು ಕಲಿಕೆಯ ಬಗ್ಗೆ ಹೆಚ್ಚು ಆಸಕ್ತಿಯಿಂದ ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ.
- ಇದರಿಂದ ಮಕ್ಕಳ ಕಲಿಕೆ ಮತ್ತು ಕಲಿಯುವಿಕೆಗೆ ನೀಡುವ ಸಹಾಯ ಮತ್ತು ಇತರೆ ಶಾಲಾ ಕಾರ್ಯಗಳು ತೃಪ್ತಿಕರವಾಗಿ ನಡೆಯುತ್ತಿವೆ ಎನ್ನುವುದು ಸ್ಪಷ್ಟವಾಗುತ್ತಿದೆ.
- ಶಾಲೆ ಗುಣಾತ್ಮಕ ದೃಷ್ಠಿಯಿಂದ ಶಿಕ್ಷಕರಿನ್ನೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕಾಗಿದೆ

### 11. ಶಾಲಾ ದಾಖಲಾತಿಯನ್ನು ಉತ್ತಮಪಡಿಸಲು ನೀವು ಯಾವ ಕ್ರಮ ಕೈಗೊಂಡಿರುವಿರಿ?

- ಮನೆಗಳಿಗೆ ಭೇಟಿ
- ದಾಖಲಾತಿ ಆಂದೋಲನ
- ಪ್ರೋತ್ಸಾಹದಾಯಕ ಯೋಜನೆಗಳ ಬಗ್ಗೆ ತಿಳುವಳಿಕೆ ಹಾಗೂ ಸಮಗ್ರ ಅನುಷ್ಠಾನ.



**ನಾವು ಸದಾ ನಿಮ್ಮೊಂದಿಗೆ ಆದರೆ ನಮ್ಮ ಶಾಲೆ ಹೀಗೇಕೆ? ಅಧ್ಯಯನ ತಂಡಕ್ಕೆ ಸಮುದಾಯದ ಪ್ರಶ್ನೆ, ಸಹಿಪ್ರಾ ಶಾಲೆ ಗೌಸಿಯಾನಗರ, ಮೈಸೂರ ಉತ್ತರ ವಲಯ, ಮೈಸೂರು ಜಿಲ್ಲೆ**

**ಕೋಷ್ಟಕ 59:**

| ಕ್ರಮ ಸಂಖ್ಯೆ | ಪ್ರಶ್ನೆಗಳು | ಮೈಸೂರು ಉತ್ತರ | ಕೆ.ಆರ್.ನಗರ |
|---|---|---|---|
| | | ಹೌದು | ಹೌದು |
| 1 | ಎಸ್.ಎಂ.ಎಫ್ ನಮೂನೆಯನ್ನು ಭರ್ತಿ ಮಾಡಲು ಶಾಲೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು ಸಾಧ್ಯವಾಗಿದೆಯೇ? | 2 | 2 |
| 2 | ಎಸ್.ಎಂ.ಎಫ್ ನಮೂನೆಗಳನ್ನು ಆಧರಿಸಿಕೊಂಡು ಶಾಲಾ ಶಿಕ್ಷಕರು ಸ್ವ ಅವಲೋಕನ ಮಾಡಿಕೊಂಡಿದ್ದಾರೆಯೇ? | 2 | 2 |
| 3 | ಶಾಲಾ ಮಕ್ಕಳ ವಾಸ್ತವ ಕಲಿಕೆಯನ್ನು ತರಗತಿವಾರು, ವಿಷಯವಾರು ತಾವೇ ಸ್ವತಃ ತಂಡದೊಡನೆ ಪರಿಶೀಲಿಸಿ ದಾಖಲಿಸಲು ಸಾಧ್ಯವಾಗಿದೆಯೇ? | 2 | 0 |
| 4 | ಎಸ್.ಎಂ.ಎಫ್ ಸ್ವಾವಲೋಕನದಿಂದ ಕಂಡುಕೊಂಡ ಅಂಶಗಳನ್ನು ಆಧರಿಸಿ ಕ್ಲಸ್ಟರ್ ಯೋಜನೆಗೆ /ಸುಧಾರಣೆಗೆ ಕ್ಲಸ್ಟರ್ ವ್ಯಾಪ್ತಿಯ ಶಾಲೆಗಳೊಂದಿಗೆ ಚರ್ಚೆ ನಡೆದಿದೆಯೇ? | 2 | 2 |
| 5 | ಕ್ಲಸ್ಟರ್ ವ್ಯಾಪ್ತಿಯ ಎಸ್.ಎಂ.ಎಫ್ ಸ್ವಾವಲೋಕನದಿಂದ ಕಂಡುಕೊಂಡ ಅಂಶಗಳನ್ನು ಆಧರಿಸಿ ಕ್ಲಸ್ಟರ್ ಯೋಜನೆಯಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗಿದೆಯೇ? | 2 | 2 |
| 6 | ಸಿ.ಎಂ.ಎಫ್ ಕ್ರೋಢಿಕರಣದ ನಂತರ ತಾಲ್ಲೂಕು ಹಂತದಲ್ಲಿ ಮುಖ್ಯಾಂಶಗಳ ಬಗ್ಗೆ ಚರ್ಚೆ ನಡೆದಿದೆಯೇ? | 2 | 2 |
| 7 | ಆರ್.ಟಿ.ಇ ತರಬೇತಿ ಆಗಿದೆಯೇ? | 1 | 1 |
| 8 | ಶಿಕ್ಷಕರಿಗೆ ಅಗತ್ಯವಾಗಿರುವ ಶೈಕ್ಷಣಿಕ ಬೆಂಬಲ ನೀಡಲು ನಿಮಗೆ ಸಾಧ್ಯವಾಗುತ್ತಿದೆಯೇ? | 2 | 2 |

**ವಿಶ್ಲೇಷಣೆ:**

- ಕ್ಯು ಎಂಟಿ ನಮೂನೆಗಳನ್ನು ಭರ್ತಿ ಮಾಡುವ ಬಗ್ಗೆ ಅನುಪಾಲಕರು ಪ್ರಾಮಾಣಿಕವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ.
- ಎಸ್‌ಎಮ್‌ಎಫ್ ನಮೂನೆಯನ್ನು ಭರ್ತಿ ಮಾಡಲು ಶಾಲೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು ಸಾಧ್ಯವಾಗಿದೆ ಎಂದು ಹೆಚ್ಚಿನ ಅನುಪಾಲಕರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.
- ಶಾಲಾ ಮಕ್ಕಳ ವಾಸ್ತವ ಕಲಿಕೆಯನ್ನು ತರಗತಿವಾರು, ವಿಷಯವಾರು ತಾವೇ ಸ್ವತ: ಪರಿಶೀಲಿಸಿ ದಾಖಲಿಸಲು ಸಾಧ್ಯವಾಗಿಲ್ಲ ಎಂದು ಹೆಚ್ಚಿನ ಅನುಪಾಲಕರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಅನುಪಾಲಕರು ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶವನ್ನೇ ಆಧಾರವಾಗಿಟ್ಟುಕೊಂಡು ಮಕ್ಕಳ ಕಲಿಕಾ ಪ್ರಗತಿಯನ್ನು ದಾಖಲಿಸಿರುತ್ತಾರೆ. ಸಾಮರ್ಥ್ಯಾಧಾರಿತ ಮೌಲ್ಯಮಾಪನವನ್ನು ಮಾಡಿರುವುದಿಲ್ಲ. ಆದ್ದರಿಂದಲೇ ಅಧ್ಯಯನದಲ್ಲಿ ವಾಸ್ತವ ಕಲಿಕೆಗೂ ನಮೂನೆಯಲ್ಲಿ ದಾಖಲಿಸಿರುವ ಕಲಿಕೆಗೂ ವ್ಯತ್ಯಾಸ ಕಂಡು ಬಂದಿದೆ.

- ಎಸ್‌ಎಂಎಫ್ ನಮೂನೆಗಳನ್ನು ಆಧರಿಸಿಕೊಂಡು ಶಾಲಾ ಶಿಕ್ಷಕ ವೃಂದದವರು ಸ್ವ ಅವಲೋಕನ ಮಾಡಿಕೊಂಡಿದ್ದಾರೆಂದು ಅನುಪಾಲಕರು ಅಭಿಪ್ರಾಯಪಟ್ಟಿದ್ದರೂ ಈ ಕ್ರಿಯೆ ಶಾಲೆಗಳಲ್ಲಿ ಆಗದಿರುವುದು ಕಂಡು ಬಂದಿದೆ. ಅಂದರೆ ಕ್ಯುಎಂಟಿ ನಮೂನೆಯ ಮೂಲ ಉದ್ದೇಶವೇ ಈಡೇರದ ಹಾಗೆ ಆಗಿದೆ.

- ಕ್ಲಸ್ಟರ್ ವ್ಯಾಪ್ತಿಯ ಶಾಲೆಗಳ ಸ್ವಾವಲೋಕನ ಮಾಡಲು ಎಸ್‌ಎಂಎಫ್ ನಮೂನೆ ಸಹಾಯ ಮಾಡಿದೆ ಎಂದು ಅನುಪಾಲಕರು ಒಪ್ಪಿದ್ದರೂ ಈ ಬಗ್ಗೆ ಅವರಿಗೆ ಅಸ್ಪಷ್ಟತೆ ಇರುವುದು ಕಂಡು ಬಂದಿದೆ.
- ಹೆಚ್ಚಿನ ಅನುಪಾಲಕರು ಎಸ್‌ಎಂಎಫ್ ಸ್ವಾವಲೋಕನದಿಂದ ಕಂಡುಕೊಂಡ ಅಂಶಗಳನ್ನು ಆಧರಿಸಿ ಕ್ಲಸ್ಟರ್ ಯೋಜನೆಗೆ/ಸುಧಾರಣೆಗೆ ಕ್ಲಸ್ಟರ್ ವ್ಯಾಪ್ತಿಯ ಶಾಲೆಗಳೊಂದಿಗೆ ಚರ್ಚೆ ನಡೆಸಿರುವುದಿಲ್ಲ.
- ಕ್ಯುಎಂಟಿ ನಮೂನೆಗಳಲ್ಲಿರುವ ಮುಖ್ಯಾಂಶಗಳ ಬಗ್ಗೆತಾಲ್ಲೂಕು ಹಂತದಲ್ಲಿ ಚರ್ಚೆ ನಡೆಸಿರುವುದಿಲ್ಲ.
- ಕ್ಲಸ್ಟರ್ ಶಾಲೆಗಳ ಸುಧಾರಣೆಗೆ ಕ್ಯುಎಂಟಿ ನಮೂನೆಗಳು ಅಗತ್ಯವೆಂದು ಎಲ್ಲಾ ಅನುಪಾಲಕರು ಒಪ್ಪಿಕೊಂಡಿರುತ್ತಾರೆ. ಭೇಟಿಯ ವೇಳೆಯಲ್ಲಿಯೇ ಅದನ್ನು ಸಮರ್ಪಕವಾಗಿ ಭರ್ತಿಗೊಳಿಸುವ ಅವಕಾಶ ಕಲ್ಪಿಸಿದಲ್ಲಿ ಗುಣ ಮಟ್ಟದ ಮಾನದಂಡಕ್ಕೆ ಇದು ಉತ್ತಮ ಸಾಧನವಾಗಬಲ್ಲದು ಎಂದು ಅಭಿಪ್ರಾಯಿಸಿದ್ದಾರೆ.
- ಕೆಲವು ಅನುಪಾಲಕರು ಎಸ್‌ಎಂಎಫ್ ಸ್ವಾವಲೋಕನದಿಂದ ಕಂಡುಕೊಂಡ ಅಂಶಗಳನ್ನು ಕ್ಲಸ್ಟರ್ ಯೋಜನೆಯಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಪಟ್ಟಿರುತ್ತಾರೆಂದು ಅಭಿಪ್ರಾಯಪಟ್ಟಿದ್ದಾರೆ.

### 9. ತಮ್ಮ ವ್ಯಾಪ್ತಿಗೆ ಸಂಬಂಧಿಸಿದಂತೆ ಕ್ಯು ಎಂ ಟಿ ನಮೂನೆಗಳ ಬಗ್ಗೆ ಅನುಪಾಲಕರ ಅಭಿಪ್ರಾಯ.

- ಶೈಕ್ಷಣಿಕ ಗುಣವರ್ಧನೆಗೆ ಕ್ಯುಎಂಟಿ ಸಾಧನಗಳು ಅಗತ್ಯ.
- ತರಗತಿಯಲ್ಲಿ ಕಲಿಕೆಯನ್ನು ವೀಕ್ಷಣೆ ಮಾಡಲು ಕಾಲಾವಕಾಶ ಬೇಕು.
- ಎಲ್ಲಾ ವಿಚಾರಗಳಲ್ಲೂ ಕ್ಯುಎಂಟಿ ಸಾಧನಗಳನ್ನೇ ಮಾನದಂಡವಾಗಿ ಬಳಸಬೇಕು.

### 10. ನಿಮ್ಮ ವೃತ್ತಿ ಪರತೆ ಹೆಚ್ಚಿಸಲು, ಮೇಲಾಧಿಕಾರಿಗಳಿಂದ ನೀವು ಅಪೇಕ್ಷಿಸುವ ಮಾರ್ಗದರ್ಶನ

- ಹೆಚ್ಚಿನ ಹಿಮ್ಮಾಹಿತಿ ಮತ್ತು ಕಾಲಕಾಲಕ್ಕೆ ಮಾರ್ಗದರ್ಶನ ಅಗತ್ಯ.

### 11. ಕಳೆದ ತ್ರೈಮಾಸಿಕದಲ್ಲಿ ನೀಡಿದ ಮಾದರಿಪಾಠಗಳ ಸಂಖ್ಯೆ

- ಸಮರ್ಪಕ ಉತ್ತರ ಬಂದಿರುವುದಿಲ್ಲ.
- ಈ ನಿಟ್ಟಿನಲ್ಲಿ ಬಲವರ್ಧನೆ ಅತಿ ಅಗತ್ಯವಾಗಿದೆ.

### 12. ಹೊಸ ಪಠ್ಯ ಪುಸ್ತಕಗಳ ಬಗ್ಗೆ ಶಿಕ್ಷಕರ ಅಭಿಪ್ರಾಯ

- ಹೆಚ್ಚಿನ ತರಬೇತಿಯ ಅಗತ್ಯವಿದೆ ಎಂದು ಶಿಕ್ಷಕರು ತಿಳಿಸಿರುತ್ತಾರೆ.

### 13. ಮಕ್ಕಳ ಕಲಿಕೆಯ ಹಿಮ್ಮಾಹಿತಿ ನೀಡಲು ನಿರಂತರ ಮತ್ತು ಸಿ.ಸಿ.ಇ ಎಷ್ಟರ ಮಟ್ಟಿಗೆ ಹೇಗೆ ಪ್ರಯೋಜನಕಾರಿ?

- ಚಟುವಟಿಕೆ ಆಧಾರಿತ ಕ್ರಮವಾಗಿರುವುದರಿಂದ ಹೆಚ್ಚು ಪ್ರಯೋಜನಕಾರಿಯಾಗಿದೆ.ತಕ್ಷಣದಲ್ಲಿಯೇ ಮೌಲ್ಯಮಾಪನ ಮಾಡಿ ಸರಿಯಾದ ಬೋಧನ ಕ್ರಮ ಅನುಸರಿಸಲು ಸಹಕಾರಿಯಾಗಿದೆ.

14. ಶಿಕ್ಷಕರಿಗೆ ಅಗತ್ಯವಾಗಿರುವ ಶೈಕ್ಷಣಿಕ ಬೆಂಬಲ ನೀಡಲು ಸಮರ್ಥರಾಗುವಂತೆ ನಿಮ್ಮನ್ನು ನೀವು ಹೇಗೆ ಸಿದ್ದಗೊಳಿಸಿರುವಿರಿ.

- ಬಿ.ಆರ್.ಸಿ ಯಿಂದ ನೀಡಲಾಗಿರುವ ಮಾಹಿತಿ ಮತ್ತು ವಿಚಾರಗಳನ್ನು ಚೆನ್ನಾಗಿ ತಿಳಿದುಕೊಂಡು ಅಳವಡಿಸಿಕೊಳ್ಳಲಾಗಿದೆ.
- ಬೇರೆಯವರೊಂದಿಗೆ ಚರ್ಚಿಸಿ ಹೆಚ್ಚಿನ ಮಾಹಿತಿ ಪಡೆದುಕೊಳ್ಳಲಾಗುತ್ತಿದೆ.
- ಪ್ರಸ್ತುತ ವ್ಯವಸ್ಥೆಗೆ ತಮ್ಮನ್ನು ತಾವು ಹೇಗೆ ಸಮರ್ಥಗೊಳಿಸಬೇಕೆನ್ನುವ ಬಗ್ಗೆ ಸ್ಪಷ್ಟತೆ ಇಲ್ಲದಿರುವುದು ಸ್ಪಷ್ಟವಾಗುತ್ತಿದೆ. ಅಧ್ಯಯನಶೀಲತೆ, ಕಂಪ್ಯೂಟರ್ ಕಲಿಕೆ, ಮಹಿತಿ ತಂತ್ರಜ್ಞಾನ ಬಳಕೆ, ಉನ್ನತ ವ್ಯಾಸಂಗ, ಸಾಹಿತ್ಯ ಪರಾಮರ್ಶನ, ಕ್ರಿಯಾ ಸಂಶೋಧನೆ ಮತ್ತು ಅಧ್ಯಯನ ಇತ್ಯಾದಿ ವಿಚಾರಗಳ ಕಡೆಗೆ ಗಮನ ಕಡಿಮೆ ಇದೆ. ಇದು ವೃತ್ತಿಪರತೆಯ ಕುಂಠತಕ್ಕೆ ದೊಡ್ಡ ಕಾರಣವಾಗಿದೆ ಎಂದು ಹೇಳಬಹುದು.

ಬಿ.ಆರ್.ಸಿ ಪ್ರಶ್ನಾವಳಿ

**ಕೋಷ್ಠಕ 60:**

| ಕ್ರಮ ಸಂಖ್ಯೆ | ಪ್ರಶ್ನೆಗಳು | ಮೈಸೂರು ಉತ್ತರ | ಕೆ.ಆರ್. ನಗರ |
|---|---|---|---|
| | | ಹೌದು | ಹೌದು |
| 1 | ಶಾಲಾ ಭೇಟಿಯ ಸಂದರ್ಭದಲ್ಲಿ ಶಿಕ್ಷಕರು ತರಗತಿ/ವಿಷಯ ನಿರ್ವಹಣೆಗೆ ಸಂಬಂದಿಸಿದಂತೆ ಪ್ರಶ್ನೆಗಳನ್ನು ಕೇಳುತ್ತಿರುವರೇ? | 1 | 1 |
| 2 | ಸಿ.ಆರ್.ಪಿ ಗಳಿಗೆ ಅಗತ್ಯವಾಗಿರುವ ಶೈಕ್ಷಣಿಕ ಬೆಂಬಲ ನೀಡಲು ನಿಮಗೆ ಸಾಧ್ಯವಾಗುತ್ತಿದೆಯೇ? | 1 | 1 |
| 3 | ಸಿ.ಆರ್.ಪಿ ಸಭೆಗಳಲ್ಲಿ ಮಕ್ಕಳ ಕಲಿಕೆಯ ಬಗ್ಗೆ ಚರ್ಚೆ ನಡೆಯುತ್ತಿದೆಯೇ? | 1 | 1 |
| 4 | ಬಿ.ಎಂ.ಎಫ್ ಕ್ರೋಢಿಕರಣದ ನಂತರ ಜಿಲ್ಲಾ ಹಂತದಲ್ಲಿ ಮುಖ್ಯಾಂಶಗಳ ಬಗ್ಗೆ ಚರ್ಚೆ ನಡೆದಿದೆಯೇ? | 1 | 1 |
| 5 | ಆರ್.ಟಿ.ಇ ತರಬೇತಿ ಆಗಿದೆಯೇ? | 1 | 1 |
| 6 | ಶಿಕ್ಷಕರಿಗೆ ಅಗತ್ಯವಾಗಿರುವ ಶೈಕ್ಷಣಿಕ ಬೆಂಬಲ ನೀಡಲು ನಿಮಗೆ ಸಾಧ್ಯವಾಗುತ್ತಿದೆಯೇ? | 0 | 1 |
| 7 | ಕಳೆದ ತ್ರೈಮಾಸಿಕದಲ್ಲಿ ತರಗತಿ ವೀಕ್ಷಣೆ ಮಾಡಿ ಮೌಖಿಕ, ಲಿಖಿತವಾಗಿ ಹಿಮ್ಮಾಹಿತಿ ನೀಡಲಾಗಿರುವ ಒಟ್ಟು ಶಿಕ್ಷಕರ ಸಂಖ್ಯೆ | 12 | 15 |
| 8 | ಬ್ಲಾಕ್ ವ್ಯಾಪ್ತಿಯ ಎಸ್.ಎಂ.ಎಫ್ ಸ್ವಾವಲೋಕನದಿಂದ ಕಂಡುಕೊಂಡ ಅಂಶಗಳನ್ನು ಆಧರಿಸಿ ಬ್ಲಾಕ್ ಯೋಜನೆಯಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗಿದೆಯೇ? | 1 | 1 |
| 9 | ನಿಮ್ಮ ಬ್ಲಾಕ್‌ನಲ್ಲಿ ಶೈಕ್ಷಣಿಕ ವ್ಯವಸ್ಥೆಯನ್ನು ಬಲಪಡಿಸಲು ಶೈಕ್ಷಣಿಕ ಯೋಜನೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆಯೇ? | 1 | 1 |

- ಶಾಲಾ ಭೇಟಿಯ ಸಂದರ್ಭದಲ್ಲಿ ಶಿಕ್ಷಕರು ತರಗತಿ/ವಿಷಯ ನಿರ್ವಹಣೆಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳುತ್ತಿರುವುದಾಗಿ ಇಬ್ಬರು ಬಿಆರ್‌ಸಿಗಳು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.
- ಸಿ.ಆರ್.ಪಿ ಗಳಿಗೆ ಅಗತ್ಯವಾಗಿರುವ ಶೈಕ್ಷಣಿಕ ಬೆಂಬಲ ನೀಡಲು ಸಾಧ್ಯವಾಗುತ್ತಿದೆ ಮತ್ತು ಸಿ.ಆರ್.ಪಿ ಸಭೆಗಳಲ್ಲಿ ಮಕ್ಕಳ ಕಲಿಕೆಯ ಬಗ್ಗೆ ಚರ್ಚೆ ನಡೆಯುತ್ತಿದೆ ಎಂಬುವುದನ್ನು ಒಪ್ಪಿರುತ್ತಾರೆ.
- ಬಿ.ಎಂ.ಎಫ್ ಕ್ರೋಢಿಕರಣದ ನಂತರ ಜಿಲ್ಲಾ ಹಂತದಲ್ಲಿ ಮುಖ್ಯಾಂಶಗಳ ಬಗ್ಗೆ ಚರ್ಚೆ ನಡೆದಿದೆ ಮತ್ತು ಆರ್.ಟಿ.ಇ ತರಬೇತಿ ಆಗಿದೆ ಎನ್ನುವುದು ಬಿಆರ್‌ಸಿಗಳಿಂದ ಸ್ಪಷ್ಟವಾಗಿದೆ.

- ಶಿಕ್ಷಕರಿಗೆ ಅಗತ್ಯವಾಗಿರುವ ಶೈಕ್ಷಣಿಕ ಬೆಂಬಲ ನೀಡಲು ಉತ್ತರ ವಲಯದ ಬಿಆರ್‌ಸಿಯವರಿಗೆ ಸಾಧ್ಯವಿಲ್ಲದಿರುವುದಾಗಿಯೂ, ಕೆಆರ್ ನಗರದ ಬಿಆರ್‌ಸಿಯವರಿಂದ ಸಾಧ್ಯವಾಗಿದೆ ಎಂಬುದಾಗಿ ಅಭಿಪ್ರಾಯ ವ್ಯಕ್ತವಾಗಿದೆ. ಬಹುಶ: ಮಕ್ಕಳ ಕಲಿಕೆ ಕೆಆರ್ ನಗರದಲ್ಲಿ ಉತ್ತಮವಾಗಿರಲು ಇದೂ ಒಂದು ಕಾರಣವಾಗಿರಬಹುದು.
- ಕಳೆದ ತ್ರೈಮಾಸಿಕದಲ್ಲಿ ಸರಾಸರಿ 13 ಶಿಕ್ಷಕರ ತರಗತಿ ವೀಕ್ಷಣೆ ಮಾಡಿ ಮೌಖಿಕ, ಲಿಖಿತವಾಗಿ ಹಿಮ್ಮಾಹಿತಿ ನೀಡಲು ಸಾಧ್ಯವಾಗಿದೆ ಎಂದು ಇಬ್ಬರು ಬಿಆರ್‌ಸಿಯವರು ತಿಳಿಸಿರುತ್ತಾರೆ. ತರಗತಿ ವೀಕ್ಷಣೆ ಸಂಖ್ಯೆ ಕಡಿಮೆ ಎಂದು ಹೇಳಬಹುದಾಗಿದೆ. ಸಂಖ್ಯೆ ಕಡಿಮೆಯಾದರೂ ಅದರ ಗುಣಮಟ್ಟ ಹೇಗಿದೆ ಎನ್ನುವುದನ್ನು ಪರಿಶೀಲಿಸಬಹುದು.
- ಬ್ಲಾಕ್ ವ್ಯಾಪ್ತಿಯ ಎಸ್.ಎಂ.ಎಫ್ ಸ್ವಾವಲೋಕನದಿಂದ ಕಂಡುಕೊಂಡ ಅಂಶಗಳನ್ನು ಆಧರಿಸಿ ಬ್ಲಾಕ್ ಯೋಜನೆಯಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗಿದೆ ಮತ್ತು ಬ್ಲಾಕ್‌ನಲ್ಲಿ ಶೈಕ್ಷಣಿಕ ವ್ಯವಸ್ಥೆಯನ್ನು ಬಲಪಡಿಸಲು ಶೈಕ್ಷಣಿಕ ಯೋಜನೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆ ಎಂಬುದನ್ನು ಇಬ್ಬರು ಶೈಕ್ಷಣಿಕ ನಾಯಕರು ಒಪ್ಪಿರುತ್ತಾರೆ.

**10. ಶಾಲಾ ಕಾರ್ಯನಿರ್ವಹಣೆಯನ್ನು ಉತ್ತಮ ಪಡಿಸಲು ನಿಮ್ಮ ಬ್ಲಾಕಿನಲ್ಲಿ ಮಾಡಿರುವ ಗುಣಮಟ್ಟದ ಹೊಸ ಪ್ರಯತ್ನಗಳನ್ನು ನಮೂದಿಸಿ.**

- ತರಬೇತಿಗಳನ್ನು ಉತ್ತಮ ಗುಣಮಟ್ಟದಿಂದ ನಿರ್ವಹಿಸಲಾಗಿದೆ.
- ಸೂಕ್ತ ಮಾರ್ಗದರ್ಶನ ಮತ್ತು ಹಿಮ್ಮಾಹಿತಿ ನೀಡಲಾಗಿದೆ.
- ವಿಚಾರಗಳನ್ನು ಸಮರ್ಪಕವಾಗಿ ತಲುಪಿಸಲು ಕ್ರಮವಹಿಸಲಾಗಿದೆ.

**11. ಗುಣಮಟ್ಟದ ಅಭಿವೃದ್ಧಿಗಾಗಿ ನಿಮ್ಮ ಬ್ಲಾಕಿನಲ್ಲಿ ಗುರುತಿಸಿದ ಪ್ರಮುಖ ಕೊರತೆಗಳು.**

- ವಿಷಯವಾರು ಶಿಕ್ಷಕರ ನೇಮಕವಾಗಬೇಕಿದೆ.
- ಹೊಸಪಠ್ಯಾಧಾರಿತ ತರಬೇತಿಗಳ ಅವಶ್ಯಕತೆಯಿದೆ.
- ಸಿಸಿಇ ವಿಧಾನದ ಸ್ಪಷ್ಟತೆಗೆ ಇನ್ನೂ ವಿವರವಾದ ತರಬೇತಿಯನ್ನು ಶಿಕ್ಷಕರಿಗೆ ನೀಡಬೇಕಿದೆ.

**12. ಗುಣಮಟ್ಟದ ಸುಧಾರಣೆಯಲ್ಲಿ ನಿಮ್ಮ ಬ್ಲಾಕಿನಲ್ಲಿ ಮಾಡಿರುವ ಗಣನೀಯ ಸಾಧನೆಗಳು.**

- ಸಿಸಿಇ ಅನುಷ್ಠಾನ ಮತ್ತು ಆರ್.ಟಿ.ಇ ಅನುಷ್ಠಾನಕ್ಕೆ ಕ್ರಮವಹಿಸಲಾಗಿದೆ.
- ಶಿಕ್ಷಕರಿಗೆ ಸೂಕ್ತ ಪ್ರೇರಣೆ ನೀಡಿ ಪರಿಣಾಮಕಾರಿ ಬೋಧನಾ ಕ್ರಮ ಅನುಸರಿಸುವಂತೆ ಮಾರ್ಗದರ್ಶನ ನೀಡಲಾಗಿದೆ.

**13. ನಿಮ್ಮ ವೃತ್ತಿ ಪರತೆ ಹೆಚ್ಚಿಸಲು, ಮೇಲಾಧಿಕಾರಿಗಳಿಂದ ನೀವು ಅಪೇಕ್ಷಿಸುವ ಮಾರ್ಗದರ್ಶನ**

- ಸೂಕ್ತ ಶೈಕ್ಷಣಿಕ ಹಿಮ್ಮಾಹಿತಿ ಮತ್ತು ಸಂಶೋಧನಾ ವಿಚಾರಗಳನ್ನು ತಿಳಿಯಪಡಿಸುವ ಕಾರ್ಯಗಾರಗಳನ್ನು ಹಮ್ಮಿಕೊಳ್ಳುವುದು ಅಪೇಕ್ಷಣೀಯ.

ಇತರೆ ಕಾರ್ಯಗಳ ಒತ್ತಡದಿಂದ ಬ್ಲಾಕಿನ ಶೈಕ್ಷಣಿಕ ನಾಯಕರಾದ ಬಿಆರ್‌ಸಿಗಳಿಂದ ಶೈಕ್ಷಣಿಕ ಮೇಲ್ವಿಚಾರಣೆ ಪರಿಣಾಮಕಾರಿಯಾಗಿ ಆಗಿರುವುದಿಲ್ಲ.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು–2005 ಒಂದು ಕಡೆ "ಶಾಲೆಯಲ್ಲಿ ಅಥವಾ ತರಗತಿಯಲ್ಲಿ ನಡೆಯುವ ಚಟುವಟಿಕೆಗಳು ಮಗುವಿಗೆ ಈ ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ಇರುವ ಸಹಾಯವಾಗಿದೆ" ಎಂದು ಹೇಳುತ್ತದೆ.ಅರ್ಥಾತ್ ಹೊರ ಪ್ರಪಂಚದಲ್ಲಿರುವ ವಿದ್ಯಾಮಾನಗಳು ಶಾಲೆಯೊಳಗೆ ಬರಬೇಕು, ಸಮಾಜಲ್ಲಿರುವ ವಾಸ್ತವ ಸತ್ಯಗಳು, ವೈರುಧ್ಯಗಳು, ಸಂಘರ್ಷಗಳಿಗೆ ನಮ್ಮ ಮಕ್ಕಳು ಮುಖಾಮುಖಿಯಾಗಬೇಕು ಎನ್ನುವುದೇ ಇದರ ಆಶಯವಾಗಿದೆ.

ಗುಣಾತ್ಮಕ ಕಲಿಕೆಯು ವ್ಯವಸ್ಥಿತ ಹಾಗೂ ಪೂರಕವಾದ ತರಗತಿ ಕೋಣೆಯ ಪರಿಸರವನ್ನು ಅಪೇಕ್ಷಿಸುತ್ತದೆ.ಹಾಗಾಗಿ ತರಗತಿ ಕೋಣೆಯನ್ನು ಕಲಿಕೆಗಾಗಿ ಸುಸಜ್ಜಿತಗೊಳಿಸುವುದು ಮುಖ್ಯ, ಇದರೊಂದಿಗೆ, ತರಗತಿ ಕೋಣೆಯಲ್ಲಿ ನಡೆಯುವ ಬೋಧನಾ–ಕಲಿಕಾ ಪ್ರಕ್ರಿಯೆಯೂ ಪ್ರಮುಖ ಪಾತ್ರವನ್ನು ವಹಿಸುವುದು.ಈ ಹಿನ್ನೆಲೆಯಲ್ಲಿ ಸದರಿ ಕ್ಷೇತ್ರವನ್ನು ಆದತ್ಯಾ ಕ್ಷೇತ್ರವನ್ನಾಗಿ ಗುರ್ತಿಸಲಾಗಿದೆ.

ಉತ್ತಮ ಕಲಿಕೆಯ ಪರಿಸರವು ವಿದ್ಯಾರ್ಥಿಗಳಲ್ಲಿ ವ್ಯವಧಾನವನ್ನು ಹೆಚ್ಚಿಸುತ್ತದೆ.ಕಲಿಕೆಗೆ ಸಂಬಂಧಿತ ವಿಷಯಗಳಲ್ಲಿ ಗ್ರಹಿಕೆಯ ಸಾಮರ್ಥ್ಯವನ್ನು ಬಲವರ್ಧನೆ ಮಾಡುವಲ್ಲಿಯೂ ಇದರ ಪಾತ್ರ ಅಗಾಧವಾದುದು.ಕಲಿಕೆಯ ಪರಿಸರವು ವಿದ್ಯಾರ್ಥಿಯ ಕಲಿಕೆಯ ಬೆಳವಣಿಗೆಯನ್ನು ಪ್ರಭಾವಿಸುವ ಅಂಶವಾಗಿದೆ.ತರಗತಿ ಒಳಗಿನ, ಹೊರಗಿನ ಕಲಿಕೆ ಹಾಗೂ ತರಗತಿಯ ಆಚೆಗೂ ಇನ್ನಷ್ಟು ವಿಸ್ತರಿಸಿಕೊಡುವ ಯಾವುದೇ ಸೃಜನಾತ್ಮಕ ಕಲಿಕೆಯಾಗಿರಲಿ, ಆ ಎಲ್ಲಾ ಕಲಿಕೆಗಳು ಅದರ ಸುತ್ತಲಿನ ಪರಿಸರದಿಂದ ಪ್ರಭಾವಿತಗೊಂಡಿರುತ್ತವೆ.

ಕಲಿಕೆಯ ಪರಿಸರ ಎನ್ನುವುದು ಸಾಂಧರ್ಭಿಕವಾಗಿ ಬದಲಾಗುತ್ತಾ ಹೋಗುತ್ತದೆ.ಆದರೆ ಮೌಲ್ಯಾಂಕನ ಕಾರ್ಯದಲ್ಲಿ ಕಲಿಕೆಯ ಪರಿಸರ ಎನ್ನುವುದನ್ನು ಒಂದು ವ್ಯಾಪ್ತಿಯೊಳಗೆ ನೋಡುತ್ತಿದ್ದೇವೆ. ಪರಿಸರದಲ್ಲಿ ಬೋಧನಾ ಪ್ರಕ್ರಿಯೆಯ ಆಯಾಮಗಳು, ಕಲಿಕೆಯ ಪ್ರಕ್ರಿಯೆಯ ಆಯಾಮಗಳು ಹಾಗೂ ಮೌಲ್ಯಮಾಪನ ವಿಧಿವಿಧಾನಗಳ ಆಯಾಮಗಳು ಗಣನೆಗೆ ನಿಲುಕುತ್ತವೆ.

ತರಗತಿ ವೀಕ್ಷಣಾ ನಮೂನೆಯಲ್ಲಿ ಮಗುವಿನ ಕಲಿಕೆ ಹೇಗೆ ಸಾಗಬೇಕು, ಶಿಕ್ಷಕರ ಪೂರ್ವಸಿದ್ಧತೆ ಹೇಗಿರಬೇಕು, ಶಿಶುಕೇಂದ್ರಿತ ಕಲಿಕೆಯ ಅಂಶಗಳಾವುವು, ಶಿಕ್ಷಕರ ಅನುಕೂಲಿಸುವಿಕೆಯ ಪಾತ್ರವೇನು, ಮಕ್ಕಳ ರೂಪಿಸುವಿಕೆಗಾಗಿನ ಮೌಲ್ಯಮಾಪನದ ವಿಧಿ ವಿಧಾನಗಳೇನು ಎನ್ನುವುದರ ಬಗ್ಗೆ ಸೂಕ್ಷ್ಮವಾಗಿ ಪ್ರಸ್ತಾಪಿಸಲಾಗಿದೆ. ಪ್ರತಿ ಪ್ರಶ್ನೆಯಲ್ಲಿರುವ ಗಾಢತೆಯನ್ನು ಶಿಕ್ಷಕರು ಮತ್ತು ಅನುಪಾಲನಾಧಿಕಾರಿಗಳು ಅರ್ಥೈಸಿಕೊಂಡರೆ ಸಾಕು.ಅಧ್ಯಯನದಲ್ಲಿ ಕೇಳಲಾದ ಹಲವಾರು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಸಾಗಿದೆ.ಇದು ಮೈಸೂರು ಜಿಲ್ಲೆಯ ಶೈಕ್ಷಣಿಕ ಪಥಕ್ಕೆ ದಾರಿದೀಪವಾಗಲಿ.

## ಪ್ರಶ್ನೆ1 ರಿಂದ 5

1. ಶಿಕ್ಷಕರು ಘಟಕ/ಪಾಠ ಯೋಜನೆ ಸಿದ್ಧಪಡಿಸಿದ್ದಾರೆಯೇ ?
2. ಕಲಿಕಾ ಸಾಮರ್ಥ್ಯಕ್ಕನುಗುಣವಾಗಿ ಚಟುವಟಿಕೆಗಳು ರೂಪುಗೊಂಡಿವೆಯೇ?
3. ತರಗತಿ ಪ್ರಕ್ರಿಯೆಗಳನ್ನು ದಿನನಿತ್ಯದ ಬದುಕಿಗೆ ಬಳಸಲು ಶಿಕ್ಷಕರು ಸನ್ನಿವೇಶಗಳನ್ನು ಕಲ್ಪಿಸಿರುತ್ತಾರೆಯೇ?
4. ಕಲಿಕೆಗೆ ಪೂರಕವಾಗಿ ಪಠ್ಯಪುಸ್ತಕವನ್ನು ಮೀರಿದಂತಹ ಚಟುವಟಿಕೆಗಳನ್ನು ರಚಿಸಿಕೊಂಡಿದ್ದಾರೆಯೇ?
5. ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ದಾಖಲಿಸಲು ಸಾಧನಗಳನ್ನು ಸಿದ್ಧಪಡಿಸಿಕೊಂಡಿದ್ದಾರೆಯೇ?

**ಕೋಷ್ಟಕ 61:**

| ಶಾಲೆಯ ವಿಧ | ಪೂರ್ವ ಸಿದ್ಧತೆಗೆ ಸಂಬಂಧಿಸಿದ ಪ್ರಶ್ನೆಗಳು | | | | |
|---|---|---|---|---|---|
| | 1 | 2 | 3 | 4 | 5 |
| | ಹೌದು | ಹೌದು | ಹೌದು | ಹೌದು | ಹೌದು |
| ನಗರ/ ಹಿಂದುಳಿದ | 91.3 | 52.2 | 30.4 | 21.7 | 4.35 |
| ಗ್ರಾಮೀಣ/ ಮುಂದುವರೆದ | 78 | 72 | 89 | 17 | 33 |

**ಗ್ರಾಫ್–35:**




ಮೇಲಿನ ಆಲೇಖವನ್ನು ಗಮನಿಸಿದಾಗ ಪೂರ್ವ ಸಿದ್ಧತೆಗೆ ಸಂಬಂಧಿಸಿದಂತೆ 05 ಅಂಶಗಳನ್ನು ವಿಶ್ಲೇಷಿಸಲಾಗಿದೆ 1 ಮತ್ತು 4ನೇ ಪ್ರಶ್ನೆಗಳನ್ನು ಗಮನಿಸಿದಾಗ ಪಾಠ ಟಿಪ್ಪಣಿ ಮತ್ತು ಪಠ್ಯ ಪುಸ್ತಕಗಳನ್ನು ಮೀರಿದಂತಹ ಚಟುವಟಿಕೆಗಳನ್ನು ನಗರ ವ್ಯಾಪ್ತಿಯ ಶಾಲೆಗಳಲ್ಲಿ ಹೆಚ್ಚಾಗಿ ರೂಪಿಸಿದ್ದು ಇದು ಕ್ರಮವಾಗಿ ಶೇ.91.3 ಮತ್ತು ಶೇ.21.7 ಆಗಿದೆ.ಆದರೆ ಇದು ದಾಖಲೆಗಾಗಿ ಮಾತ್ರ ಸಿದ್ದಗೊಂಡಿದ್ದು, ತರಗತಿ ಪ್ರಕ್ರಿಯೆಯನ್ನು ವೀಕ್ಷಿಸಿದಾಗ ತಿಳಿದುಬಂದಿದೆ. ಸಾಮರ್ಥ್ಯಕ್ಕನುಗುಣವಾಗಿ ಚಟುವಟಿಕೆಗಳನ್ನು ರೂಪಿಸುವುದು, ರೂಪಣಾತ್ಮಕ ಮೌಲ್ಯಮಾಪನದ ಸಾಧನ ತಂತ್ರಗಳ ತಯಾರಿ, ಕಲಿಕಾ ಪ್ರಗತಿ ದಾಖಲಿಸುವ ಸಾಧನಗಳನ್ನು ಸಿದ್ಧಪಡಿಸುವುದು ಮತ್ತು ಕಲಿಕೆಯನ್ನು ನಿತ್ಯ ಬದುಕಿಗೆ ಸಂಬಂಧೀಕರಿಸುವುದರಲ್ಲಿ ಗ್ರಾಮೀಣ ಪ್ರದೇಶದ ಶಾಲೆಗಳ ಶಿಕ್ಷಕರು ಮುಂದಿರುವುದು ತರಗತಿ ಪ್ರಕ್ರಿಯೆ ಹಾಗೂ ದಾಖಲೆಗಳಿಂದ ತಿಳಿದುಬಂದಿದೆ. ತರಗತಿ ಪ್ರಕ್ರಿಯೆಗಳನ್ನು ದಿನನಿತ್ಯದ ಬದುಕಿಗೆ ಸಂಬಂಧೀಕರಿಸಲು ಶಿಕ್ಷಕರು ಸನ್ನಿವೇಶವನ್ನು ಕಲ್ಪಿಸುವುದರಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶ ವ್ಯತ್ಯಾಸ ಸರಾಸರಿ 58.6% ಆಗಿದ್ದು, ಇದು ಗಮನಾರ್ಹ ಅಂಶವಾಗಿದೆ. ಆದರೆ ಒಟ್ಟಾರೆ ಪೂರ್ವಸಿದ್ಧತೆಗೆ ಸಂಬಂಧಿಸಿದಂತೆ ಸಾಧನೆಯ ಮಟ್ಟವು ತುಂಬಾ ಕಡಿಮೆಯೇ ಇದೆ.

ತರಬೇತಿ ಸಂದರ್ಭದಲ್ಲಿ ವಿಡೀಯೋ ವೀಕ್ಷಣೆ, ಕ್ಷೇತ್ರ ಭೇಟಿ, ಪ್ರಾಯೋಗಿಕ ಮತ್ತು ಪ್ರಾತ್ಯಕ್ಷಿಕೆಗಳಿಗೆ ಕಡಿಮೆ ಒತ್ತು ನೀಡಿರುವುದು, ಬದಲಾವಣೆಯ ಈ ಸಂದರ್ಭದಲ್ಲಿ ಇಡೀ ಅನುಪಾಲನಾ ತಂಡಕ್ಕೆ ಹೆಚ್ಚಿನ ತರಬೇತಿ ನೀಡದಿರುವುದೂ ಇದಕ್ಕೆ ಕಾರಣವಾಗಿರಬಹುದು.2 ರಿಂದ 5ನೇ ಪ್ರಶ್ನೆಗಳನ್ನು ಗಮನಿಸಿದಾಗ ಮಗುವಾರು ಯೋಜನೆ ತಯಾರಿಸುವ. ಮಗುವಿನ ಕಲಿಕಾ ಮಟ್ಟಕ್ಕನುಗುಣವಾಗಿ ಚಟುವಟಿಕೆಗಳನ್ನು ರೂಪಿಸುವ ಸಾಮರ್ಥ್ಯ ಕಡಿಮೆ ಇರುವುದು ಸ್ಪಷ್ಟವಾಗುತ್ತದೆ.ಆದರೆ ಪ್ರಶ್ನೆ 2ರಿಂದ 5ರ ವರೆಗೆನ ಅಂಶಗಳನ್ನು ಒಳಗೊಳ್ಳದ ಪಾಠ ಟಿಪ್ಪಣಿಯು ಶಿಕ್ಷಕರು ಮತ್ತು ಮಕ್ಕಳಿಗೆ ಯಾವ ರೀತಿಯ ಸಹಾಯವನ್ನು ಮಾಡಲಾರದು.ದಾಖಲೆಗಾಗಿ ಪಾಠ ಟಿಪ್ಪಣಿ ಬರೆದಂತಾಗುತ್ತದೆ.ಒಟ್ಟಾರೆಯಾಗಿ ಪೂರ್ವ ಸಿದ್ಧತೆಯ ಬಗೆಗಿನ ಅರಿವು ಮತ್ತು ಸಿದ್ಧತೆ ಪ್ರಮಾಣ ಕಡಿಮೆ ಇರುವುದು ಅಧ್ಯಯನದಿಂದ ಕಂಡು ಬಂದಿದೆ.

ಪ್ರಶ್ನೆ6.ಕಲಿಕಾ ಪ್ರಕ್ರಿಯೆ –ಶಿಶು ಸ್ನೇಹಿ ಪರಿಸರ

6ಅ. ಶಿಕ್ಷಕರ ಮತ್ತು ವಿದ್ಯಾರ್ಥಿಗಳ ನಡುವಿನ ಬಾಂಧವ್ಯ ಉತ್ತಮವಾಗಿದೆಯೇ?

6ಆ. ಮಕ್ಕಳು ಸಹಜವಾಗಿ ಭಾಗವಹಿಸುತ್ತಿದ್ದು ತಮಗನ್ನಿಸಿದ್ದನ್ನು ವ್ಯಕ್ತಪಡಿಸುತ್ತಿದ್ದರೇ?

6ಇ. ಆಸನ ವ್ಯವಸ್ಥೆ ಚಟುಟಿಕೆಗಳಿಗನುಗುಣವಾಗಿದೆಯೇ?

**ಕೋಷ್ಟಕ 62:**

| ಶಾಲೆಯ ವಿಧ | ಶಿಶುಸ್ನೇಹಿ ಪರಿಸರ | | |
|---|---|---|---|
| | 6ಅ | 6ಆ | 6ಇ |
| | ಹೌದು | ಹೌದು | ಹೌದು |
| ನಗರ/ ಹಿಂದುಳಿದ | 91.3 | 26.1 | 52.2 |
| ಗ್ರಾಮೀಣ/ ಮುಂದುವರೆದ | 100 | 72 | 67 |

**ಗ್ರಾಫ್ 36:**




ಶಿಶುಸ್ನೇಹಿ ಪರಿಸರಕ್ಕೆ ಸಂಬಂಧಿಸಿದಂತೆ 90%ಕ್ಕಿಂತ ಹೆಚ್ಚು ಶಾಲೆಗಳಲ್ಲಿ ಶಿಕ್ಷಕರು ಮತ್ತು ಮಕ್ಕಳ ಬಾಂಧವ್ಯವು ಗ್ರಾಮೀಣಾ ಪ್ರದೇಶದ ಶಾಲೆಗಳಲ್ಲಿ ಹೆಚ್ಚಾಗಿದ್ದು, ನಗರ ಶಾಲೆಗಳಲ್ಲಿ ಸ್ವಲ್ಪ ಕಡಿಮೆ ಇರುತ್ತದೆ.ಶೇ.72% ರಷ್ಟು ಗ್ರಾಮೀಣ ಪ್ರದೇಶ ಶಾಲೆಗಳಲ್ಲಿ ತರಗತಿಯೊಳಗೆ ಮಕ್ಕಳು ಸಹಜವಾಗಿ ಭಾಗವಹಿಸುತ್ತಿದುದ್ದು ಕಂಡು ಬಂದಿದೆ.ನಗರ ಪ್ರದೇಶದ ಶಾಲೆಗಳಲ್ಲಿ ಇದು ಶೇ.26.1 ಇದ್ದು ತೀರಾ ಕಡಿಮೆ ಇರುತ್ತದೆ. ಹೆಚ್ಚಿನ ಶಾಲೆಗಳಲ್ಲಿ ಗಾಳಿ ಬೆಳಕಿನಿಂದ ಕೂಡಿದ ಆರೋಗ್ಯಕರ ವಾತಾವರಣವಿದೆ. ಮತ್ತು ಶಾಲೆಗಳಲ್ಲಿ ಮಕ್ಕಳು ಹೆಚ್ಚು ಮುಕ್ತವಾಗಿ ಓಡಾಡಿಕೊಂಡು ಶಿಕ್ಷಕರೊಂದಿಗೆ ಮಾತನಾಡಿಕೊಂಡು ಸ್ವಾತಂತ್ರ್ಯದ ಅನುಭವವನ್ನು ಪಡೆಯುತ್ತಿರುವುದು ಒಂದು ಉತ್ತಮ ಬೆಳೆವಣಿಗೆಯಾಗಿದೆ ಎಂದು ಹೇಳಬಹುದು.ಕೆಲವು ವರ್ಷಗಳಿಂದ ನೀಡಿರುವ ತರಬೇತಿ ಇದಕ್ಕೆ ಕಾರಣವಾಗಿರಬಹುದು.

ಮಕ್ಕಳ ಕಲಿಕೆಯ ಸಂದರ್ಭಗಳಲ್ಲಿ ಆಸನ ವ್ಯವಸ್ಥೆಯನ್ನು ಗಮನಿಸಿದಾಗ ಸಾಂಪ್ರದಾಯಿಕ ಆಸನ ವ್ಯವಸ್ಥೆ ಅತ್ಯಂತ ಹೆಚ್ಚಾಗಿದ್ದು, 52.2% ನಗರ ಶಾಲೆಗಳ ಶಿಕ್ಷಕರು ಮಾತ್ರ ಚಟುವಟಿಕೆಗಳಿಗನುಗುಣವಾದ ಆಸನ ವ್ಯವಸ್ಥೆ ಮಾಡಿಕೊಂಡಿರುತ್ತಾರೆ.ಶಿಕ್ಷಕರು ಇದೇ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಕಲಿತು ಬಂದಿದ್ದು ಮಾತ್ರವಲ್ಲದೆ ಕೆಲವು ವರ್ಷಗಳಿಂದ ಇದೇ ರೀತಿ ತರಗತಿ ನಿರ್ವಹಣೆ ಮಾಡುತ್ತಾ ಬಂದಿದ್ದರಿಂದ

ಶಿಕ್ಷಕರಿಗೆ ಒಂದೇ ಬಾರಿ ಈ ಬದಲಾವಣೆಗೆ ಹೊಂದಿಕೊಳ್ಳುವುದು ಅಸಾಧ್ಯವಾಗಿದೆ.ತರಗತಿಯಲ್ಲಿರುವ ಮಕ್ಕಳ ಹೆಚ್ಚು ಸಂಖ್ಯೆಯು ಇದಕ್ಕೆ ತೊಡಕಾಗಿರಬಹುದು. ಅಷ್ಟೇ ಅಲ್ಲದೆ ರಚನಾ ತರಬೇತಿಯು ಕೇವಲ 5 ಮತ್ತು 8ನೇ ತರಗತಿಗಳಗೆ ಬೋಧಿಸುವ ಶಿಕ್ಷಕರಿಗೆ ಮಾತ್ರ ನೀಡಿರುವುದರಿಂದ ಉಳಿದ ಶಿಕ್ಷಕರಿಗೆ ಈ ಬಗ್ಗೆ ಕಡಿಮೆ ಅರಿವು ಇರಬಹುದು.ತರಗತಿಯ ಆಸನ ವ್ಯವಸ್ಥೆಯು ಮಕ್ಕಳ ಭಾಗವಹಿಸುವಿಕೆಯ ಮಟ್ಟದ ಮೇಲೆ ಬೃಹತ್ ಪರಿಣಾಮ ಬೀರುವುದರಿಂದ ಈ ನಿಟ್ಟಿನಲ್ಲಿ ಶಿಕ್ಷಕರನ್ನು ಪ್ರೇರೇಪಿಸಬೇಕಾಗಿದೆ.

ಒಟ್ಟಾರೆಯಾಗಿ ಶಿಶುಸ್ನೇಹಿ ಪರಿಸರವನ್ನು ಇನ್ನೂ ಹೆಚ್ಚು ಅರ್ಥಪೂರ್ಣವಾಗಿ, ಆಳವಾಗಿ ಮತ್ತು ಮಕ್ಕಳ ಪರವಾಗಿ ಚಿಂತನೆ ಮಾಡಿ ಅಳವಡಿಸಲೇಬೇಕಾಗಿದೆ.

7). **ಜ್ಞಾನ ರಚನೆಗೆ ಇದ್ದ ಅವಕಾಶ:** (ಹೌದು/ಇಲ್ಲ)

7ಅ) ತರಗತಿ ಪ್ರಕ್ರಿಯೆಯಲ್ಲಿ ಮಕ್ಕಳ ಪೂರ್ವಜ್ಞಾನವನ್ನು ಕಲಿಕೆಗೆ ಸಂಬಂಧೀಕರಿಸಲಾಯಿತೆ?

7ಆ) ಕಲಿಕೆಯನ್ನು ತಮ್ಮ ಅನುಭವಕ್ಕೆ/ವಿದ್ಯಾರ್ಥಿಗಳ ನಿತ್ಯ ಬದುಕಿಗೆ ಜೋಡಿಸಿಕೊಳ್ಳಲು ಅವಕಾಶವಿತ್ತೇ?

7ಇ) ಶಿಕ್ಷಕರು ಮತ್ತು ಮಕ್ಕಳು ಸಹಮತದಿಂದ ಕಲಿಕಾ ನಿರ್ಧಾರ ತೆಗೆದುಕೊಳ್ಳುತ್ತಾರೆಯೇ?

7ಈ) ವಿದ್ಯಾರ್ಥಿಗಳಿಗೆ ಸ್ವತ: ವಿಮರ್ಶಾತ್ಮಕವಾಗಿ/ತರ್ಕಬದ್ಧವಾಗಿ/ವೈಜ್ಞಾನಿಕವಾಗಿ ಚಿಂತನೆ ಮಾಡಲು ಅವಕಾಶ ಇತ್ತೇ?

7ಉ) ತಮ್ಮ ಜ್ಞಾನವನ್ನು ಮಕ್ಕಳು ಕಟ್ಟಿಕೊಳ್ಳಲು ಅವಕಾಶವಿತ್ತೆ?

8). **ಕಲಿಕಾ ಪ್ರಕ್ರಿಯೆಯಲ್ಲಿ 5 ಮಾದರಿಯ ಅಳವಡಿಕೆ:** ಇದೆ/ಇಲ್ಲ

8ಅ) ತೊಡಗಿಸಿಕೊಳ್ಳುವಿಕೆ

8ಆ) ಪರಿಶೋಧಿಸುವಿಕೆ

8ಇ) ಅಭಿವ್ಯಕ್ತಿಸುವಿಕೆ/ವಿವರಣೆ

8ಈ) ವಿಸ್ತರಣೆ

8ಉ) ಮೌಲ್ಯಮಾಪನ

**ಕೋಷ್ಟಕ 63:**

| ಶಾಲೆಯ ವಿಧ | ಜ್ಞಾನ ರಚನೆ | | | | | 5 ಇ ಮಾದರಿ | | | | |
|---|---|---|---|---|---|---|---|---|---|---|
| | 7ಅ | 7ಆ | 7ಇ | 7ಈ | 7ಉ | 8ಅ | 8ಆ | 8ಇ | 8ಈ | 8ಉ |
| | ಹೌದು | ಹೌದು | ಹೌದು | ಹೌದು | ಹೌದು | ಹೌದು | ಹೌದು | ಹೌದು | ಹೌದು | ಹೌದು |
| ನಗರ/ ಹಿಂದುಳಿದ | 47.8 | 43.5 | 13 | 8.7 | 21.7 | 52.2 | 4.35 | 0 | 4.35 | 13 |
| ಗ್ರಾಮೀಣ/ ಮುಂದುವರೆದ | 89 | 56 | 39 | 28 | 44 | 83 | 39 | 72 | 33 | 72 |

**ಗ್ರಾಫ್–37:**




ಮೇಲಿನ ಆಲೇಖವನ್ನು ಗಮನಿಸಿದಾಗ ಶೇ 47.8ರಷ್ಟು ನಗರ ಶಾಲೆಗಳಲ್ಲಿ ಮತ್ತು ಶೇ89ರಷ್ಟು ಗ್ರಾಮೀಣ ಶಾಲೆಗಳಲ್ಲಿ ಶಿಕ್ಷಕರು ಮಕ್ಕಳ ಪೂರ್ವಜ್ಞಾನವನ್ನು ಕಲಿಕೆಗೆ ಸಂಬಂಧೀಕರಿಸಿರುತ್ತಾರೆ.ಆದರೆ ಇದು ಕೇವಲ ಒಂದೆರಡು ಪ್ರಶ್ನೆಗಳಿಗೆ ಸೀಮಿತವಾಗಿರುವುದು ತರಗತಿ ವೀಕ್ಷಣೆಯಲ್ಲಿ ಕಂಡುಬಂದಿದೆ.ಜ್ಞಾನದ ರಚನೆಯಲ್ಲಿ ಇದು ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತಿರುವುದರಿಂದ ಇನ್ನೂ ಹೆಚ್ಚು ಸೂಕ್ಷ್ಮ ಮತ್ತು ತಜ್ಞ ರೀತಿಯಲ್ಲಿ ಇದನ್ನು ನಿರ್ವಹಿಸಬೇಕಾಗಿದೆ.ಮಗುವಿನ ಹೊಸ ಕಲಿಕೆಗೆ ಪೂರ್ವಜ್ಞಾನವು ತಳಹದಿಯನ್ನು ನೀಡುತ್ತದೆ.ಶಿಕ್ಷಕ ಇದನ್ನು ಅರ್ಥಮಾಡಿಕೊಳ್ಳದೇ ಹೋದ ಪಕ್ಷದಲ್ಲಿ ಕಲಿಕಾ ಅಂತರ ಉಂಟಾಗಿ ಕಲಿಕೆಯೇ ಕುಂಠಿತವಾಗುತ್ತದೆ.

ಶೇ 50ರಷ್ಟು ಶಾಲೆಗಳಲ್ಲಿ ಶಿಕ್ಷಕರು ಕಲಿಕೆಯನ್ನು ಮಕ್ಕಳ ನಿತ್ಯ ಬದುಕಿಗೆ ಸಂಬಂಧೀಕರಿಸಿರುತ್ತಾರೆ.ಈ ಸಾಧನೆ ತೀರಾ ಕಡಿಮೆ ಎಂದು ಹೇಳಬಹುದು.ಯಾವಾಗ ಕಲಿಕೆ ಬದುಕಿಗೆ ಸಂಬಂಧೀಕರಿಸಲ್ಪಡುವುದಿಲ್ಲವೋ ಆಗ ಕಲಿಕೆ ಮತ್ತು ಬದುಕು ಪ್ರತ್ಯೇಕವಾಗಿ ನಿಲ್ಲುತ್ತದೆ.ಮಗು ಕಲಿತಿರುವುದನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಲು ಅಸಾಧ್ಯವಾಗುತ್ತದೆ.ಜೊತೆಯಲ್ಲಿ ಕಲಿಕೆ ಅಸಹಜ ಮತ್ತು ಅಪರಿಚಿತವಾಗುವುದರಿಂದ ಕಲಿಕೆ ಹೊರೆ ಎನಿಸಿಕೊಳ್ಳುತ್ತದೆ. ಮೇಲಿನ ಎರಡೂ ಅಂಶಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಸಹಮತದಿಂದ ನಿರ್ಧಾರ ಮತ್ತು ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವುದು ಶಿಶು ಕೇಂದ್ರಿತ ಶಿಕ್ಷಣ ಮತ್ತು ಜ್ಞಾನ ರಚನೆಯ ಪ್ರಥಮ ಉತ್ಪನ್ನವಾಗಿದೆ.ಶೇ 13ರಷ್ಟು ನಗರ ಶಾಲೆಗಳಲ್ಲಿ ಈ ಪ್ರಯತ್ನ ಸಾಗಿದೆ.ಗ್ರಾಮೀಣ ಶಾಲೆಗಳಲ್ಲಿ ಶೇ39ರಷ್ಟು ಸಾಧನೆಯಾಗಿರುವುದು ಗಮನಾರ್ಹ ಸಂಗತಿ.ತರ್ಕಬದ್ಧ ಚಿಂತನೆ, ವಿಮರ್ಶಾತ್ಮಕ ಚಿಂತನೆ ಮತ್ತು ವೈಜ್ಞಾನಿಕ ಚಿಂತನೆಗಳನ್ನು ವಿದ್ಯಾರ್ಥಿಗಳಲ್ಲಿ ರೂಢಿಸುವುದು ಇಂದಿನ ಆದ್ಯತೆಯಾಗಿದ್ದರೂ ಕೇವಲ ಶೇ8.7ರಷ್ಟು ನಗರ ಶಾಲೆಗಳಲ್ಲಿಮತ್ತು ಶೇ 28ಗ್ರಾಮೀಣ ಶಾಲೆಗಳಲ್ಲಿ ಅನುಷ್ಠಾನವಾಗಿದೆ.

ಜ್ಞಾನದ ರಚನೆಗೆ ಶೇ21.7ರಷ್ಟು ನಗರ ಶಾಲೆಗಳಲ್ಲಿಮತ್ತು ಗ್ರಾಮೀಣ ಶಾಲೆಗಳಲ್ಲಿ ಶೇ44ರಷ್ಟು ಅವಕಾಶವಿದೆ. ಜ್ಞಾನದ ರಚನೆಯನ್ನು ಅನುಕೂಲಿಸುವಲ್ಲಿ 5ಇ ಮಾದರಿ ಪರಿಣಾಮಕಾರಿಯಾಗಿ ಸಹಾಯ ಮಾಡುತ್ತದೆ ಎಂದು ಇಲಾಖೆ 5ಇ ಮಾದರಿಯನ್ನು ಅನುಷ್ಠಾನಗೊಳಿಸಲು ತಿಳಿಸಿದೆ. ಮೇಲಿನ ಆಲೇಖವನ್ನು ಗಮನಿಸಿದಾಗ 5ಇ ಯಲ್ಲಿರುವ ಅಂಶಗಳನ್ನು ಇಡಿಯಾಗಿ ಜೋಡಿಸಿಕೊಳ್ಳದಿರುವುದು ಕಂಡುಬರುತ್ತದೆ.8ಆ ಪರಿಶೋಧಿಸುವಿಕೆಯು ಈ ಇಡೀ ಬೋಧನಾ ಮಾದರಿಯ ಹೃದಯ ಭಾಗವಾಗಿದ್ದು ಅದರ ಸಾಧನೆಯೇ ಹೆಚ್ಚಾಗಿರಬೇಕಿತ್ತು.ಆದರೆ ಇದು ಶೇ39ರಷ್ಟಿದ್ದು 8ಅ–ತೊಡಗಿಸಿಕೊಳ್ಳುವಿಕೆ, 8ಇ– ಅಭಿವ್ಯಕ್ತಿಸುವಿಕೆ, 8ಈ–ಮೌಲ್ಯಮಾಪನ ಇವುಗಳ ಸಾಧನೆ ಸ್ವಲ್ಪ ಗ್ರಾಮೀಣ ಶಾಲೆಗಳಲ್ಲಿ ಉತ್ತಮವಾಗಿದೆ.ಆದರೆ ನಗರ ಪ್ರದೇಶದಲ್ಲಿ ಇವುಗಳ ಸಾಧನೆ ತೀರಾ ಕಡಿಮೆಯಾಗಿದೆ.5ಇ ಗಳು ಒಂದು ಬೋಧನಾ ವಿಧಾನದ ಅವಿಚ್ಛೇಧಿತ ಅಂಶಗಳೆನ್ನುವುದನ್ನು ಶಿಕ್ಷಕರಿನ್ನೂ ಅರ್ಥೈಸಿಕೊಂಡಿರದಿರುವುದು ಇಲ್ಲಿ ಸ್ಪಷ್ಟವಾಗುತ್ತದೆ. ಹೊಸ ಪಠ್ಯಪುಸ್ತಕಾಧಾರಿತ ರಚನಾ ತರಬೇತಿಯು ಕೇವಲ 5, 8 ನೇ ತರಗತಿ ಶಿಕ್ಷಕರಿಗೆ ಮಾತ್ರ ಆಗಿದ್ದು ಉಳಿದ

ಶಿಕ್ಷಕರಿಗೆ ಆಗದಿರುವುದು ಮತ್ತು ತರಬೇತಿಯಲ್ಲಿ ಹೆಚ್ಚು ವಿಷಯವಾರು ಪ್ರಾಯೋಗಿಕ ಅಭ್ಯಾಸಗಳಿಗೆ ಅವಕಾಶವಿಲ್ಲದಿರುವುದು ಇದಕ್ಕೆ ಕಾರಣವಾಗಿರಬಹುದು.

### (9). ಕಲಿಕಾ ಸಾಮಗ್ರಿ/ ಕಲಿಕಾ ಸನ್ನಿವೇಶ

9ಅ). ಕಲಿಕೆಗೆ ಪೂರಕವಾಗಿ ಪಠ್ಯಪುಸ್ತಕವನ್ನು ಮೀರಿದಂತಹ ಚಟುವಟಿಕೆಗಳನ್ನು ನಡೆಸಿದ್ದಾರೆಯೇ?

9ಆ). ಕಲಿಕಾ ಪ್ರಕ್ರಿಯೆಯಲ್ಲಿ ಸ್ಥಳೀಯ ಸಂಪನ್ಮೂಲ(ವ್ಯಕ್ತಿ/ಸಾಮಗ್ರಿ)ಗಳನ್ನು ಬಳಸಿಕೊಳ್ಳಲಾಗುತ್ತಿದೆಯೇ?

9ಇ).ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಕಲಿಕೋತ್ತರ ಚಟುವಟಿಕೆಗಳು(ಯೋಜನೆ, ಗೃಹಪಾಠ, ಗುಂಪು ಚಟುವಟಿಕೆ, ಇತ್ಯಾದಿ) ತನ್ನ ಪರಿಸರಕ್ಕೆ ಕಲಿಕೆಯನ್ನು ಅನ್ವಯಿಸುವಂತಿದೆಯೇ?

**ಕೋಷ್ಠಕ 64:**

| ಶಾಲೆಯ ವಿಧ | ಕಲಿಕಾ ಸಾಮಗ್ರಿ/ಕಲಿಕಾ ಸನ್ನಿವೇಶ | | |
|---|---|---|---|
| | 9ಅ | 9ಆ | 9ಇ |
| | ಹೌದು | ಹೌದು | ಹೌದು |
| ನಗರ/ ಹಿಂದುಳಿದ | 21.7 | 30.4 | 17.4 |
| ಗ್ರಾಮೀಣ/ ಮುಂದುವರೆದ | 22 | 50 | 61 |

**ಗ್ರಾಫ್–38:**




ಕಲಿಕಾ ಸಾಮಗ್ರಿ/ಸನ್ನಿವೇಶಗಳು ಮಗುವಿನ ಕಲಿಕೆಗೆ ಸಹಾಯ ಮಾಡುತ್ತದೆ ಎಂದೇ "ಬೋಧನಾ ಸಾಮಗ್ರಿ", "ಬೋಧನಾ ಕಲಿಕಾ ಸಾಮಗ್ರಿ" ಎನ್ನುವ ಶೀರ್ಷಿಕೆಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಇಂದು "ಕಲಿಕಾ ಸಾಮಗ್ರಿಗಳು/ಸನ್ನಿವೇಶಗಳು' ಎಂಬ ಹೆಸರಿನಲ್ಲಿ ಬಳಕೆಯಲ್ಲಿದೆ.ಇವು ಪಠ್ಯ ಪುಸ್ತಕವನ್ನೂ ಮೀರಬೇಕೆನ್ನುವುದು ಆಶಯವಾದರೆ ಶೇ21.7 ನಗರ ಪ್ರದೇಶದ ಸರಕಾರಿ ಶಾಲಾ ಶಿಕ್ಷಕರು ಹಾಗೂ ಗ್ರಾಮೀಣಪ್ರದೇಶದ ಸರಕಾರಿ ಶಾಲಾ ಶಿಕ್ಷಕರು ಶೇ22 ಮಾತ್ರ ಈ ಪ್ರಯತ್ನ ಮಾಡಿರುತ್ತಾರೆ.

ಮಗು ವಾಸಿಸುವ ಇಡೀ ಸಮುದಾಯವೇ ಮಗುವಿನ ಕಲಿಕೆಗೆ ಸಂಪನ್ಮೂಲ ಕೇಂದ್ರ. ಈ ನಿಟ್ಟನಲ್ಲಿ ಆಲೇಖವನ್ನು ಗಮನಿಸಿದಾಗ 70%ನಗರ ಪ್ರದೇಶದ ಸರಕಾರಿ ಶಾಲಾ ಶಿಕ್ಷಕರು ಮತ್ತು 50%ಗ್ರಾಮೀಣಪ್ರದೇಶದ ಸರಕಾರಿ ಶಾಲಾ ಶಿಕ್ಷಕರು ಕಲಿಕಾ ಸಾಮಗ್ರಿಗಳನ್ನು

ಬಳಸಿಲ್ಲದಿರುವುದು ಕಂಡು ಬಂದಿದೆ.ಕಲಿಕಾ ಸಾಮಗ್ರಿಗಳನ್ನು ಬಳಸಿರುವಶಿಕ್ಷಕರಲ್ಲಿಹೆಚ್ಚಿನಶಿಕ್ಷಕರು ಶಾಲೆಯಲ್ಲಿರುವ ಕಲಿಕಾ ಸಾಮಗ್ರಿಗಳನ್ನು ಬಳಸಿರುತ್ತಾರೆ. ಕೆಲವು ಶಿಕ್ಷಕರು ಸಮುದಾಯದಲ್ಲಿರುವ ಕಲಿಕಾ ಸಾಮಗ್ರಿಗಳನ್ನು ಬಳಸಿರುತ್ತಾರೆ, ಕೆಲವು ಶಿಕ್ಷಕರು ಬಳಸಿರುವ ಕಲಿಕಾ ಸಾಮಗ್ರಿಗಳು ಕಲಿಕೆಗೆ ಸೂಕ್ತವಾಗಿಲ್ಲದಿರುವುದು ಭೇಟಿಯ ಸಂದರ್ಭದಲ್ಲಿ ಕಂಡು ಬಂದಿದೆ.

ಪಾಠಗಳಿಗೆ ನೀಡುವ ಕಲಿಕೋತ್ತರ ಚಟುವಟಿಕೆಗಳು ಶಾಲೆಯಲ್ಲಿ ಕಲಿತ ವಿಚಾರಗಳ ಯಥಾವತ್ ಪುನರಾವರ್ತನೆಗೆ ಮತ್ತು ಪಠ್ಯ ಪುಸ್ತಕದ ಪ್ರಶ್ನೆಗಳನ್ನೇ ಪುನರಾವರ್ತಿಸಲು ಅವಕಾಶ ನೀಡಿವೆ. ಇದು ಕಲಿಕಾರ್ಥಿಗಳಲ್ಲಿ ನೀರಸ ಮನೋಭಾವವನ್ನು ಉಂಟುಮಾಡುತ್ತದೆ.ಕೇವಲ ಶೇ.17.4ರಷ್ಟುನಗರ ಪ್ರದೇಶದ ಸರಕಾರಿ ಶಾಲಾ ಶಿಕ್ಷಕರು ಮಾತ್ರ ಕಲಿಕೋತ್ತರ ಚಟುವಟಿಕೆಗಳನ್ನು ಪರಿಸರಕ್ಕೆ ಅನ್ವಯ ಮಾಡಲು ಅವಕಾಶ ನೀಡಿರುತ್ತಾರೆ. ಆದರೆ ಶೇ61ರಷ್ಟುಗ್ರಾಮೀಣ ಪ್ರದೇಶದ ಸರಕಾರಿ ಶಾಲಾ ಶಿಕ್ಷಕರು ಕಲಿಕೋತ್ತರ ಚಟುವಟಿಕೆಗಳನ್ನು ಪರಿಸರಕ್ಕೆ ಅನ್ವಯ ಮಾಡಲು ಅವಕಾಶ ನೀಡಿರುವುದು ಗಮನಾರ್ಹ ಸಂಗತಿ.ಸಮುದಾಯವು ಮಗುವಿನ ಕಲಿಕಾ ಕೇಂದ್ರವಾಗಬೇಕು ಎನ್ನುವುದು ಎನ್‌ಸಿಎಫ್–2005ರ ಆಶಯವಾಗಿದೆ.ಆದರೆ ಇದರ ಅನುಷ್ಠಾನವು ಪರಿಣಾಮಕಾರಿಯಾಗದಿರುವುದು ಗಮನಾರ್ಹ ಸಂಗತಿ ಮತ್ತು ಈ ನಿಟ್ಟಿನಲ್ಲಿ ಹೆಚ್ಚು ಚಿಂತನೆ ನಡೆಸಬೇಕಾಗಿದೆ.

**ಶಿಕ್ಷಕರ ಅನುಕೂಲಿಸುವಿಕೆ:**

10ಅ) ಕಲಿಕೆಗೆ ಕುರಿತಂತೆ ಶಿಕ್ಷಕರ ಮಾರ್ಗದರ್ಶನವು ಮಕ್ಕಳ ಅಗತ್ಯಕ್ಕನುಗುಣವಾಗಿದೆಯೇ ?

10ಆ) ಶಿಕ್ಷಕರ ಸಂವಹನದ ಮಾದರಿಯು ಅಂತರಕ್ರಿಯಾತ್ಮಕವಾಗಿದೆಯೇ?

10ಇ) ಕಲಿಕೆಯ ಬಗ್ಗೆ ಶಿಕ್ಷಕರ ಮನೋಭಾವವು ಪರಸ್ಪರ ಕಲಿಕೆಯಲ್ಲಿ ನಂಬಿಕೆ ಇರುವುದಾಗಿದೆಯೇ?

**ಕೋಷ್ಟಕ 65:**

| ಶಾಲೆಯ ವಿಧ | ಶಿಕ್ಷಕರ ಅನುಕೂಲಿಸುವಿಕೆ | | |
|---|---|---|---|
| | 10ಅ | 10ಆ | 10ಇ |
| | ಹೌದು | ಹೌದು | ಹೌದು |
| ನಗರ/ ಹಿಂದುಳಿದ | 26.1 | 30.4 | 34.8 |
| ಗ್ರಾಮೀಣ/ ಮುಂದುವರೆದ | 81 | 50 | 89 |

**ಗ್ರಾಫ್–39**



ಕಲಿಕೆಯ ತತ್ವ ಬದಲಾದಂತೆ ಶಿಕ್ಷಕರ ಪಾತ್ರವೂ ಬದಲಾವಣೆ ಆಗುತ್ತದೆ.ಮಕ್ಕಳ ಕಲಿಕೆಯನ್ನು ಅನುಕೂಲಿಸುವುದು ಶಿಕ್ಷಕರ ದೊಡ್ಡ ಜವಾಬ್ದಾರಿಯಾಗಿದೆ.ಹೆಚ್ಚಿನ ಶಾಲಾ ಶಿಕ್ಷಕರು ಮಕ್ಕಳಿಗೆ ಸಾಮೂಹಿಕ ಮಾರ್ಗದರ್ಶನವನ್ನು ನೀಡುತ್ತಾರೆ, ಕೆಲವು ಶಾಲಾ ಶಿಕ್ಷಕರು ಗುಂಪುಗಳಿಗೆ ಅಂದರೆ ಗುಂಪು ಕಲಿಕೆಗೆ ಮಾರ್ಗದರ್ಶನವನ್ನು ನೀಡುತ್ತಾರೆ, 26.1%ನಗರ ಪ್ರದೇಶದ ಸರಕಾರಿ ಶಾಲಾ ಶಿಕ್ಷಕರು ಮತ್ತು 81%ರಷ್ಟು ಗ್ರಾಮೀಣ ಪ್ರದೇಶದ ಶಾಲಾ ಶಿಕ್ಷಕರು ಮಕ್ಕಳ ಅಗತ್ಯಕ್ಕನುಗುಣವಾಗಿ ಮಾರ್ಗದರ್ಶನ ನೀಡುತ್ತಿರುವುದು ಅಧ್ಯಯನದಿಂದ ಕಂಡು ಬಂದಿದೆ. ನಗರ ಹಾಗೂ ಗ್ರಾಮೀಣ ಪ್ರದೇಶದ ಶಿಕ್ಷಕರ ವ್ಯತ್ಯಾಸ ಶೇ.55 ರಷ್ಟಿರುವುದು ಆಶ್ಚರ್ಯವನ್ನುಂಟು ಮಾಡಿದ್ದು, ಇದರಿಂದ ನಗರ ಶಾಲೆಯ ಶಿಕ್ಷಕರ ಮಾರ್ಗದರ್ಶನ ಮಕ್ಕಳ ಪರವಾಗುವುದರ ಬದಲಾಗಿ ಶಿಕ್ಷಕ ಕೇಂದ್ರಿತವಾಗಿರುತ್ತದೆ.

ರಚನಾವಾದದಲ್ಲಿ ಕಲಿಕಾರ್ಥಿಗಳು ಮಾತನಾಡುವುದು, ಪ್ರಶ್ನಿಸುವುದು, ಚರ್ಚಿಸುವುದು ಅಪೇಕ್ಷಣೀಯ. ಜ್ಞಾನದ ರಚನೆ ತಲೆಯಲ್ಲಿ ಅಂದರೆ ಮೆದುಳಿನಲ್ಲಿ ಆಗುತ್ತಿರುವುದರಿಂದ ಅದನ್ನು ಮೇಲ್ನೋಟಕ್ಕೆ ಅರ್ಥೈಸಲು ಸಾಧ್ಯವಿಲ್ಲ. ಅದನ್ನು ತರಗತಿಯಲ್ಲಿ ಅರ್ಥಮಾಡಿಕೊಳ್ಳಲು ಇರುವ ಏಕೈಕ ಸುಲಭದ ದಾರಿ ಎಂದರೆ ಮಕ್ಕಳನ್ನು ಸದಾ ಅಭಿವ್ಯಕ್ತಿಸುವಂತೆ ಪ್ರೋತ್ಸಾಹಿಸುವುದು. ಈ ಅಂಶವನ್ನು ಗಣನೆಗೆ ತೆಗೆದುಕೊಂಡಾಗ ಹೆಚ್ಚಿನ ಶಿಕ್ಷಕರ ತರಗತಿಗಳಲ್ಲಿ ಏಕಮುಖ ಸಂವಹನ ಕಂಡು ಬಂದಿದೆ. ಅಂದರೆ ಬರೇ ಶಿಕ್ಷಕರೇ ಮಾತನಾಡುತ್ತಾರೆ.ಮಕ್ಕಳು ಮೌನ ಗ್ರಾಹಿಗಳಾಗುತ್ತಾರೆ.ಜ್ಞಾನದ ರಚನೆಯಾಗಿರುವುದನ್ನು ಇಲ್ಲಿ ಶಿಕ್ಷಕರು ಸುಲಭವಾಗಿ ಖಾತ್ರಿಪಡಿಸಲು ಸಾಧ್ಯವಿಲ್ಲ. ಕಡಿಮೆ ಪ್ರಮಾಣದ ಶಿಕ್ಷಕರು ತಮ್ಮ ತರಗತಿಗಳಲ್ಲಿ ದ್ವಿಮುಖ ಸಂವಹನಕ್ಕೆ ಅವಕಾಶ ಕಲ್ಪಿಸಿರುತ್ತಾರೆ.ಶಿಕ್ಷಕರು ಕೇಳಿದ ಪ್ರಶ್ನೆಗಳಿಗೆ ಮಕ್ಕಳು ಉತ್ತರಿಸುತ್ತಾರೆ, ಶಿಕ್ಷಕರು ಹೇಳಿರುವುದನ್ನು ಪುನರಾವರ್ತಿಸಿರುತ್ತಾರೆ.ಮಕ್ಕಳು ಪ್ರಶ್ನೆ ಕೇಳಿರಲೂಬಹುದು– ಆದರೆ ತೀರಾ ಕಡಿಮೆ.ಆದರೆ ಕೇವಲ 30.4%ನಗರ ಪ್ರದೇಶದ ಶಿಕ್ಷಕರು ಮತ್ತು 50% ಗ್ರಾಮೀಣ ಪ್ರದೇಶದ ಶಿಕ್ಷಕರು ಅಂತರ್‌ಕ್ರಿಯಾತ್ಮಕ ಸಂವಹನಕ್ಕೆ ಅವಕಾಶ ಕಲ್ಪಿಸಿರುತ್ತಾರೆ.ಅಂದರೆ ಇಲ್ಲಿ ಮಕ್ಕಳು–ಮಕ್ಕಳು, ಶಿಕ್ಷಕರು–ಮಕ್ಕಳು ಪರಸ್ಪರ ಮಾತನಾಡುತ್ತಾರೆ.ಈ ಸಾಧನೆಯು ಕೂಡಾ ಅತ್ಯಂತ ಕ್ಷೀಣವಾಗಿರುವುದು ಅಧ್ಯಯನದಿಂದ ಕಂಡು ಬಂದಿದೆ.

ಕಲಿಕೆಯ ಬಗ್ಗೆ ಹೆಚ್ಚಿನ ಶಾಲಾ ಶಿಕ್ಷಕರು ನಾನೇ ಕಲಿಸಬೇಕು ಎನ್ನುವ ಮನೋಭಾವವನ್ನು ಹೊಂದಿದ್ದಾರೆ.ಅಂದರೆ ಶಿಕ್ಷಕ ಕೇಂದ್ರಿತ ಧೋರಣೆ, ತನಗೆ ಹೆಚ್ಚು ಗೊತ್ತಿದೆ, ತಾನು ಹೇಳಿದ್ದೇ ಅಂತಿಮ ಎನ್ನುವ ಭಾವ. 34.8%ನಗರ ಪ್ರದೇಶದ ಸರಕಾರಿ ಮತ್ತು ಶೇ89ರಷ್ಟುಗ್ರಾಮೀಣ ಪ್ರದೇಶದ ಶಿಕ್ಷಕರುಪರಸ್ಪರ ಕಲಿಕೆಯಲ್ಲಿ ನಂಬಿಕೆ ಉಳ್ಳವರಾಗಿದ್ದಾರೆ.ಇವರು ಮಕ್ಕಳ ಆಲೋಚನೆಗಳನ್ನು ಸ್ವೀಕರಿಸುತ್ತಾರೆ ಮತ್ತು ಮಕ್ಕಳಿಂದ ಕಲಿಯುತ್ತಾರೆ ಮತ್ತು ಮಕ್ಕಳಿಗಾಗಿ ಕಲಿಯುತ್ತಾರೆ ಕೂಡಾ.ಆದರೆ ಇಲ್ಲಿಯೂ ಶೇ.55 ರಷ್ಟು ಗ್ರಾಮೀಣಾ ಪ್ರದೇಶದ ಶಿಕ್ಷಕರಿಗಿಂತ ನಗರ ಪ್ರದೇಶದ ಶಿಕ್ಷಕರು ಕಡಿಮೆ ಇರುವುದು ಗಮನಾರ್ಹ ಸಂಗತಿ.

ಒಟ್ಟಿನಲ್ಲಿ ಶಿಕ್ಷಕರ ಅನುಕೂಲಿಸುವಿಕೆ ತುಂಬಾ ದುರ್ಬಲವಾಗಿದ್ದು, ಶಿಕ್ಷಕ ಕೇಂದ್ರಿತ–ಸಾಂಪ್ರದಾಯಿಕ ಧೋರಣೆಯೇ ಹೆಚ್ಚಾಗಿರುವುದು ಅಧ್ಯಯನದಿಂದ ಕಂಡು ಬರುತ್ತಿದೆ.ಶಿಕ್ಷಕರ ಅನುಕೂಲಿಸುವಿಕೆ ಇನ್ನೂ ಹೆಚ್ಚು ಮಕ್ಕಳ ಪರವಾಗಿರುವಂತೆ ಶಿಕ್ಷಕರ ಚಿಂತನೆಗಳನ್ನು ಉದ್ದೀಪನಗೊಳಿಸಬೇಕಾಗಿದೆ.

**ಪ್ರಶ್ನೆ 11**

**ವಿದ್ಯಾರ್ಥಿಗಳ ಪ್ರಶ್ನಿಸುವಿಕೆ**

11ಅ) ತರಗತಿಯಲ್ಲಿ ಮಕ್ಕಳು ಕೇಳಿದ ಪ್ರಶ್ನೆಗಳ ಸಂಖ್ಯೆ---------

11ಆ) ಪ್ರಶ್ನೆ ಕೇಳಿದ ಮಕ್ಕಳ ಸಂಖ್ಯೆ ------

11ಇ) ಪ್ರಶ್ನೆಗಳ ವಿಧಗಳು

1) ತರ್ಕಬದ್ಧ ಪ್ರಶ್ನೆಗಳ ಸಂಖ್ಯೆ ---------
2) ಮಾರ್ಗದರ್ಶಿ ಪ್ರಶ್ನೆಗಳ ಸಂಖ್ಯೆ -----
3) ಸಾಮಾನ್ಯ ಪ್ರಶ್ನೆಗಳ ಸಂಖ್ಯೆ ---------

**ಕೋಷ್ಟಕ 66:**

| ಮಕ್ಕಳ ಪ್ರಶ್ನಿಸುವಿಕೆ | | | | | | |
|---|---|---|---|---|---|---|
| ಶಾಲೆಗಳ ವಿಧ | ಪಾಠ ವೀಕ್ಷಣೆ ಮಾಡಲಾದ ತರಗತಿಯಲ್ಲಿದ್ದ ಮಕ್ಕಳ ಸಂಖ್ಯೆ | 11ಅ | 11ಆ | 11ಇ | | |
| | | ಮಕ್ಕಳ ಸಂಖ್ಯೆ | ಮಕ್ಕಳು ಕೇಳಿದ ಪ್ರಶ್ನೆಗಳ ಸಂಖ್ಯೆ | ತರ್ಕಬದ್ಧ ಪ್ರಶ್ನೆಗಳ ಸಂಖ್ಯೆ | ಮಾರ್ಗದರ್ಶಿತ ಪ್ರಶ್ನೆಗಳ ಸಂಖ್ಯೆ | ಸಾಮಾನ್ಯ ಪ್ರಶ್ನೆಗಳ ಸಂಖ್ಯೆ |
| ನಗರ/ ಹಿಂದುಳಿದ | 1394 | 04 | 4 | 0 | 0 | 4 |
| ಗ್ರಾಮೀಣ/ ಮುಂದುವರೆದ | 462 | 17 | 36 | 0 | 4 | 32 |

ನಲಿಕಲಿ ಹೊರತು ಪಡಿಸಿ ಇತರ ತರಗತಿಗಳಲ್ಲಿ ನಗರ ಪ್ರದೇಶದ ಸರಕಾರಿ ಶಾಲೆಯ 1394 ಮಕ್ಕಳಲ್ಲಿ ಕೇವಲ 04 ಮಕ್ಕಳು ಪ್ರಶ್ನೆ ಕೇಳಿರುತ್ತಾರೆ. ಗ್ರಾಮೀಣ ಪ್ರದೇಶದ 462 ಮಕ್ಕಳಲ್ಲಿ ಕೇವಲ 17 ಮಕ್ಕಳು ಪ್ರಶ್ನೆ ಕೇಳಿರುತ್ತಾರೆ. ನಗರ ಹಾಗೂಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ತರ್ಕ ಬದ್ಧಪ್ರಶ್ನೆಗಳನ್ನು ಕೇಳಿರುವುದಿಲ್ಲ. 04 ಮಾರ್ಗದರ್ಶಿ ಪ್ರಶ್ನೆಗಳು ಹಾಗೂ 32 ಸಾಮಾನ್ಯ ಪ್ರಶ್ನೆಗಳನ್ನು ನಗರಪ್ರದೇಶದ ಸರಕಾರಿ ಶಾಲೆಯ ಮಕ್ಕಳು ಪ್ರಶ್ನೆ ಕೇಳಿರುತ್ತಾರೆ. ಆದರೆ ನಗರ ಪ್ರದೇಶದಲ್ಲಿ ಕೇವಲ 04 ಮಕ್ಕಳು ಮಾತ್ರ ಸಾಮಾನ್ಯ ಪ್ರಶ್ನೆಗಳನ್ನು ಕೇಳಿದ್ದು, ಹೆಚ್ಚು ಪ್ರಶ್ನೆಗಳನ್ನು ಕೇಳಲು ಮಕ್ಕಳನ್ನು ಪ್ರೇರೇಪಿಸಬೇಕಾಗಿದೆ.ಶಿಶು ಕೇಂದ್ರಿತ ಶಿಕ್ಷಣದ ಅರ್ಥ ಇರುವುದೇ ಮಕ್ಕಳ ಪ್ರಶ್ನಿಸುವಿಕೆಯಲ್ಲಿ.ಆದುದರಿಂದ ಶಿಶು ಕೇಂದ್ರಿತ ಶಿಕ್ಷಣದ ನಿಜವಾದ ಆಚರಣೆ ಎಷ್ಟು ಅನುಷ್ಠಾನವಾಗಿದೆ ಎನ್ನುವುದು ಇಲ್ಲಿ ಸ್ಪಷ್ಟವಾಗುತ್ತಿದೆ.ಪ್ರಶ್ನೆ ಕೇಳುವುದು ಮಕ್ಕಳ ಸಹಜ ಸ್ವಭಾವ. ಆದರೆ ಶಿಕ್ಷಕರ ತರಗತಿಗಳು ವಿದ್ಯಾರ್ಥಿಗಳಲ್ಲಿ ಪ್ರಶ್ನೆಯನ್ನು ಸೃಜಿಸುವಲ್ಲಿ ವಿಫಲವಾಗಿದೆ.ಈ ಒಂದು ಪ್ರಶ್ನೆಯ ವಿಶ್ಲೇಷಣೆಯು ಶಿಕ್ಷಣದ ಗುಣಮಟ್ಟವನ್ನು ಪ್ರತಿನಿಧಿಸುತ್ತದೆ.ಈ ಅಂಶವನ್ನು ಗಂಭೀರವಾಗಿ ಪರಿಗಣಿಸಿ ಕಾರ್ಯಪ್ರವೃತ್ತವಾಗಬೇಕಾಗಿದೆ.

**ಪ್ರಶ್ನೆ12**

12ಅ) ಕಲಿಕೆಯಲ್ಲಿ ವಿದ್ಯಾರ್ಥಿಯ ಜ್ಞಾನಾತ್ಮಕ(ಅಔಉಓಏಖಐಗಇ) ವಲಯದ ವಿಕಾಸಕ್ಕೆ ಅವಕಾಶ ಕಲ್ಪಿಸಲಾಗಿತ್ತೇ?

12ಆ) ಕಲಿಕೆಯಲ್ಲಿ ವಿದ್ಯಾರ್ಥಿಯ ಮನೋಗತ್ಯಾತ್ಮಕ(ಕಖಜಅಊಔಒಔಖಔಖ) ವಿಕಾಸಕ್ಕೆ ಅವಕಾಶ ಕಲ್ಪಿಸಲಾಗಿತ್ತೇ?

12ಇ) ಕಲಿಕೆಯಲ್ಲಿ ವಿದ್ಯಾರ್ಥಿಯ ಭಾವನಾತ್ಮಕ(ಂಈಈಇಅಖಐಗಇ) ವಲಯದ ವಿಕಾಸಕ್ಕೆ ಅವಕಾಶ ಕಲ್ಪಿಸಲಾಗಿತ್ತೇ?

12ಈ) ಶಿಕ್ಷಕರಿಗೆ ತನ್ನ ತರಗತಿಯಲ್ಲಿರುವ ಪ್ರತಿ ಮಗುವಿನ ಕಲಿಕೆಯ ಪ್ರಗತಿಯನ್ನು ಅರ್ಥೈಸಿಕೊಳ್ಳಲು ಸಾಧ್ಯವಾಯಿತೇ?

12ಉ) ಶಿಕ್ಷಕರು ತರಗತಿಯ ಮಕ್ಕಳ ವಿಭಿನ್ನ ಕಲಿಕಾ ಅಗತ್ಯಕನ್ನುಗುಣವಾಗಿ ಕಾರ್ಯ ತಂತ್ರವನ್ನು ಬಳಕೆ ಮಾಡುತ್ತಿದ್ದಾರೆಯೇ?

12ಊ) ತರಗತಿಯಲ್ಲಿಸ್ವ ಮೌಲ್ಯಮಾಪನಕ್ಕೆ ಅವಕಾಶ ಕಲ್ಪಿಸಲಾಗಿತ್ತೇ?

12ಋ) ಶಿಕ್ಷಕರು ಮಕ್ಕಳ ಕಲಿಕಾ ಪ್ರಗತಿಯನ್ನು ಗಮನಿಸಿ ಹಿಮ್ಮಾಹಿತಿ ನೀಡುತ್ತಿದ್ದಾರೆಯೇ?

12ಎ) ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಸೂಕ್ಷ್ಮವಾಗಿ ವೀಕ್ಷಣೆ ಮಾಡಿ ದಾಖಲಿಸುತ್ತಿದ್ದಾರೆಯೇ?

12ಏ) ವಿಶೇಷ ಅಗತ್ಯವುಳ್ಳ ಮಕ್ಕಳ ಕಲಿಕೆಯ ಪ್ರಗತಿಯನ್ನು ತಾವೇ ಗಮನಿಸುತ್ತಿದ್ದಾರೆಯೇ?

12ಐ) ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಅಗತ್ಯಕ್ಕನುಗುಣವಾಗಿ ನೆರವನ್ನು ನೀಡುತ್ತಿದ್ದಾರೆಯೇ?

**ಕೋಷ್ಟಕ 67:**

| | ಸಿಸಿಇ | | | | | | | | | |
|---|---|---|---|---|---|---|---|---|---|---|
| ಶಾಲೆಯ ವಿಧ | 12ಅ | 12ಆ | 12ಇ | 12ಈ | 12ಉ | 12ಊ | 12ಋ | 12ಎ | 12ಏ | 12ಐ |
| | ಹೌದು | ಹೌದು | ಹೌದು | ಹೌದು | ಹೌದು | ಹೌದು | ಹೌದು | ಹೌದು | ಹೌದು | ಹೌದು |
| ನಗರ/ ಹಿಂದುಳಿದ | 17.4 | 13 | 8.7 | 4.35 | 17.4 | 4.35 | 17.4 | 8.7 | 0 | 13 |
| ಗ್ರಾಮೀಣ/ ಮುಂದುವರೆದ | 89 | 33 | 44 | 44 | 44 | 44 | 78 | 28 | 11 | 67 |

**ಗ್ರಾಫ್–40**




ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ 17.4%ನಗರ ಪ್ರದೇಶದ ಶಿಕ್ಷಕರು ಮತ್ತು 89% ಗ್ರಾಮೀಣ ಪ್ರದೇಶದ ಶಿಕ್ಷಕರು ಕಲಿಕೆಯಲ್ಲಿ ಮಕ್ಕಳ ಜ್ಞಾನಾತ್ಮಕ ವಲಯದ ವಿಕಾಸಕ್ಕೆ ಅವಕಾಶ ಕಲ್ಪಿಸಿದರೆ,ನಗರ ಪ್ರದೇಶದ ಸರಕಾರಿ ಶಾಲೆಯ13% ಮತ್ತು ಗ್ರಾಮೀಣ ಪ್ರದೇಶದ 33% ಶಿಕ್ಷಕರು ಕಲಿಕೆಯಲ್ಲಿ ಮಕ್ಕಳ ಮನೋಗತ್ಯಾತ್ಮಕ ವಲಯದ ವಿಕಾಸಕ್ಕೆ ಅವಕಾಶ ಕಲ್ಪಿಸಿರುವುದು ಕಂಡು ಬಂದಿದೆ. ಹಾಗೆಯೇ ಭಾವನಾತ್ಮಕ ವಲಯದಲ್ಲಿ 8.7% ನಗರಪ್ರದೇಶದ ಸರಕಾರಿ ಶಾಲೆಯಮತ್ತು 44% ಗ್ರಾಮೀಣ ಪ್ರದೇಶದ ಶಿಕ್ಷಕರು ಕಲಿಕೆಯಲ್ಲಿ ಮಕ್ಕಳ ಭಾವನಾತ್ಮಕ ವಲಯದ ವಿಕಾಸಕ್ಕೆ ಅವಕಾಶ ಕಲ್ಪಿಸಿರುವುದು ಕಂಡು ಬಂದಿದೆ. ಸಮಗ್ರ ಮೌಲ್ಯಮಾಪನಕ್ಕೆ ಇದು ಒಂದು ಸವಾಲೇ ಆಗಿದೆ.ಶಿಕ್ಷಕರು ಮಾಹಿತಿದಾರಾಗಿದ್ದು ಮಾಹಿತಿ ವರ್ಗಾವಣೆಗೆ ಹೆಚ್ಚು ಒತ್ತನ್ನು ನೀಡುವುದರಿಂದ ಚಟುವಟಿಕೆಗಳ ಮೂಲಕ 3 ವಲಯಗಳ ವಿಕಾಸ ಮಾಡುವುದರಲ್ಲಿ ಹಿಂದುಳಿದಿದ್ದಾರೆ.ತಾತ್ವಿಕವಾಗಿ ಅರ್ಥೈಸುವಿಕೆ ಆಗದಿರುವುದು ಇದಕ್ಕೆ ಕಾರಣವಾಗಿರಬಹುದು.ಈ ಅಂಶಗಳ ಕುರಿತು ತರಬೇತಿಗಳಲ್ಲಿ ಬೆಳಕನ್ನು ಚೆಲ್ಲಬೇಕಾಗಿದೆ.

ರೂಪಣಾತ್ಮಕ ಮೌಲ್ಯಮಾಪನದಲ್ಲಿ ಮಕ್ಕಳನ್ನು ಕಲಿಕೆಯ ಹಿನ್ನಲೆಯಲ್ಲಿ ಅರ್ಥಮಾಡಿಕೊಳ್ಳುವುದು ಅತೀ ಅಗತ್ಯ ಅಂಶವಾಗಿರುತ್ತದೆ. 95%ರಷ್ಟು ನಗರಪ್ರದೇಶದ ಸರಕಾರಿ ಶಾಲೆಯಶಿಕ್ಷಕರು 56%ರಷ್ಟು ಗ್ರಾಮೀಣ ಪ್ರದೇಶದ ಶಿಕ್ಷಕರು ಮಕ್ಕಳನ್ನು ಅರ್ಥೈಸಿಕೊಳ್ಳುವ ಪ್ರಯತ್ನವನ್ನೇ ಮಾಡಿಲ್ಲ. 17.4%ರಷ್ಟು ನಗರಪ್ರದೇಶದ ಸರಕಾರಿ ಶಾಲೆಯಶಿಕ್ಷಕರು ಮಕ್ಕಳ ವಿಭಿನ್ನ ಕಲಿಕಾ ಅಗತ್ಯಕ್ಕನುಗುಣವಾಗಿ ಕಾರ್ಯತಂತ್ರವನ್ನು ರೂಪಿಸಿರುವುದು ಕಂಡು ಬಂದಿದೆ. 56%ಗ್ರಾಮೀಣ ಪ್ರದೇಶದ ಶಿಕ್ಷಕರು ತರಗತಿ ಪ್ರಕ್ರಿಯೆ ನಡೆಯುತ್ತಿರುವಾಗ ತಾವೇ ಮಕ್ಕಳ ಕಲಿಕೆಯ ಮೌಲ್ಯ ಮಾಪನ ಮಾಡುತ್ತಿದ್ದು ಸಹಪಾಠಿ ಮೌಲ್ಯ ಮಾಪನ ಮತ್ತು ಸ್ವ ಮೌಲ್ಯಮಾಪನ ಮಾಡಲು ಅವಕಾಶ ಕೊಟ್ಟಿರುವುದಿಲ್ಲ. ಮಕ್ಕಳ ಕಲಿಕಾ ಪ್ರಗತಿಯನ್ನು ಸೂಕ್ಷ್ಮವಾಗಿ ಗಮನಿಸಿ ದಾಖಲಿಸುವುದು, ಮಕ್ಕಳಿಗೆ ಹಿಮ್ಮಾಹಿತಿಯನ್ನು ನೀಡುವುದು

ಅತೀ ಮುಖ್ಯವಾಗಿದೆ.ಆಯ್ಕೆ ಮಾಡಿದ ಕೆಲವು ಶಾಲೆಗಳಲ್ಲಿ ಮಾತ್ರ ವಿಶೇಷ ಅಗತ್ಯವುಳ್ಳ ಮಕ್ಕಳು ಕಲಿಯುತ್ತಿದ್ದು, ಗ್ರಾಮೀಣಾ ಪ್ರದೇಶದಲ್ಲಿ ಶೇ.67 ರಷ್ಟು ಮಕ್ಕಳಿಗೆ ಅಗತ್ಯಗನುಗುಣವಾಗಿ ನೇರವನ್ನು ನೀಡುತ್ತಿದ್ದು ಇದು ನಗರ ಪ್ರದೇಶದಲ್ಲಿ ಕೇವಲ ಶೇ13 ರಷ್ಟಿರುವುದು ಆಶ್ಚರ್ಯ ತಂದಿದೆ.

ಶಿಕ್ಷಕರು ಮಕ್ಕಳ ಕಲಿಕಾ ಪ್ರಗತಿಯನ್ನು ಗಮನಿಸಿ ಹಿಮ್ಮಾಹಿತಿ ನೀಡುತ್ತಿರುವುದರಲ್ಲಿ ಗ್ರಾಮೀಣಾ ಹಾಗೂ ನಗರ ಪ್ರದೇಶದ ವ್ಯತ್ಯಾಸ ಶೇ.61 ರಷ್ಟಿರುವುದು ಅತ್ಯಂತ ಗಮನಾರ್ಹ ಸಂಗತಿ.

ವಿಶೇಷ ಅಗತ್ಯವುಳ್ಳ ಮಕ್ಕಳು ಇರುವಲ್ಲಿ ಎಲ್ಲಾ ಶಿಕ್ಷಕರು ತಾವೇ ಮಕ್ಕಳ ಪ್ರಗತಿಯನ್ನು ಗಮನಿಸಿ ಅಗತ್ಯ ನೆರವನ್ನು ನೀಡುತ್ತಿರುವುದು ಧನಾತ್ಮಕ ಅಂಶವಾಗಿದ್ದು, ಇಲಾಖೆ ನೀಡಿರುವ ತರಬೇತಿ ಫಲಪ್ರದವಾಗುತ್ತಿದೆ ಎಂದು ಹೇಳಬಹುದು.ಈ ಮಕ್ಕಳಿಗೆ ಸಂಬಂಧಿಸಿದಂತೆ ಇನ್ನೂ ಹೆಚ್ಚು ತಜ್ಞತೆಯ ಅಗತ್ಯವಿದೆ.

**ಮೌಲ್ಯಮಾಪನದ ದಾಖಲೆಗಳು:**

**13. ಕೃತಿ ಸಂಪುಟ ನಿರ್ವಹಣೆ:**

13ಅ)ಕೃತಿ ಸಂಪುಟದಲ್ಲಿರುವ ಹಾಳೆಗಳು ಕಲಿಕೆಯ ಪ್ರಯತ್ನವನ್ನು ದಾಖಲಿಸುವ ಹಾಳೆಗಳಾಗಿವೆಯೇ?

13ಆ)ಕೃತಿ ಸಂಪುಟದಲ್ಲಿರುವ ದಾಖಲೆಗಳನ್ನು ರೂಪಾತ್ಮಕ ಮೌಲ್ಯಮಾಪನಕ್ಕೆ ಬಳಸಲಾಗಿದೆಯೇ?

**14. ಪ್ರಾಜೆಕ್ಟ್‌ಗಳು**

14ಅ)ಸಂಗ್ರಹಿಸಿದ ಮಾಹಿತಿಗಳನ್ನು ವಿಶ್ಲೇಷಿಸಲಾಗಿದೆಯೇ?

14ಆ)ಮಾಹಿತಿಯಿಂದ ಒಳನೋಟಗಳನ್ನು ಪಡೆಯಲಾಗಿದೆಯೇ

**ಕೋಷ್ಟಕ 68:**

| | ಕೃತಿ ಸಂಪುಟ ನಿರ್ವಹಣೆ | | ಪ್ರಾಜೆಕ್ಟ್‌ಗಳು | |
|---|---|---|---|---|
| | 13ಅ | 13ಆ | 14ಅ | 14ಆ |
| ಶಾಲೆಯ ವಿಧ | ಹೌದು | ಹೌದು | ಹೌದು | ಹೌದು |
| ನಗರ/ ಹಿಂದುಳಿದ | 39.1 | 21.7 | 4.35 | 4.35 |
| ಗ್ರಾಮೀಣ/ ಮುಂದುವರೆದ | 72 | 61 | 56 | 22 |

ಗ್ರಾಫ್–41



ಮಕ್ಕಳು ಕಲಿಕಾ ಚಟುವಟಿಕೆಯಲ್ಲಿ ತೊಡಗಿರುವಾಗ ಕಲಿಕೆ ಹೇಗೆ ಸಾಗುತ್ತದೆ ಎನ್ನುವುದನನ್ನು ಶಿಕ್ಷಕ ತಜ್ಞ ರೀತಿಯಲ್ಲಿ ಸಾಧನ ತಂತ್ರಗಳ ಸಹಾಯದಿಂದ ಅವಲೋಕನ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಕಲಿಕಾ ಚಟುವಟಿಕೆಗಳಿಗೆ ಅನುಗುಣವಾಗಿ ಅಂಶಗಳನ್ನು ಗುರುತಿಸಬೇಕು, ತರಗತಿಯಲ್ಲಿ ಚಟುವಟಿಕೆಗೆ ಮುನ್ನ ಅದನ್ನು ಮಕ್ಕಳಿಗೆ ಪ್ರದರ್ಶಿಸಬೇಕೆಂದು ಈ ಸಾಲಿನ ತರಬೇತಿಯಲ್ಲಿ ನಿರ್ದೇಶಿಸಲಾಗಿತ್ತು.ಇದರ ಅನುಷ್ಠಾನವು ತೀರಾ ದುರ್ಬಲವಾಗಿರುತ್ತದೆ.2013–14 ನೇ ಸಾಲಿನ ಪುನಶ್ಚೇತನ ಸಿಸಿಇ ತರಬೇತಿಯಾದ ಸಾಧನಾ ಪುಷ್ಠಿಯ ಅನುಷ್ಠಾನವು ಪರಿಣಾಮಕಾರಿಯಾಗಿ ಆಗಿಲ್ಲದಿರುವುದು ಅಧ್ಯಯನದಿಂದ ಕಂಡು ಬಂದಿದೆ.ತರಬೇತಿ ಕಾರ್ಯತಂತ್ರಗಳನ್ನು ಬದಲಿಸಬೇಕಾಗಿದೆ.

ಕೃತಿ ಸಂಪುಟವು ಮಗುವಿನ ಕಲಿಕೆ ಹೇಗೆ ಸಾಗುತ್ತಿದೆ ಎನ್ನುವುದಕ್ಕೆ ಒಂದು ಸಾಕ್ಷಿಯನ್ನು ನೀಡುತ್ತದೆ ಮತ್ತು ಇಲಾಖೆಯು ಮಗುವಾರು ಕೃತಿ ಸಂಪುಟ ನಿರ್ವಹಣೆ ಮಾಡುವುದನ್ನು ಕಡ್ಡಾಯಗೊಳಿಸಿದೆ ಕೂಡಾ. ಆದರೆ ಕೇವಲ ಸರಾಸರಿ ಶೇ55 ಶಾಲೆಗಳಲ್ಲಿ ಮಾತ್ರ ಕೃತಿ ಸಂಪುಟ ನಿರ್ವಹಣೆ ಮಾಡುತ್ತಿದ್ದಾರೆ.ಕೆಲವು ಶಿಕ್ಷಕರು ಮಕ್ಕಳು ನಿರ್ವಹಿಸಿರುವ ಎಲ್ಲಾ ಹಾಳೆಗಳನ್ನು ಕೃತಿ ಸಂಪುಟದಲ್ಲಿ ಇಟ್ಟಿರುತ್ತಾರೆ.ಅದರಲ್ಲಿ ಸರಾಸರಿ 41% ಶಿಕ್ಷಕರು ಕೃತಿ ಸಂಪುಟಗಳನ್ನು ರೂಪಣಾತ್ಮಕ ಮೌಲ್ಯಮಾಪನಕ್ಕೆ ಬಳಸಿರುವುದು ಕಂಡು ಬಂದಿದೆ.ಸಿಸಿಇ ಅನುಷ್ಠಾನದೊಳಗೆ ಕೃತಿ ಸಂಪುಟ ನಿರ್ವಹಣೆಯು ಮಹತ್ವದ ಪಾತ್ರವನ್ನು ವಹಿಸುತ್ತದೆ.ಆದರೆ ಇದರ ನಿರ್ವಹಣೆಯೂ ಅಷ್ಟೊಂದು ಆಶಾದಾಯಕವಾಗಿರುವುದಿಲ್ಲ.

ಯೋಜನೆಗಳು ಮಕ್ಕಳಿಗೆ ಜ್ಞಾನದ ಭಂಡಾರವನ್ನೇ ನೀಡಬಲ್ಲದು ಎಂದು ಎನ್‌ಸಿಎಫ್–2005 ಉಲ್ಲೇಖಿಸಿದೆ.ಒಂದಷ್ಟು ಮಾಹಿತಿ ಮತ್ತು ಚಿತ್ರಗಳನ್ನು ಹುಡುಕಿ ಅಂಟಿಸುವುದು ಪ್ರಾಜೆಕ್ಟ್‌ಗಳ ಉದ್ದೇಶವಲ್ಲ. ಅದನ್ನು ಮೀರಿ ಮಾಹಿತಿಯ ಆಕರಗಳನ್ನು ಹುಡುಕಿ, ದತ್ತಾಂಶಗಳನ್ನು ಕಲೆ ಹಾಕಿ, ಮಾಹಿತಿ ಕ್ರೋಡೀಕರಿಸಿ, ವಿಶ್ಲೇಷಿಸಿ, ಒಳನೋಟಗಳನ್ನು ಪಡೆದುಕೊಂಡು, ವರದಿಯನ್ನು ಸಿದ್ಧಪಡಿಸಿ, ತರಗತಿಯಲ್ಲಿ ಮಂಡನೆ ಮಾಡುವಂತಹ ಆಶಯಗಳನ್ನು ಯೋಜನಾ ಕಾರ್ಯವು ಹೊಂದಿರುತ್ತದೆ.ಆದರೆ ಇದರ ಅನುಷ್ಠಾನವನ್ನು ಗಮನಿಸಿದಾಗ ಹೆಚ್ಚಿನ ಶಿಕ್ಷಕರು ಮಾಹಿತಿ ಸಂಗ್ರಹಿಸಲು ಅವಕಾಶ ಕಲ್ಪಿಸಿರುವುದು ಕಂಡು ಬಂದಿದೆ.ಅದೂ ಬರೇ ಚಿತ್ರಗಳನ್ನು ಸಂಗ್ರಹಿಸುವ ಅವಕಾಶಗಳೇ ಜಾಸ್ತಿ.ಸರಾಸರಿ ಶೇ30ಶಿಕ್ಷಕರು ಮಾಹಿತಿ ವಿಶ್ಲೇಷಿಸಲು ಅವಕಾಶ ಕಲ್ಪಿಸಿರುತ್ತಾರೆ.ಸರಾಸರಿ ಶೇ13 ಶಿಕ್ಷಕರು ಮಾಹಿತಿಯಿಂದ ಒಳನೋಟಗಳನ್ನು ಪಡೆಯಲು ಮಕ್ಕಳಿಗೆ ಅವಕಾಶ ಕಲ್ಪಿಸಿರುತ್ತಾರೆ. ಹೆಚ್ಚಿನ ಶಿಕ್ಷಕರು ಮಕ್ಕಳಿಗೆ ತಾವು ಮಾಡಿರುವ ಯೋಜನೆಯ ವರದಿಯನ್ನು ಸಿದ್ಧಪಡಿಸಲು ಅನಕಾಶ ನೀಡಿರುತ್ತಾರೆ. ಕೆಲವು ಶಿಕ್ಷಕರು ವಿದ್ಯಾರ್ಥಿಗಳಿಗೆ ತಮ್ಮ ಯೋಜನಾ ಕಾರ್ಯದ ಅನುಭವಗಳನ್ನು ತಮ್ಮ ಸ್ನೇಹಿತರೊಂದಿಗೆ ಹಂಚಿಕೊಳ್ಳಲು ಅನುವು ಮಾಡಿರುತ್ತಾರೆ.ಯೋಜನೆಗಳನ್ನು ಯಾವ ಉದ್ದೇಶಗಳಿಗಾಗಿ ಕೈಗೊಳ್ಳಲು ತಿಳಿಸಲಾಗಿತ್ತೋ ಅದರ ಉದ್ದೇಶ ಈಡೇರದಿರುವುದು ಕಂಡು ಬರುತ್ತದೆ.

### ಪ್ರಶ್ನೆ15:

ಶಿಕ್ಷಕರು ಮಕ್ಕಳ ಕಲಿಕೆಗಾಗಿ ಈವರೆಗೆ ಮಾಡಿರುವ ಚಟುವಟಿಕೆಗಳು 15ಅ)ಚರ್ಚೆ 15ಆ)ಗುಂಪು ಚರ್ಚೆ 15ಇ)ಚರ್ಚಾ ಗೋಷ್ಠಿ 15ಈ)ನಿಯೋಜಿತ ಕಾರ್ಯ(ಅಸೈನ್ ಮೆಂಟ್) 15ಉ)ಗೃಹಪಾಠ 15ಊ)ಸಮೀಕ್ಷೆ 15ಋ)ಪ್ರಾಜೆಕ್ಟ್ 15ಎ)ಪ್ರಯೋಗ, 15ಏ) ಹೊರಸಂಚಾರ 15ಐ)ಪರಾಮರ್ಶನ 15ಒ) ಸೆಮಿನಾರ್ 15ಓ)ಕಾರ್ಯಾಗಾರ

**ಕೋಷ್ಟಕ 69:**

| | ಚಟುವಟಿಕೆಗಳು | | | | | | | | | | | |
|---|---|---|---|---|---|---|---|---|---|---|---|---|
| | 15ಅ | 15 ಆ | 15ಇ | 15ಈ | 15ಉ | 15 ಊ | 15ಋ | 15ಎ | 15ಏ | 15ಐ | 15 ಒ | 15ಓ |
| ಶಾಲೆಯ ವಿಧ | ಚರ್ಚೆ | ಚರ್ಚೆ | ವಿಚಾರ ಗೋಷ್ಠಿ | ನಿಯೋಜಿತ ಕಾರ್ಯ | ಗೃಹ ಪಾಠ | ಸಮೀಕ್ಷೆ | ಪ್ರಾಜೆಕ್ಟ್ | ಪ್ರಯೋಗ | ಹೊರ ಸಂಚಾರ | ಪರಾಮರ್ಶನ | ಸೆಮಿನಾರ್ | ಕಾರ್ಯಾಗಾರ |
| ನಗರ/ ಹಿಂದುಳಿದ | 1 | 4 | 0 | 3 | 3 | 1 | 2 | 0 | 0 | 1 | 0 | 0 |
| ಗ್ರಾಮೀಣ/ ಮುಂದುವರೆದ | 8 | 3 | 1 | 4 | 7 | 1 | 5 | 1 | 3 | 0 | 1 | 0 |

ಅರ್ಥಪೂರ್ಣವಾಗಿ ರೂಪಿಸಿದ ಕಲಿಕಾ ಚಟುವಟಿಕೆಗಳು ಮಕ್ಕಳನ್ನು ಮಕ್ಕಳಾಗಿ ಕಲಿಕೆಯಲ್ಲಿ ಸಹಜವಾಗಿ ತೊಡಗಿಕೊಳ್ಳಲು ಸಹಾಯ ಮಾಡುತ್ತದೆ.ಈ ಸಹಜವಾದ ತೊಡಗಿಕೊಳ್ಳುವಿಕೆಯಲ್ಲಿಯೇ ವ್ಯಕ್ತಿತ್ವದ 3 ವಲಯಗಳ ವಿಕಾಸವನ್ನು ಗಮನಿಸಿ ಪೋಷಿಸಬಹುದಾಗಿದೆ. ಆದರೆ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಗ್ರಾಮೀಣ ಪ್ರದೇಶದ 8ಜನ ಶಿಕ್ಷಕರು ಚರ್ಚೆ, 3ಜನ ಶಿಕ್ಷಕರು ಗುಂಪು ಚರ್ಚೆ, ಒಬ್ಬ ಶಿಕ್ಷಕರು ವಿಚಾರ ಗೋಷ್ಠಿ, 04ಜನ ಶಿಕ್ಷಕರು ನಿಯೋಜಿತ ಕಾರ್ಯ, 7ಜನ ಶಿಕ್ಷಕರು ಗೃಹಪಾಠ, ಒಬ್ಬರು ಶಿಕ್ಷಕರು ಸಮೀಕ್ಷೆಗಳನ್ನು, 5ಜನ ಶಿಕ್ಷಕರು ಪ್ರಾಜೆಕ್ಟ್, ಒಬ್ಬರು ಶಿಕ್ಷಕರು ಪ್ರಯೋಗಗಳನ್ನು ಮಾಡಲು ಅವಕಾಶ ಕಲ್ಪಿಸಿರುತ್ತಾರೆ. ಆದರೆ ನಗರ ಶಾಲೆಗಳಲ್ಲಿ ಪ್ರಾಜೆಕ್ಟ್‌ಗಳ ನಿರ್ವಹಣಾ ಕಾರ್ಯ ಹೆಚ್ಚಿನ ಭಾಗ ನಿಯೋಜಿತ ಕಾರ್ಯಕ್ಕೆ ಮೀಸಲಾಗಿರುವುದು ಅತ್ಯಂತ ಶೋಚನೀಯ. ಎಲ್ಲಾ ಚಟುವಟಿಕೆಗಳನ್ನು ಮಾಡಲು ಎಲ್ಲಾ ಮಕ್ಕಳಿಗೂ ಅವಕಾಶ ಸಿಕ್ಕಿರುವುದಿಲ್ಲ. ಹೊರಸಂಚಾರ, ಗ್ರಂಥಾಲಯ ಪುಸ್ತಕಗಳ ಪರಾಮರ್ಶನ, ಸೆಮಿನಾರ್‌ಗಳಲ್ಲಿ ಎರಡು ತಾಲ್ಲೂಕುಗಳಲ್ಲಿ ಕಡಿಮೆ ಸಾಧನೆ ಇದೆ ಹಾಗೂ ಎರಡು ತಾಲ್ಲೂಕುಗಳಲ್ಲಿ ಕಾರ್ಯಾಗಾರಗಳನ್ನು ಮಾಡಲು ಅವಕಾಶಗಳನ್ನೇ ಕಲ್ಪಿಸಿರುವುದಿಲ್ಲ.

ವೈವಿಧ್ಯಮಯ ಚಟುವಟಿಕೆಗಳು ತರಗತಿಯ ಜೀವಂತಿಕೆಯನ್ನು ಉಳಿಸುತ್ತದೆ ಮತ್ತು ತಾವೇ ತೊಡಗಿಕೊಳ್ಳುವುದರಿಂದ ಜ್ಞಾನದ ರಚನೆಗೂ ಇದು ಸಹಾಯಮಾಡುತ್ತದೆ.ಚರ್ಚೆ ಅಂದರೆ ಬರೇ ಶಿಕ್ಷಕರು–ಮಕ್ಕಳ ನಡುವಿನ ಕೆಲವೊಂದು ಪ್ರಶ್ನೆ–ಉತ್ತರ ಮತ್ತು ಸರಳವಾದ ಮಾತುಕತೆಗಳಿಗೆ ಸೀಮಿತವಾಗಿದೆ.ಆಳವಾದ ಚರ್ಚೆಗೆ ಮಕ್ಕಳನ್ನು ಹಚ್ಚುವಲ್ಲಿ ಶಿಕ್ಷಕರು ಸೋಲುತ್ತಿದ್ದಾರೆ.

ಇದೇ ರೀತಿ ಗುಂಪು ಚರ್ಚೆಯೂ ಕೂಡಾ.ಯಾವ ಕಲಿಕಾಂಶಕ್ಕೆ ಯಾವ ರೀತಿ ಗುಂಪು ಚರ್ಚೆಯನ್ನು ಯೋಜಿಸಬೇಕು ಮತ್ತು ಯಾವ ರೀತಿ ಗುಂಪು ಚರ್ಚೆಯನ್ನು ಅನುಕೂಲಿಸಬೇಕು ಎನ್ನುವುದು ಸಮಸ್ಯೆಯಾಗಿದೆ.ಕೆಲವು ವಿಷಯಗಳಿಗೆ ವಿಚಾರ ಗೋಷ್ಠಿ ನಡೆಸಬಹುದು.ಪಾಠಕ್ಕೆ ಪೂರಕವಾದ ಮಾಹಿತಿಗಳನ್ನು ಸಂಗ್ರಹಿಸಲು ನಿಯೋಜಿತ ಕಾರ್ಯಗಳನ್ನು ನೀಡಬಹುದು.ಗೃಹ ಪಾಠವನ್ನು ಸರಾಸರಿ 50% ಶಿಕ್ಷಕರು ನೀಡಿರುತ್ತಾರೆ. ಅದರಲ್ಲೂ ಪುನರಾವರ್ತನೆಗೆ ಹೆಚ್ಚು ಅವಕಾಶಗಳಾಗಿವೆಯೇ ವಿನ: ಕಲಿಕೆಯನ್ನು ತನ್ನ ಪರಿಸರಕ್ಕೆ ಅನ್ವಯಿಸುವ ಅವಕಾಶಗಳು ಬಹಳ ಕಡಿಮೆ.ಯೋಜನೆಗಳು ಚಿತ್ರಗಳನ್ನು ಅಂಟಿಸುವ ಮತ್ತು ಕೆಲವೇ ಮಾಹಿತಿಗಳನ್ನು ದಾಖಲಿಸುವ ಮಟ್ಟಕ್ಕೆ ಸೀಮಿತವಾಗಿರುತ್ತದೆ.ಈ ಎಲ್ಲಾ ಚಟುವಟಿಕೆಗಳನ್ನು ತನ್ನ ಸುತ್ತುಮುತ್ತಲಿನ ಚಟುವಟಿಕೆಗಳಿಗೆ ಅನ್ವಯ ಮಾಡಿಕೊಂಡರೆ ಉತ್ತಮ. ಇದರಿಂದ ಮಕ್ಕಳು ಕಲಿಯುತ್ತಾರೆ ಮತ್ತು ತಮ್ಮ ಸಮಾಜವನ್ನು ಮತ್ತು ಅದರ ಅನನ್ಯತೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ ಕೂಡಾ.ಸಾಂಪ್ರದಾಯಿಕ ವಿಧಾನಕ್ಕೆ ಒಗ್ಗಿರುವ ಶಿಕ್ಷಕರಿಗೆ ಈ ನಿಟ್ಟಿನಲ್ಲಿ ಅಮೂಲಾಗ್ರವಾಗಿ ಬದಲಾವಣೆ ಹೊಂದಲು ಸಾಧ್ಯವಾಗುತ್ತಿಲ್ಲ. ನೀಡುತ್ತಿರುವ ತರಬೇತಿಗಳು ಶಿಕ್ಷಕರ ಅಗತ್ಯಗಳನ್ನು ಪೂರೈಸುವಲ್ಲಿ ವಿಫಲವಾಗಿದೆ.ಶಿಕ್ಷಕರಲ್ಲಿ ಪ್ರಯೋಗ ಶೀಲತೆ, ಹೊಸತನ್ನು ಸವಾಲಾಗಿ, ಹೊಸತನದಿಂದ ನಿರ್ವಹಿಸುವ ಆಸಕ್ತಿಯೂ ಕಡಿಮೆ ಇದೆ ಎಂದು ಹೇಳಬಹುದು. ತಾವು ಮಾಡಿರುವುದು ಸರಿಯಾಗಿದೆ, ತಮ್ಮಲ್ಲಿ ಈ ವಿಚಾರಗಳ ಕುರಿತು ಗೊಂದಲಗಳಿಲ್ಲ ಎಂದು ಶಿಕ್ಷಕರು ಭಾವಿಸಿರುವುದು ಅಧ್ಯಯನದಿಂದ ಕಂಡು ಬಂದಿದೆ.(ಶಿಕ್ಷಕರ

ಪ್ರಶ್ನಾವಳಿ)ಸಮಾಲೋಚನಾ ಸಭೆಗಳಲ್ಲಿ ಈ ಅಂಶಗಳ ಕುರಿತು ಮಾರ್ಗದರ್ಶನ ನೀಡಬೇಕಾಗಿದೆ. ಸಿಆರ್‌ಪಿಗಳನ್ನು ಈ ನಿಟ್ಟಿನಲ್ಲಿ ಸಶಕ್ತಗೊಳಿಸಿ ಶಿಕ್ಷಕರಿಗೆ ಸೂಕ್ತ ಬೆಂಬಲ ನೀಡುವಂತೆ ಮಾಡಬೇಕಾಗಿದೆ.

## ಪ್ರಶ್ನೆ 16

## ಹಿಮ್ಮಾಹಿತಿ

16ಅ) ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಸಂಬಂಧಿಸಿದ ಹಿಮ್ಮಾಹಿತಿಯನ್ನು ಪೋಷಕರಿಗೆ ನೀಡಲಾಗುತ್ತಿದೆಯೇ?

16ಆ) ದಿನಚರಿಯಲ್ಲಿ ದಾಖಲಿಸಿರುವ ಅಥವಾ ಪಾಠಟಿಪ್ಪಣಿಯಲ್ಲಿ ನೀಡಿರುವ ಸ್ವಾವಲೋಕಿತ ಅಂಶಗಳು ಶಿಕ್ಷಕರ ವೃತ್ತಿಪರತೆಯನ್ನು ಹೆಚ್ಚಿಸುವಂತಿದೆಯೇ?

**ಕೋಷ್ಟಕ 70:**

| | ಹಿಮ್ಮಾಹಿತಿ | |
|---|---|---|
| | 16ಅ | 16ಆ |
| ಶಾಲೆಯ ವಿಧ | ಹೌದು | ಹೌದು |
| ನಗರ/ ಹಿಂದುಳಿದ | 34.3 | 4.35 |
| ಗ್ರಾಮೀಣ/ ಮುಂದುವರೆದ | 83 | 39 |

**ಗ್ರಾಫ್–42:**




ಮಗುವಿನ ಕಲಿಕೆ ಹೇಗೆ ಸಾಗುತ್ತಿದೆ ಎನ್ನುವ ಬಗ್ಗೆ ಮಕ್ಕಳಿಗೆ ಮತ್ತು ಮಕ್ಕಳ ಪೋಷಕರಿಗೆ ಹಿಮ್ಮಾಹಿತಿ ನೀಡಬೇಕಾದುದು ಒಟ್ಟಾರೆ ಮೌಲ್ಯಮಾಪನದ ಪ್ರಮುಖ ಭಾಗವಾಗುತ್ತದೆ.ಈ ನಿಟ್ಟಿನಲ್ಲಿ ಮೇಲಿನ ಆಲೇಖವನ್ನು ಗಮನಿಸಿದಾಗ ಹೆಚ್ಚಿನ ಶಾಲಾ ಶಿಕ್ಷಕರು ಪೋಷಕರಿಗೆ ಸಮುದಾಯದತ್ತ ಅಥವಾ ಪೋಷಕರ ಸಭೆ ಕರೆದು ಹಿಮ್ಮಾಹಿತಿ ನೀಡುತ್ತಿರುವುದು ಕಂಡು ಬರುತ್ತಿದೆ.ಕೆಲವೇ ಶಿಕ್ಷಕರು ಅಗತ್ಯಕ್ಕನುಗುಣವಾಗಿ ಪೋಷಕರನ್ನು ಆಗಾಗ್ಗೆ ಶಾಲೆಗೆ ಕರೆಸಿ ಹಿಮ್ಮಾಹಿತಿಯನ್ನು ನೀಡುತ್ತಿದ್ದಾರೆ.

83% ಗ್ರಾಮೀಣ ಪ್ರದೇಶದ ಸರ್ಕಾರಿ  ಶಾಲಾ ಶಿಕ್ಷಕರು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯ ಬಗ್ಗೆ ಚರ್ಚಿಸುತ್ತಿರುವುದು ಕಂಡು ಬಂದಿದೆ. ಆದರೆ ಶೇ34.3ರಷ್ಟು ನಗರ ಪ್ರದೇಶದ ಶಿಕ್ಷಕರು ಮಾತ್ರ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯ ಬಗ್ಗೆ ಚರ್ಚಿಸುತ್ತಿರುವುದು ಕಂಡು ಬಂದಿದೆ.ಮಗುವಿನ ಕಲಿಕೆ ಮತ್ತು ವ್ಯಕ್ತಿತ್ವಕ್ಕೆ ಸಂಬಂಧಿಸಿದಂತೆ ಪಾಲಕರು ಮತ್ತು ಪೋಷಕರು ಒಟ್ಟಾಗಿ ಸಮಾಲೋಚಿಸಬೇಕಾಗುತ್ತದೆ.ಶೇ.39 ರಷ್ಟು ಗ್ರಾಮೀಣ ಪ್ರದೇಶದ ಶಿಕ್ಷಕರ ಸ್ವಾವಲೋಕಿತ ಅಂಶಗಳು ಶಿಕ್ಷಕರ ವೃತ್ತಿಪರತೆಯನ್ನು ಹೆಚ್ಚಿಸುವಂತಿದ್ದರೆ ಇದು ನಗರ ಪ್ರದೇಶದಲ್ಲಿ ಶೇ4.35 ಆಗಿರುವುದು ಆಶ್ವರ್ಯ ತಂದಿದೆ.ಇದು ರೂಪಣಾತ್ಮಕ ಮೌಲ್ಯಮಾಪನದ ಬಹು ಮುಖ್ಯ ಭಾಗವಾಗಿದ್ದು ಇನ್ನಷ್ಟು ಪರಿಣಾಮಕಾರಿಯಾಗುವಂತೆ ಇಲಾಖೆ ಕ್ರಮ ಕೈಗೊಳ್ಳಬೇಕಾಗಿದೆ.

ನಮ್ಮ ಆಚರಣೆಗಳ ಸ್ವಾವಲೋಕನ ನಮ್ಮ ವೃತ್ತಿಪರತೆಯನ್ನು ಹೆಚ್ಚಿಸುತ್ತದೆ. ಇದಕ್ಕಾಗಿ ಪ್ರತ್ಯೇಕ ದಿನಚರಿಗೆ ಬದಲಾಗಿ ಪಾಠ ಟಿಪ್ಪಣಿಯಲ್ಲಿ ಸ್ವಾವಲೋಕನದ ಅಂಶಗಳನ್ನು ದಾಖಲಿಸಲು ಸೂಚಿಸಲಾಗಿದೆ. ಚಿಂತನಾಶೀಲತೆ ಅತೀ ಅಗತ್ಯವಾಗಿದ್ದು ಇದಕ್ಕೆ ಹೆಚ್ಚು ಅಭ್ಯಾಸವನ್ನು ನೀಡಬೇಕಾಗಿದೆ.

# ನಲಿಕಲಿ

ನಮ್ಮನ್ನು ಸದಾ ಕಾಡುತ್ತಿದ್ದ ಬಹುವರ್ಗ ಬೋಧನೆ ಮತ್ತು ಬಹುಹಂತದ ಕಲಿಕೆ ಎಂಬ ಸಮಸ್ಯೆಗಳನ್ನು ಸವಾಲಾಗಿ ಸ್ವೀಕರಿಸಿ ಸಂತಸದ ಕಲಿಕೆ, ಸ್ವ–ಕಲಿಕೆ, ಸ್ವ–ವೇಗದ ಕಲಿಕೆ ಎಂಬ ತತ್ವಗಳನ್ನಾಧರಿಸಿ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶಿಕ್ಷಕರು ಹಾಗೂ ಮಾರ್ಗದರ್ಶಕರು ಸೇರಿ ಹುಟ್ಟುಹಾಕಿದ ಒಂದು ಶಿಶುಸ್ನೇಹಿ, ಚಟುವಟಿಕೆ ಆಧಾರಿತ ಕಲಿಕಾ ಬೋಧನಾ ಪದ್ಧತಿಯೇ ನಲಿಕಲಿ.

**ಕೋಷ್ಟಕ 71:**

| ಕ್ರಮ ಸಂಖ್ಯೆ | ಪ್ರಶ್ನೆಗಳು | ಮೈಸೂರು ಉತ್ತರ | ಕೆ.ಆರ್. ನಗರ |
|---|---|---|---|
| | | ಹೌದು | ಹೌದು |
| 1 | ನಲಿ ಕಲಿ ತರಗತಿಗಳನ್ನು ನಿರ್ವಹಿಸುವ ಶಿಕ್ಷಕರಿಗೆ 6 ದಿನಗಳ ತರಬೇತಿ ಆಗಿದೆಯೇ? | 5 | 6 |
| 2 | ವ್ಯವಸ್ಥಿತ ರೀತಿಯಲ್ಲಿ ಕಲಿಕಾ ಚಪ್ಪರವನ್ನು ನಿರ್ವಹಿಸಲಾಗಿದೆಯೇ? | 4 | 3 |
| 3 | ಹೆಸರು ಸಹಿತ ವಿಭಾಗ ಮಾಡಿದ ವಿದ್ಯಾರ್ಥಿಗಳ ಕಪ್ಪು ಹಲಗೆಯು ಸುವ್ಯವಸ್ಥಿತವಾಗಿದ್ದು ಬಳಸಲ್ಪಡುತ್ತಿದೆಯೇ? | 1 | 5 |
| 4 | ರಚನಾ ತಟ್ಟೆಗಳನ್ನು ಇಡಲು ಸ್ಥಳಗಳನ್ನು ನಿಗದಿಪಡಿಸಲಾಗಿದೆಯೇ? | 5 | 5 |
| 5 | ಪಪೆಟ್ ಗೊಂಬೆಗಳು, ಸ್ಕ್ರೀನ್, ಮುಖವಾಡಗಳು ಅವಶ್ಯಕ ಸಂಖ್ಯೆಯಲ್ಲಿ ಲಭ್ಯವಿದೆಯೇ? | 1 | 3 |
| 6 | ಹವಾಮಾನ ನಕ್ಷೆಗಳು ಬಳಸಲ್ಪಡುತ್ತಿದೆಯೇ? | 3 | 5 |
| 7 | ಗುಂಪು ವಿಷಯವಾರು/ತರಗತಿವಾರು ಕಾರ್ಡುಗಳನ್ನು ಮಕ್ಕಳ ಕೈಗೆಟುಕುವಂತೆ ಮೈಲಿಗಲ್ಲುಗಳನ್ನು ಆಧರಿಸಿ ಜೋಡಿಸಲಾಗಿದೆಯೇ? | 5 | 6 |
| 8 | ಪ್ರಗತಿ ನೋಟವನ್ನು ವ್ಯವಸ್ಥಿತವಾಗಿ ಸಿದ್ದಪಡಿಸಿದ್ದು, ವಿದ್ಯಾರ್ಥಿಗಳೇ ಸ್ವತಃ ತಮ್ಮ ಕಲಿಕಾ ಮಟ್ಟವನ್ನು ದಾಖಲಿಸುತ್ತಿದ್ದಾರೆಯೇ? | 1 | 5 |
| 9 | ಚಟುವಟಿಕೆ ನಡೆಸಲು ಬೇಕಾದ ಮಿಂಚುಪಟ್ಟಿ, ಡೈಸ್, ಕಲ್ಲು, ಬೀಜ ಮತ್ತಿತರ ಕಲಿಕಾ ಸಾಮಾಗ್ರಿಗಳನ್ನು ಬಳಸಲು ಸುಲಭವಾಗುವ ರೀತಿಯಲ್ಲಿ ವ್ಯವಸ್ಥಿತವಾಗಿ ಸಂಗ್ರಹಿಸಲಾಗಿದೆಯೇ? | 6 | 5 |
| 10 | ಅವಧಿಯ ಆರಂಭದಲ್ಲಿ ಸಾಮೂಹಿಕ ಚಟುವಟಿಕೆ ನಡೆಸಿದ ನಂತರವೇ ಗುಂಪು ಚಟಿವಟಿಕೆ ನಡೆಸಲಾಗುತ್ತಿದೆಯೇ? | 5 | 5 |
| 11 | ಪ್ರಗತಿ ನೋಟದ ದಾಖಲೆಗನುಗುಣವಾಗಿ ಕಲಿಕಾ ಸಾಮಾಗ್ರಿಗಳನ್ನು ವಿದ್ಯಾರ್ಥಿಗಳೇ ಸ್ವತಃ ತೆಗೆದುಕೊಂಡು ಸಂಬಂಧಿಸಿದ ಗುಂಪಿನಲ್ಲಿ ಕುಳಿತು ಅಲ್ಲಿನ ಚಟುವಟಿಕೆ ನಿರ್ವಹಿಸಿದ ನಂತರ ಕಲಿಕಾ ಸಾಮಾಗ್ರಿಯನ್ನು ಸ್ವ ಸ್ಥಾನದಲ್ಲಿ ಇಡುತ್ತಾರೆಯೇ? | 3 | 4 |
| 12 | ವಿದ್ಯಾರ್ಥಿಗಳ ಕಲಿಕೆಯ ಪ್ರಗತಿ , ಪ್ರಗತಿ ನೋಟದ ದಾಖಲೆಗನುಗುಣವಾಗಿದೆಯೇ? | 2 | 5 |
| 13 | ಚಟುವಟಿಕೆ ಪೂರ್ಣಗೊಳಿಸಿದ ವಿದ್ಯಾರ್ಥಿಯ ಕಲಿಕೆ ದೃಢಿಕರಣ ಹಾಗೂ ಪ್ರಗತಿಯ ದಾಖಲೆಯ ನಂತರ ಮುಂದಿನ ಚಟುವಟಿಕೆಯ ನಿರ್ವಹಣೆಗೆ ಸೂಚನೆ ನೀಡಿರುತ್ತಾರೆಯೇ? | 1 | 5 |
| 14 | ಅವಧಿಯ ಕೊನೆಯಲ್ಲಿ ಕಲಿಕೆಯ ದೃಢೀಕರಣದ ನಂತರ ವಿದ್ಯಾರ್ಥಿಗಳಿಗೆ ಮಾರನೆಯ ದಿನ ನಿರ್ವಹಿಸಬೇಕಾದ ಚಟಿವಟಿಕೆಗಳ ಬಗ್ಗೆ ಸೂಕ್ತ ಸೂಚನೆ ನೀಡಿರುತ್ತಾರೆಯೇ? | 1 | 2 |
| 15 | ಶಿಕ್ಷಕರು ದಿನಚರಿಯನ್ನು ನಿಯಮದಂತೆ ಪ್ರತಿ ದಿನ ನಿರ್ವಹಿಸುತ್ತಿದ್ದಾರೆಯೇ? | 4 | 5 |

- ನಲಿಕಲಿ ತರಗತಿಗಳನ್ನು ತರಬೇತಿ ಹೊಂದಿದ ಶಿಕ್ಷಕರೇ ನಿರ್ವಹಿಸುತ್ತಿದ್ದು ಶಿಕ್ಷಣದ ಮೊದಲನೇ ಹಂತದ ಯಶಸ್ವಿ ನಿರ್ವಹಣೆಗೆ ಪೂರಕವಾಗಿದೆ.
- ವ್ಯವಸ್ಥಿತ ಕಲಿಕಾ ಚಪ್ಪರ ಹಾಗೂ ಹೆಸರು ಸಹಿತ ವಿಭಾಗ ಮಾಡಿದ ವಿದ್ಯಾರ್ಥಿಗಳ ಕಪ್ಪು ಹಲಗೆ ಇದ್ದರೂ, ಚಪ್ಪರದಲ್ಲಿ ಹಿಂದಿನ ವರ್ಷದ ಪರಿಕರಗಳು ಹಾಗೂ ಮುದ್ರಿತ ಕಾರ್ಡ್‌ಗಳನ್ನು ಹಾಕಿರುವುದು ಭೇಟಿಯ ಸಂದರ್ಭದಲ್ಲಿ ಗುರುತಿಸಲಾಗಿದೆ. ಮತ್ತು ಕಪ್ಪು ಹಲಗೆಯನ್ನು ಸರಿಯಾಗಿ ಬಳಕೆ ಮಾಡದಿರುವುದು ಕಂಡು ಬಂದಿದೆ. ಇದರಿಂದ ಮಗು ಸ್ವತಃ ಭಾಗವಹಿಸಿ ಜ್ಞಾನವನ್ನು ಕಟ್ಟಿಕೊಳ್ಳುವ ಅವಕಾಶದಿಂದ ವಂಚಿತವಾಗುತ್ತದೆ.
- ಅಧ್ಯಯನ ಕೈಗೊಂಡ 10 ಶಾಲೆಗಳಲ್ಲಿ ಪಪೆಟ್ ಗೊಂಬೆಗಳು, ಸ್ಕ್ರೀನ್‌ಮತ್ತು ಮುಖವಾಡಗಳು ಅವಶ್ಯಕ ಸಂಖ್ಯೆಯಲ್ಲಿ ಲಭ್ಯವಿರುವುದು ಸಂತಸದ ಕಲಿಕೆಗೆ ಅವಕಾಶವಾಗಿದೆ. ಅದೇ ರೀತಿ ಗುಂಪು ರಚನಾ ತಟ್ಟೆಗಳನ್ನು ಇಡಲು 10 ಶಾಲೆಗಳಲ್ಲಿ ಸ್ಥಳವನ್ನು ನಿಗದಿಪಡಿಸಿರುವುದು ಬಹುಹಂತದ ಕಲಿಕೆಗೆ ಅವಕಾಶವಿರುವುದು ಗೋಚರಿಸುತ್ತದೆ.
- ಶಿಶು ಸ್ನೇಹಿ ಪರಿಸರ :- ಇದರಲ್ಲಿ ಮಕ್ಕಳು ಇಷ್ಟಪಡುವ ಕಲಿಕೋಪರಕಣಗಳ ಲಭ್ಯತೆ, ತಮಗನ್ನಿಸುವುದನ್ನು ಅಭಿವ್ಯಕ್ತಿಸಲು ಇರುವ ಅವಕಾಶ ಇವೆರಡು ಬಹು ಪ್ರಮುಖವಾದ ಅಂಶಗಳಾಗಿವೆ. ಅಧ್ಯಯನ ಕೈಗೊಂಡ 12 ಶಾಲೆಗಳಲ್ಲಿ 1 ಶಾಲೆಗಳಲ್ಲಿ ಕಲಿಕೋಪಕರಣ ಲಭ್ಯತೆ ಇರುವುದು ಉತ್ತಮ ಅಂಶವಾಗಿದೆ. ಆದರೆ ಇವುಗಳ ಬಳಕೆಯಲ್ಲಿ ಸಮಸ್ಯೆಬಾರದಂತೆ ನೋಡಿಕೊಳ್ಳಬೇಕಾಗಿರುವುದು ಅನುಪಾಲನಾಧಿಕಾರಿಗಳ ಜವಬ್ದಾರಿಯೂ ಆಗಿರುತ್ತದೆ.
- ನಲಿಕಲಿ ವಿಧಾನದ ಹೃದಯ ಭಾಗ ಕಲಿಕಾ ಗುಂಪುಗಳ ನಿರ್ವಹಣೆ ಮತ್ತು ಶಿಕ್ಷಕರ ಅನುಕೂಲಿಸುವಿಕೆ ಮೇಲಿನ ಕೋಷ್ಟಕ/ಅಲೇಖವನ್ನು ಗಮನಿಸಿದಾಗ ಅಧ್ಯಯನ ಕೈಗೊಂಡ 10 ಶಾಲೆಗಳಲ್ಲಿ ಶಿಕ್ಷಕರು ಸಾಮೂಹಿಕ ಚಟುವಟಿಕೆ ನಡೆಸಿದ ನಂತರವೇ ಗುಂಪು ಚಟುವಟಿಕೆ ನಡೆಸಲಾಗುತ್ತಿದೆ. ಆದರೆ ಸಾಮೂಹಿಕ ಚಟುವಟಿಕೆಯ ನಿರ್ವಹಣೆ ಸಾಧರಣವಾಗಿರುವುದು ಭೇಟಿಯ ಸಂದರ್ಭದಲ್ಲಿ ತಿಳಿದು ಬಂದಿದೆ.
- ಅಧ್ಯಯನ ಕೈಗೊಂಡ ಶೇ.60 ರಷ್ಟು ಶಾಲೆಗಳಲ್ಲಿ ಮಕ್ಕಳು ಸ್ವತಃ ತಾವೇ ಕಾರ್ಡ್‌ಗಳನ್ನು ತೆಗೆದುಕೊಂಡು ತಟ್ಟೆಗಳಲ್ಲಿ ಕುಳಿತುಕೊಳ್ಳುತ್ತಾರೆ.
- ಕೆ.ಆರ್.ನಗರದ 05 ಶಾಲೆಗಳಲ್ಲಿ ಹಾಗೂ ಮೈಸೂರು ಉತ್ತರ ಕೇವಲ ಎರಡು ಶಾಲೆಗಳಲ್ಲಿ ವಿದ್ಯಾರ್ಥಿಗಳ ಕಲಿಕೆಯ ಪ್ರಗತಿ, ಪ್ರಗತಿ ನೋಟದ ದಾಖಲಾಗಿರುವ ಕಲಿಕೆಯ ಮಟ್ಟಕ್ಕೂ ಮಕ್ಕಳ ನೈಜ ಕಲಿಕೆಗೂ ಹೊಂದಾಣಿಕೆಯಾಗುತ್ತಿದುದ್ದೂ ಕಂಡು ಬಂದಿದೆ.
- ಮೈಸೂರು ಉತ್ತರದ ಶಾಲೆಗಳಲ್ಲಿ ಪ್ರಭುತ್ವ ಮಟ್ಟದಲ್ಲಿ ಚಟುವಟಿಕೆಯನ್ನು ಸಂಪೂರ್ಣ ಮಾಡುವ ಮಕ್ಕಳು ಪ್ರಗತಿ ನೋಟದಲ್ಲಿ ಗುರುತಿಸಲು ಮಾರ್ಗದರ್ಶನ ನೀಡುವುದು ಹಾಗೂ ಅಭ್ಯಾಸಕ್ಕೆ ಹೆಚ್ಚಿನ ಅವಕಾಶ ನೀಡುವ ಅಗತ್ಯವಿದೆ.
- ಹವಾಮಾನ ನಕ್ಷೆಗಳು ಕೆ.ಆರ್.ನಗರದ ಅಧ್ಯಯನ ಕೈಗೊಂಡ 06 ಶಾಲೆಗಳ 05 ಶಾಲೆಗಳಲ್ಲಿ ಹವಾಮಾನ ನಕ್ಷೆಗಳು ಬಳಸುತ್ತಿದ್ದರೆ, ಮೈಸೂರು ಉತ್ತರದ ಒಂದು ಶಾಲೆಯಲ್ಲಿ ಮಾತ್ರ ಬಳಸಲಾಗುತ್ತಿದೆ. ಇದಕ್ಕೆ ಶಿಕ್ಷಕರ ಉದಾಸೀನ ಮನೋಭಾವ ಮತ್ತು ಏಕತಾನತೆ ಕಾರಣವಾಗಿರಬಹುದು. ಇದಕ್ಕಾಗಿ ಅವರಲ್ಲಿ ಧನಾತ್ಮಕ ಮನೋಭಾವ ಮೂಡಿಸಬೇಕಾಗಿದೆ.
- ಕೆ.ಆರ್.ನಗರದ ನಾಲ್ಕು ಶಾಲೆಗಳಲ್ಲಿ ಹಾಗೂ ಮೈಸೂರು ಉತ್ತರದ ಶೇ.50 ಶಾಲೆಗಳಲ್ಲಿ ಮಕ್ಕಳು ಸ್ವತಂತ್ರವಾಗಿ ಕಲಿಕಾ ಸಾಮಾಗ್ರಿಗಳನ್ನು ತೆಗೆದುಕೊಂಡು ಸಂಬಂಧಿಸಿದ ಗುಂಪಿನಲ್ಲಿ ಕುಳಿತು ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದು, ಅವಧಿಯ ಅಂತ್ಯದಲ್ಲಿ ಅವುಗಳನ್ನು ಪುನಃ ಸ್ವ ಸ್ಥಾನದಲ್ಲಿ ಇಡುತ್ತಿದುದ್ದು ಅಧ್ಯಯನದಿಂದ ತಿಳಿದು ಬಂದಿದೆ.
- ಮಕ್ಕಳ ಭಾವಹಿಸುವಿಕೆಗೆ ನಲಿಕಲಿಯೊಳಗೆ ವಿಫುಲ ಅವಕಾಶವಿದ್ದು ಅದರ ಪ್ರತಿಫಲನ ತರಗತಿಯಲ್ಲಿ ಕ್ಷೀಣವಾಗಿರುವುದು ಭೇಟಿಯ ಸಂದರ್ಭದಲ್ಲಿ ಕಂಡು ಬಂದಿದೆ. ಇದಕ್ಕೆ ಶಿಕ್ಷಕರ ಅನುಕೂಲಿಸುವ ಸಾಮರ್ಥ್ಯದ ಕೊರತೆ ಕಾರಣವಾಗಿರಬಹುದು ಅಥವಾ ತಾತ್ವಿಕ ಅರ್ಥೈಸುವಿಕೆಯ ಕೊರತೆ ಕಾರಣವಾಗಿರಬಹುದು.
- ನಲಿಕಲಿಯೂ ಶಿಕ್ಷಕರ ಮಾಹಿತಿದಾರರಾಗಿದ್ದೂ ಮಾಹಿತಿ ವರ್ಗಾವಣೆಗೆ ಹೆಚ್ಚು ಒತ್ತನ್ನು ನೀಡುತ್ತಿರುವುದು ಸ್ಪಷ್ಟವಾಗಿದೆ. ಇದರ ಬಗ್ಗೆ ತರಬೇತಿಗಳಲ್ಲಿ ಬೆಳಕನ್ನು ಚೆಲ್ಲಬೇಕಾಗಿದೆ.
- ಕೆ.ಆರ್.ನಗರದ 05 ಶಾಲೆಗಳಲ್ಲಿ ಹಾಗೂ ಮೈಸೂರು ಉತ್ತರದ 04 ಶಾಲೆಗಳಲ್ಲಿ ಶಿಕ್ಷಕರು ದಿನಚರಿ ನಿರ್ವಹಿಸುತ್ತಿರುವುದನ್ನು ಕೊಷ್ಟಕದಲ್ಲಿ ಗಮನಿಸಬಹುದು. ಆದರೆ ದಿನಚರಿಯ ಎಲ್ಲಾ ಅಂಶಗಳನ್ನು ನಮೂದಿಸದಿರುವುದು ಕಂಡು ಬಂದಿದೆ. ಎಲ್ಲಾ ಅಂಶಗಳನ್ನು ನಮೂದಿಸುವಂತೆ ಶಿಕ್ಷಕರನ್ನು ಪ್ರೇರೇಪಿಸಬೇಕಾಗಿದೆ.





ನಲಿಕಲಿ ತರಗತಿಯ ಕಲಿಕೋಪಕರಣಗಳ ವ್ಯವಸ್ಥಿತ ಜೋಡಣೆ– ಸಂಕನಹಳ್ಳಿ, ಕೆಆರ್‌ನಗರ





ಓದುವ ಮನೆ – ಆಟದ ಕಣದಲ್ಲಿ ಮೈಮರೆತ ನಲಿಕಲಿ ಮಕ್ಕಳು–ಸಕಿಪ್ರಾ ಶಾಲೆ ಕಿರನಹಳ್ಳಿ, ಪಿರಿಯಾಪಟ್ಟಣ, ಮೈಸೂರು




ಸ್ಪಷ್ಟ ಓದು ಶುದ್ಧ ಬರೆಹ – ಸಕಿಪ್ರಾ ಶಾಲೆ ಮರಯ್ಯನಹುಂಡಿ, ಮೈಸೂರು ಗ್ರಾಮಾಂತರ

## ಕ್ಷೇತ್ರ ಭೇಟಿಯಲ್ಲಿ ಗಮನಿಸಿದಂತೆ ತರಗತಿವಾರು ಮಕ್ಕಳ ಕಲಿಕಾ ಪ್ರಗತಿ ಮತ್ತು ವಿಶ್ಲೇಷಣೆ:
## ಕೆಆರ್ ನಗರ ತಾಲ್ಲೂಕು

### 1ನೇ ತರಗತಿ ಕಲಿಕಾ ಪ್ರಗತಿ:

**ಕೋಷ್ಟಕ 72:**

| ಗ್ರೇಡ್ | ಕನ್ನಡ | | ಇಂಗ್ಲೀಷ್ | | ಗಣಿತ | | ಪರಿಸರಅಧ್ಯಯನ | |
|---|---|---|---|---|---|---|---|---|
| | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು |
| ಎ+ | 5.6 | 14.3 | 0 | 10.7 | 0 | 11.5 | 0 | 7.7 |
| ಎ | 27.8 | 21.4 | 20 | 14.3 | 26.3 | 15.4 | 19 | 19.2 |
| ಬಿ+ | 27.8 | 28.6 | 13.3 | 35.7 | 26.3 | 19.2 | 19 | 30.8 |
| ಬಿ | 27.8 | 14.3 | 46.7 | 21.4 | 26.3 | 46.2 | 42.9 | 23.1 |
| ಸಿ | 11.1 | 21.4 | 20 | 17.9 | 21.1 | 7.7 | 19 | 19.2 |
| | 100 | 100 | 100 | 100 | 100 | 100 | 100 | 100 |

**ಗ್ರಾಫ್–43:**




### ವಿಶ್ಲೇಷಣೆ ಮತ್ತು ಅರ್ಥೈಸುವಿಕೆ:

- ಶೇ.90 ಕ್ಕಿಂತ ಹೆಚ್ಚಿನ ಸಾಧನೆ ಮಾಡಿರುವ ಶ್ರೇಣಿಯನ್ನು ಗಮನಿಸಿದಾಗ ಕನ್ನಡ ಭಾಷೆಯನ್ನು ಹೊರತುಪಡಿಸಿ ಉಳಿದ ಎಲ್ಲಾ ವಿಷಯಗಳಲ್ಲಿಯೂ ಬಾಲಕರ ಸಂಖ್ಯೆ ಶೂನ್ಯವಿರುವುದು ಗಂಭೀರ ಚಿಂತನೆಗೆ ಎಡೆ ಮಾಡಿದೆ. ಇದೇ ರೀತಿ ಬಿ ಶ್ರೇಣಿಯಲ್ಲಿ ಗಣಿತವನ್ನು ಹೊರತುಪಡಿಸಿ ಉಳಿದ ವಿಷಯಗಳಲ್ಲಿ ಬಾಲಕರ ಸಾಧನೆ ಉತ್ತಮವಾಗಿದೆ.
- ಶೇ.50 ಕ್ಕಿಂತ ಕಡಿಮೆ ಸಾಧನೆ ಮಾಡಿರುವ ಮಕ್ಕಳ ಸಂಖ್ಯೆ ಶೇ.7.7 ರಿಂದ ಶೇ.46.7 ರವರೆಗೆ ಹರಡಿಕೊಂಡಿದ್ದು ಸೂಕ್ತ ಮಾರ್ಗದರ್ಶನದ ಅಗತ್ಯತೆಯಿದೆ.
- ಪರಿಸರ ಅಧ್ಯಯನದಲ್ಲಿಯೂ ಮಕ್ಕಳ ಸಾಧನೆ ತೃಪ್ತಿಕರವಾಗಿರುವುದಿಲ್ಲ.

## 2ನೇ ತರಗತಿ ಕಲಿಕಾ ಪ್ರಗತಿ

**ಕೋಷ್ಟಕ 73:**

| ಗ್ರೇಡ್ | ಕನ್ನಡ | | ಇಂಗ್ಲೀಷ್ | | ಗಣಿತ | | ಪರಿಸರಅಧ್ಯಯನ | |
|---|---|---|---|---|---|---|---|---|
| | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು |
| ಎ+ | 0 | 17.2 | 0 | 10 | 0 | 12.5 | 0 | 3.3 |
| ಎ | 15 | 27.6 | 21.1 | 23.3 | 5.6 | 21.9 | 25 | 26.7 |
| ಬಿ+ | 35 | 17.2 | 31.6 | 20 | 44.4 | 21.9 | 30 | 36.7 |
| ಬಿ | 30 | 31 | 42.1 | 30 | 38.9 | 25 | 35 | 26.7 |
| ಸಿ | 20 | 6.9 | 5.3 | 16.7 | 11.1 | 18.8 | 10 | 6.7 |
| | | | | | | | | |

**ಗ್ರಾಫ್–44:**




### ವಿಶ್ಲೇಷಣೆ ಮತ್ತು ಅರ್ಥೈಸುವಿಕೆ:

- ಗ್ರಾಮೀಣ ಪ್ರದೇಶದ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ 2ನೇ ತರಗತಿ ಮಕ್ಕಳು 1ನೇ ತರಗತಿಯ ಮಕ್ಕಳಿಗಿಂತ ಪರಿಸರ ಅಧ್ಯಯನ ವಿಷಯದಲ್ಲಿ ಉತ್ತಮ ಸಾಧನೆಯನ್ನು ತೋರಿಸಿದ್ದಾರೆ. ಭಾಷೆಗಳು ಹಾಗೂ ಗಣಿತ ವಿಷಯದಲ್ಲಿ ಕಲಿಕೆಯ ಪ್ರಥಮ ವರ್ಷಕ್ಕಿಂತ ಕಡಿಮೆ ಸಾಧನೆಯಾಗಿದೆ.
- ಶೇ.70ಕ್ಕಿಂತ ಹೆಚ್ಚಿನ ಸಾಧನೆ ಮಾಡಿರುವ ಮಕ್ಕಳನ್ನು ಗಮನಿಸಿದಾಗ ಬಾಲಕಿಯರ ಸಾಧನೆ ಬಾಲಕರಿಗಿಂತ ಉತ್ತಮವಾಗಿದೆ.
- ಶೇ.30ಕ್ಕಿಂತ ಕಡಿಮೆ ಸಾಧನೆ ಮಾಡಿರುವ ಮಕ್ಕಳು ಶೇ.5 ರಿಂದ ಶೇ.20 ರವರೆಗೆ ಇದ್ದು, ಈ ಮಕ್ಕಳಿಗೆ ವಿಶೇಷ ಕಾಳಜಿಯ ಅಗತ್ಯವಿದೆ.
- ಬಾಲಕರು 2ನೇ ತರಗತಿಯಲ್ಲಿ ಶೇ 90ಕ್ಕಿಂತ ಹೆಚ್ಚಿನ ಅಂಕ ಗಳಿಸಿರಿವವರು ಯಾರು ಇಲ್ಲದಿರುವುದು ಗಮನಾರ್ಹ
- ಪರಿಸರ ಅಧ್ಯಯನದಲ್ಲಿ ವಿದ್ಯಾರ್ಥಿಗಳ ಸಾಧನೆ ಉಳಿದ ವಿಷಯಗಳಿಗಿಂತ ಉತ್ತಮವಾಗಿರುತ್ತದೆ.ಆದರೂ ಸಿ ಗ್ರೇಡನಲ್ಲಿ ಶೇ16.7ರಷ್ಟುಮಕ್ಕಳು ಇರುತ್ತಾರೆ.

### 3ನೇ ತರಗತಿ ಕಲಿಕಾ ಪ್ರಗತಿ

**ಕೋಷ್ಟಕ 74:**

| ಗ್ರೇಡ್ | ಕನ್ನಡ | | ಇಂಗ್ಲೀಷ್ | | ಗಣಿತ | | ಪರಿಸರಅಧ್ಯಯನ | |
|---|---|---|---|---|---|---|---|---|
| | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು |
| ಎ+ | 10 | 0 | 0 | 0 | 0 | 7.1 | 14.3 | 8.3 |
| ಎ | 60 | 35.7 | 0 | 0 | 0 | 7.1 | 21.4 | 16.7 |
| ಬಿ+ | 10 | 28.6 | 33.3 | 0 | 33.3 | 14.3 | 14.3 | 33.3 |
| ಬಿ | 20 | 14.3 | 33.3 | 20 | 33.3 | 21.4 | 0 | 8.3 |
| ಸಿ | 0 | 21.4 | 33.3 | 80 | 33.3 | 50 | 50 | 33.3 |

**ಗ್ರಾಫ್–45:**




### ವಿಶ್ಲೇಷಣೆ ಮತ್ತು ಅರ್ಥೈಸುವಿಕೆ:

- ಇಂಗ್ಲೀಷ್ ಕಲಿಕೆಗೆ ಸಂಬಂಧಿಸಿದಂತೆ ಮಕ್ಕಳ ಸಾಧನೆ ತರಗತಿಯಿಂದ ತರಗತಿಗೆ ಕಡಿಮೆಯಾಗುತ್ತಿದ್ದು ಇಂಗ್ಲೀಷ್ ಭಾಷಾ ಬೊಧನೆ ನಡೆಯುತ್ತಿರುವುದು ಸಂಶಯಕ್ಕೆ ಎಡೆ ಮಾಡಿಕೊಟ್ಟಿದೆ.
- ಇದೇ ರೀತಿ ಪರಿಸರ ಅಧ್ಯಯನದಲ್ಲಿ ಶೇ.30ಕ್ಕಿಂತ ಕಡಿಮೆ ಸಾಧನೆ ಮಾಡಿರುವ ಬಾಲಕರು ಶೇ.50 ಹಾಗೂ ಶೇ.33.3 ಆಗಿದ್ದು ಅತ್ಯಂತ ಕಳವಳಕಾರಿಯಾಗಿದೆ.
- ಕನ್ನಡ ಹೊರತುಪಡಿಸಿ ಉಳಿದ ವಿಷಯಗಳಲ್ಲಿ ಹಿಂದಿನ ತರಗತಿಗಿಂತ ಈ ತರಗತಿಯಲ್ಲಿ ಮಕ್ಕಳ ಸಾಧನೆ ಕಡಿಮೆಯಾಗಿರುವುದನ್ನು ಕೋಷ್ಟಕ ತೋರಿಸುತ್ತದೆ.
- ಪರಿಸರ ಅಧ್ಯಯನ ಹೊರತುಪಡಿಸಿ ಉಳಿದ ವಿಷಯಗಳಲ್ಲಿ ಬಾಲಕಿಯರ ಸಾಧನೆಗಿಂತ ಬಾಲಕರ ಸಾಧನೆ ಉತ್ತಮವಾಗಿದೆ

## 4ನೇ ತರಗತಿಕಲಿಕಾ ಪ್ರಗತಿ

**ಕೋಷ್ಟಕ 75:**

| | 4ನೇತರಗತಿ | | | | | | | |
|---|---|---|---|---|---|---|---|---|
| | ಕನ್ನಡ | | ಇಂಗ್ಲೀಷ್ | | ಗಣಿತ | | ಪರಿಸರಅಧ್ಯಯನ | |
| ಗ್ರೇಡ್ | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು |
| ಎ+ | 7.7 | 11.8 | 40 | 0 | 8.3 | 5.6 | 27.3 | 37.5 |
| ಎ | 38.5 | 11.8 | 0 | 0 | 16.7 | 16.7 | 9.1 | 12.5 |
| ಬಿ+ | 7.7 | 23.5 | 0 | 33.3 | 16.7 | 16.7 | 18.2 | 31.3 |
| ಬಿ | 23.1 | 35.3 | 40 | 33.3 | 8.3 | 27.8 | 9.1 | 0 |
| ಸಿ | 23.1 | 17.6 | 20 | 33.3 | 50 | 33.3 | 36.4 | 18.8 |
| | | | | | | | | |

**ಗ್ರಾಫ್–46:**




### ವಿಶ್ಲೇಷಣೆ ಮತ್ತು ಅರ್ಥೈಸುವಿಕೆ:

- ಇಂಗ್ಲೀಷ್ ಹಾಗೂ ಗಣಿತ ವಿಷಯದಲ್ಲಿ ಶೇ.50 ಕ್ಕಿಂತ ಕಡಿಮೆ ಸಾಧನೆ ಮಾಡಿರುವ ಮಕ್ಕಳ ಸಂಖ್ಯೆ ಶೇ.58 ರಿಂದ ಶೇ.66.6 ರವರೆಗೆ ಇದ್ದು ಕಳಪೆ ಸಾಧನೆಯಾಗಿದೆ.
- ಪರಿಸರ ಅಧ್ಯಯನದಲ್ಲಿ ಶೇ.90 ಕ್ಕಿಂತ ಹೆಚ್ಚು ಸಾಧನೆ ಮಾಡಿರುವ ಬಾಲಕರು ಶೇ.27.3 ಹಾಗೂ ಬಾಲಕಿಯರು ಶೇ.37.5 ಆಗಿದ್ದು ಇದು ಗಮನಾರ್ಹ ಅಂಶವಾಗಿದೆ. ಅದೇ ರೀತಿ ಶೇ.30 ಕ್ಕಿಂತ ಕಡಿಮೆ ಸಾಧನೆ ಆಗಿರುವ ಮಕ್ಕಳ ಸಂಖ್ಯೆ ಶೇ.36.4 ಹಾಗೂ ಶೇ.18.8 ಆಗಿದ್ದು, ಈ ಮಕ್ಕಳು ಕಲಿಕೆಯಲ್ಲಿ ಹಿಂದುಳಿದಿರುವುದಕ್ಕೆ ಕಾರಣಗಳನ್ನು ಹುಡುಕಬೇಕಾಗಿದೆ.
- 3ನೇ ತರಗತಿಗಿಂತ 4ನೇ ತರಗತಿಯಲ್ಲಿ ಇಂಗ್ಲೀಷ್ ಕಲಿಕೆ ಸುಧಾರಿಸಿದೆ. ಸಿ ಗ್ರೇಡ್‌ನಲ್ಲಿ ಗಣಿತ ವಿಷಯದಲ್ಲಿ ಉಳಿದ ವಿಷಯಗಳಿಗಿಂತ ಶೇ.41.5 ರಷ್ಟು ಮಕ್ಕಳಿದ್ದು ಈ ಮಕ್ಕಳ ಬಗ್ಗೆ ಹೆಚ್ಚಿನ ಗಮನ ಹರಿಸಬೇಕಾಗಿದೆ.

## 5 ನೇ ತರಗತಿ ಕಲಿಕಾ ಪ್ರಗತಿ

**ಕೋಷ್ಟಕ 76:**

| ಗ್ರೇಡ್ | ಕನ್ನಡ | | ಇಂಗ್ಲೀಷ್ | | ಗಣಿತ | | ವಿಜ್ಞಾನ | | ಸಮಾಜವಿಜ್ಞಾನ | |
|---|---|---|---|---|---|---|---|---|---|---|
| | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು |
| ಎ+ | 10 | 6.7 | 0 | 10 | 9.1 | 0 | 10 | 0 | 0 | 0 |
| ಎ | 30 | 33.3 | 9.1 | 20 | 9.1 | 0 | 20 | 0 | 0 | 0 |
| ಬಿ+ | 0 | 13.3 | 27.3 | 0 | 0 | 25 | 0 | 0 | 21.4 | 0 |
| ಬಿ | 20 | 26.7 | 27.3 | 20 | 45.5 | 25 | 20 | 30 | 42.9 | 12.5 |
| ಸಿ | 40 | 20 | 36.4 | 50 | 36.4 | 50 | 50 | 70 | 35.7 | 87.5 |
| | | | | | | | | | | |

**ಗ್ರಾಫ್–47:**




### ವಿಶ್ಲೇಷಣೆ ಮತ್ತು ಅರ್ಥೈಸುವಿಕೆ:

- 5ನೇ ತರಗತಿಯಿಂದ ಇಂಗ್ಲೀಷ್ ವಿಷಯಕ್ಕೆ ಲಿಖಿತ ಪರೀಕ್ಷೆಯನ್ನು ನಡೆಸಿದ್ದು, 4ನೇ ತರಗತಿಗಿಂತ 5ನೇ ತರಗತಿಯಲ್ಲಿ ಇಂಗ್ಲೀಷ್ ವಿಷಯದ ಕಲಿಕಾ ಮಟ್ಟ ಕುಸಿದಿದೆ.
- ಸಮಾಜ ವಿಜ್ಞಾನ ವಿಷಯದಲ್ಲಿ ಎ+ ಮತ್ತು ಎ ಗ್ರೇಡ್‌ನಲ್ಲಿ ಮಕ್ಕಳ ಸಂಖ್ಯೆ ಶೂನ್ಯವಿದ್ದು, ಶೇ.70ಕ್ಕಿಂತ ಹೆಚ್ಚು ಅಂಕಗಳಿಸಲು ವಿಫಲರಾಗಿರುವುದನ್ನು ಇದು ಸೂಚಿಸುತ್ತದೆ.
- ವಿಜ್ಞಾನ ವಿಷಯದಲ್ಲಿ ಸಿ ಗ್ರೇಡ್ ಪಡೆದ ಬಾಲಕರ ಸಂಖ್ಯೆ ಶೇ.50 ಇದ್ದರೆ ಬಾಲಕಿಯರ ಸಂಖ್ಯೆ ಶೇ.70ನ್ನು ಮುಟ್ಟಿದೆ. ಶೇ.30 ಕ್ಕಿಂತ ಕಡಿಮೆ ಅಂಕಪಡೆದ ಮಕ್ಕಳ ಸಂಖ್ಯೆ ಹೆಚ್ಚಾಗಿದೆ.
- ಗಣಿತ ಮತ್ತು ವಿಜ್ಞಾನ ವಿಷಯಗಳೆರಡರಲ್ಲಿಯೂ ಬಾಲಕರ ಸಾಧನೆ, ಬಾಲಕಿಯರ ಸಾಧನೆಗಿಂತ ಉತ್ತಮವಾಗಿದೆ.
- ಮಾತೃ ಭಾಷೆಯಾದ ಕನ್ನಡದಲ್ಲಿಯೂ ಸಿ ಗ್ರೇಡ್ ಪಡೆದ ಮಕ್ಕಳ ಸರಾಸರಿ ಸಂಖ್ಯೆ ಶೇ.30 ಇದ್ದು ಆತಂಕಕಾರಿಯಾಗಿದೆ.

## 6ನೇ ತರಗತಿ ಕಲಿಕಾ ಪ್ರಗತಿ:

**ಕೋಷ್ಟಕ 77:**

| ಗ್ರೇಡ್ | ಕನ್ನಡ | | ಇಂಗ್ಲೀಷ್ | | ಗಣಿತ | | ವಿಜ್ಞಾನ | | ಸಮಾಜವಿಜ್ಞಾನ | | ಹಿಂದಿ | |
|---|---|---|---|---|---|---|---|---|---|---|---|---|
| | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ |
| ಎ+ | 0 | 0 | 0 | 37.5 | 0 | 0 | 0 | 0 | 0 | 0 | 0 | 0 |
| ಎ | 25 | 41.67 | 0 | 0 | 0 | 10 | 33.3 | 62.5 | 42.86 | 30 | 0 | 0 |
| ಬಿ+ | 25 | 50 | 12.5 | 37.5 | 28.57 | 30 | 33.3 | 12.5 | 28.57 | 30 | 0 | 0 |
| ಬಿ | 25 | 8.3 | 25 | 12.5 | 42.9 | 20 | 33.3 | 12.5 | 0 | 10 | 0 | 0 |
| ಸಿ | 25 | 0 | 62.5 | 12.5 | 28.57 | 40 | 0 | 12.5 | 28.57 | 30 | 100 | 100 |

**ಗ್ರಾಫ್–48:**




## ವಿಶ್ಲೇಷಣೆ ಮತ್ತು ಅರ್ಥೈಸುವಿಕೆ:

- ಶೇ.90 ಕ್ಕಿಂತ ಹೆಚ್ಚು ಅಂಕ ಪಡೆದ ಮಕ್ಕಳನ್ನು ಗಮನಿಸಿದಾಗ ಇಂಗ್ಲೀಷ್ ವಿಷಯದಲ್ಲಿ ಬಾಲಕಿಯರನ್ನು ಹೊರತುಪಡಿಸಿ ಉಳಿದ ಎಲ್ಲಾ ವಿಷಯಗಳಲ್ಲಿಯೂ ಯಾವುದೇ ಮಕ್ಕಳು ಈ ವಿಭಾಗದಲ್ಲಿ ಬರುವುದಿಲ್ಲ
- ಶೇ.100 ರಷ್ಟು ಮಕ್ಕಳು ಸಿ ಗ್ರೇಡ್‌ನಲ್ಲಿರುವುದು ಹಿಂದಿ ವಿಷಯದ ನಿರ್ವಹಣೆ ಮಾಡದಿರುವುದಕ್ಕೆ ಸಾಕ್ಷಿಯಾಗಿದೆ.
- ಇಂಗ್ಲೀಷ್ ಹಾಗೂ ಗಣಿತ ವಿಷಯದಲ್ಲಿಯೂ ಮಕ್ಕಳ ಕಲಿಕಾ ಮಟ್ಟ ತೃಪ್ತಿಕರವಾಗಿರುವುದಿಲ್ಲ
- 5ನೇ ತರಗತಿಗಿಂತ 6ನೇ ತರಗತಿಯಲ್ಲಿ ಮಕ್ಕಳ ಕಲಿಕಾ ಮಟ್ಟ ಕುಸಿದಿದೆ.
- ಕನ್ನಡ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯದಲ್ಲಿ ಕಲಿಕೆ ತೃಪ್ತಿಕರವಾಗಿದೆ
- ಸಮಾಜ ವಿಜ್ಞಾನವನ್ನು ಹೊರತುಪಡಿಸಿ ಉಳಿದ ವಿಷಯಗಳಲ್ಲಿ ಬಾಲಕಿಯರ ಸಾಧನೆ ಬಾಲಕರ ಸಾಧನೆಗಿಂತ ಉತ್ತಮವಾಗಿದೆ.

7ನೇತರಗತಿ ಕಲಿಕಾ ಪ್ರಗತಿ:

**ಕೋಷ್ಟಕ 78:**

| ಗ್ರೇಡ್ | ಕನ್ನಡ | | ಇಂಗ್ಲೀಷ್ | | ಗಣಿತ | | ವಿಜ್ಞಾನ | | ಸಮಾಜವಿಜ್ಞಾನ | | ಹಿಂದಿ | |
|---|---|---|---|---|---|---|---|---|---|---|---|---|
| | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು |
| ಎ+ | 0 | 0 | 0 | 0 | 0 | 0 | 0 | 0 | 0 | 0 | 0 | 0 |
| ಎ | 20 | 27.27 | 0 | 0 | 0 | 0 | 33.33 | 46.7 | 0 | 8.3 | 0 | 0 |
| ಬಿ+ | 10 | 27.27 | 0 | 0 | 0 | 23.1 | 33.33 | 26.7 | 28.57 | 41.7 | 0 | 0 |
| ಬಿ | 40 | 18.2 | 0 | 36.8 | 33.3 | 38.5 | 33.3 | 6.7 | 0 | 41.7 | 0 | 0 |
| ಸಿ | 30 | 27.27 | 100 | 63.2 | 66.7 | 38.5 | 0 | 20 | 71.43 | 8.3 | 100 | 100 |

**ಗ್ರಾಫ್–49:**




**ವಿಶ್ಲೇಷಣೆ ಮತ್ತು ಅರ್ಥೈಸುವಿಕೆ:**

- ಎ+ ಗ್ರೇಡ್‌ನಲ್ಲಿ ಎಲ್ಲಾ ವಿಷಯಗಳಲ್ಲಿಯೂ ಮಕ್ಕಳ ಸಾಧನೆ ಶೂನ್ಯವಿದೆ
- 6ನೇ ತರಗತಿಯಂತೆಯೇ 7ನೇ ತರಗತಿಯಲ್ಲಿಯೂ ಹಿಂದಿ ವಿಷಯದಲ್ಲಿ ಮಕ್ಕಳ ಸಾಧನೆ ತೀರಾ ಕಳಪೆಯಾಗಿದ್ದು, ಹಿಂದಿಯನ್ನು ಇಂದು ವಿಶೇಷವಾಗಿ ಆದ್ಯತೀಕರಿಸಿ ಬೋಧನೆ ಮಾಡಬೇಕಾಗಿದೆ.
- ವಿಜ್ಞಾನ ವಿಷಯದಲ್ಲಿ ಮಕ್ಕಳ ಸಾಧನೆ ತೃಪ್ತಿಕರವಾಗಿದೆ
- ಶೇ.30 ಕ್ಕಿಂತ ಕಡಿಮೆ ಸಾಧನೆ ಮಾಡಿರುವ ಮಕ್ಕಳ ಸಂಖ್ಯೆ ಎಲ್ಲಾ ವಿಷಯಗಳಲ್ಲಿಯೂ ಹೆಚ್ಚಾಗಿದೆ
- ಹಿಂದಿಯನ್ನು ಹೊರತುಪಡಿಸಿ ಉಳಿದ ವಿಷಯಗಳಲ್ಲಿ ಹೆಚ್ಚಿನ ಮಕ್ಕಳು ಬಿ ಗ್ರೇಡ್‌ನಲ್ಲಿ ಕೇಂದ್ರೀಕೃತರಾಗಿದ್ದಾರೆ.

### ೮ನೇತರಗತಿ ಕಲಿಕಾ ಪ್ರಗತಿ:

**ಕೋಷ್ಟಕ 79:**

| ಗ್ರೇಡ್ | ಕನ್ನಡ | | ಇಂಗ್ಲೀಷ್ | | ಗಣಿತ | | ವಿಜ್ಞಾನ | | ಸಮಾಜವಿಜ್ಞಾನ | | ಹಿಂದಿ | |
|---|---|---|---|---|---|---|---|---|---|---|---|---|
| | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು |
| ಎ+ | 0 | 0 | 0 | 0 | 0 | 0 | 0 | 25 | 0 | 0 | 0 | 0 |
| ಎ | 0 | 0 | 0 | 33.33 | 50 | 50 | 100 | 75 | 0 | 0 | 0 | 0 |
| ಬಿ+ | 66.67 | 66.67 | 0 | 66.67 | 50 | 50 | 0 | 0 | 33.3 | 33.3 | 0 | 0 |
| ಬಿ | 33.3 | 33.3 | 20 | 0 | 0 | 0 | 0 | 0 | 66.7 | 66.7 | 0 | 0 |
| ಸಿ | 0 | 0 | 80 | 0 | 0 | 0 | 0 | 0 | 0 | 0 | 100 | 100 |

**ಗ್ರಾಫ್–50:**




### ವಿಶ್ಲೇಷಣೆ ಮತ್ತು ಅರ್ಥೈಸುವಿಕೆ:

- ಪ್ರಥಮ ಭಾಷೆಯಾದ ಕನ್ನಡದಲ್ಲಿ ಎ+ ಮತ್ತು ಎ ಗ್ರೇಡ್‌ನಲ್ಲಿ ಯಾವುದೇ ಮಕ್ಕಳು ಇಲ್ಲದಿರುವುದು ಆಶ್ಚರ್ಯ ತಂದಿದೆ
- ವಿಜ್ಞಾನ ವಿಷಯದಲ್ಲಿ ಇತರೆ ವಿಷಯಗಳಿಗಿಂತ ಕಲಿಕೆ ಉತ್ತಮ ಮಟ್ಟದಲ್ಲಿದೆ. ಸಮಾಜ ವಿಜ್ಞಾನ ವಿಷಯದಲ್ಲಿಯೂ ಶೇ.70ಕ್ಕಿಂತ ಹೆಚ್ಚು ಅಂಕಗಳಿಸಿದ ಗುಂಪಿನಲ್ಲಿ ಶೂನ್ಯ ಸಾಧನೆಯಾಗಿದೆ
- ಹಿಂದಿ ಹಾಗೂ ಇಂಗ್ಲೀಷ್‌ನ್ನು ಹೊರತುಪಡಿಸಿ ಉಳಿದ ಎಲ್ಲಾ ವಿಷಯಗಳಲ್ಲಿ ಸಿ ಗ್ರೇಡ್‌ನಲ್ಲಿ ಮಕ್ಕಳು ಇಲ್ಲದಿರುವುದು ಉತ್ತಮ ಅಂಶವಾಗಿದೆ.
- ಹಿಂದಿ ವಿಷಯದಲ್ಲಿ ಯಾವುದೇ ಮಕ್ಕಳು ಉತ್ತರಿಸಲು ಪ್ರಯತ್ನಿಸದಿರುವುದನ್ನು ಭೇಟಿಯ ಸಂದರ್ಭದಲ್ಲಿ ಗುರುತಿಸಲಾಗಿದೆ.

## ಮೈಸೂರು ಉತ್ತರ ವಲಯದ ವಿದ್ಯಾರ್ಥಿಗಳ ಕಲಿಕಾ ಪ್ರಗತಿ:

### 1 ನೇ ತರಗತಿ

**ಕೋಷ್ಟಕ 80:**

| ಗ್ರೇಡ್ | ಕನ್ನಡ | | ಇಂಗ್ಲೀಷ್ | | ಗಣಿತ | | ಪರಿಸರ ಅಧ್ಯಯನ | |
|---|---|---|---|---|---|---|---|---|
| | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ |
| ಎ+ | 15.4 | 18.4 | 0 | 0 | 0 | 0 | 0 | 6.52 |
| ಎ | 19.2 | 20.4 | 0 | 15.2 | 0 | 12.5 | 17.9 | 13 |
| ಬಿ+ | 23.1 | 32.7 | 3.33 | 4.35 | 56.5 | 25 | 35.7 | 41.3 |
| ಬಿ | 26.9 | 18.4 | 46.7 | 34.8 | 21.7 | 37.5 | 32.1 | 30.4 |
| ಸಿ | 15.4 | 10.2 | 50 | 45.7 | 21.7 | 25 | 14.3 | 8.7 |
| | 100 | 100 | 100 | 100 | 100 | 100 | 100 | 100 |

**ಗ್ರಾಫ್–51:**




**ವಿಶ್ಲೇಷಣೆ ಮತ್ತು ಅರ್ಥೈಸುವಿಕೆ:**

- ನಗರ ಪ್ರದೇಶದ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ಇಂಗ್ಲೀಷ್ ಮತ್ತು ಗಣಿತ ವಿಷಯಗಳಲ್ಲಿ ಶೇ.90 ಕ್ಕಿಂತ ಹೆಚ್ಚಿನ ಸಾಧನೆ ಮಾಡಿರುವ ಮಕ್ಕಳ ಸಂಖ್ಯೆ ಶೂನ್ಯವಾಗಿರುತ್ತದೆ.
- ಇಂಗ್ಲೀಷ್ ವಿಷಯದಲ್ಲಿ ಮಕ್ಕಳ ಕಲಿಕೆ ತೀರಾ ಕಳಪೆಯಾಗಿರುತ್ತದೆ. ಆದರೆ ಕನ್ನಡ ವಿಷಯದಲ್ಲಿ ಉಳಿದ ವಿಷಯಗಳಿಗೆ ಹೋಲಿಸಿದರೆ ಕಲಿಕೆ ತೃಪ್ತಿಕರವಾಗಿರುತ್ತದೆ.
- ಈ ತರಗತಿಯಲ್ಲಿ ಶೇ.17 ರಷ್ಟು ಮಕ್ಕಳು ಶೇ.70 ಕ್ಕಿಂತ ಹೆಚ್ಚು ಅಂಕಗಳಿಸಿದ್ದು ಶೇ.83 ರಷ್ಟು ಮಕ್ಕಳು ಬಿ+, ಬಿ ಹಾಗೂ ಸಿ ಗ್ರೇಡ್‌ನಲ್ಲಿರುತ್ತಾರೆ. ಈ ಮಕ್ಕಳ ಬಗ್ಗೆ ವಿಶೇಷ ಗಮನ ಅಗತ್ಯವಿದೆ.
- ಪರಿಸರ ಅಧ್ಯಯನದಲ್ಲಿ ಹೆಚ್ಚಿನ ಮಕ್ಕಳು ಬಿ+ ಹಾಗೂ ಬಿ ಗ್ರೇಡ್‌ನಲ್ಲಿ ಕೇಂದ್ರಿಕೃತವಾಗಿರುತ್ತಾರೆ.
- ಗಣಿತ ವಿಷಯವನ್ನು ಹೊರತುಪಡಿಸಿ ಉಳಿದ ವಿಷಯಗಳಲ್ಲಿ ಬಾಲಕಿಯರ ಸಾಧನೆ ಬಾಲಕರ ಸಾಧನೆಗಿಂತ ಉತ್ತಮವಾಗಿದೆ

## 2ನೇ ತರಗತಿ ಕಲಿಕಾ ಪ್ರಗತಿ:

**ಕೋಷ್ಟಕ 81 :**

| ಗ್ರೇಡ್ | ಕನ್ನಡ | | ಇಂಗ್ಲೀಷ್ | | ಗಣಿತ | | ಪರಿಸರ ಅಧ್ಯಯನ | |
|---|---|---|---|---|---|---|---|---|
| | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ |
| ಎ+ | 9.52 | 23.7 | 0 | 2.56 | 15.4 | 0 | 4.65 | 0 |
| ಎ | 11.9 | 7.9 | 0 | 2.56 | 19.2 | 23.7 | 23.3 | 44.7 |
| ಬಿ+ | 52.4 | 36.8 | 0 | 2.56 | 23.1 | 42.1 | 39.5 | 31.6 |
| ಬಿ | 14.3 | 29 | 14.6 | 12.8 | 26.9 | 29 | 20.9 | 21.1 |
| ಸಿ | 11.9 | 2.63 | 85.4 | 79.5 | 15.4 | 5.26 | 11.6 | 2.63 |
| | 100 | 100 | 100 | 100 | 100 | 100 | 100 | 100 |

**ಗ್ರಾಫ್–52:**




## ವಿಶ್ಲೇಷಣೆ ಮತ್ತು ಅರ್ಥೈಸುವಿಕೆ:

- 1ನೇ ತರಗತಿಗೆ ಹೋಲಿಸಿದಾಗ 2ನೇ ತರಗತಿ ಕಲಿಕೆ ಸುಧಾರಿಸಿದೆ ಇತರೆ ವಿಷಯಗಳಿಗಿಂತ ಇಂಗ್ಲೀಷ್ ವಿಷಯದಲ್ಲಿ ಕಡಿಮೆ ಸಾಧನೆಯಾಗಿದ್ದರೆ ಪರಿಸರ ಅಧ್ಯಯನದಲ್ಲಿ ಉತ್ತಮ ಸಾಧನೆಯಾಗಿದೆ.
- ಶೇ.30ಕ್ಕಿಂತ ಕಡಿಮೆ ಅಂಕಗಳಿಸಿರುವ ಅಂದರೆ ಸಿ ಗ್ರೇಡ್‌ನಲ್ಲಿ ಇಂಗ್ಲೀಷ್ ಹೊರತುಪಡಿಸಿ ಸರಾಸರಿ ಶೇ.82 ರಷ್ಟು ವಿದ್ಯಾರ್ಥಿಗಳಿರುವುದು ಉತ್ತಮ ಕಲಿಕಾ ಸಾಧನೆಯ ಸೂಚಕವಾಗಿದೆ.
- ಇಂಗ್ಲೀಷ್ ವಿಷಯದಲ್ಲಿ ಸರಾಸರಿ 82.43 ರಷ್ಟು ವಿದ್ಯಾರ್ಥಿಗಳು ಸಿ ಗ್ರೇಡ್‌ನಲ್ಲಿದ್ದಾರೆ. ಗಣಿತ ವಿಷಯವನ್ನು ಹೊರತುಪಡಿಸಿ ಉಳಿದ ವಿಷಯಗಳಲ್ಲಿ ಬಾಲಕಿಯರು ಬಾಲಕರಿಗಿಂತ ಮುಂದಿದ್ದಾರೆ.
- ಶೇ.12 ರಿಂದ ಶೇ.28 ರವರೆಗೆ ಬಿ ಗ್ರೇಡ್‌ನಲ್ಲಿ ವಿದ್ಯಾರ್ಥಿಗಳಿದ್ದು ಸೂಕ್ತ ಮಾರ್ಗದರ್ಶನದ ಅಗತ್ಯತೆ ಇದೆ.

## 3ನೇತರಗತಿ ಕಲಿಕಾ ಪ್ರಗತಿ:

**ಕೋಷ್ಟಕ 82 :**

| ಗ್ರೇಡ್ | ಕನ್ನಡ | | ಇಂಗ್ಲೀಷ್ | | ಗಣಿತ | | ಪರಿಸರ ಅಧ್ಯಯನ | |
|---|---|---|---|---|---|---|---|---|
| | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ |
| ಎ+ | 0 | 13.3 | 0 | 0 | 7.69 | 12.5 | 0 | 0 |
| ಎ | 15.4 | 13.3 | 18.8 | 29.4 | 15.4 | 12.5 | 11.1 | 27.3 |
| ಬಿ+ | 23.1 | 13.3 | 31.3 | 17.7 | 7.69 | 12.5 | 50 | 36.4 |
| ಬಿ | 15.4 | 26.7 | 12.5 | 0 | 30.8 | 50 | 11.1 | 27.3 |
| ಸಿ | 46.2 | 33.3 | 37.5 | 52.9 | 38.5 | 12.5 | 27.8 | 9.09 |
| | 100 | 100 | 100 | 100 | 100 | 100 | 100 | 100 |

**ಗ್ರಾಫ್–53**




## ವಿಶ್ಲೇಷಣೆ ಮತ್ತು ಅರ್ಥೈಸುವಿಕೆ:

- ಇಂಗ್ಲೀಷ್ ಹಾಗೂ ಪರಿಸರ ಅಧ್ಯಯನದಲ್ಲಿ ಎ+ ಗ್ರೇಡ್‌ನಲ್ಲಿ ಬಾಲಕ ಬಾಲಕಿಯರು ಶೂನ್ಯ ಸಾಧನೆ ಮಾಡಿರುವುದು ಸಂಶೋಧನೆಗೆ ಅನುವು ಮಾಡಿಕೊಟ್ಟಿದೆ.
- 1 ಮತ್ತು 2ನೇ ತರಗತಿಗೆ ಹೋಲಿಸಿದಾಗ 3ನೇ ತರಗತಿ ಇಂಗ್ಲೀಷ್ ವಿಷಯದಲ್ಲಿ ಕಲಿಕೆ ಸುಧಾರಿಸಿದೆ. ಆದರೆ ಪ್ರಥಮ ಭಾಷೆಯಾದ ಕನ್ನಡದಲ್ಲಿ ತರಗತಿಯಿಂದ ತರಗತಿಗೆ ಕಲಿಕೆ ಕುಸಿಯುತ್ತಿರುವುದನ್ನು ಕಾಣಬಹುದು
- ಬಿ+ ಗ್ರೇಡ್‌ನಲ್ಲಿ ಶೇ.7.6 ರಿಂದ 'ಶೇ 50 ರವರೆಗೆ ಎಲ್ಲಾ ವಿಷಯಗಳಲ್ಲಿ ವಿದ್ಯಾರ್ಥಿಗಳು ಹರಡಿಕೊಂಡಿರುತ್ತಾರೆ.
- ಶೇ.30ಕ್ಕಿಂತ ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳು ಸರಾಸರಿ ಶೇ.32 ರಷ್ಟಿರುವುದು ಕಳವಳಕಾರಿಯಾಗಿದೆ.
- ಇಂಗ್ಲೀಷ್ ವಿಷಯದಲ್ಲಿ ಬಾಲಕಿಯರ ಸಾಧನೆ ಬಾಲಕರ ಸಾಧನೆಗಿಂತ ಕಡಿಮೆಯಿದ್ದರೆ, ಉಳಿದ ವಿಷಯಗಳಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಕಂಡು ಬರುವುದಿಲ್ಲ.

## 4ನೇ ತರಗತಿ ಕಲಿಕಾ ಪ್ರಗತಿ:

**ಕೋಷ್ಟಕ 83:**

| ಗ್ರೇಡ್ | ಕನ್ನಡ | | ಇಂಗ್ಲೀಷ್ | | ಗಣಿತ | | ಪರಿಸರ ಅಧ್ಯಯನ | |
|---|---|---|---|---|---|---|---|---|
| | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ |
| ಎ+ | 25 | 21.1 | 0 | 0 | 0 | 0 | 18.8 | 5.88 |
| ಎ | 31.3 | 15.8 | 0 | 0 | 6.25 | 5.56 | 43.8 | 11.8 |
| ಬಿ+ | 25 | 15.8 | 0 | 0 | 43.8 | 22.2 | 18.8 | 11.8 |
| ಬಿ | 0 | 5.26 | 12.5 | 0 | 18.8 | 27.8 | 6.25 | 5.88 |
| ಸಿ | 18.8 | 42.1 | 87.5 | 100 | 31.3 | 44.4 | 12.5 | 64.7 |
| | 100 | 100 | 100 | 100 | 100 | 100 | 100 | 100 |

**ಗ್ರಾಫ್–54:**




### ವಿಶ್ಲೇಷಣೆ ಮತ್ತು ಅರ್ಥೈಸುವಿಕೆ:

- 3ನೇ ತರಗತಿಯಲ್ಲಿ ಇಂಗ್ಲೀಷ್ ವಿಷಯದಲ್ಲಿ ಸುಧಾರಿಸಿದ ಕಲಿಕೆ 4ನೇ ತರಗತಿಯಲ್ಲಿ ಕೆಳಮಟ್ಟಕ್ಕೆ ಇಳಿದಿದೆ. ಅಂದರೆ ಶೇ.50ಕ್ಕಿಂತ ಹೆಚ್ಚು ಅಂಕವನ್ನು ಯಾವುದೇ ವಿದ್ಯಾರ್ಥಿಯೂ ಗಳಿಸಿರುವುದಿಲ್ಲ.
- ಬಾಲಕರು ಪರಿಸರ ಅಧ್ಯಯನದಲ್ಲಿ ಉತ್ತಮ ಸಾಧನೆಯನ್ನು ತೋರಿಸಿದ್ದಾರೆ.
- ಬಿ ಗ್ರೇಡ್‌ನಲ್ಲಿ ಸರಾಸರಿ 9.2 ರಷ್ಟು ವಿದ್ಯಾರ್ಥಿಗಳಿರುತ್ತಾರೆ. ಇದೇ ರೀತಿ ಸಿ ಗ್ರೇಡ್‌ನಲ್ಲಿ ಸರಾಸರಿ 50 ರಷ್ಟು ವಿದ್ಯಾರ್ಥಿಗಳಿದ್ದು 30 ಕ್ಕಿಂತ ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಅರ್ಧದಷ್ಟಿರುವುದು ಕಲಿಕಾ ಸಾಧನೆ ಕುಂಠಿತವಾಗಿರುವುದನ್ನು ತೋರಿಸುತ್ತದೆ.
- ಈ ತರಗತಿಯಲ್ಲಿ ಬಾಲಕ ಸಾಧನೆ ಬಾಲಕಿಯರ ಸಾಧನೆಗಿಂತ ಉತ್ತಮವಾಗಿದೆ.







ಮಕ್ಕಳ ಕಲಿಕಾ ಪ್ರಗತಿಯನ್ನು ಒರೆಹಚ್ಚುತ್ತಿರುವ ಅಧ್ಯಯನ ತಂಡ

### 5ನೇ ತರಗತಿ ಕಲಿಕಾ ಪ್ರಗತಿ:

**ಕೋಷ್ಟಕ 84 :**

| 5ನೇ ತರಗತಿ | | | | | | | | | | |
|---|---|---|---|---|---|---|---|---|---|---|
| | ಕನ್ನಡ | | ಇಂಗ್ಲೀಷ್ | | ಗಣಿತ | | ವಿಜ್ಞಾನ | | ಸಮಾಜ ವಿಜ್ಞಾನ | |
| | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ |
| ಎ+ | 0 | 0 | 0 | 9.52 | 0 | 0 | 0 | 0 | 0 | 0 |
| ಎ | 25 | 16.7 | 50 | 33.3 | 28.6 | 19.1 | 0 | 5.56 | 0 | 0 |
| ಬಿ+ | 25 | 37.5 | 0 | 28.6 | 35.7 | 57.1 | 20 | 16.7 | 53.9 | 47.1 |
| ಬಿ | 25 | 16.7 | 25 | 9.52 | 28.6 | 9.52 | 60 | 44.4 | 23.1 | 11.8 |
| ಸಿ | 25 | 29.2 | 25 | 19.1 | 7.14 | 14.3 | 20 | 33.3 | 23.1 | 41.2 |
| | 100 | 100 | 100 | 100 | 100 | 100 | 100 | 100 | 100 | 100 |

**ಗ್ರಾಫ್–55:**




### ವಿಶ್ಲೇಷಣೆ ಮತ್ತು ಅರ್ಥೈಸುವಿಕೆ:

- ಇಂಗ್ಲೀಷ್ ವಿಷಯದಲ್ಲಿ ಹಿಂದಿನ ತರಗತಿಗಳಿಗಿಂತ ಗಣನೀಯ ಪ್ರಮಾಣದಲ್ಲಿ ಕಲಿಕೆ ಸುಧಾರಿಸಿದ್ದು, ಇತರೆ ವಿಷಯಗಳಿಗಿಂತ ಇಂಗ್ಲೀಷ್‌ನಲ್ಲಿ ಕಲಿಕೆ ಉತ್ತಮ ಮಟ್ಟದಲ್ಲಿರುವುದನ್ನು ಕೋಷ್ಟಕ ತೋರಿಸುತ್ತದೆ.
- ಇಂಗ್ಲೀಷ್ ಹೊರತುಪಡಿಸಿ ಉಳಿದ ವಿಷಯಗಳಲ್ಲಿ ಎಲ್ಲಾ ವಿದ್ಯಾರ್ಥಿಗಳು ಶೇ.90 ಕ್ಕಿಂತ ಕಡಿಮೆ ಅಂಕವನ್ನು ಗಳಿಸಿರುತ್ತಾರೆ.
- ಈ ತರಗತಿಯಲ್ಲಿಯೂ ಬಾಲಕರ ಸಾಧನೆ ಬಾಲಕಿಯರ ಸಾಧನೆಗಿಂತ ಉತ್ತಮವಾಗಿದೆ.
- 5ನೇ ತರಗತಿಯಲ್ಲಿ ಸಮಾಜ ವಿಜ್ಞಾನ ವಿಷಯದಲ್ಲಿ ಮಕ್ಕಳ ಕಲಿಕಾ ಪ್ರಗತಿ ಉತ್ತಮವಾಗಿರುವುದಿಲ್ಲ.
- ಎ ಗ್ರೇಡ್‌ನಲ್ಲಿ ಸರಾಸರಿ ಶೇ.17.8 ರಷ್ಟು ಮಕ್ಕಳು ಎಲ್ಲಾ ವಿಷಯಗಳಲ್ಲಿಯೂ ಸಾಧನೆ ಮಾಡಿದ್ದು ಸೂಕ್ತ ಮಾರ್ಗದರ್ಶನದ ಅಗತ್ಯತೆ ಇದೆ.

### 6ನೇ ತರಗತಿ ಕಲಿಕಾ ಪ್ರಗತಿ:

**ಕೋಷ್ಟಕ 85 :**

| ಗ್ರೇಡ್ | ಕನ್ನಡ | | ಇಂಗ್ಲೀಷ್ | | ಗಣಿತ | | ವಿಜ್ಞಾನ | | ಸಮಾಜ ವಿಜ್ಞಾನ | | ಹಿಂದಿ | |
|---|---|---|---|---|---|---|---|---|---|---|---|---|
| | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ |
| ಎ+ | 27.3 | 0 | 0 | 0 | 0 | 0 | 0 | 0 | 0 | 0 | 0 | 0 |
| ಎ | 9.09 | 22.2 | 9.09 | 12.5 | 12.5 | 0 | 7.69 | 0 | 27.3 | 37.5 | 0 | 0 |
| ಬಿ+ | 9.09 | 22.2 | 9.09 | 37.5 | 6.25 | 0 | 53.9 | 16.7 | 9.09 | 37.5 | 33.3 | 28.6 |
| ಬಿ | 18.2 | 33.3 | 0 | 0 | 25 | 33.3 | 23.1 | 50 | 9.09 | 25 | 66.7 | 35.7 |
| ಸಿ | 36.4 | 22.2 | 81.8 | 50 | 56.3 | 66.7 | 15.4 | 33.3 | 54.6 | 0 | 0 | 35.7 |
| | 100 | 100 | 100 | 100 | 100 | 100 | 100 | 100 | 100 | 100 | 100 | 100 |

**ಗ್ರಾಫ್–56:**




### ವಿಶ್ಲೇಷಣೆ ಮತ್ತು ಅರ್ಥೈಸುವಿಕೆ:

- ಈ ತಗರತಿಯಲ್ಲಿ ಇಂಗ್ಲೀಷ್ ಹಾಗೂ ಗಣಿತ ವಿಷಯದಲ್ಲಿ ಕಲಿಕೆ ಕೆಳಮಟ್ಟದಲ್ಲಿದ್ದರೆ, ವಿಜ್ಞಾನದಲ್ಲಿ ಸಾಧರಣ ಮಟ್ಟದಲ್ಲಿದೆ.
- 5ನೇ ತರಗತಿಯಲ್ಲಿ ಇಂಗ್ಲೀಷ್ ಕಲಿಕೆ ತೃಪ್ತಿಕರವಾಗಿದ್ದು, 6ನೇ ತರಗತಿಯಲ್ಲಿ ಕೆಳಮಟ್ಟಕ್ಕಿಳಿದಿರುವುದು ಆಶ್ಚರ್ಯ ತಂದಿದೆ. ಇದಕ್ಕೆ ತರಗತಿ ಪ್ರಕ್ರಿಯೆಗಳು ಪ್ರಮುಖ ಕಾರಣವಾಗಿರಬಹುದು
- ಹಿಂದಿ ವಿಷಯದಲ್ಲಿ ಬೋಧನಾ ಪ್ರಕ್ರಿಯೆಗಳು ಹಿಂದಿ ಶಿಕ್ಷಕರ ಕೊರತೆಯಿಂದಾಗಿ ನಡೆಯದಿರುವುದನ್ನು ಗುರುತಿಸಲಾಗಿದೆ. ಆದರೂ ಸಾಧರಣ ಮಟ್ಟದಲ್ಲಿ ಮಕ್ಕಳು ಕಲಿಕೆಯನ್ನು ಹೊಂದಿರುವುದು ಉತ್ತಮ ಅಂಶವಾಗಿದೆ.
- ಗಣಿತ ಮತ್ತು ವಿಜ್ಞಾನ ವಿಷಯದಲ್ಲಿ ಬಾಲಕರ ಸಾಧನೆ ಉತ್ತಮವಾಗಿದ್ದರೆ, ಉಳಿದ ವಿಷಯಗಳಲ್ಲಿ ಬಾಲಕಿಯರ ಸಾಧನೆ ಉತ್ತಮವಾಗಿದೆ. ಹಾಗೂ ಹೆಚ್ಚಿನ ವ್ಯತ್ಯಾಸವನ್ನು ಕಾಣಬಹುದಾಗಿದೆ.
- ಶೇ.37 ರಷ್ಟು ವಿದ್ಯಾರ್ಥಿಗಳು ಸಿ ಗ್ರೇಡ್‌ನಲ್ಲಿ ಕೇಂದ್ರೀಕೃತವಾಗಿದ್ದು ಉತ್ತಮ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಅನುಸರಿಸಬೇಕಾಗಿದೆ.

7ನೇತರಗತಿ ಕಲಿಕಾ ಪ್ರಗತಿ:

**ಕೋಷ್ಟಕ 86 :**

| ಗ್ರೇಡ್ | ಕನ್ನಡ | | ಇಂಗ್ಲೀಷ್ | | ಗಣಿತ | | ವಿಜ್ಞಾನ | | ಸಮಾಜ ವಿಜ್ಞಾನ | | ಹಿಂದಿ | |
|---|---|---|---|---|---|---|---|---|---|---|---|---|
| | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ |
| ಎ+ | 0 | 0 | 0 | 0 | 0 | 0 | 22.2 | 0 | 0 | 0 | 20 | 33.3 |
| ಎ | 0 | 35 | 0 | 21.4 | 0 | 0 | 22.2 | 7.14 | 14.3 | 12.5 | 0 | 40 |
| ಬಿ+ | 66.7 | 35 | 40 | 28.6 | 37.5 | 20 | 0 | 0 | 0 | 12.5 | 60 | 6.67 |
| ಬಿ | 0 | 0 | 20 | 28.6 | 12.5 | 46.7 | 11.1 | 14.3 | 42.9 | 62.5 | 20 | 6.67 |
| ಸಿ | 33.3 | 30 | 40 | 21.4 | 50 | 33.3 | 44.4 | 78.6 | 42.9 | 12.5 | 0 | 13.3 |
| | 100 | 100 | 100 | 100 | 100 | 100 | 100 | 100 | 100 | 100 | 100 | 100 |

**ಗ್ರಾಫ್–57:**




**ವಿಶ್ಲೇಷಣೆ ಮತ್ತು ಅರ್ಥೈಸುವಿಕೆ:**

- ಶೇ.9.2 ರಷ್ಟು ಮಕ್ಕಳು ಮಾತ್ರ ಎ+ ಗ್ರೇಡ್‌ನಲ್ಲಿದ್ದು ಅದು ಕೇವಲ ವಿಜ್ಞಾನ ಮತ್ತು ಹಿಂದಿ ವಿಷಯಗಳಿಗೆ ಸೀಮಿತವಾಗಿದೆ.
- ಸರಾಸರಿ ಶೇ. 33.3 ರಷ್ಟು ಮಕ್ಕಳು ಸಿ ಗ್ರೇಡ್‌ನಲ್ಲಿದ್ದು, ಈ ಮಕ್ಕಳ ಕಡೆ ವಿಶೇಷ ಗಮನದ ಅಗತ್ಯವಿದೆ.
- ಶೇ.44 ರಷ್ಟು ಬಾಲಕರು ಹಾಗೂ ಶೇ.78.5 ರಷ್ಟು ಬಾಲಕಿಯರು ವಿಜ್ಞಾನ ವಿಷಯದಲ್ಲಿ ಸಿ ಗ್ರೇಡ್‌ನಲ್ಲಿರುವುದನ್ನು ಕೋಷ್ಟಕ ತೋರಿಸುತ್ತದೆ.
- ಶೇ.31.5 ರಷ್ಟು ಮಕ್ಕಳು ಕನ್ನಡದಲ್ಲಿ ಹಾಗೂ ಶೇ.6.7 ರಷ್ಟು ಮಕ್ಕಳು ಹಿಂದಿ ವಿಷಯದಲ್ಲಿ ಸಿ ಗ್ರೇಡ್ ನಲ್ಲಿರುವುದು ಕುತೂಹಲಕ್ಕೆ ಅವಕಾಶ ಮಾಡಿಕೊಟ್ಟಿದೆ.
- ಗಣಿತ ಮತ್ತು ವಿಜ್ಞಾನ ವಿಷಯದಲ್ಲಿ ಬಾಲಕರ ಸಾಧನೆ, ಬಾಲಕಿಯರ ಸಾಧನೆಗಿಂತ ಉತ್ತಮವಾಗಿದ್ದರೆ, ಹಿಂದಿ ವಿಷಯದಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಕಂಡು ಬರುತ್ತಿಲ್ಲ. ಕನ್ನಡ, ಇಂಗ್ಲೀಷ್ ಮತ್ತು ಸಮಾಜ ವಿಜ್ಞಾನದಲ್ಲಿ ಬಾಲಕಿಯರ ಸಾಧನೆ ಉತ್ತಮವಾಗಿದೆ.

## 8ನೇ ತರಗತಿ ಕಲಿಕಾ ಪ್ರಗತಿ:

**ಕೋಷ್ಟಕ 87 :**

| ಗ್ರೇಡ್ | ಕನ್ನಡ | | ಇಂಗ್ಲೀಷ್ | | ಗಣಿತ | | ವಿಜ್ಞಾನ | | ಸಮಾಜ ವಿಜ್ಞಾನ | | ಹಿಂದಿ | |
|---|---|---|---|---|---|---|---|---|---|---|---|---|
| | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ | ಬಾಲಕ | ಬಾಲಕಿ |
| ಎ+ | 0 | 0 | 0 | 0 | 0 | 0 | 0 | 0 | 0 | 0 | 0 | 0 |
| ಎ | 0 | 100 | 0 | 0 | 0 | 0 | 0 | 0 | 100 | 50 | 50 | 0 |
| ಬಿ+ | 100 | 0 | 0 | 0 | 0 | 0 | 0 | 0 | 0 | 50 | 50 | 0 |
| ಬಿ | 0 | 0 | 0 | 66.7 | 0 | 50 | 50 | 0 | 0 | 0 | 0 | 100 |
| ಸಿ | 0 | 0 | 100 | 33.3 | 100 | 50 | 50 | 100 | 0 | 0 | 0 | 0 |

**ಗ್ರಾಫ್–58:**




## ವಿಶ್ಲೇಷಣೆ ಮತ್ತು ಅರ್ಥೈಸುವಿಕೆ:

- ಸ.ಹಿ.ಪ್ರಾ.ಶಾಲೆ ರಾಜೇಂದ್ರನಗರ ಇಲ್ಲಿ ಅಭ್ಯಾಸ ಮಾಡುತ್ತಿರುವ 8ನೇ ತರಗತಿ ವಿದ್ಯಾರ್ಥಿಗಳನ್ನು ಮೌಲ್ಯಾಂಕನಕ್ಕೆ ಒಳಪಡಿಸಲಾಗಿತ್ತು. ಇಲ್ಲಿ ಪ್ರೌಢಶಾಲಾ ಶಿಕ್ಷಕರೇ ಈ ಮಕ್ಕಳಿಗೆ ಬೋಧನೆ ಮಾಡುತ್ತಿರುವುದನ್ನು ಗಮನಿಸಲಾಗಿದೆ.
- ಕನ್ನಡ ಮತು ಸಮಾಜ ವಿಜ್ಞಾನ ವಿಷಯದಲ್ಲಿ ಕಲಿಕೆ ಉತ್ತಮವಾಗಿದ್ದರೆ, ಹಿಂದಿ ವಿಷಯದಲ್ಲಿ ಸಾಧರಣ ಮಟ್ಟದಲ್ಲಿದ್ದು, ಉಳಿದ ವಿಷಯಗಳಲ್ಲಿ ಕಲಿಕೆ ಕೆಳಮಟ್ಟದಲ್ಲಿದೆ.

## ಎಸ್.ಎಂ.ಎಫ್ ಮಾಹಿತಿ ಮತ್ತು ಅಧ್ಯಯನ ತಂಡ ಗುರುತಿಸಿದ ಕಲಿಕಾ ಮಟ್ಟದ ವ್ಯತ್ಯಾಸದ ಕೋಷ್ಟಕ

### ಮೈಸೂರು ಉತ್ತರ ವಲಯದ 1–4 ತರಗತಿ ಮಕ್ಕಳ ಕಲಿಕಾ ಪ್ರಗತಿ:

**ಕೋಷ್ಟಕ 88 :**

| ತರಗತಿ | MYSORE CITY NORTH RANGE, MYSORE DISTRICT. | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|
| | ಕನ್ನಡ | | | | | ಇಂಗ್ಲೀಷ್ | | | | | ಗಣಿತ | | | | | ಪರಿಸರ ಅಧ್ಯಯನ | | | | |
| | ಂ+ | ಂ | ಃ+ | ಃ | ಅ | ಂ+ | ಂ | ಃ+ | ಃ | ಅ | ಂ+ | ಂ | ಃ+ | ಃ | ಅ | ಂ+ | ಂ | ಃ+ | ಃ | ಅ |
| **1** | 12.1 | 20.2 | –0.4 | –18 | –14 | 23.3 | 15.7 | 10.1 | –14.95 | –33 | 35.5 | 29.3 | –21 | –23 | –21 | 27.8 | 12.3 | –16 | –24 | –0.9 |
| 2 | 14.5 | 18.3 | –23 | –2.2 | –7.3 | 13.3 | 29.8 | 32.6 | 6.4 | –82 | 25.5 | 15.5 | –8.7 | –24 | –8.2 | 12.9 | 24.6 | –23 | –8 | –7.1 |
| 3 | 23.1 | 23.5 | 8.95 | –16 | –40 | 31.3 | 4 | 0.5 | 9.35 | –45 | 18.9 | 7.1 | 24.1 | –25 | –26 | 26.3 | 9.7 | –9 | –11 | –16 |
| 4 | 6.65 | 10.5 | 0.8 | 12.2 | –30 | 18.9 | 37.8 | 21.6 | 15.35 | –94 | 15.3 | 40.3 | –6.1 | –12 | –38 | 25.9 | –6.6 | 12.3 | 6.64 | –39 |

**ಗ್ರಾಫ್–59:**




- ನಗರ ಪ್ರದೇಶದ 1 ರಿಂದ 4ನೇ ತರಗತಿಯಲ್ಲಿ ಕನ್ನಡ ವಿಷಯದಲ್ಲಿ ಮಕ್ಕಳ ಕಲಿಕೆಯನ್ನು ಗಮನಿಸಿದಾಗ ಎ+ ಗ್ರೇಡ್‌ಗಳಿಸಿದ ಮಕ್ಕಳಲ್ಲಿ ಅಧ್ಯಯನ ತಂಡದ ಮಾಹಿತಿಗಿಂತ ಎಸ್.ಎಂ.ಎಫ್ ಮಾಹಿತಿಯು ಸರಾಸರಿ ಶೇ.14.05 ರಷ್ಟು ಹಾಗೂ ಎ ಗ್ರೇಡ್‌ನಲ್ಲಿ ಸರಾಸರಿ ಶೇ.17.99 ರಷ್ಟು ಹೆಚ್ಚುವರಿಯಾಗಿ ಗುರುತಿಸಿರುವುದು ಕಂಡು ಬಂದಿದೆ.
- ಇಂಗ್ಲೀಷ್ ಕಲಿಕೆಯನ್ನು ಗಮನಿಸಿದಾಗ ಎ+ ಗ್ರೇಡ್‌ನಲ್ಲಿ ಸರಾಸರಿ ಶೇ.21.69, ಎ ಗ್ರೇಡ್‌ನಲ್ಲಿ ಸರಾಸರಿ ಶೇ.20.83 ರಷ್ಟು ಹೆಚ್ಚುವರಿಯಾಗಿ ಗುರ್ತಿಸಲಾಗಿದೆ. ಒಟ್ಟಾರೆ ಶೇ.50 ಕ್ಕಿಂತ ಹೆಚ್ಚು ಸಾಧನೆಯಲ್ಲಿ ಸರಾಸರಿ ಶೇ.58.73 ರಷ್ಟು ವಾಸ್ತವ ಕಲಿಕೆಗಿಂತ ಹೆಚ್ಚು ಗುರುತಿಸಿರುವುದು ಸದರಿ ಬ್ಲಾಕ್‌ನ ಶಾಲೆಗಳು ಹಿಂದುಳಿಯಲು ಕಾರಣವಾಗಿರಬಹುದು.
- ಗಣಿತ ಕಲಿಕೆಯಲ್ಲಿ ಬಿ ಗ್ರೇಡ್‌ನಲ್ಲಿ ಸರಾಸರಿ ಶೇ.20.78, ಸಿ ಗ್ರೇಡ್‌ನಲ್ಲಿ ಸರಾಸರಿ ಶೇ.23.01 ರಷ್ಟು ಅಧ್ಯಯನ ತಂಡದ ಮಾಹಿತಿಗಿಂತ ಎಸ್.ಎಂ.ಎಫ್ ಮಾಹಿತಿಯು ಕಡಿಮೆಯಾಗಿದ್ದು, ಮೌಲ್ಯಮಾಪನದ ಅಸಮರ್ಪಕತೆಯನ್ನು ತೋರಿಸುತ್ತದೆ.
- ಪರಿಸರ ಅಧ್ಯಯನದಲ್ಲೂ ಸಿ ಗ್ರೇಡ್‌ನಲ್ಲಿ ವಾಸ್ತವವಾಗಿ ಅಧ್ಯಯನ ತಂಡ ಗುರುತಿಸಿರುವುದಕ್ಕಿಂತ ಸರಾಸರಿ ಶೇ.15.6 ರಷ್ಟು ಮಕ್ಕಳನ್ನು ಎಸ್.ಎಂ.ಎಫ್ ನಲ್ಲಿ ಕಡಿಮೆ ಗುರುತಿಸಿದೆ.

- 3ನೇ ತರಗತಿಯಲ್ಲಿ ಕನ್ನಡ ವಿಷಯದಲ್ಲಿ, 2ನೇ ತರಗತಿಯಲ್ಲಿ ಇಂಗ್ಲೀಷ್ ವಿಷಯದಲ್ಲಿ, 1ನೇ ತರಗತಿಯಲ್ಲಿ ಗಣಿತ ಹಾಗೂ ಪರಿಸರ ಅಧ್ಯಯನದಲ್ಲಿ ಹೆಚ್ಚುವರಿಯಾಗಿ ಗುರ್ತಿಸಿರುವುದನ್ನು ಕೊಷ್ಟಕ ತೋರಿಸುತ್ತದೆ.
- ಬಿ+ ಶ್ರೇಣಿಯಲ್ಲಿ 1 ಮತ್ತು 4ನೇ ತರಗತಿಯ ಕನ್ನಡ ಹಾಗೂ 3ನೇ ತರಗತಿಯ ಇಂಗ್ಲೀಷ್ ವಿಷಯದಲ್ಲಿ ಅಧ್ಯಯನ ತಂಡದ ಮಾಹಿತಿ ಹಾಗೂ ಎಸ್.ಎಂ.ಎಫ್ ಮಾಹಿತಿಯು ಒಂದೇ ರೀತಿಯಾಗಿರುವುದು ಕಂಡು ಬರುತ್ತದೆ.

### ಒಳನೋಟಗಳು

- 1ನೇ ತರಗತಿಯಲ್ಲಿ ಗಣಿತ ಹಾಗೂ ಪರಿಸರ ಅಧ್ಯಯನ ವಿಷಯದ ಕಲಿಕೆಯಲ್ಲಿ ಮಕ್ಕಳು ಹಿಂದುಳಿದಿದ್ದಾರೆ 2ನೇ ತರಗತಿಯಲ್ಲಿ ಇಂಗ್ಲೀಷ್ ಹಾಗೂ ಗಣಿತ ವಿಷಯಕ್ಕೆ ಹೆಚ್ಚಿನ ಆಧ್ಯತೆ ನೀಡಬೇಕಾಗಿದೆ. 3ನೇ ತರಗತಿಯಲ್ಲಿ ಕನ್ನಡ ಹಾಗೂ ಪರಿಸರ ಅಧ್ಯಯನ ಹಾಗೂ 4ನೇ ತರಗತಿಯಲ್ಲಿ ಇಂಗ್ಲೀಷ್ ಮತ್ತು ಗಣಿತ ವಿಷಯಗಳಲ್ಲಿ ಕಲಿಕೆ ಉತ್ತಮವಾಗಿ ಸಾಗಬೇಕಾಗಿದೆ. ಮಾತೃಭಾಷೆ ಬೇರೆಯಾಗಿರುವುದು ಕನ್ನಡ ಭಾಷೆಯಲ್ಲಿ ಕಲಿಕೆ ಕುಂಠಿತವಾಗಲು ಕಾರಣವಾಗಿದೆ( ಆಯ್ಕೆ ಮಾಡಿದ ಶಾಲೆಗಳಲ್ಲಿ ಹೆಚ್ಚಿನ ಮಕ್ಕಳ ಮಾತೃಭಾಷೆ ಉರ್ದುವಾಗಿತ್ತು)

### ಶೈಕ್ಷಣಿಕ ನಿಹಿತಾರ್ಥ

- 1ನೇ ತರಗತಿಯ ವಿದ್ಯಾರ್ಥಿಗಳು ಕಲಿಕೆಯ ಪ್ರಥಮ ವರ್ಷದ ಪ್ರಾರಂಭದಲ್ಲಿರುವುದರಿಂದ ಕಲಿಕೆಯ ಕಡೆಗೆ ಹೆಚ್ಚು ಗಮನ ಹರಿಸಿ ಬುನಾದಿ ದೃಢವಾಗುವಂತೆ ಗಮನವಹಿಸಬೇಕಾಗಿದೆ. ಭಾಷೆಗಳಂತೆ ಗಣಿತ ಮತ್ತು ಪರಿಸರ ಅಧ್ಯಯನಕ್ಕೆ ಪ್ರಾಮುಖ್ಯತೆಯನ್ನು ನೀಡಬೇಕಾಗಿದೆ. ಶಿಕ್ಷಕರಿಗೆ ಅಗತ್ಯವಾದ ಮಾರ್ಗದರ್ಶನ ಮತ್ತು ಬಲವರ್ಧನೆಗಾಗಿ ತರಬೇತಿಯನ್ನು ನೀಡಬೇಕಾಗಿದೆ. ಹಾಗೂ ಸಮಾಲೋಚನಾ ಸಭೆಗಳಲ್ಲಿ ಅವರ ಸಮಸ್ಯೆಗಳನ್ನು ಪರಿಹರಿಸಬೇಕಾಗಿದೆ. ಸಾಮರ್ಥ್ಯಾಧಾರಿತ ಮೌಲ್ಯಮಾಪನ ಮಾಡುವ ಬಗ್ಗೆ ಶಿಕ್ಷಕರ ಬಲವರ್ಧನೆಯಾಗಬೇಕು
- 2ನೇ ತರಗತಿಯಲ್ಲಿ ಇಂಗ್ಲೀಷ್ ಮತ್ತು ಗಣಿತ ವಿಷಯಗಳಲ್ಲಿ ವಾಸ್ತವ ಕಲಿಕೆಯಲ್ಲಿ ಹೆಚ್ಚಿನ ವ್ಯತ್ಯಾಸ ಕಂಡುಬರುತ್ತಿದ್ದು ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕಾಗಿದೆ.
- ಪ್ರತಿದಿನ ವೇಳಾಪಟ್ಟಿಯಲ್ಲಿ ಕೊನೆಯ ಅವಧಿಯನ್ನು ಇಂಗ್ಲೀಷ್ ಬೋಧನೆಗೆ ನಿಗಧಿಪಡಿಸಿರುವುದು ಹಾಗೂ ಸರಾಸರಿ ಶೇ.58.73 ರಷ್ಟು ನೈಜ ಕಲಿಕೆಯನ್ನು ತಪ್ಪಾಗಿ ಅರ್ಥೈಸಿದ್ದು ಮೌಲ್ಯಮಾಪನ ಪ್ರಕ್ರಿಯೆ ಉತ್ತಮಗೊಳ್ಳಬೇಕಾಗಿದೆ.
- ಕಲಿಕೆಯನ್ನು ಸರಿಯಾಗಿ ಗುರುತಿಸುವ ಬಗ್ಗೆ ಶಿಕ್ಷಕರಿಗೆ ಮಾರ್ಗದರ್ಶಿಸಬೇಕಾಗಿದೆ.

**ಕೋಷ್ಟಕ 89 :**

| ತರಗತಿ | ಕನ್ನಡ | | | | | ಇಂಗ್ಲೀಷ್ | | | | | ಗಣಿತ | | | | | ವಿಜ್ಞಾನ | | | | | ಸಮಾಜ ವಿಜ್ಞಾನ | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | A+ | A | B+ | B | C | A+ | A | B+ | B | C | A+ | A | B+ | B | C | A+ | A | B+ | B | C | A+ | A | B+ | B | C |
| 5 | 29.1 | 27.1 | –8.4 | –21 | –27 | 24 | –0 | 8.6 | –4.76 | –27 | 39.5 | 1.15 | –26 | –4.6 | –11 | 33.3 | 34.7 | 10.8 | –52 | –27 | 16.6 | 58.3 | –26 | –17 | –32 |

**ಗ್ರಾಫ್–60:**




- ನಗರ ಪ್ರದೇಶದ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ 5ನೇ ತರಗತಿ ಮಕ್ಕಳ ಕಲಿಕೆಯನ್ನು ಎಲ್ಲಾ ವಿಷಯಗಳಲ್ಲಿ ಗಮನಿಸಿದಾಗ ಎ+ ಗ್ರೇಡ್‌ಗಳಲ್ಲಿ ಎಲ್ಲಾ ವಿಷಯಗಳಲ್ಲಿ ಹಾಗೂ ಎ ಗ್ರೇಡ್‌ನಲ್ಲಿ ಇಂಗ್ಲೀಷ್ ಹೊರತುಪಡಿಸಿ ಉಳಿದ ವಿಷಯಗಳಲ್ಲಿ ವಾಸ್ತವ ಕಲಿಕೆಯು ಎಸ್.ಎಂ.ಎಫ್ ಮಾಹಿತಿಗಿಂತ ಸಾಕಷ್ಟು ಕಡಿಮೆ ಇರುವುದು ಕಂಡು ಬಂದಿದೆ.
- ಶೇ.70 ಕ್ಕಿಂತ ಹೆಚ್ಚು ಸಾಧನೆ ಮಾಡಿರುವ ಮಕ್ಕಳ ಸಂಖ್ಯೆಯನ್ನು ಗಮನಿಸಿದಾಗ ಸಮಾಜ ವಿಜ್ಞಾನ ವಿಷಯದಲ್ಲಿ ಶೇ.74.9 ರಷ್ಟು ಹೆಚ್ಚಾಗಿ ತೋರಿಸಿದ್ದು, ಮೌಲ್ಯಮಾಪನದ ಅಸಮರ್ಪಕತೆಯನ್ನು ತೋರಿಸುತ್ತದೆ.
- ಎಲ್ಲ ವಿಷಯಗಳಲ್ಲಿಯೂ ಸಿ ಗ್ರೇಡ್‌ನಲ್ಲಿ ವಾಸ್ತವವಾಗಿ ಶೇ.10.72 ರಿಂದ ಶೇ.32.15 ರಷ್ಟು ಹೆಚ್ಚು ಮಕ್ಕಳಿರುವುದು ಅಧ್ಯಯನದಿಂದ ಗುರುತಿಸಲಾಗಿದೆ.

**ಒಳನೋಟಗಳು**

- ಇಂಗ್ಲೀಷ್ ವಿಷಯದಲ್ಲಿ ಕಲಿಕೆ ಸಾಧಾರಣಾವಾಗಿದ್ದು, ಉಳಿದ ವಿಷಯಗಳಲ್ಲಿ ಕಲಿಕೆಯು ಉತ್ತಮವಾಗಿರುವುದಿಲ್ಲ
- ಬಿ+, ಬಿ ಮತ್ತು ಸಿ ಗ್ರೇಡ್‌ನಲ್ಲಿ ಎಸ್.ಎಂ.ಎಫ್ ಮಾಹಿತಿಯು ಕಡಿಮೆಯಾಗಿದ್ದು ನೈಜ ಕಲಿಕೆಯನ್ನು ಮೌಲ್ಯಾಂಕನ ಮಾಡುವಲ್ಲಿ ಶಿಕ್ಷಕರು ವಿಫಲವಾಗಿರುವುದನ್ನು ತಿಳಿಸುತ್ತದೆ.

**ಶೈಕ್ಷಣಿಕ ನಿಹಿತಾರ್ಥ**

- ಮಕ್ಕಳ ಕಲಿಕೆಯಲ್ಲಾಗುವ ಕಲಿಕಾ ಅಂತರವನ್ನು ಹೋಗಲಾಡಿಸಲು ಸೂಕ್ತ ಕ್ರಮಕೈಗೊಳ್ಳುವುದು.
- ಶಾಲಾ ಹಂತದಲ್ಲಿ ಸಾಮರ್ಥ್ಯಾಧಾರಿತ ಮೌಲ್ಯಮಾಪನವನ್ನು ಸಮರ್ಪಕವಾಗಿ ಮಾಡುವಂತೆ ಬಲವರ್ಧನೆ ಮಾಡುವುದು

**ಕೋಷ್ಠಕ 90:**

ಗ್ರಾಫ್–61




- ನಗರ ಪ್ರದೇಶದ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ 6ನೇ ತರಗತಿ ಮಕ್ಕಳ ಕಲಿಕೆಯನ್ನು ಗಮನಿಸಿದಾಗ ಎ+ ಗ್ರೇಡ್‌ನಲ್ಲಿ

- ಶೇ.26.32 ರಷ್ಟು ವಾಸ್ತವ ಕಲಿಕೆಗಿಂತ ಎಸ್.ಎಂ.ಎಫ್ ಮಾಹಿತಿಯು ಹೆಚ್ಚಾಗಿದ್ದು ಇದು ಉಳಿದ ವಿಷಯಗಳಿಗಿಂತ ಹೆಚ್ಚಾಗಿರುವುದು ಅಧ್ಯಯನದಿಂದ ಕಂಡು ಬಂದಿದೆ
- ಹಿಂದಿ ಶಿಕ್ಷಕರ ಕೊರತೆಯಿಂದಾಗಿ ಹಿಂದಿ ವಿಷಯದ ತರಗತಿಗಳ ನಿರ್ವಹಣೆಯನ್ನು ಎರಡೂ ತರಗತಿಗಳಲ್ಲಿಯೂ ತೃಪ್ತಿಕರವಾಗಿ ಮಾಡಿಲ್ಲದಿರುವುದು ಭೇಟಿಯ ಸಂದರ್ಭದಲ್ಲಿ ತಿಳಿದುಬಂದಿದೆ
- 6ನೇ ತರಗತಿಯ ಇಂಗ್ಲೀಷ್ ಹಾಗೂ ಗಣಿತ ವಿಷಯಗಳಲ್ಲಿ ಸಿ ಗ್ರೇಡ್‌ನಲ್ಲಿ ಕ್ರಮವಾಗಿ ಶೇ.65.9 ಮತ್ತು ಶೇ61.5 ರಷ್ಟು ಕಡಿಮೆ ಗುರುತಿಸಿದ್ದು ನೈಜ ಕಲಿಕೆಯ ಗುರುತಿಸುವಿಕೆ ಕಳಪೆಯಾಗಿರುವುದನ್ನು ಕಾಣಬಹುದು. ಇದೇ ರೀತಿ 7ನೇ ತರಗತಿಯ ಗಣಿತ ಮತ್ತು ವಿಜ್ಞಾನಗಳಲ್ಲಿ ಎಸ್.ಎಂ.ಎಫ್ ಮಾಹಿತಿ ಮತ್ತು ಅಧ್ಯಯನದ ಮಾಹಿತಿಯ ವ್ಯತ್ಯಾಸ ಸಿ ಗ್ರೇಡ್‌ನಲ್ಲಿ ಕ್ರಮವಾಗಿ ಶೇ.41.65 ಹಾಗೂ ಶೇ.61.5 ಆಗಿದ್ದು ಉಳಿದ ವಿಷಯಗಳಲ್ಲಿ ಹಾಗೂ ಗ್ರೇಡ್‌ಗಳಿಗಿಂತ ಹೆಚ್ಚಾಗಿದ್ದು ತಪ್ಪಾಗಿ ಅರ್ಥೈಸುವಿಕೆಗೆ ಉದಾಹರಣೆಯಾಗಿದೆ.
- 7ನೇ ತರಗತಿಯ ಹಿಂದಿ ಹಾಗೂ ವಿಜ್ಞಾನ ವಿಷಯದಲ್ಲಿ ಎ+ ಗ್ರೇಡ್‌ನಲ್ಲಿ ವಾಸ್ತವ ಕಲಿಕೆಯು ಅಧ್ಯಯನದ ತಂಡದ ಮಾಹಿತಿಗಿಂತ ಕ್ರಮವಾಗಿ ಶೇ.21.15 ಹಾಗೂ ಶೇ.2.1 ರಷ್ಟು ಹೆಚ್ಚಾಗಿರುವುದು ಉತ್ತಮವಾದ ಅಂಶವಾಗಿದೆ.

### ಒಳನೋಟಗಳು

- ಶಾಲಾ ಹಂತದಲ್ಲಿ ಕಲಿಕೆಯನ್ನು ಗುರುತಿಸುವುದರಲ್ಲಿ ಹೆಚ್ಚು ವ್ಯತ್ಯಾಸಗಳಿವೆ.
- ಹಿಂದಿ ಶಿಕ್ಷಕರ ಕೊರತೆಯಿಂದಾಗಿ ಹಿಂದಿ ವಿಷಯದ ಸಮರ್ಪಕ ಬೋಧನೆಯಾಗುತ್ತಿಲ್ಲ.
- ವ್ಯಾವಸ್ಥಿಕ ಅಭದ್ರತೆಯಿಂದಾಗಿಯೂ ಶಿಕ್ಷಕರು, ಅನುಪಾಲಕರೂ ಕಲಿಕೆಯನ್ನು ಸರಿಯಾಗಿ ಗುರುತಿಸದಿರಬಹುದು.

### ಶೈಕ್ಷಣಿಕ ನಿಹಿತಾರ್ಥ

- ಕಲಿಕೆಯನ್ನು ಸರಿಯಾಗಿ ಗುರುತಿಸುವಂತೆ ಸಾಮರ್ಥ್ಯಾಧಾರಿತ ಮೌಲ್ಯಮಾಪನ ಮಾಡುವ ಬಗ್ಗೆ ಶಿಕ್ಷಕರಿಗೆ ಹಾಗೂ ಅನುಪಾಲಕರಿಗೆ ಮಾರ್ಗದರ್ಶಿಸಬೇಕಾಗಿದೆ.
- ಶಿಕ್ಷಕರು ಹಿಂದಿ ವಿಷಯವನ್ನು ಕೂಡ ಒಂದು ವಿಷಯವೆಂದು ಪರಿಗಣಿಸಿ ಬೋಧನಾ ಕಾರ್ಯ ಮಾಡಬೇಕಾಗಿದೆ.
- ವ್ಯಾವಸ್ಥಿಕ ಆಭದ್ರತೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಕಾರ್ಯಗಳಾಗಬೇಕು ಮತ್ತು ಇದನ್ನು ಗಂಭೀರವಾಗಿ ಪರಿಗಣಿಸಬೇಕು.

ಎಸ್.ಎಂ.ಎಫ್ ಮಾಹಿತಿ ಮತ್ತು ಅಧ್ಯಯನ ತಂಡ ಗುರುತಿಸಿದ ಕಲಿಕಾ ಮಟ್ಟದ **ವ್ಯತ್ಯಾಸದ ಕೋಷ್ಟಕ:**

**ಕೆ.ಆರ್.ನಗರ ವಲಯದ 1–4 ನೇ ತರಗತಿ ಮಕ್ಕಳ ಕಲಿಕಾ ಪ್ರಗತಿಯಲ್ಲಿ ಗಮನಿಸಿದ ವ್ಯತ್ಯಾಸ:**

**ಕೋಷ್ಟಕ 91 :**

| ತರಗತಿ | K.R.NAGARA TALUK, MYSORE DISTRICT. | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|
| | ಕನ್ನಡ | | | | | ಇಂಗ್ಲೀಷ್ | | | | | ಗಣಿತ | | | | | ಪರಿಸರ ಅಧ್ಯಯನ | | | | |
| | A+ | A | B+ | B | C | A+ | A | B+ | B | C | A+ | A | B+ | B | C | A+ | A | B+ | B | C |
| 1 | 18.55 | –3.2 | 0.3 | –2.55 | –13 | 8.45 | 7.85 | –2.3 | –0.75 | –13.45 | 22.75 | 6.25 | –1.35 | –14.85 | –13 | 29.45 | 10.3 | –4.7 | –17.1 | –18 |
| 2 | 22.9 | –3.8 | –10.4 | –4 | –4.8 | 21.8 | –7.6 | –15.8 | –4.3 | 6 | 25.25 | 7.25 | –13.95 | –10.95 | –7.95 | 32.75 | –1.9 | –14.1 | –15.35 | –2 |
| 3 | 21 | –9.5 | –1.3 | –4.15 | –6.7 | 20.6 | 10.3 | 0.55 | 7.75 | 39.45 | 24.2 | 16.8 | –1.6 | –1.45 | 37.95 | 15.6 | 15.55 | –6.5 | 15.05 | –40 |
| 4 | 23.65 | 5.55 | –4.1 | 5.4 | –30 | –14.2 | 15.5 | 6.85 | 8.35 | –16.85 | 10.35 | 12.1 | 2.5 | 6.95 | 32.05 | –5 | 20.5 | –3.25 | 11.05 | –24 |

**ಗ್ರಾಫ್–62**




- 

- ಗ್ರಾಮೀಣ ಪ್ರದೇಶದ 1 ರಿಂದ 4ನೇ ತರಗತಿಯ ಕನ್ನಡ ವಿಷಯದಲ್ಲಿ ಮಕ್ಕಳ ಕಲಿಕೆಯನ್ನು ಗಮನಿಸಿದಾಗ ಎ+ ಗ್ರೇಡ್‌ಗಳಿಸಿದ ಮಕ್ಕಳಲ್ಲಿ ಅಧ್ಯಯನ ತಂಡದ ಮಾಹಿತಿಗಿಂತ ಎಸ್.ಎಂ.ಎಫ್ ಮಾಹಿತಿಯ ಸರಾಸರಿ ಶೇ.16.52 ರಷ್ಟು ಹೆಚ್ಚಾಗಿದ್ದು ಹಾಗೂ ಎ ಗ್ರೇಡ್‌ನಲ್ಲಿ ಸರಾಸರಿ ಶೇ.2.73 ರಷ್ಟು ಮಾತ್ರ ಹೆಚ್ಚುವರಿಯಾಗಿ ಗುರುತಿಸಿರುವುದು ಅಧ್ಯಯನದಿಂದ ಕಂಡುಬಂದಿದೆ

- ಇಂಗ್ಲೀಷ್ ಕಲಿಕೆಯನ್ನು ಗಮನಿಸಿದಾಗ 4ನೇ ತರಗತಿಯಲ್ಲಿ ಅಧ್ಯಯನ ತಂಡವೇ ಶೇ.14.2 ರಷ್ಟು ಎಸ್.ಎಂ.ಎಫ್‌ನಲ್ಲಿ ದಾಖಲಿಸಿದ ಅಂಶಗಳಿಗಿಂತ ಹೆಚ್ಚಾಗಿರುವುದು ಉತ್ತಮ ಅಂಶವಾಗಿದೆ. 3ನೇ ತರಗತಿ ಬಿ+ ಗ್ರೇಡ್‌ನಲ್ಲಿ ಹಾಗೂ 1ನೇ ತರಗತಿಯ ಬಿ ಗ್ರೇಡ್‌ನಲ್ಲಿ ವಾಸ್ತವ ಕಲಿಕೆಗೂ ಎಸ್.ಎಂ.ಎಫ್‌ನಲ್ಲಿ ದಾಖಲಾಗಿರುವ ಮಾಹಿತಿಗೂ ಹೆಚ್ಚಿನ ವ್ಯತ್ಯಾಸವಿರುವುದಿಲ್ಲ. 2ನೇ ತರಗತಿಯ ಸಿ ಗ್ರೇಡ್‌ನಲ್ಲಿ ಸಿ.ಆರ್.ಪಿ ತಂಡವೇ ಶೇ.6 ರಷ್ಟು ಹೆಚ್ಚುವರಿಯಾಗಿ ಗುರ್ತಿಸಿದ್ದು, ಅಧ್ಯಯನ ತಂಡದ ಮಾಹಿತಿ ಕಡಿಮೆ ಇದೆ. ಎ+ ಗ್ರೇಡ್‌ನಲ್ಲಿ ಸರಾಸರಿ ಶೇ.9.16, ಎ ಗ್ರೇಡ್‌ನಲ್ಲಿ ಶೇ6.51 ರಷ್ಟು, ಬಿ+ ಗ್ರೇಢ್‌ನಲ್ಲಿ ಎಸ್.ಎಂ.ಎಫ್ ಮಾಹಿತಿ ಹೆಚ್ಚುವರಿಯಾಗಿದ್ದರೆ ಅಧ್ಯಯನ ತಂಡದ ಮಾಹಿತಿಯೇ ಎಸ್.ಎಂ.ಎಫ್ ಮಾಹಿತಿಗಿಂತ ಸರಾಸರಿ ಶೇ.5.35 ರಷ್ಟು ಹೆಚ್ಚಾಗಿದೆ.
- ಗಣಿತ ಕಲಿಕೆಯನ್ನು ಗಮನಿಸಿದಾಗ ವಾಸ್ತವ ಕಲಿಕೆಯು ಎಸ್,ಎಂ.ಎಫ್ ಮಾಹಿತಿಗಿಂತ ಎ+ ಗ್ರೇಡ್‌ನಲ್ಲಿ ಸರಾಸರಿ ಶೇ.20.58 ರಷ್ಟು, ಎ ಗ್ರೇಡ್‌ನಲ್ಲಿ ಸರಾಸರಿ ಶೇ.10.72 ರಷ್ಟು ಹೆಚ್ಚು ಹಾಗೂ ಸಿ ಗ್ರೇಡ್‌ನಲ್ಲಿ ಶೇ.22.7 ರಷ್ಟು ಕಡಿಮೆ ಇರುವುದು ಅಧ್ಯಯನದಿಂದ ತಿಳಿದು ಬಂದಿದೆ. 4ನೇ ತರಗತಿಯಲ್ಲಿ ಬಿ ಗ್ರೇಡ್‌ನವರೆಗೂ ಎಸ್.ಎಂ.ಎಫ್ ಮಾಹಿತಿ ಹೆಚ್ಚಾಗಿರುವುದು ಕೋಷ್ಟಕದಿಂದ ತಿಳಿದು ಬರುತ್ತದೆ. ಪರಿಸರ ಅಧ್ಯಯನದಲ್ಲಿ ಮಕ್ಕಳ ಕಲಿಕೆಯನ್ನು ಪರೀಕ್ಷಿಸಲಾಗಿ ವಾಸ್ತವ ಕಲಿಕೆಯು ಎಸ್.ಎಂ.ಎಫ್ ಮಾಹಿತಿಗಿಂದ ಶೇ.18.2 ರಷ್ಟು ಹೆಚ್ಚು, ಸಿ ಗ್ರೇಡ್‌ನಲ್ಲಿ ಸರಾಸರಿ ಶೇ.20.66 ರಷ್ಟು ಕಡಿಮೆಯಾಗಿರುವುದು ಅಧ್ಯಯನದಿಂದ ತಿಳಿದು ಬರುತ್ತದೆ. ಸಿ ಗ್ರೇಡ್‌ನಲ್ಲಿ 2ನೇ ತರಗತಿಯಲ್ಲಿ ಶೇ.1.5 ರಷ್ಟು ಹಾಗೂ 3ನೇ ತರಗತಿಯಲ್ಲಿ ಶೇ.39.75 ರಷ್ಟು ಅಧ್ಯಯನ ತಂಡವು ಶಾಲಾ ಹಂತದಲ್ಲಿ ಗುರುತಿಸಿರುವುದಕ್ಕಿಂತ ಹೆಚ್ಚು ಮಕ್ಕಳನ್ನು ಗುರುತಿಸಲಾಗಿದೆ.

### ಒಳನೋಟಗಳು

- ಗಣಿತ ವಿಷಯವನ್ನು ಹೊರತುಪಡಿಸಿ ಉಳಿದ ವಿಷಯಗಳಲ್ಲಿ ಕಲಿಕೆಯು ತೃಪ್ತಿಕರವಾಗಿದೆ. ಆದರೆ ಕಲಿಕೆಯನ್ನು ಗುರುತಿಸುವಾಗ ಸಾಕಷ್ಟು ವ್ಯತ್ಯಾಸಗಳಿವೆ
- 3ನೇ ತರಗತಿಯಲ್ಲಿ ಕನ್ನಡವನ್ನು ಹೊರತುಪಡಿಸಿ ಸಿ ಗ್ರೇಡ್‌ನಲ್ಲಿ ವಾಸ್ತವಕ್ಕಿಂತ ಹೆಚ್ಚು ಮಕ್ಕಳನ್ನು ಗುರುತಿಸುತ್ತಾರೆ. ಈ ವ್ಯತ್ಯಾಸಗಳು ಏಕೆ ಉಂಟಾಗಿದೆ ಎನ್ನುವುದರ ಬಗ್ಗೆ ಪರಿಶೋಧನೆ ಮಾಡುವ ಅಗತ್ಯತೆ ಇದೆ.
- ಕಲಿಕೆಯ ಪ್ರಥಮ ವರ್ಷವಾದ 1ನೇ ತರಗತಿಯಲ್ಲಿ ಪರಿಸರ ಅಧ್ಯಯನ ವಿಷಯದಲ್ಲಿ ಶೇ.70 ಕ್ಕಿಂತ ಹೆಚ್ಚು ಅಂಕ ಪಡೆದ ಮಕ್ಕಳನ್ನು ಸರಾಸರಿ ಶೇ.40.75 ರಷ್ಟು ಹೆಚ್ಚಾಗಿ ಗುರ್ತಿಸಿರುವುದು ಕಂಡು ಬಂದಿದೆ.
- ಶಾಲೆಗಳಲ್ಲಿ ಕಲಿಕಾ ಕೊರತೆಗಳನ್ನು ನೀಗಿಸಲು ನಿರ್ದಿಷ್ಟ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯತೆಯಿದೆ.

### 5ನೇ ತರಗತಿ ಮಕ್ಕಳ ಕಲಿಕಾ ಪ್ರಗತಿಯಲ್ಲಿ ಗಮನಿಸಿದ ವ್ಯತ್ಯಾಸ:

**ಕೋಷ್ಟಕ 92 :**

| ತರಗತಿ | ಕನ್ನಡ | | | | | ಇಂಗ್ಲೀಷ್ | | | | | ಗಣಿತ | | | | | ವಿಜ್ಞಾನ | | | | | ಸಮಾಜವಿಜ್ಞಾನ | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | O+ | O | oo+ | oo | ಐ | O+ | O | oo+ | oo | ಐ | O+ | O | oo+ | oo | ಐ | O+ | O | oo+ | oo | ಐ | O+ | O | oo+ | oo | ಐ |
| 5 | 14.2 | –9.2 | 29 | –7 | –27 | 4 | 1.3 | 30 | 1.8 | –38 | 3.8 | 22 | 21 | –12 | –35 | 3.4 | 21 | 37 | –4.7 | –57 | 22 | 19 | 18.7 | –8.6 | –51 |

**ಗ್ರಾಫ್–63**




- ಗ್ರಾಮೀಣ ಪ್ರದೇಶದ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ 5ನೇ ತರಗತಿ ಮಕ್ಕಳ ಕಲಿಕೆಯನ್ನು ಎಲ್ಲಾ ವಿಷಯಗಳಲ್ಲಿ ಗಮನಿಸಿದಾಗ ಎ+ ಗ್ರೇಡ್‌ನಲ್ಲಿ ವಾಸ್ತವ ಕಲಿಕೆಯು ಎಸ್.ಎಂ.ಎಫ್ ಮಾಹಿತಿಗಿಂತ ಸಾಕಷ್ಟು ಕಡಿಮೆ ಇರುವುದು ಅಧ್ಯಯನದಿಂದ ಕಂಡು ಬಂದಿದೆ
- ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳಲ್ಲಿ ಸಿ ಗ್ರೇಡ್‌ನಲ್ಲಿ ವಾಸ್ತವವಾಗಿ ಹೆಚ್ಚು ಮಕ್ಕಳಿದ್ದು ಶಾಲಾ ಹಂತದಲ್ಲಿ ಸರಿಯಾಗಿ ಗುರುತಿಸಿರುವುದಿಲ್ಲ
- ಇಂಗ್ಲೀಷ್ ಕಲಿಕೆಯನ್ನು ಗಮನಿಸಿದಾಗ ಎ+, ಎ, ಬಿ+, ಬಿ ಗ್ರೇಡ್‌ಗಳಲ್ಲಿ ಎಸ್.ಎಂ.ಎಫ್ ಮಾಹಿತಿಯು ಅಧ್ಯಯನ ತಂಡದ ಮಾಹಿತಿಗಿಂತ ಹೆಚ್ಚಾಗಿದೆ.

### ಒಳನೋಟಗಳು:

- ಕನ್ನಡ ಕಲಿಕೆಯು ಸಾಧಾರಣವಾಗಿದೆ. ಉಳಿದ ವಿಷಯಗಳಲ್ಲಿ ಕಲಿಕೆಯು ಉತ್ತಮವಾಗಿರುವುದಿಲ್ಲ. ಆದರೆ ಶಾಲಾ ಹಂತದಲ್ಲಿ ಕಲಿಕೆಯನ್ನು ಗುರ್ತಿಸುವುದರಲ್ಲಿ ಹೆಚ್ಚು ವ್ಯತ್ಯಾಸಗಳಾಗಿವೆ.

### ಶೈಕ್ಷಣಿಕ ನಿಹಿತಾರ್ಥಗಳು:

- ಮಕ್ಕಳ ಕಲಿಕೆಯಲ್ಲಿರುವ ಕಲಿಕಾ ಅಂತರವನ್ನು ಹೋಗಲಾಡಿಸಲು ಸೂಕ್ತ ಕ್ರಮಕೈಗೊಳ್ಳುವುದು

- ನೈಜ ಕಲಿಕೆಯನ್ನು ಗುರುತಿಸಲು ಸಿ.ಆರ್.ಪಿ ತಂಡಕ್ಕೆ ಸೂಕ್ತ ಮಾರ್ಗದರ್ಶನಸ ಅವಶ್ಯಕತೆ ಇದೆ,

### 6–8ನೇ ತರಗತಿ ಮಕ್ಕಳ ಕಲಿಕಾ ಪ್ರಗತಿಯಲ್ಲಿ ಗಮನಿಸಿದ ವ್ಯತ್ಯಾಸ:

**ಕೋಷ್ಟಕ 93 :**

| ತರಗತಿ | K.R.NAGARA TALUK, MYSORE DISTRICT. | | | | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | ಕನ್ನಡ | | | | | ಇಂಗ್ಲೀಷ್ | | | | | ಗಣಿತ | | | | | ವಿಜ್ಞಾನ | | | | | ಸಮಾಜವಿಜ್ಞಾನ | | | | |
| | o+ | o | ∴+ | oo | ಖ | o+ | o | ∴+ | oo | ಖ | o+ | o | ∴+ | oo | ಖ | o+ | o | ∴+ | oo | ಖ | o+ | o | ∴+ | oo | ಖ |
| 6 | 26.4 | –5.5 | –14 | 5.4 | –13 | –10 | 18.1 | 11 | 7 | –27 | 8.9 | 26 | 4 | –9 | –30 | 12 | –23 | 9.4 | 5 | –3 | 26.4 | –22 | –4.3 | 21.4 | –21 |
| 7 | 26.6 | 2.95 | –1.4 | –7 | –22 | 12 | 27.5 | 17 | 12 | –69 | 11 | 42 | 8 | –13 | –48 | 13 | –7.7 | –8 | 6.4 | –4 | 26.6 | 18 | –15.6 | 3.15 | –32 |
| 8 | 0 | 17 | –11 | –6 | 0 | 6 | –11 | 17 | 28 | –40 | 0 | –39 | 0 | 39 | 0 | –13 | –71 | 50 | 33 | 0 | 0 | 28 | 10.7 | –38.7 | 0 |

**ಗ್ರಾಫ್–64**




- 7ನೇ ತರಗತಿಯ ಇಂಗ್ಲೀಷ್ ವಿಷಯದಲ್ಲಿ ಸಿ ಗ್ರೇಡ್‌ನಲ್ಲಿ ಶೇ.68.6ರಷ್ಟುಎಸ್‌ಎಂಎಫ್ ಮತ್ತು ಅಧ್ಯಯನ ತಂಡದ ಮಾಹಿತಿಗಿಂತ ವ್ಯತ್ಯಾಸವಿದ್ದು ಮೌಲ್ಯಮಾಪನದ ಅಸಮರ್ಪಕತೆಯನ್ನು ತೋರಿಸುತ್ತದೆ.
- 7ನೇ ತರಗತಿಯ ವಿಜ್ಞಾನ ವಿಷಯದಲ್ಲಿ ಶೇ.70 ಕ್ಕಿಂತ ಹೆಚ್ಚು ಅಂಕಪಡೆದ ಮಕ್ಕಳನ್ನು ಗಮನಿಸಿದಾಗ ಶೇ.70.5 ರಷ್ಟು ಎಸ್.ಎಂ.ಎಫ್ ಹಾಗೂ ಅಧ್ಯಯನ ತಂಡದ ಮಾಹಿತಿಯ ವ್ಯತ್ಯಾಸವಿರುತ್ತದೆ.
- 8ನೇ ತರಗತಿಯಲ್ಲಿ ಕಲಿಕೆಯು ತೃಪ್ತಿಕರವಾಗಿದ್ದರೆ 7ನೇ ತರಗತಿಯಲ್ಲಿ ಕನಿಷ್ಠಮಟ್ಟದಲ್ಲಿದ್ದು 6ನೇ ತರಗತಿಯಲ್ಲಿ ಸಾಧರಣ ಮಟ್ಟದಲ್ಲಿದೆ.
- 8ನೇ ತರಗತಿಯಲ್ಲಿ ಸಮಾಜ ವಿಜ್ಞಾನವನ್ನು ಹೊರತುಪಡಿಸಿ ಉಳಿದ ವಿಷಯಗಳಲ್ಲಿ ಎ+ ಗ್ರೇಡ್‌ನಲ್ಲಿ ಎಸ್.ಎಂ.ಎಫ್ ಮಾಹಿತಿ ಹಾಗೂ ಅಧ್ಯಯನ ಯಂಡದ ಮಾಹಿತಿ ಒಂದೇ ಆಗಿದ್ದು ಮಕ್ಕಳ ಅರ್ಥೈಸುವಿಕೆ ಉತ್ತಮವಾಗಿರುವುದಕ್ಕೆ

ಉದಾಹರಣೆಯಾಗಿದೆ. ವಿಜ್ಞಾನ ವಿಷಯದಲ್ಲಿ ವಾಸ್ತವ ಕಲಿಕೆಯೇ ಶೇ.12.5 ರಷ್ಟು ಹೆಚ್ಚಾಗಿರುವುದು ಕೋಷ್ಟಕದಿಂದ ತಿಳಿದು ಬರುತ್ತದೆ.

- ಹಿಂದಿ ವಿಷಯದಲ್ಲಿ ವಿಷಯ ಶಿಕ್ಷಕರ ಕೊರತೆಯಿಂದಾಗಿ ಬೋಧನಾ ಪ್ರಕ್ರಿಯೆಯೇ ನಡೆಯದಿರುವುದು ಭೇಟಿಯ ಸಂದರ್ಭದಲ್ಲಿ ತಿಳಿದುಬಂದಿದೆ

**ಒಳನೋಟಗಳು:**

- 7ನೇ ತರಗತಿಯಲ್ಲಿ ಎಲ್ಲಾ ವಿಷಯಗಳಲ್ಲಿ ಸಿ ಗ್ರೇಡ್‌ನಲ್ಲಿ ಹೆಚ್ಚು ಮಕ್ಕಳಿದ್ದು ಶಾಲಾ ಹಂತದಲ್ಲಿ ಕಲಿಕೆಯನ್ನು ಗುರುತಿಸುವುದರಲ್ಲಿ ಹೆಚ್ಚು ವ್ಯತ್ಯಾಸಗಳಿವೆ
- 7ನೇ ತರಗತಿಗೆ ಹೋಲಿಸಿದಾಗ ಅದೇ ಶಾಲೆಯ 8ನೇ ತರಗತಿಯ ಗಣಿತ ಕಲಿಕೆ ಉತ್ತಮವಾಗಿರುವುದು ಕಂಡು ಬಂದಿದೆ
- 8ನೇ ತರಗತಿಯ ಎ+ ಗ್ರೇಡ್‌ನಲ್ಲಿ ವಾಸ್ತವ ಕಲಿಕೆಯನ್ನು ಗುರುತಿಸಿರುವುದು ಕಂಡು ಬಂದಿದೆ
- ಹಿಂದಿ ವಿಷಯದಲ್ಲಿ ಬೋಧನಾ ಪ್ರಕ್ರಿಯೆ ನಡೆಯುವ ರೀತಿಯಲ್ಲಿ ಕ್ರಮಕೈಗೊಳ್ಳಬೇಕಾಗಿದೆ.

**ಶೈಕ್ಷಣಿಕ ನಿಹಿತಾರ್ಥಗಳು:**

- ಗಣಿತ ಮತ್ತು ವಿಜ್ಞಾನ ವಿಷಯಕ್ಕೆ 8ನೇ ತರಗತಿಯಲ್ಲಿ ಟಿ.ಜಿ.ಟಿ ಶಿಕ್ಷಕರು ಬೋಧನಾ ಕಾರ್ಯ ನಡೆಸುತ್ತಿದ್ದು, ಇತರ ವಿಷಯಗಳಲ್ಲೂ ಪದವಿ ಪಡೆದ ಶಿಕ್ಷಕರ ಅಗತ್ಯವಿದೆ.
- ಕಲಿಕೆಯನ್ನು ಸರಿಯಾಗಿ ಗುರುತಿಸುವಂತೆ ಸಾಮಾರ್ಥ್ಯಧಾರಿತ ಮೌಲ್ಯಮಾಪನ ಮಾಡುವ ಬಗ್ಗೆ ಶಿಕ್ಷಕರಿಗೆ ಹಾಗೂ ಅನುಪಾಲಕರಿಗೆ ಮಾರ್ಗದರ್ಶಿಸಬೇಕಾಗಿದೆ.
- ವ್ಯಾವಸ್ಥಿಕ ಅಭದ್ರತೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿಕಾರ್ಯಗಳು ಮತ್ತು ಇದನ್ನು ಗಂಭೀರವಾಗಿ ಪರಿಗಣಿಸಬೇಕು.

## ಶಾಲಾ ಭೇಟಿಯಿಂದ ಗಮನಿಸಿದ ಧನಾತ್ಮಕ ಅಂಶಗಳು

**ಕೋಷ್ಟಕ–94:**

| ಕ್ರ ಸಂ | ಮೈಸೂರು ಉತ್ತರ ವಲಯ(ಹಿಂದುಳಿದ ಮತ್ತು ನಗರ) | ಕೆ ಆರ್ ನಗರ ತಾಲ್ಲೂಕು(ಮುಂದುವರಿದ ಮತ್ತು ಗ್ರಾಮೀಣ) |
|---|---|---|
| | ಭೌತಿಕ ಸೌಲಭ್ಯ ಮತ್ತು ಮಾನವ ಸಂಪನ್ಮೂಲ | |
| 1 | ತರಗತಿಯಲ್ಲಿ ಆಸನ ವ್ಯವಸ್ಥೆಯು ಉತ್ತಮವಾಗಿದೆ. | ಮಕ್ಕಳ ಹಾಜರಾತಿಯು ಉತ್ತಮವಾಗಿದೆ. |
| 2 | ಮಂತ್ರಿ ಮಂಡಲದ ಕಾರ್ಯ ನಿರ್ವಹಣೆ ಉತ್ತಮವಾಗಿದೆ. | ಶೈಕ್ಷಣಿಕ ಯೋಜನೆಯ ಅನುಷ್ಠಾನ ಉತ್ತಮವಾಗಿದೆ. |
| 3 | ಉತ್ತಮವಾದ ಕಪ್ಪು ಹಲಗೆ ಲಭ್ಯವಿರುತ್ತದೆ. | ಕ್ರೀಡಾ ಸಾಮಗ್ರಿಗಳ ಬಳಕೆ ಉತ್ತಮವಾಗಿದೆ. |
| 4 | ನೀರಿನ ವ್ಯವಸ್ಥೆ ಉತ್ತಮವಾಗಿದೆ. | ನೀರಿನ ವ್ಯವಸ್ಥೆ ಉತ್ತಮವಾಗಿದೆ. |
| 5 | ರೇಡಿಯೋ ಕಾರ್ಯಕ್ರಮವನ್ನು ಉತ್ತಮವಾಗಿ ಬಳಸುತ್ತಿದ್ದಾರೆ. | ರೇಡಿಯೋ ಕಾರ್ಯಕ್ರಮವನ್ನು ಉತ್ತಮವಾಗಿ ಬಳಸುತ್ತಿದ್ದಾರೆ. |
| 6 | ಸರ್ಕಾರದಿಂದ ಒದಗಿಸಲಾದ ಸವಲತ್ತುಗಳ ಬಳಕೆ ಉತ್ತಮವಾಗಿದೆ. | ಸರ್ಕಾರದಿಂದ ಒದಗಿಸಲಾದ ಸವಲತ್ತುಗಳ ಬಳಕೆ ಉತ್ತಮವಾಗಿದೆ. |
| 7 | ಇಲಾಖೆ ಜಾರಿಗೊಳಿಸಿರುವ ಯೋಜನೆಗಳು ಪೋಷಕರಿಗೆ ತೃಪ್ತಿಯನ್ನು ನೀಡಿರುತ್ತದೆ. | ಇಲಾಖೆ ಜಾರಿಗೊಳಿಸಿರುವ ಯೋಜನೆಗಳು ಪೋಷಕರಿಗೆ ತೃಪ್ತಿಯನ್ನು ನೀಡಿರುತ್ತದೆ. |
| 8 | ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರ ನಡುವಿನ ಬಾಂಧವ್ಯ ಉತ್ತಮವಾಗಿದೆ. | ಬಿಆರ್‌ಸಿಯವರು ಹೆಚ್ಚು ಶಿಕ್ಷಕರ ತರಗತಿಗಳನ್ನು ವೀಕ್ಷಣ ಮಾಡಿ ಲಿಖಿತ ಮತ್ತು ಮೌಖಿಕ ಮಾರ್ಗದರ್ಶನವನ್ನು ನೀಡಿರುತ್ತಾರೆ. |
| 9 | ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಸಾಕಷ್ಟು ಶಿಕ್ಷಕರನ್ನು ಮತ್ತು ಹೆಚ್ಚು ವಿದ್ಯಾರ್ಹತೆಯನ್ನು ಹೊಂದಿರುವ ಶಿಕ್ಷಕರನ್ನು ಹೊಂದಿರುತ್ತಾರೆ. | |
| 10 | ಪೋಷಕರಿಗೆ ಮಕ್ಕಳ ಪ್ರಗತಿಯ ಬಗ್ಗೆ ಹಿಮ್ಮಾಹಿತಿಯನ್ನು ನೀಡಲಾಗುತ್ತಿದೆ. | ಪೋಷಕರಿಗೆ ಗುಣಾತ್ಮಕ ಶಿಕ್ಷಣದ ಬಗ್ಗೆ ಅರಿವು ಇದೆ. |
| | ತರಗತಿ ವೀಕ್ಷಣೆಯಲ್ಲಿ ಗಮನಿಸಿದ ಅಂಶಗಳು | |
| | ಪೂರ್ವ ಸಿದ್ಧತೆಗೆ ಸಂಬಂಧಿಸಿದಂತೆ | |
| 11 | ಪಾಠ ಟಿಪ್ಪಣೆಯನ್ನು ಸಿದ್ಧಪಡಿಸುತ್ತಾರೆ | ಪಾಠ ಟಿಪ್ಪಣೆಯಲ್ಲಿ ಕಲಿಕಾ ಸಾಮರ್ಥ್ಯಕ್ಕನುಗುಣವಾಗಿ ಚಟುವಟಿಕೆಗಳನ್ನು ರೂಪಿಸುವ, ಪಠ್ಯ ಪುಸ್ತಕವನ್ನು ಮೀರಿದ ಚಟುವಟಿಕೆಗಳನ್ನು ರೂಪಿಸುವ, ಮೌಲ್ಯಮಾಪನಕ್ಕಾಗಿ ಸಾಧನ ತಂತ್ರಗಳನ್ನು ರೂಪಿಸುವ ಪ್ರಯತ್ನವನ್ನು ಮಾಡಿರುತ್ತಾರೆ. |
| 12 | ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಬಾಂಧವ್ಯ ಉತ್ತಮವಾಗಿದೆ. | ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಬಾಂಧವ್ಯ ಉತ್ತಮವಾಗಿದೆ. |
| 13 | | ಪರಿಸರಕ್ಕೆ ಅನ್ವಯಿಸುವಂತಹ ಕಲಿಕೋತ್ತರ ಅಂದರೆ ಗೃಹಪಾಠ ಮತ್ತು ಇತರೆ ಚಟುವಟಿಕೆಗಳನ್ನು ನೀಡಿರುತ್ತಾರೆ. |
| 14 | | ತರಗತಿ ಪ್ರಕ್ರಿಯೆಯಲ್ಲಿ ಮಕ್ಕಳ ಅಗತ್ಯಕ್ಕನುಗುಣವಾಗಿ |

| | | |
|---|---|---|
| | | ಮಾರ್ಗದರ್ಶನವನ್ನು ನೀಡುತ್ತಿದ್ದಾರೆ. |
| 15 | | ಶಿಕ್ಷಕರು ಮಕ್ಕಳು ಮತ್ತು ತಮ್ಮ ಮಧ್ಯೆ ನಡೆಯುವ ಪರಸ್ಪರ ಕಲಿಕೆಯ ಕುರಿತಂತೆ ನಂಬಿಕೆ ಉಳ್ಳವರಾಗಿರುತ್ತಾರೆ. |
| 16 | | ಜ್ಞಾನಾತ್ಮಕ ವಿಕಾಸಕ್ಕೆ ಹೆಚ್ಚು ಅವಕಾಶ ಕಲ್ಪಿಸಲಾಗಿದೆ. |
| 17 | | ಮಕ್ಕಳ ಕಲಿಕೆಗೆ ಪೂರಕವಾಗಿ ಅವರಿಗೆ ವೈಯುಕ್ತಿಕ ಹಿಮ್ಮಾಹಿತಿಯನ್ನು ನೀಡಲಾಗುತ್ತದೆ. |
| 18 | | ವಿಶೇಷ ಅಗತ್ಯವುಳ್ಳ ಮಕ್ಕಳ ಅಗತ್ಯಕ್ಕನುಗುಣವಾಗಿ ಮಕ್ಕಳಿಗೆ ನೆರವನ್ನು ಶಿಕ್ಷಕರಿಗೆ ನೀಡಲಾಗುತ್ತಿದೆ. |

**ಶಾಲಾ ಭೇಟಿಯಿಂದ ಗಮನಿಸಿದ ಋಣಾತ್ಮಕ ಅಂಶಗಳು**

**ಕೋಷ್ಟಕ–95**

| ಕ್ರ ಸಂ | ಮೈಸೂರು ಉತ್ತರ ವಲಯ(ಹಿಂದುಳಿದ ಮತ್ತು ನಗರ) | ಕೆ ಆರ್ ನಗರ ತಾಲ್ಲೂಕು(ಮುಂದುವರಿದ ಮತ್ತು ಗ್ರಾಮೀಣ) |
|---|---|---|
| | **ಭೌತಿಕ ಸೌಲಭ್ಯ** | |
| 1 | ಕಲಿಕಾ ಸಾಮಗ್ರಿಗಳು ಇರುವುದಿಲ್ಲ | ಕಲಿಕಾ ಸಾಮಗ್ರಿಗಳು ಇರುವುದಿಲ್ಲ |
| 2 | ಪ್ಲಾನಲ್ ಬೋರ್ಡಿನಲ್ಲಿ ಮಕ್ಕಳು ಸೃಜನಶೀಲ ಚಿಂತನೆಗಳನ್ನು ಪ್ರತಿಬಿಂಬಿಸಿರುವುದಿಲ್ಲ. | ಪ್ಲಾನಲ್ ಬೋರ್ಡಿನಲ್ಲಿ ಮಕ್ಕಳು ಸೃಜನಶೀಲ ಚಿಂತನೆಗಳನ್ನು ಪ್ರತಿಬಿಂಬಿಸಿರುವುದಿಲ್ಲ. |
| 3 | ಕ್ರೀಡಾ ಸಾಮಗ್ರಿಗಳ ಬಳಕೆ ಸಮರ್ಪಕವಾಗಿರುವುದಿಲ್ಲ. | |
| 4 | ಕಂಪ್ಯೂಟರ್ ಸೌಲಭ್ಯವನ್ನು ಕಲಿಕಾ ಪ್ರಕ್ರಿಯೆಯಲ್ಲಿ ಬಳಸಿಕೊಳ್ಳುತ್ತಿಲ್ಲ. | ಕಂಪ್ಯೂಟರ್ ಸೌಲಭ್ಯವನ್ನು ಕಲಿಕಾ ಪ್ರಕ್ರಿಯೆಯಲ್ಲಿ ಬಳಸಿಕೊಳ್ಳುತ್ತಿಲ್ಲ. |
| | **ಪೋಷಕರ ಭಾಗವಹಿಸುವಿಕೆ** | |
| 6 | ಪೋಷಕರು ಶಾಲಾಭಿವೃದ್ಧಿ ಯೋಜನೆಯಲ್ಲಿ ಪಾಲ್ಗೊಂಡಿರುವುದಿಲ್ಲ | |
| 7 | ಅಕ್ಷರ ದಾಸೋಹಕ್ಕೆ ಪೋಷಕರಿಂದ ಯಾವುದೇ ನೆರವು ದೊರೆಯುತ್ತಿಲ್ಲ. | ಅಕ್ಷರ ದಾಸೋಹಕ್ಕೆ ಪೋಷಕರಿಂದ ಯಾವುದೇ ನೆರವು ದೊರೆಯುತ್ತಿಲ್ಲ. |
| 8 | ಪೋಷಕರಿಗೆ ಗುಣಾತ್ಮಕ ಶಿಕ್ಷಣದ ಬಗ್ಗೆ ಜಾಗೃತಿ ಕಡಿಮೆ | |
| | **ಅನುಪಾಲನೆ** | |
| 9 | ಮುಖ್ಯ ಶಿಕ್ಷಕರು ಶಿಕ್ಷಕರ ಪಾಠ ವೀಕ್ಷಣೆ ಮಾಡಿ ಹಿಮ್ಮಾಹಿತಿ ನೀಡುವಲ್ಲಿ ಪ್ರಗತಿ ನಿರಾಶಾದಾಯಕವಾಗಿದೆ. | |
| 10 | ಸಿಆರ್‌ಪಿಗಳಿಗೆ ಶಿಕ್ಷಕರ ತರಗತಿ ವೀಕ್ಷಣೆ ಮಾಡಿ ಬೆಂಬಲ ನೀಡಲು ಸಾಧ್ಯವಾಗಿಲ್ಲ. | ಸಿಆರ್‌ಪಿಗಳಿಗೆ ಶಾಲಾ ಭೇಟಿ ನೀಡಿ ವಾಸ್ತವ ಕಲಿಕೆಯನ್ನು ದಾಖಲಿಸಲು ಸಾಧ್ಯವಾಗಿಲ್ಲ. |
| 11 | ಬಿಆರ್‌ಸಿಯವರು ತರಗತಿ ವೀಕ್ಷಣೆ ಮಾಡಿ ಲಿಖಿತ ಮತ್ತು ಮೌಖಿಕ ಹಿಮ್ಮಾಹಿತಿ ನೀಡಿರುವ ಶಿಕ್ಷಕರ ಸಂಖ್ಯೆಯೂ ಕಡಿಮೆ ಇದೆ. | |

| | | |
|---|---|---|
| ತರಗತಿ ವೀಕ್ಷಣೆಯಲ್ಲಿ ಗಮನಿಸಿದ ಅಂಶಗಳು | | |
| ಪೂರ್ವ ಸಿದ್ಧತೆಗೆ ಸಂಬಂಧಿಸಿದಂತೆ | | |
| 12 | ಪಾಠ ಟಿಪ್ಪಣೆಯಲ್ಲಿ ಕಲಿಕಾ ಸಾಮರ್ಥ್ಯಕ್ಕನುಗುಣವಾಗಿ ಚಟುವಟಿಕೆಗಳನ್ನು ರೂಪಿಸುವ, ಪಠ್ಯ ಪುಸ್ತಕವನ್ನು ಮೀರಿದ ಚಟುವಟಿಕೆಗಳನ್ನು ರೂಪಿಸುವ, ಮೌಲ್ಯಮಾಪನಕ್ಕಾಗಿ ಸಾಧನ ತಂತ್ರಗಳನ್ನು ರೂಪಿಸುವ ಪ್ರಯತ್ನ ಕಡಿಮೆ ಕಂಡು ಬರುತ್ತದೆ. | |
| ಕಲಿಕಾ ಪ್ರಕ್ರಿಯೆಗೆ ಸಂಬಂಧಿಸಿದಂತೆ | | |
| 13 | ತರಗತಿಯಲ್ಲಿ ಮಕ್ಕಳ ಸಹಜವಾದ ಭಾಗವಹಿಸುವಿಕೆ ಮತ್ತು ಅಭಿವ್ಯಕ್ತಿ ಕಡಿಮೆ ಕಂಡು ಬಂದಿದೆ. | ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಬಾಂಧವ್ಯ ಉತ್ತಮವಾಗಿದೆ. |
| 14 | ಮಕ್ಕಳ ಆಸನವ್ಯವಸ್ಥೆಯು ತರಗತಿಯಲ್ಲಿ ನಡೆಸುವ ಚಟುವಟಿಕೆಗಳಿಗೆ ಅನುಗುಣವಾಗಿರುವುದಿಲ್ಲ. | ಪರಿಸರಕ್ಕೆ ಅನ್ವಯಿಸುವಂತಹ ಕಲಿಕೋತ್ತರ ಅಂದರೆ ಗೃಹಪಾಠ ಮತ್ತು ಇತರೆ ಚಟುವಟಿಕೆಗಳನ್ನು ನೀಡಿರುತ್ತಾರೆ. |
| 15 | ತರಗತಿ ಪ್ರಕ್ರಿಯೆಯಲ್ಲಿ ಜ್ಞಾ ರಚನೆಗೆ ಅವಕಾಶ ಕಡಿಮೆ ಇದೆ. | ತರಗತಿ ಪ್ರಕ್ರಿಯೆಯಲ್ಲಿ ಮಕ್ಕಳ ಅಗತ್ಯಕ್ಕನುಗುಣವಾಗಿ ಮಾರ್ಗದರ್ಶನವನ್ನು ನೀಡುತ್ತಿದ್ದಾರೆ. |
| 16 | ಕಲಿಕಾ ಪ್ರಕ್ರಿಯೆಯಲ್ಲಿ 5ಇ ಮಾದರಿಯ ಅಳವಡಿಕೆ ಕಡಿಮೆ ಇರುತ್ತದೆ. | ಶಿಕ್ಷಕರು ಮಕ್ಕಳು ಮತ್ತು ತಮ್ಮ ಮಧ್ಯೆ ನಡೆಯುವ ಪರಸ್ಪರ ಕಲಿಕೆಯ ಕುರಿತಂತೆ ನಂಬಿಕೆ ಉಳ್ಳವರಾಗಿರುತ್ತಾರೆ. |
| 17 | ಸ್ಥಳೀಯ ಸಂಪನ್ಮೂಲ ಸಾಮಗ್ರಿಗಳ ಬಳಕೆ ಕಡಿಮೆ ಇರುತ್ತದೆ. | ಜ್ಞಾನಾತ್ಮಕ ವಿಕಾಸಕ್ಕೆ ಹೆಚ್ಚು ಅವಕಾಶ ಕಲ್ಪಿಸಲಾಗಿದೆ. |
| 18 | ಕಲಿಕೋತ್ತರ ಚಟುವಟಿಕೆಗಳು ಪರಿಣಾಮಕಾರಿಯಾಗಿರುವುದಿಲ್ಲ | ಮಕ್ಕಳ ಕಲಿಕೆಗೆ ಪೂರಕವಾಗಿ ಅವರಿಗೆ ವೈಯುಕ್ತಿಕ ಹಿಮ್ಮಾಹಿತಿಯನ್ನು ನೀಡಲಾಗುತ್ತದೆ. |
| 19 | ಶಿಕ್ಷಕರ ಮಾರ್ಗದರ್ಶನವು ಮಕ್ಕಳ ಅಗತ್ಯಕ್ಕನುಗುಣವಾಗಿರುವುದಿಲ್ಲ. | ವಿಶೇಷ ಅಗತ್ಯವುಳ್ಳ ಮಕ್ಕಳ ಅಗತ್ಯಕ್ಕನುಗುಣವಾಗಿ ಮಕ್ಕಳಿಗೆ ನೆರವನ್ನು ಶಿಕ್ಷಕರಿಗೆ ನೀಡಲಾಗುತ್ತಿದೆ. |
| 20 | ಮಕ್ಕಳ ಪ್ರಶ್ನಿಸುವಿಕೆ ತೀರಾ ಕಡಿಮೆ ಅಂದರೆ ಶೂನ್ಯ ಎಂದೇ ಹೇಳಬಹುದಾಗಿದೆ. | |
| ಸಿಸಿಇ ಅನುಷ್ಠಾನ | | |
| 21 | ಸಿಸಿಇ ಅನುಷ್ಠಾನ ಕಡಿಮೆ ಕಂಡು ಬಂದಿದೆ. | |
| 22 | ಮಕ್ಕಳ ಸ್ವ ಮೌಲ್ಯಮಾಪನಕ್ಕೆ ಅವಕಾಶ ತುಂಬಾ ಕಡಿಮೆ ಇದೆ. | |
| 23 | ಭಾವನಾತ್ಮಕ ವಲಯದ ವಿಕಾಸಕ್ಕೆ ಕಡಿಮೆ ಅವಕಾಶ ನೀಡಲಾಗಿದೆ. | |
| 24 | ರೂಪಣಾತ್ಮಕ ಮೌಲ್ಯಮಾಪನ ಸಮರ್ಪಕವಾಗಿ ನಡೆಯುತ್ತಿಲ್ಲ. | |
| 25 | ವಿದ್ಯಾರ್ಥಿಗಳಿಗೆ ನೀಡಲಾದ ಯೋಜನಾ ಕಾರ್ಯಗಳು ವ್ಯವಸ್ಥಿತವಾಗಿ ಆಶಯಗಳಂತೆ ನಡೆಯುತ್ತಿಲ್ಲ. | |
| 26 | ತರಗತಿಯಲ್ಲಿ ವೈವಿಧ್ಯಮಯವಾಗಿ ನಡೆಸಿರುವ ಕಲಿಕಾ ಚಟುವಟಿಕೆಗಳು ತುಂಬಾ ಕಡಿಮೆ ಇರುತ್ತದೆ. | |
| 27 | ಶಿಕ್ಷಕರು ತಮ್ಮ ದಿನಚರಿಯಲ್ಲಿ ಸ್ವಾವಲೋಕನದ ಅಂಶಗಳನ್ನು ದಾಖಲಿಸಿರುವುದಿಲ್ಲ. | |

| | | |
|---|---|---|
| 28 | ನಲಿಕಲಿ ತರಗತಿಗಳಲ್ಲಿ ತಟ್ಟೆಗಳ ನಿರ್ವಹಣೆ ಮತ್ತು ಪ್ರಗತಿ ನೋಟಗಳ ನಿರ್ವಹಣೆ ಉತ್ತಮವಾಗಿಲ್ಲ. | |
| | **ಕಲಿಕೆಗೆ ಸಂಬಂಧಿಸಿದಂತೆ** | |
| 29 | ಮಕ್ಕಳ ಕಲಿಕೆಯು ತೃಪ್ತಿಕರವಾಗಿರುವುದಿಲ್ಲ. | |
| 30 | ಶಾಲೆಯಲ್ಲಿ ದಾಖಲಿಸಿದ ಕಲಿಕೆಗೂ ಅಧ್ಯಯನ ತಂಡ ಗುರುತಿಸಿದ ಕಲಿಕೆಗೂ ಹೆಚ್ಚು ವ್ಯತ್ಯಾಸ ಕಂಡು ಬಂದಿರುತ್ತದೆ. | |

**ವಿಶ್ಲೇಷಣೆ:**

- ಗೌಸಿಯಾ ನಗರ ಒಂದು ಶಾಲೆಯನ್ನು ಹೊರತುಪಡಿಸಿ ಮೈಸೂರು ಉತ್ತರ ವಲಯದ ಉಳಿದ ಶಾಲೆಗಳಲ್ಲಿ ಭೌತಿಕ ಸೌಲಭ್ಯ ಉತ್ತಮವಾಗಿದ್ದರೂ ನಿರ್ವಹಣೆ ಸಾಧಾರಣವಾಗಿದೆ.
- ಮುಂದುವರೆದ ತಾಲ್ಲೂಕು ಕೆಆರ್ ನಗರದಲ್ಲಿ ಪೋಷಕರು ಅನಕ್ಷರಸ್ಥರಾಗಿದ್ದರೂ ಕೂಡಾ ಅವರಿಗೆ ಗುಣಾತ್ಮಕ ಶಿಕ್ಷಣದ ಬಗ್ಗೆ ಜಾಗೃತಿ ಇರುವುದು ಅಧ್ಯಯನದಿಂದ ಕಂಡು ಬಂದಿದೆ. ಮೈಸೂರು ಉತ್ತರ ವಲಯದಲ್ಲಿ ವ್ಯತಿರಿಕ್ತ ಪರಿಸ್ಥಿತಿ ಇರುವುದು ಕಂಡು ಬಂದಿದೆ.
- ಸಹಿಪ್ರಾ ಶಾಲೆ ಸಾತಗಳ್ಳಿಯನ್ನು ಹೊರತುಪಡಿಸಿ ಮೈಸೂರು ಉತ್ತರದ ಉಳಿದ ಶಾಲೆಗಳಲ್ಲಿ ಅಗತ್ಯವಿರುವಷ್ಟು ಶಿಕ್ಷಕರ ಸಂಖ್ಯೆ ಮತ್ತು ಹೆಚ್ಚು ವಿದ್ಯಾರ್ಹತೆಯನ್ನು ಹೊಂದಿರುವ ಶಿಕ್ಷಕರಿದ್ದರೂ ಸರಿಯಾದ ಪೂರ್ವ ಸಿದ್ಧತೆ ಇಲ್ಲದಿರುವುದರಿಂದ ಕಲಿಕೆ ಉತ್ತಮವಾಗಿರುವುದಿಲ್ಲ.
- ಉತ್ತರ ವಲಯದಲ್ಲಿ ಪಾಠ ಟಿಪ್ಪಣಿ ಮಾತ್ರ ಸಿದ್ಧಪಡಿಸಿರುವುದು ಕಂಡುಬಂದಿರುತ್ತದೆ. ಆದರೆ ಕೆಆರ್ ನಗರ ತಾಲ್ಲೂಕಿನಲ್ಲಿ ಶಿಕ್ಷಕರುಪಾಠ ಟಿಪ್ಪಣಿಯಲ್ಲಿ ಕಲಿಕಾ ಸಾಮರ್ಥ್ಯಕ್ಕನುಗುಣವಾಗಿ ಚಟುವಟಿಕೆಗಳನ್ನು ರೂಪಿಸುವ, ಪಠ್ಯ ಪುಸ್ತಕವನ್ನು ಮೀರಿದ ಚಟುವಟಿಕೆಗಳನ್ನು ಯೋಜಿಸುವ, ಮೌಲ್ಯಮಾಪನಕ್ಕಾಗಿ ಸಾಧನ ತಂತ್ರಗಳನ್ನು ರಚಿಸುವ ಪ್ರಯತ್ನವನ್ನು ಮಾಡಿರುತ್ತಾರೆ. ಪರಿಸರಕ್ಕೆ ಅನ್ವಯಿಸುವಂತಹ ಕಲಿಕೋತ್ತರ ಅಂದರೆ ಗೃಹಪಾಠ ಮತ್ತು ಇತರೆ ಚಟುವಟಿಕೆಗಳನ್ನು ನೀಡಿರುತ್ತಾರೆ. ತರಗತಿ ಪ್ರಕ್ರಿಯೆಯಲ್ಲಿ ಮಕ್ಕಳ ಅಗತ್ಯಕ್ಕನುಗುಣವಾಗಿ ಮಾರ್ಗದರ್ಶನವನ್ನು ನೀಡುತ್ತಿದ್ದಾರೆ. ಶಿಕ್ಷಕರು ಮಕ್ಕಳು ಮತ್ತು ತಮ್ಮ ಮಧ್ಯೆ ನಡೆಯುವ ಪರಸ್ಪರ ಕಲಿಕೆಯ ಕುರಿತಂತೆ ನಂಬಿಕೆ ಉಳ್ಳವರಾಗಿರುತ್ತಾರೆ. ಜ್ಞಾನಾತ್ಮಕ ವಿಕಾಸಕ್ಕೆ ಹೆಚ್ಚು ಅವಕಾಶ ಕಲ್ಪಿಸಲಾಗಿದೆ. ಮಕ್ಕಳ ಕಲಿಕೆಗೆ ಪೂರಕವಾಗಿ ಅವರಿಗೆ ವೈಯುಕ್ತಿಕ ಹಿಮ್ಮಾಹಿತಿಯನ್ನು ನೀಡಿರುತ್ತಾರೆ. ವಿಶೇಷ ಅಗತ್ಯವುಳ್ಳ ಮಕ್ಕಳ ಅಗತ್ಯಕ್ಕನುಗುಣವಾಗಿ ಮಕ್ಕಳಿಗೆ ನೆರವನ್ನು ಶಿಕ್ಷಕರಿಗೆ ನೀಡಿರುತ್ತಾರೆ. ಕೆ.ಆರ್.ನಗರದಲ್ಲಿರುವ ಶಿಕ್ಷಕರು ಕಲಿಕಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ಹೆಚ್ಚು ತಿಳಿವಳಿಕೆಯನ್ನು ಹೊಂದಿದ್ದು ತರಗತಿ ಪ್ರಕ್ರಿಯೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿರುವುದರಿಂದಲೇ ಅಲ್ಲಿಯ ಕಲಿಕೆಯು ಉತ್ತಮವಾಗಿರುತ್ತದೆ.

**ಶಾಲಾ ಭೇಟಿಯಿಂದ ದೊರೆತಿರುವ ಒಳನೋಟಗಳು:**

**ಕಲಿಕೆಗೆ ಸಂಬಂಧಿಸಿದಂತೆ:**

- ಮಕ್ಕಳ ಕಲಿಕೆಯು ನಿರೀಕ್ಷಿತ ಮಟ್ಟದಲ್ಲಿಲ್ಲ ಹಾಗೂ ತೃಪ್ತಿಕರವಾಗಿಲ್ಲ. ತರಗತಿ ಕೋಣೆಯ ಪ್ರಕ್ರಿಯೆಗಳು ಪರಿಣಾಮಕಾರಿಯಾಗಿಲ್ಲದಿರುವುದು ಇದಕ್ಕೆ ನೇರ ಕಾರಣವಾಗಿದೆ ಎಂದು ಹೇಳಬಹುದು.
- ಒಂದೊಂದು ವಿಷಯಗಳಲ್ಲಿ ಬಾಲಕರು ಮತ್ತು ಕೆಲವೊಂದು ವಿಷಯಗಳಲ್ಲಿ ಬಾಲಕಿಯರು ಮೇಲುಗೈಯನ್ನು ಸಾಧಿಸಿರುತ್ತಾರೆ.
- ಸಿಆರ್‌ಜಿ ತಂಡ ದಾಖಲಿಸಿರುವ ಕಲಿಕೆಗೂ ಅಧ್ಯಯನ ತಂಡ ದಾಖಲಿಸಿರುವ ಕಲಿಕೆಗೂ ಸಾಕಷ್ಟು ವ್ಯತ್ಯಾಸಗಳಿವೆ.
- ಶಾಲಾ ಹಂತದಲ್ಲಿ ವಾಸ್ತವವಾಗಿ ಇರುವ ಕಲಿಕಾ ಮಟ್ಟಕ್ಕಿಂತಲೂ ಹೆಚ್ಚಿನ ಕಲಿಕಾ ಮಟ್ಟವನ್ನು ಸಿಆರ್‌ಜಿ ತಂಡ ಅಥವಾ ಶಾಲಾ ಶಿಕ್ಷಕರು ದಾಖಲಿಸಿರುತ್ತಾರೆ.
- ಮುಂದುವರಿದ ತಾಲ್ಲೂಕು ಕೆಆರ್ ನಗರದ ಶಾಲೆಗಳಲ್ಲಿ ಸಿಆರ್‌ಜಿ ತಂಡ ಮತ್ತು ಅಧ್ಯಯನ ತಂಡ ಗುರುತಿಸಿರುವ ಮಕ್ಕಳ ಕಲಿಕಾ ಮಟ್ಟದಲ್ಲಿ ಕಡಿಮೆ ವ್ಯತ್ಯಾಸ ಕಂಡು ಬಂದಿದೆ ಹಾಗೂ ಹಿಂದುಳಿದ ತಾಲ್ಲೂಕು ಮೈಸೂರು ಉತ್ತರ ವಲಯದ ಶಾಲೆಗಳಲ್ಲಿ ಸಿಆರ್‌ಜಿ ತಂಡ ಮತ್ತು ಅಧ್ಯಯನ ತಂಡ ಗುರುತಿಸಿರುವ ಮಕ್ಕಳ ಕಲಿಕಾ ಮಟ್ಟದಲ್ಲಿ ಹೆಚ್ಚು ವ್ಯತ್ಯಾಸ ಕಂಡು ಬಂದಿದೆ.
- ಕಲಿಕೆಯಲ್ಲಿ ಮುಂದುವರಿದ ತಾಲ್ಲೂಕು ಕೆಆರ್ ನಗರದಲ್ಲಿ ವಿದ್ಯಾರ್ಥಿಗಳ ಕಲಿಕಾ ಮಟ್ಟದ ದಾಖಲಿಸುವಿಕೆಯು ವಾಸ್ತವಕ್ಕೆ ಹತ್ತಿರವಾಗಿದೆ ಮತ್ತು ಉತ್ತರವಲಯದಲ್ಲಿ ಕಲಿಕಾ ಮಟ್ಟದ ದಾಖಲಿಸುವಿಕೆಯು ವಾಸ್ತವಕ್ಕಿಂತ ದೂರದಲ್ಲಿದೆ.
- ಶಿಕ್ಷಣ ಹಕ್ಕು ಕಾಯ್ದೆ ಜಾರಿಯಾಗಿದ್ದು ಇದರಲ್ಲಿ ಮಕ್ಕಳಲ್ಲಿ ಆಯಾ ವಯಸ್ಸಿಗೆ ಮತ್ತು ತರಗತಿಗೆ ನಿಗದಿ ಪಡಿಸಿದ ಸಾಮರ್ಥ್ಯಗಳನ್ನು ಬೆಳೆಸುವ ಜವಾಬ್ದಾರಿ ಆಯಾ ಶಾಲೆಯ ಶಿಕ್ಷಕರದ್ದೇ ಆಗಿದೆ ಎಂದು ತಿಳಿಸುತ್ತದೆ. ಆದರೆ ಶಾಲಾ ಹಂತದ ನಮೂನೆಯನ್ನು ಪರಿಶೀಲಿಸಿದಾಗ ಕಲಿಕಾ ಅಂತರ ಹೋಗಲಾಡಿಸಲು ಶಾಲಾ ಹಂತದ ತರಬೇತಿಗಳು ಮಕ್ಕಳಿಗೆ ನಡೆದಿರುವುದು ಕಂಡುಬಂದಿರುವುದಿಲ್ಲ. ಆದ್ದರಿಂದ ಕಲಿಕಾ ಅಂತರಗಳನ್ನು ಸರಿಪಡಿಸಿಕೊಳ್ಳುವ ಬಗ್ಗೆ ಶಿಕ್ಷಕರಿಗೆ ಶಾಲಾ ಹಂತದ ತರಬೇತಿ ಕೈಗೊಳ್ಳುವ ಬಗ್ಗೆ ತಿಳುವಳಿಕೆ ನೀಡುವ ಅಗತ್ಯವಿದೆ.
- ಶಾಲಾ ಹಂತದಲ್ಲಿ ಶಿಕ್ಷಕರು/ಸಿಆರ್‌ಜಿ ತಂಡ ನಡೆಸುವ ಮೌಲ್ಯಮಾಪನವು ಸಾಮರ್ಥ್ಯಾಧಾರಿತವಾಗಿಲ್ಲದೆ ಇರುವುದು ಈ ವ್ಯತ್ಯಾಸಕ್ಕೆ ಕಾರಣವಾಗಿದೆ.

**ಕ್ಯೂಎಂಟಿ ಯನ್ನು ಸ್ವಾವಲೋಕನದ ಸಾಧನವಾಗಿ ಬಳಸುವ ಬಗ್ಗೆ:**

- ಕೆಲವು ಶಾಲೆಗಳ ಮುಖ್ಯ ಶಿಕ್ಷಕರಿಗೆ ಎಸ್‌ಎಂಎಫ್ ನಮೂನೆಗಳ ಬಗ್ಗೆ ಸ್ಪಷ್ಟತೆ ಇಲ್ಲ ಮತ್ತು ಕೆಲವರು ಭರ್ತಿ ಮಾಡಿರುವುದಿಲ್ಲ.
- ಸ್ವಾವಲೋಕನಕ್ಕಿಂತಲೂ ಮಾಹಿತಿ ತುಂಬುವತ್ತಲೇ ಎಲ್ಲರ ಗಮನವಿರುವುದನ್ನು ಅಧ್ಯಯನ ತಂಡ ಗಮನಿಸಿದೆ.
- ಸಿಆರ್‌ಜಿ ತಂಡವು ಶಾಲೆಯಲ್ಲಿನ ಅಂಶಗಳನ್ನು ವಾಸ್ತವಿಕ ನೆಲೆಯಲ್ಲಿ ಪರಿಶೀಲಿಸಿ ಪರಿಣಾಮಕಾರಿಯಾದ ಹಿಮ್ಮಾಹಿತಿಯನ್ನು ಶಾಲಾ ಶಿಕ್ಷಕ ಸಮುದಾಯಕ್ಕೆ ನೀಡದೆ ಇರುವುದು ಕಂಡು ಬರುತ್ತಿದೆ.
- ಇಲಾಖೆಯ ಶಿಕ್ಷಕರು ಮತ್ತು ಅನುಪಾಲನಾಧಿಕಾರಿಗಳಲ್ಲಿ ಸ್ವಾವಲೋಕನದ ಅಭ್ಯಾಸಗಳು ಕಡಿಮೆ ಇರುತ್ತದೆ. ಸ್ವಾವಲೋಕನ ಮಾಡುವುದರ ಮೂಲಕ ಹೇಗೆ ತಮ್ಮನ್ನು ವ್ಯವಸ್ಥೆಯ ಸುಧಾರಣೆಗೆ ಹೊಂದಿಸಿಕೊಳ್ಳಬೇಕು ಎನ್ನುವ ಬಗ್ಗೆ ಕಲ್ಪನೆ ಇಲ್ಲದಿರುವುದನ್ನು ಗಮನಿಸಲಾಗಿದೆ.

- ಶಿಕ್ಷಕರಿಗೆ ಸ್ವಾವಾಲೋಕನ ಮಾಡುವುದು ಹೇಗೆ ಎನ್ನುವುದೇ ಸ್ಪಷ್ಟವಾಗಿಲ್ಲ. ತರಗತಿ ವೀಕ್ಷಣೆ ಮಾಡಿದಾಗ ತರಬೇತಿ ಅನುಷ್ಠಾನ ಆಗದಿರುವುದು ಸ್ಪಷ್ಟವಾಗಿ ಅರ್ಥವಾಗುತ್ತದೆ. ಆದರೆ ಶಿಕ್ಷಕರ ಪ್ರಶ್ನಾವಳಿಯಲ್ಲಿ ಅಥವಾ ಮೌಖಿಕವಾಗಿ ಅವರ ಅನುಷ್ಠಾನಿಕ ಸಮಸ್ಯೆ ಮತ್ತು ಪರಿಕಲ್ಪನಾತ್ಮಕ ಅರ್ಥೈಸುವಿಕೆ ಕುರಿತ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದಾಗ ತಮ್ಮ ಅಗತ್ಯತೆಗಳನ್ನು, ತಮ್ಮ ಸಮಸ್ಯೆಗಳನ್ನು ತಾವೇ ಅರ್ಥೈಸಿಕೊಳ್ಳದೆ, ಎಲ್ಲವೂ ಸ್ಪಷ್ಟವಾಗಿದೆ ಎನ್ನುವ ರೀತಿಯಲ್ಲಿ ಪ್ರತಿಕ್ರಿಯಿಸಿರುವುದನ್ನು ಗಮನಿಸಿದೆ. ತರಬೇತಿಯಕಲಿಕಾಂಶಗಳ ಕುರಿತ ಸ್ಪಷ್ಟತೆಗೆ ತನಗೇನು ಬೇಕಾಗಿದೆ? ಯಾವ ಅಂಶಗಳ ಬಗ್ಗೆ ತನಗೆ ಸ್ಪಷ್ಟತೆ ಇಲ್ಲ, ತನ್ನ ಅರ್ಥೈಸುವಿಕೆಯ ಮಟ್ಟ ಎಲ್ಲಿದೆ? ಪರಿಕಲ್ಪನೆಯ ಸ್ಪಷ್ಟತೆ ತಮಗಿದೆಯೇ ಇಲ್ಲವೇ? ಎನ್ನುವ ಬಗ್ಗೆ ಹೆಚ್ಚಿನವರಿಗೆ ಸ್ಪಷ್ಟವಾಗದಿರುವುದು ಗಮನಕ್ಕೆ ಬಂದಿರುತ್ತದೆ. ಮಕ್ಕಳ ಕಲಿಕೆ ತೃಪ್ತಿಕರವಾಗಿಲ್ಲದಿರುವ ಸಂದರ್ಭಗಳಲ್ಲೂ ತಾನು ಉತ್ತಮವಾಗಿ ತರಗತಿ ನಿರ್ವಹಣೆ ಮಾಡುತ್ತಿದ್ದೇನೆ ಎನ್ನುವ ತೃಪ್ತ ಭಾವದಲ್ಲೇ ಮುಂದುವರಿಯುತ್ತಿರುವುದರಿಂದ ಈ ಸಮಸ್ಯೆ ಉಂಟಾಗಿದೆ. ಇದು ಗಂಭೀರವಾಗಿ ಪರಿಗಣಿಸಬೇಕಾದ ಅಂಶವಾಗಿದೆ. ಏಕೆಂದರೆ ಸ್ವಾವಲೋಕನ ಇಲ್ಲದ ವ್ಯಕ್ತಿ ಸುಧಾರಣೆ ಹೊಂದಲು ಸಾಧ್ಯವಿಲ್ಲ.
- ಶಾಲಾ ಹಂತದಿಂದ ಜಿಲ್ಲಾ ಹಂತದವರೆಗೆ ಈ ನಮೂನೆಗಳನ್ನು ಭರ್ತಿಗೊಳಿಸುವಾಗ ವಾಸ್ತವವನ್ನು ಬಿಂಬಿಸಲು ನಡೆಸುತ್ತಿರುವ ಪ್ರಯತ್ನ ಕಡಿಮೆ ಕಂಡುಬಂದಿದೆ. ವಾಸ್ತವಿಕತೆಯನ್ನು ಅರ್ಥೈಸಲು ಅಸಾಧ್ಯವಾದಲ್ಲಿ ಸುಧಾರಣೆ ಸಾಧ್ಯವಿಲ್ಲ.
- ಕ್ಯೂಎಂಟಿ ನಮೂನೆಯು ತನ್ನದೇ ಆದ ಕೆಲವು **ಲೋಪದೋಷಗಳನ್ನು** ಹೊಂದಿದೆ. ಹೇಗೋ ತುಂಬಿ ಭರ್ತಿ ಮಾಡಿದರಾಯಿತು ಎನ್ನುವ ಭಾವ ಎಲ್ಲರಲ್ಲೂ ಮೂಡಿದೆ. ಗುಣಮಟ್ಟವನ್ನು ನಮೂನೆಯೊಳಗೆ ಕಾಯ್ದಿಡುವುದೂ ಕಷ್ಟ ಸಾದ್ಯವಾದ ಕೆಲಸವೇ ಆಗಿದೆ. ಡೈಸ್ ರೀತಿ ಈ ಸಾಧನವೂ ಸಾಕಷ್ಟು ಸುಧಾರಣೆಯನ್ನು ಕಾಣಬೇಕಾಗಿದೆ.

**ತರಬೇತಿ ಮತ್ತು ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ:**

- ಶಿಕ್ಷಕರ ಅಗತ್ಯಕ್ಕನುಗುಣವಾದ ತರಬೇತಿಗಳು ಲಭ್ಯವಾಗುತ್ತಿಲ್ಲ. ಕೆಲವು ತರಬೇತಿಗಳು ಅಗತ್ಯಾಧಾರಿತವಾಗಿದ್ದರೂ ಹೆಚ್ಚಿನ ತರಬೇತಿಗಳು ಈ ಉದ್ದೇಶವನ್ನು ಪೂರೈಸುತ್ತಿಲ್ಲ.
- ತರಬೇತಿಗಳ ಅನುಷ್ಠಾನ ತರಗತಿಯಲ್ಲಿ ಪರಿಣಾಮಕಾರಿಯಾಗಿ ಆಗುತ್ತಿಲ್ಲ. ಇದರ ಪರಿಣಾಮವಾಗಿ ತರಗತಿ ಪ್ರಕ್ರಿಯೆಗಳು ತುಂಬಾ ಸಾಂಪ್ರದಾಯಿಕವಾಗಿಯೇ ರೂಪುಗೊಳ್ಳುತ್ತಿದೆ. ಆದುದರಿಂದ ತರಬೇತಿಗಳಲ್ಲಿ ಬದಲಾವಣೆಯಾಗಬೇಕಾಗಿದೆ
- ಎನ್‌ಸಿಎಫ್–2005 ಮತ್ತು ಸಿಸಿಇ ಆಶಯಗಳಿಗೆ ಸಂಬಂಧಿಸಿದಂತೆ ತರಗತಿ ಕೋಣೆಯ ಪ್ರಕ್ರಿಯೆಗಳು ಪರಿಣಾಮಕಾರಿಯಾಗಿಲ್ಲ. ಆದುದರಿಂದಲೇ ಮಕ್ಕಳ ಕಲಿಕೆಯೂ ಅತೃಪ್ತಿಕರವಾಗಿದೆ.
- **ಜ್ಞಾನ ರಚನೆಯಲ್ಲಿ ಬರುವ 'ರಚನೆ'ಗೂ ಮೌಲ್ಯಮಾಪನದಲ್ಲಿರುವ 'ರೂಪಣ'ಕ್ಕೂ ಅವಿನಾಭಾವ ಸಂಬಂಧವಿದೆ.** ಕಲಿಕೆಯ ಸಂದರ್ಭದಲ್ಲಿ'ಜ್ಞಾನ ರಚನೆ'ಯ ಜೊತೆ ಜೊತೆಯಲ್ಲಿಯೇ 'ರೂಪಣ'ಸಾಗುತ್ತಾ ಹೋಗಬೇಕಾಗಿದೆ. ಆದರೆ ನಮ್ಮ ಇಲಾಖೆ ಕಡಿಮೆ ಒತ್ತನ್ನು 'ರಚನೆ'ಗೆ ನೀಡಿ, ಹೆಚ್ಚುಒತ್ತನ್ನು ಸಿಸಿಇಗೆ ನೀಡಿದೆ. ಎಲ್ಲಿ 'ರಚನೆ'ಗೆ ಅವಕಾಶವಿಲ್ಲವೋ ಅಲ್ಲಿ ನಡೆಯುವ 'ರೂಪಣ'ಕ್ಕೆ ಅರ್ಥವಿರುವುದಿಲ್ಲ. ಇಲಾಖೆಯ ಈ ಒತ್ತಡದಿಂದಾಗಿ ಶಿಕ್ಷಕರು ಸಿಸಿಇಗಾಗಿ ಚಟುವಟಿಕೆಗಳನ್ನು ಒತ್ತಾಯಪೂರ್ವಕವಾಗಿ ಮಾಡುತ್ತಾ ಅಸಹಜವಾಗಿ ಜ್ಞಾನ ರಚನೆ ಮಾಡಹೊರಟಿದ್ದಾರೆ. ಆದರೆ ವೈರುಧ್ಯವಿರುವ ಈ ಸಂದರ್ಭದಲ್ಲಿ ಜ್ಞಾನ ರಚನೆ ಅಸಾಧ್ಯ ಅನ್ನುವುದನ್ನು ಅರ್ಥೈಸಬೇಕಾಗಿದೆ.
- **ರಚನಾವಾದದ ಕುರಿತು ಮತ್ತು ಅದನ್ನು ಪಠ್ಯಕ್ಕೆ ಅಳವಡಿಸುವ ಕುರಿತು ಹೆಚ್ಚಿನ ತರಬೇತಿಯಾಗಬೇಕಾಗಿದೆ. ಇಲಾಖೆ ಒತ್ತು ನೀಡಬೇಕಾದುದು ಸಿಸಿಇಗೆ ಅಲ್ಲ. ರಚನಾವಾದಕ್ಕೆ, ಅದರ ಕುರಿತ ತರಬೇತಿಗೆ ಮತ್ತು ಅದರ ಅನುಷ್ಠಾನಕ್ಕೆ. ಆಗ ಸಿಸಿಇ ತನ್ನಿಂತಾನೆ ಅರ್ಥಪೂರ್ಣವಾಗಿ ನಡೆಯುತ್ತದೆ. ಇದನ್ನು ಅರ್ಥ ಮಾಡಿಕೊಳ್ಳದೇ ಹೋದಲ್ಲಿ ಕಲಿಕೆಯೂ ಅರ್ಥಪೂರ್ಣವಾಗುವುದಿಲ್ಲ.**

- ತರಗತಿ ಪ್ರಕ್ರಿಯೆಗಳಿಗೆ ಪೂರಕವಾಗಿ ಶಿಕ್ಷಕರು ಮಾಡುವ ಪೂರ್ವಸಿದ್ಧತೆಯು ತುಂಬಾ ದುರ್ಬಲವಾಗಿದೆ.
- ಶಿಕ್ಷಕರ ತರಬೇತಿಯ ರೂಪುರೇಷೆಗಳಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗಿದೆ. ಸಂಪನ್ಮೂಲವ್ಯಕ್ತಿಗಳು ತರಬೇತಿಯನ್ನು ನೀಡುವ ಬದಲಾಗಿ ಹೆಚ್ಚು ಹೆಚ್ಚು ಓದುವ ಸಾಹಿತ್ಯಗಳನ್ನು ಒದಗಿಸುವುದು, ಅಧ್ಯಯನಶೀಲತೆಯನ್ನು ಕಡ್ಡಾಯವಾಗಿಸುವುದು, ಚರ್ಚಿಸುವುದು, ಹೊಸ ಟ್ರೆಂಡ್‌ಗಳ ಬಗ್ಗೆ ಯಶೋಗಾಥೆಗಳನ್ನು ಓದುವ, ವೀಡಿಯೋ ಕ್ಲಿಪ್ಪಿಂಗ್ ವೀಕ್ಷಣೆ ಮಾಡುವ ಮೂಲಕ ತಮ್ಮ ಜ್ಞಾನದ ರಚನೆಯನ್ನು ತಾವೇ ರಚಿಸಿಕೊಳ್ಳುವ ಅವಕಾಶಗಳನ್ನು ತರಬೇತಿಯಲ್ಲಿ ನೀಡಬೇಕಾಗಿದೆ.
- ಬದಲಾಗುತ್ತಿರುವ ವಿದ್ಯಾಮಾನಗಳಿಗನುಗುಣವಾಗಿ ಶಿಕ್ಷಕರು ತಮ್ಮನ್ನು ವ್ಯವಸ್ಥೆಗೆ ಸಮರ್ಥಗೊಳಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವಂತೆ ಮಾಡಬೇಕಾಗಿದೆ.

**ಅನುಪಾಲನೆಗೆ ಸಂಬಂಧಿಸಿದಂತೆ:**

- ಶಾಲಾ ಶಿಕ್ಷಕರ ತರಗತಿ ವೀಕ್ಷಣೆ ಮಾಡಿ ಮಾರ್ಗದರ್ಶನವನ್ನು ನೀಡುವಷ್ಟು ಪ್ರಭುದ್ದ ಮಟ್ಟದ ತರಬೇತಿಯನ್ನು ಇಲಾಖೆ ಅನುಪಾಲನಾಧಿಕಾರಿಗಳಿಗೆ ನೀಡಬೇಕು. ಸ್ಥಾನಕ್ಕೆ ಬಂದಾಗ ಅದರ ಪಾತ್ರಕ್ಕನುಗುಣವಾಗಿ ಬೆಳೆಯಬೇಕಾದರೂ ಅನುಪಾಲಕರು ಇಲಾಖಾ ತರಬೇತಿ ಅಥವಾ ಮಾರ್ಗದರ್ಶನಕ್ಕಾಗಿ ಕಾಯುವ ಸ್ಥಿತಿಯಲ್ಲಿದ್ದಾರೆ.
- ಶಿಕ್ಷಕರು ಹೆಚ್ಚಿನ ಮಾರ್ಗದರ್ಶನವನ್ನು ಸಿಆರ್‌ಪಿಗಳಿಂದ ನಿರೀಕ್ಷೆ ಮಾಡುತ್ತಿದ್ದು, ಅವರಿಗೆ ಶಾಲಾ ಹಂತದಲ್ಲಿ ಸಿಆರ್‌ಪಿಗಳಿಂದ ನಿರೀಕ್ಷಿತ ಮಟ್ಟದ ಬೆಂಬಲ ಸಿಗುತ್ತಿಲ್ಲ.
- ಮುಂದುವರಿದ ತಾಲ್ಲೂಕು ಕೆಆರ್ ನಗರದ ಶಾಲೆಗಳಲ್ಲಿ ದಾಖಲಿಸಿರುವ ಕಲಿಕೆ ವಾಸ್ತವಕ್ಕೆ ಹೆಚ್ಚು ಹತ್ತಿರವಾಗಿರುವುದು ಮತ್ತು ಅಲ್ಲಿನ ಅನುಪಾಲನೆಯು ಮೈಸೂರು ಉತ್ತರಕ್ಕಿಂತ ಉತ್ತಮವಾಗಿರುವುದು ಕಂಡುಬಂದಿದೆ.
- ಹಿಂದುಳಿದಿರುವ ತಾಲ್ಲೂಕು ಉತ್ತರವಲಯದ ಶಾಲೆಗಳಲ್ಲಿ ದಾಖಲಿಸಿರುವ ಕಲಿಕೆ ವಾಸ್ತವಕ್ಕೆ ಕಡಿಮೆ ಹತ್ತಿರವಾಗಿರುವುದು ಮತ್ತು ಅಲ್ಲಿನ ಅನುಪಾಲನೆಯು ಕೆಆರ್ ನಗರಕ್ಕಿಂತ ತೃಪ್ತಿಕರವಾಗಿಲ್ಲದಿರುವುದು ಕಂಡುಬಂದಿದೆ.
- ಬ್ಲಾಕಿನ ಶೈಕ್ಷಣಿಕ ಗುಣಮಟ್ಟದ ಮೇಲೆ ಬ್ಲಾಕಿನ ಅನುಪಾಲನಾಧಿಕಾರಿಗಳ ಅನುಪಾಲನೆ ಮತ್ತು ಮೇಲ್ವಿಚಾರಣೆಯು ಹೆಚ್ಚು ಪ್ರಭಾವ ಬೀರುತ್ತದೆ ಎನ್ನುವ ಅಂಶ ಇಲ್ಲಿ ಸ್ಪಷ್ಟವಾಗಿದೆ.

# ಅಧ್ಯಯನದ ಶೈಕ್ಷಣಿಕ ನಿಹಿತಾರ್ಥಗಳು:

### ಕ್ಯೂ ಎಂಟಿ ನಮೂನೆಗಳ ಬಳಕೆ ಬಗ್ಗೆ:

- ಕ್ಯೂಎಂಟಿ ನಮೂನೆಯನ್ನು ಒಂದು ಅಮೂಲ್ಯ ಆತ್ಮಾವಲೋಕನದ ಪರಿಣಾಮಕಾರಿ ಸ್ವಮೌಲ್ಯಮಾಪನದ ಪರಿಕರವನ್ನಾಗಿ ಶಾಲಾ ನಾಯಕತ್ವ ಹಾಗೂ ಶಿಕ್ಷಕ ಸಮುದಾಯ ಸ್ವೀಕರಿಸಬೇಕಾಗಿದೆ.
- ಶಾಲೆಗಳಲ್ಲಿ ಮತ್ತು ಎಲ್ಲಾ ಹಂತಗಳಲ್ಲಿ0ಯೂ ಸ್ವಾವಲೋಕನವುಳ್ಳ ಆಚರಣೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕ್ಯುಎಂಟಿ ನಮೂನೆಗಳನ್ನು ಹೇಗೆ ಬಳಸಬಹುದು ಎನ್ನುವ ಬಗ್ಗೆ ಹೆಚ್ಚಿನ ಚರ್ಚೆ, ಸಂವಾದಗಳು ನಡೆ0ಯಬೇಕಾಗಿದೆ.
- ಕ್ಯುಎಂಟಿ ನಮೂನೆಗಳನ್ನು ಭರ್ತಿಮಾಡಲು ಸಾಕಷ್ಟು ಕಾಲಾವಕಾಶ ಹಾಗೂ ಮಾರ್ಗದರ್ಶನವನ್ನು ನೀಡಬೇಕು.
- ಕ್ಯುಎಂಟಿ ನಮೂನೆಗಳಲ್ಲೂ ಸಾಕಷ್ಟು ಸುಧಾರಣೆಗಳಾಗಬೇಕಾಗಿದೆ.

### ತರಬೇತಿ ಅನುಷ್ಠಾನದ ಬಗ್ಗೆ:

- ಶಿಕ್ಷಕರ ಅಗತ್ಯಕ್ಕನುಗುಣವಾದ ತರಬೇತಿಗಳನ್ನು ರೂಪಿಸಬೇಕು.
- ಎನ್‌ಸಿಎಫ್–2005 ಮತ್ತು ಸಿಸಿಇ ಆಶಯಗಳಿಗೆ ಸಂಬಂಧಿಸಿದಂತೆ ತರಗತಿ ಕೋಣೆಯ ಪ್ರಕ್ರಿಯೆಗಳು ಪರಿಣಾಮಕಾರಿಯಾಗಬೇಕಾದರೆ ಶಿಕ್ಷಕರಿಗೆ ಶಾಲಾ ಹಂತದ ತರಬೇತಿಯನ್ನು ಪರಿಣಾಮಕಾರಿಯಾಗಿ ನೀಡಬೇಕು.ಇದು ಸಿಆರ್‌ಪಿಗಳಿಂದ ಮಾತ್ರ ಸಾಧ್ಯ. ಆದುದರಿಂದ ಸಿಆರ್‌ಪಿಗಳ ಬಲವರ್ಧನೆ ಆಗಬೇಕು.
- ಶಿಕ್ಷಕರು ತಾವು ಮಾಡಬೇಕಾದ ತರಗತಿ ಪ್ರಕ್ರಿಯೆಯ ಪೂರ್ವಸಿದ್ಧತೆಗೆ ಹೆಚ್ಚು ಒತ್ತನ್ನು ನೀಡಬೇಕು.
- **ರಚನಾವಾದ ಮತ್ತು ಅದನ್ನು ಪಠ್ಯಕ್ಕೆ ಅಳವಡಿಸುವ ಕುರಿತು ಹೆಚ್ಚಿನ ತರಬೇತಿಯಾಗಬೇಕಾಗಿದೆ. ಇಲಾಖೆ ಒತ್ತು ನೀಡಬೇಕಾದುದು ಸಿಸಿಇಗೆ ಅಲ್ಲ. ರಚನಾವಾದಕ್ಕೆ, ಅದರ ಕುರಿತ ತರಬೇತಿಗೆ ಮತ್ತು ಅದರ ಅನುಷ್ಠಾನಕ್ಕೆ. ಆಗ ಸಿಸಿಇ ತನ್ನಿಂತಾನೆ ಅರ್ಥಪೂರ್ಣವಾಗಿ ನಡೆಯುತ್ತದೆ. ಇದನ್ನು ಅರ್ಥ ಮಾಡಿಕೊಳ್ಳದೇ ಹೋದಲ್ಲಿ ಕಲಿಕೆಯೂ ಅರ್ಥಪೂರ್ಣವಾಗುವುದಿಲ್ಲ.**
- ಶಿಕ್ಷಕರ ತರಬೇತಿಯ ರೂಪುರೇಷೆಗಳಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗಿದೆ. ಸಂಪನ್ಮೂಲವ್ಯಕ್ತಿಗಳು ತರಬೇತಿಯನ್ನು ನೀಡುವ ಬದಲಾಗಿ ಹೆಚ್ಚು ಹೆಚ್ಚು ಓದುವ ಸಾಹಿತ್ಯಗಳನ್ನು ಒದಗಿಸುವುದು, ಅಧ್ಯಯನಶೀಲತೆಯನ್ನು ಕಡ್ಡಾಯವಾಗಿಸುವುದು, ಚರ್ಚಿಸುವುದು, ಹೊಸ ಟ್ರೆಂಡ್‌ಗಳ ಬಗ್ಗೆ ಯಶೋಗಾಥೆಗಳನ್ನು ಓದುವ, ವೀಡಿಯೋ ಕ್ಲಿಪ್ಪಿಂಗ್ ವೀಕ್ಷಣೆ ಮಾಡುವ ಮೂಲಕ ಶಿಕ್ಷಕರಿಗೆ ತಮ್ಮ ಜ್ಞಾನದ ರಚನೆಯನ್ನು ತಾವೇ ರಚಿಸಿಕೊಳ್ಳುವ ಅವಕಾಶಗಳನ್ನು ತರಬೇತಿಯಲ್ಲಿ ನೀಡಬೇಕಾಗಿದೆ.
- ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವು ಮಕ್ಕಳ ಕಲಿಕಾ ಪ್ರಗತಿಯ ಸ್ಪಷ್ಟ ಒಳನೋಟವನ್ನು ಒದಗಿಸುತ್ತಾ ಶಿಕ್ಷಕನ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಸಹಕಾರಿಯಾಗಿದೆ ಎಂಬ ಧನಾತ್ಮಕ ಆಲೋಚನೆಯನ್ನು ಶಿಕ್ಷಕ ಸಮುದಾಯ ಬೆಳೆಸಿಕೊಂಡು ಸಮರ್ಪಕವಾಗಿ ಸಿಸಿಇಯನ್ನು ಅನುಷ್ಠಾನ ಮಾಡಲು ಮುಂದಾಗಬೇಕಾಗಿದೆ.
- ಸಿಸಿಇಯ ಪರಿಣಾಮಕಾರಿ ಅನುಷ್ಠಾನಕ್ಕೆ ಎಲ್ಲಾ ಅನುಪಾಲನಾಧಿಕಾರಿಗಳು ಕ್ರಮವಹಿಸಬೇಕಾಗಿದೆ.
- ಶೈಕ್ಷಣಿಕ ಪರಿಸರದಲ್ಲಿ ಗುಣಮಟ್ಟ ಸಾಧಿಸಿಕೊಳ್ಳಬೇಕಾದ ಅನಿವಾರ್ಯತೆ ಮತ್ತು ಸ್ವಮೌಲ್ಯಮಾಪನದ ಲಾಭಗಳ ಬಗ್ಗೆ ಶಿಕ್ಷಕ ಸಮುದಾಯದಲ್ಲಿ ಇನ್ನೂ ಹೆಚ್ಚಿನ ಅರಿವು ಮೂಡಿಸಬೇಕಾಗಿದೆ ಎನಿಸುತ್ತದೆ.

- ಶಿಕ್ಷಣ ಗುಣಮಟ್ಟ ಸಾಧಿಸುವ ಮೂಲಕ ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಭಾಗೀದಾರರಾಗಿ ದೇಶದ ಪ್ರಗತಿಗೆ ಕೊಡುಗೆ ನೇಡುವ ಮಹತ್ಕಾರ್ಯದದಲ್ಲಿ ತೊಡಗಿದ್ದೇವೆ ಎಂಬ ವಿಶಾಲ ಧ್ಯೇಯಗಳನ್ನು ಶಿಕ್ಷಕ ಸಮುದಾಯದಲ್ಲಿ ಬೆಳೆಸಬೇಕಾಗಿದೆ.
- 2009 ಶಿಕ್ಷಣ ಹಕ್ಕು ಕಾಯ್ದೆ ಜಾರಿಯಾದ ನಂತರದಲ್ಲಿ ತನ್ನ ವಿಸ್ತಾರವಾದ ಜವಾಬ್ದಾರಿಗಳನ್ನು ಮತ್ತು ಅನಿವಾರ್ಯತೆಯನ್ನು ಶಿಕ್ಷಕ ಸಮುದಾಯ ಇನ್ನೂ ಹೆಚ್ಚು ಸ್ಪಷ್ಟವಾಗಿ ಅರಿಯಬೇಕಾಗಿದೆ.
- ಶಾಲಾ ಹಂತದಲ್ಲಿ ಶಿಕ್ಷಕರು ಸಾಮರ್ಥ್ಯಾಧಾರಿತ ಮೌಲ್ಯಮಾಪನವನ್ನು ಸಮರ್ಪಕವಾಗಿ ಮಾಡುವಂತೆ ಬಲವರ್ಧನೆ ಮಾಡುವುದು.
- ಶಾಲೆಯಲ್ಲಿ ಮಕ್ಕಳ ಕಲಿಕೆಯಲ್ಲಾಗುವ ಕಲಿಕಾ ಅಂತರವನ್ನು ಹೋಗಲಾಡಿಸಲು ಸೂಕ್ತ ಕ್ರಮ ಕೈಗೊಳ್ಳುವುದು.
- ಮುಖ್ಯ ಶಿಕ್ಷಕರು ಎಸ್‌ಡಿಎಂಸಿ ಹಾಗೂ ಶಿಕ್ಷಕರೊಂದಿಗೆ ಈ ಅಂಶಗಳನ್ನು ಚರ್ಚಿಸುವಂತೆ ಪ್ರೇರೇಪಿಸಬೇಕು.
- ಶಾಲಾ ಹಂತದ ನಮೂನೆ ಆಧರಿಸಿಯೇ ಶಿಕ್ಷಕರ ಅಗತ್ಯತೆ ಅನುಗುಣವಾಗಿತರಬೇತಿ ಮತ್ತು ಸಮಾಲೋಚನಾ ಸಭೆಗಳನ್ನು ಯೋಜಿಸಿಕೊಳ್ಳುವುದು ಹಾಗೂ ಶಾಲಾ ಹಂತದ ತರಬೇತಿಗಳನ್ನು ಶಿಕ್ಷಕರಿಗೆ ಯೋಜಿಸಲು ಸಿ.ಆರ್.ಪಿಗಳಿಗೆ ಸ್ವಾತಂತ್ರ ನೀಡುವುದು.

# ಉಪಸಂಹಾರ

ಇಂದು ಸ್ವಾವಾಲೋಕನಗಳನ್ನು ಆಧರಿಸಿದ ಚಿಂತನೆ ಮತ್ತು ಆಚರಣೆಗಳಿಗೆ ಹೆಚ್ಚು ಮಹತ್ವವನ್ನು ಕೊಡಲಾಗಿದೆ.ಕಾರಣ ಇದು ವ್ಯಕ್ತಿಯೊಳಗಿನ ಅಥವಾ ಒಂದು ಸಂಸ್ಥೆಯೊಳಗಿನ ವ್ಯಕ್ತಿತ್ವವನ್ನು ವಾಸ್ತವಿಕ ನೆಲೆಯೊಳಗೆ ನೋಡಲು ಅವಕಾಶ ಕಲ್ಪಿಸುತ್ತದೆ ಮತ್ತು ಬೆಳೆಯಲು ಅವಕಾಶಗಳನ್ನು ಒದಗಿಸಿಕೊಡುತ್ತದೆ.ಈ ನಿಟ್ಟಿನಲ್ಲಿ ನಮ್ಮ ಇಲಾಖೆಗೆ ಒದಗಿರುವ ವರ ಎಂದರೆ ಕ್ಯೂಎಂಟಿ ಸಾಧನಗಳು. ಆದರೆ ಈ ಕ್ಯೂಎಂಟಿ ಸಾಧನಗಳಲ್ಲೂ ಸುಧಾರಣೆಯಾಗಬೇಕಾಗಿದೆ ಮತ್ತು ಇದನ್ನು ತುಂಬುವವರ ಮನಃಸ್ಥಿತಿಗಳಲ್ಲೂ ಬದಲಾವಣೆಯಾಗಬೇಕಾಗಿದೆ. ಇಲಾಖೆಯಲ್ಲಿ ವಾಸ್ತವಿಕತೆಯನ್ನು ಅರ್ಥಮಾಡಿಕೊಳ್ಳುವುದಕ್ಕಿಂತಲೂ ಇರುವುದಕ್ಕಿಂತ ಹೆಚ್ಚಿನದನ್ನು ತೋರಿಸಿಕೊಳ್ಳುವ ಸ್ವಭಾವವೇ ಹೆಚ್ಚಾಗಿದೆ.ಅಂದರೆ ಒಂದು ರೀತಿಯ ಅಭದ್ರತೆಯ ಭಾವ ಎಲ್ಲರನ್ನು ಕಾಡುತ್ತಿರುವುದು ಸ್ಪಷ್ಟವಾಗುತ್ತದೆ.ಇದು ಗುಣಮಟ್ಟದ ಕುಸಿತಕ್ಕೆ ದೊಡ್ಡ ಹೊಡೆತ ಎನ್ನಬಹುದು.ಆದುದರಿಂದಲೇ ಎರಡು ವರ್ಷಗಳ ಹಿಂದೆ ಮಾಡಿರುವ ಅಧ್ಯಯನಕ್ಕಿಂತ ಭಿನ್ನವಾಗಿರುವ ಒಳನೋಟಗಳು ಕಂಡುಬಂದಿರುವುದಿಲ್ಲ.ಕ್ಯೂಎಂಟಿಯಲ್ಲಿ ದಾಖಲಿಸಿರುವ ಕಲಿಕೆಗೂ ವಾಸ್ತವ ಕಲಿಕೆಗೂ ಬಹಳ ವ್ಯತ್ಯಾಸಗಳನ್ನು ಕಾಣುತ್ತೇವೆ. ಮಗದೊಮ್ಮೆ ಅದೇ ಸತ್ಯವನ್ನು ಈ ಅಧ್ಯಯನ ಬಹಿರಂಗಗೊಳಿಸಿದೆ.ಸ್ವಾವಲೋಕನಕ್ಕಿಂತಲೂ ಮಾಹಿತಿ ತುಂಬುವತ್ತಲೇ ಎಲ್ಲರ ಗಮನವಿರುವುದನ್ನು ಅಧ್ಯ0ಯನ ತಂಡ ಗಮನಿಸಿದೆ.ಆದುದರಿಂದ ನಮ್ಮ ಮುಂದಿರುವ ಗುರಿ ಒಂದೇ.ಸ್ವಾವಾಲೋಕನಕ್ಕೆ ಹೆಚ್ಚು ಹೆಚ್ಚು ಅಭ್ಯಾಸ ನೀಡಿ ವಾಸ್ತವ ನೆಲೆಗಟ್ಟಿನ ಆಧಾರದಲ್ಲಿ ಕಾರ್ಯನಿರ್ವಹಿಸಬೇಕಾಗಿದೆ.

# ಅನುಬಂಧಗಳು

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ವಸಂತಮಹಲ್, ಮೈಸೂರು ಶಾಲಾ ಹಂತದ ನಮೂನೆ**

**ಕ್ಯೂ.ಎಂ.ಟಿ ವಿಶ್ಲೇಷಣೆ –2014–15**

**ಶಾಲೆಯ ಸಾಮಾನ್ಯ ಮಾಹಿತಿ**

1. ಶಾಲೆಯ ಹೆಸರು ಮತ್ತು ವಿಳಾಸ:
2. ಶಾಲಾ ಮುಖ್ಯೋಪಾಧ್ಯಾಯರ ಹೆಸರು ಮತ್ತು ದೂರವಾಣಿ ಸಂಖ್ಯೆ:
3. ಭೇಟಿ ನೀಡಿದ ಅಧಿಕಾರಿಯ ಹೆಸರು:
4. ಶಾಲಾ ಭೇಟಿ ದಿನಾಂಕ: ಭೇಟಿಯ ಸಮಯ:
5. ಮಂಜೂರಾದ ಹುದ್ದೆಗಳ ಸಂಖ್ಯೆ: ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ(ನಿಯೋಜನೆ ಸೇರಿ)
6. ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಕುರಿತ ಮಾಹಿತಿ:

| ತರಗತಿ | 1ನೇ ತರಗತಿ | | 2ನೇ ತರಗತಿ | | 3ನೇ ತರಗತಿ | | 4ನೇ ತರಗತಿ | | 5ನೇ ತರಗತಿ | | 6ನೇ ತರಗತಿ | | 7ನೇ ತರಗತಿ | | 8ನೇ ತರಗತಿ | | ಶಾಲೆಯ ಒಟ್ಟು ಮಕ್ಕಳ ಸಂಖ್ಯೆ | |
|---|---|---|---|---|---|---|---|---|---|---|---|---|---|---|---|---|---|---|
| | ಗಂ | ಹೆ | ಗಂ | ಹೆ | ಗಂ | ಹೆ | ಗಂ | ಹೆ | ಗಂ | ಹೆ | ಗಂ | ಹೆ | ಗಂ | ಹೆ | ಗಂ | ಹೆ | ಗಂ | ಹೆ |
| ದಾಖಲಾತಿ | | | | | | | | | | | | | | | | | | |
| ಹಾಜರಾತಿ | | | | | | | | | | | | | | | | | | |

**ಈ ಕೆಳಗಿನ ಅವಲೋಕನ ತಾಳೆ ಪಟ್ಟಿಗೆ ಅಭಿಪ್ರಾಯಗಳನ್ನು ಹೌದಾದರೆ–1 ಇಲ್ಲವಾದರೆ–0 ಎಂದು ನಮೂದಿಸಿ. ಹಾಗೂ ಪ್ರಶ್ನೆಗಳಿಗೆ ಸ್ಪಷ್ಟ ಮತ್ತು ನಿಖರ ಅಭಿಪ್ರಾಯವನ್ನು ಪಡೆಯುವುದು.**

1. ತರಗತಿ ಕೊಠಡಿಗಳಲ್ಲಿ ಎಲ್ಲಾ ಮಕ್ಕಳೂ ಸರಿಯಾಗಿ ಕುಳಿತುಕೊಳ್ಳಲು ಅವಕಾಶವಿದೆಯೇ?
2. ತರಗತಿ ಕೋಣೆಯಲ್ಲಿ ಪ್ರದರ್ಶಿಸಿದ ಕಲಿಕಾ ಸಾಮಗ್ರಿ ಬೋಧನಾ ಕಲಿಕಾ ಪ್ರಕ್ರಿಯೆಗೆ ಸೂಕ್ತವಾಗಿದೆಯೇ ಮತ್ತು ಅದನ್ನು ಬಳಸಲಾಗಿದೆಯೇ?
3. ವೇಳಾಪಟ್ಟಿಗೆ ಅನುಗುಣವಾಗಿ ತರಗತಿಗಳು ನಡೆಯುತ್ತಿವೆಯೇ?
4. ಪ್ಯಾನಲ್‌ಬೋರ್ಡ್‌ನಲ್ಲಿ ವಿದ್ಯಾರ್ಥಿಗಳು ಚಿತ್ರ/ಬರಹ/ಸಾಮಾನ್ಯ ಜ್ಞಾನ ಇತ್ಯಾದಿ ಸೃಜನಾತ್ಮಕ ಚಿಂತನೆಗಳನ್ನು ಪ್ರದರ್ಶಿಸಿರುತ್ತಾರೆಯೇ?
5. ಶಾಲಾ ಶೈಕ್ಷಣಿಕ ಯೋಜನೆ ಅನುಷ್ಠಾನಗೊಳ್ಳುತ್ತಿದ್ದೆಯೇ?
6. ಶಾಲಾ ಮಂತ್ರಿಮಂಡಲವು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆಯೇ?
7. ಉತ್ತಮವಾದ ಕಪ್ಪು/ಹಸಿರು ಹಲಗೆ ತರಗತಿ ಕೋಣೆಯಲ್ಲಿ ಲಭ್ಯವಿದೆಯೇ?
8. ಶಾಲೆಯಲ್ಲಿರುವ ರ್‍ಯಾಂಪ್ ಬಳಸಲು ಯೋಗ್ಯವಾಗಿದೆಯೇ?
9. ಶುದ್ದ ಕುಡಿಯುವ ನೀರಿನ ಸೌಲಭ್ಯವಿದೆಯೇ?
10. ಶೌಚಾಲಯಕ್ಕೆ ನೀರಿನ ಸೌಲಭ್ಯವಿದೆಯೇ?
11. ಅಗ್ನಿನಂದಕದ ಬಳಕೆಯ ಬಗ್ಗೆ ಶಿಕ್ಷಕರಿಗೆ/ಅಡುಗೆಯವರಿಗೆ ತಿಳುವಳಿಕೆ ಇದೆಯೇ?
12. ಹೊರಾಂಗಣ ಮತ್ತು ಒಳಾಂಗಣ ಆಟಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳು ಕ್ರೀಡಾ ಸಾಮಾಗ್ರಿಗಳನ್ನು ಬಳಸುತ್ತಿದ್ದಾರೆಯೇ?
13. ಮೀನಾ ತಂಡಗಳ ಮೂಲಕ ಯಾವ ಸಾಮಾಜಿಕ ಶೈಕ್ಷಣಿಕ ಚಟುವಟಿಕೆಗಳನ್ನು ಕೈಗೊಂಡಿರುತ್ತೀರಿ
14. ಶಿಕ್ಷಕರು ರೇಡಿಯೋ ಕಾರ್ಯಕ್ರಮವನ್ನು ತರಗತಿ ಪ್ರಕ್ರಿಯೆಯಲ್ಲಿ ಬಳಸಿಕೊಂಡಿದ್ದಾರೆಯೇ?
15. ಎಷ್ಟು ಶಿಕ್ಷಕರು ಕಂಪ್ಯೂಟರ್ ಸೌಲಭ್ಯವನ್ನು ಬೋಧನೆಗೆ ಪೂರಕವಾಗಿ ಬಳಸುತ್ತಿದ್ದಾರೆ?
16. ಬಳಸುತ್ತಿದ್ದಲ್ಲಿ ಹೇಗೆ ಎಂದು ಉದಾಹರಣೆಯೊಂದಿಗೆ ವಿವರಿಸುವುದು.
17. ವಿಜ್ಞಾನ ಪ್ರಯೋಗಾಲಯದ ಉಪಕರಣಗಳನ್ನು ತರಗತಿ ಪ್ರಕ್ರಿಯೆಯಲ್ಲಿ ಬಳಸಿರುವ ಎರಡು ಉದಾಹರಣೆ ಕೊಡಿ

18. ಪಡೆದ ತರಬೇತಿಯನ್ನು ತರಗತಿ ಬೋಧನೆಯಲ್ಲಿ ಅನುಷ್ಠಾನ ಮಾಡುವಾಗ ಎದುರಿಸಿದ ತೊಡಕುಗಳನ್ನು ಹೆಸರಿಸಿ
19. ಎಷ್ಟು ವಿದ್ಯಾರ್ಥಿಗಳು ಗ್ರಂಥಾಲಯದ ಪುಸ್ತಕಗಳನ್ನು ಓದಿದ ನಂತರ ವಿಷಯವನ್ನು ಹಂಚಿಕೊಂಡಿದ್ದಾರೆಯೇ?
20. ನೀರಿನ ಮರುಬಳಕೆ ಯಾವ ರೀತಿಯಲ್ಲಿ ಆಗುತ್ತಿದೆ.

## ಪ್ರೋತ್ಸಾಹದಾಯಕ ಯೋಜನೆಗಳು

1. ವಿದ್ಯಾರ್ಥಿಗಳು ಸರ್ಕಾರ ಒದಗಿಸುವ ಸವಲತ್ತುಗಳನ್ನು ಸದುಪಯೋಗ ಪಡಿಸಿಕೊಂಡಿದ್ದಾರೆಯೇ?
2. ಅಕ್ಷರ ದಾಸೋಹ ಯೋಜನೆ ಜಾರಿಯಾದ ನಂತರ ಮಕ್ಕಳ ಹಾಜರಾತಿಯಲ್ಲಿ ಉಂಟಾದ ಶೇಕಡಾ ಹೆಚ್ಚಳ
3. ಅಕ್ಷರ ದಾಸೋಹ ನಿರ್ವಹಣೆಗೆ ತಂದೆ ತಾಯಿಯರು ಮತ್ತು ದಾನಿಗಳಿಂದ ನೇರವು ದೊರಕಿದೆಯೇ?
4. ಹೆಣ್ಣು ಮಕ್ಕಳ ವಿದ್ಯಾರ್ಥಿ ವೇತನ ಜಾರಿಯಾದ ನಂತರ ಹೆಣ್ಣು ಮಕ್ಕಳ ದಾಖಲಾತಿ ಉತ್ತಮಗೊಂಡಿದೆಯೇ?
5. ಇಲಾಖೆ ಜಾರಿಗೊಳಿಸಿರುವ ಯೋಜನೆ/ಶಾಲಾ ಚಟುವಟಿಕೆಗಳು ಪೋಷಕರಿಗೆ ಹಾಗೂ ಸಮುದಾಯಕ್ಕೆ ತೃಪ್ತಿ ತಂದಿದಿಯೇ?

## ಮುಖ್ಯ ಶಿಕ್ಷಕರ ಪ್ರಶ್ನಾವಳಿ

1. ಎಸ್.ಎಂ.ಎಫ್ ನಮೂನೆ ಬಳಸಿ ಶಾಲೆಯ ಸ್ವಾವಲೋಕನ ಮಾಡಿಕೂಂಡಿರುವಿರೆ?
2. ಇದುವರೆಗೆ ಎಸ್.ಎಂ.ಎಫ್ ಅವಲೋಕನದಲ್ಲಿ ಕಂಡುಕೊಂಡ ಕೊರತೆಗಳನ್ನು ಪರಿಹರಿಸುವ ಪ್ರಯತ್ನ ನಡೆದಿದೆಯೇ?
3. ಎಸ್.ಎಂ.ಎಫ್ ಸ್ವಾವಲೋಕನದಿಂದ ದೊರೆತ ಅಂಶಗಳ ಬಗ್ಗೆ ಶಿಕ್ಷಕರೊಂದಿಗೆ ಚರ್ಚಿಸಿ ಶೈಕ್ಷಣಿಕ ಗುರಿ ನಿಗದಿಯಾಗಿದೆಯೇ?
4. ಎಸ್.ಡಿ.ಪಿ/ ವಾರ್ಷಿಕ ಕ್ರಿಯಾಯೋಜನೆ ತಯಾರಿಸುವಾಗ ಎಸ್.ಎಂ.ಎಫ್ ಸ್ವಾವಲೋಕನದ ಅಂಶಗಳಿಗೆ ಆಧ್ಯತೆ ನೀಡಲಾಗಿದೆಯೇ?
5. ಶಾಲಾ ಅನುದಾನ ಮತ್ತು ಸಂಪನ್ಮೂಲ ಬಳಕೆಯಲ್ಲಿ ಶಿಕ್ಷಕರು ಹಾಗೂ ಮಕ್ಕಳ ಅಭಿಪ್ರಾಯಗಳಿಗೆ ಅವಕಾಶ ನೀಡಿದ್ದಾರೆಯೇ?
6. ಎಲ್ಲಾ ಶಿಕ್ಷಕರ ಪಾಠಬೋಧನೆಯನ್ನು ಪ್ರತಿ ಮಾಹೆಗೊಮ್ಮೆ ವೀಕ್ಷಿಸಿ ಹಿಮ್ಮಾಹಿತಿ ನೀಡಲಾಗುತ್ತಿದ್ದೆಯೆ?
7. ಶೈಕ್ಷಣಿಕ ಗುಣಮಮಟ್ಟಕ್ಕೆ ಸಂಬಂಧಿಸಿದಂತೆ ವಾರಕ್ಕೊಮ್ಮೆ, ಶಿಕ್ಷಕರ ಸಭೆಯಲ್ಲಿ ಚರ್ಚಿಸಲಾಗುತ್ತಿದೆಯೇ?
8. ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳಿಗೆ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದೆಯೇ?
9. ಶಾಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಿ.ಆರ್.ಪಿ. ಗಳು ಶಿಕ್ಷಕವಾರು, ವಿಷಯವಾರು, ತರಗತಿವಾರು ಹಿಮ್ಮಾಹಿತಿ ನೀಡಿರುತ್ತಾರೆಯೇ?
10. ದಾಖಲಾದ ಒ.ಒ.ಎಸ್.ಸಿ ಮಕ್ಕಳ ಹಾಜರಾತಿ ಸಮರ್ಪಕವಾಗಿದೆಯೇ?
11. ಸಿ.ಡಬ್ಲೂ.ಎಸ್.ಎನ್ ಮಕ್ಕಳ ಹಾಜರಾತಿ ಸಮರ್ಪಕವಾಗಿದೆಯೇ?
12. ಗಂಡು ಮತ್ತು ಹೆಣ್ಣು ಮಕ್ಕಳ ಹಾಜರಾತಿಯಲ್ಲಿ ಹೆಚ್ಚಿನ ವ್ಯತ್ಯಾಸವಿದೆಯೇ?
13. ಶಾಲೆಯ ಹಾಜರಾತಿ ಹೆಚ್ಚಿಸುವಲ್ಲಿ ನಿಮ್ಮ ಶಾಲೆಯ ಆಕರ್ಷಣೆ ವಿಷಯಗಳಾವುವು?
14. ಎಸ್.ಡಿ.ಪಿ ಅನುಷ್ಠಾನದಲ್ಲಿ ಭಾಗೀದಾರರ ತೊಡಗಿಸಿಕೊಳ್ಳುವಿಕೆ ಹೇಗಿದೆ?
15. ಸಮುದಾಯವನ್ನು ವಿದ್ಯಾರ್ಥಿಗಳ ಕಲಿಕಾಕೇಂದ್ರವಾಗಿಸಲು ನೀವು ಕೈಗೊಂಡಿರುವ ಕ್ರಮಗಳು
16. ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಮುಖ್ಯ ವಾಹಿನಿಗೆ ತರಲು ನಿಮ್ಮ ಪ್ರಯತ್ನಗಳೇನು?

## ಎಸ್.ಡಿ.ಎಂ.ಸಿ/ಸಮುದಾಯದವರಿಗೆ ಪ್ರಶ್ನಾವಳಿ

1. ಎಸ್.ಎಂ.ಎಫ್ ಸ್ವಾವಲೋಕನದಲ್ಲಿ ಕಂಡುಕೊಂಡ ಅಂಶಗಳನ್ನು ಮುಖ್ಯ ಶಿಕ್ಷಕರು ನಿಮ್ಮೊಡನೆ ಚರ್ಚಿಸಿದ್ದಾರೆಯೇ?
2. ಶಾಲೆಗೆ ಸಂಬಂದಿಸಿದ ಕಾರ್ಯಗಳಲ್ಲಿ ನೀವು ಸಕ್ರಿಯವಾಗಿ ಭಾಗವಹಿಸುತ್ತಿದ್ದೀರಾ?
3. ಪೋಷಕರು ತಮ್ಮ ಮಕ್ಕಳ ಪ್ರಗತಿ ಬಗ್ಗೆ ನಿರಂತರವಾಗಿ ಶಾಲೆಯೊಂದಿಗೆ ಸಂಪರ್ಕದಲ್ಲಿದ್ದಾರೆಯೇ?
4. ನೀವು ನಿಗದಿತವಾಗಿ ಸಭೆ ಸೇರಿ ಶಾಲಾ ಪ್ರಗತಿಯ ಬಗ್ಗೆ ಚರ್ಚಿಸಿ ಅದರಂತೆ ಕಾರ್ಯನಿರ್ವಹಿಸುತ್ತಿರುವಿರಾ?
5. ನೀವು ಹಾಗೂ ಸಹ ಶಿಕ್ಷಕರ ಸಹಕಾರದೊಂದಿಗೆ ಸಮಗ್ರ ಶಾಲಾಭಿವೃದ್ಧಿ ಯೋಜನೆ ತಯಾರಿಸಲಾಗಿದೆಯೇ?
6. ನಿಮ್ಮ ಜೊತೆ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರು ಅಗತ್ಯ ಬಾಂಧವ್ಯ ಹೊಂದಿರುವರೇ?
7. ಶಾಲಾ ದಾಖಲಾತಿಯನ್ನು ಉತ್ತಮಪಡಿಸಲು ನೀವು ಯಾವ ಕ್ರಮ ಕೈಗೊಂಡಿರುವಿರಿ?
8. ಶಿಕ್ಷಕರು ನಿಮ್ಮ ಮಗುವಿನ ಕಲಿಕೆ ಮತ್ತು ಹಾಜರಾತಿಯ ಬಗ್ಗೆ ಆಗಾಗ್ಗೆ ನಿಮಗೆ ಹಿಮ್ಮಾಹಿತಿಯನ್ನು ನೀಡುತ್ತಿರುವರೇ?

9. ಎಸ್.ಡಿ.ಎಂ.ಸಿ/ಸಮುದಾಯದ ಭಾಗವಹಿಸುವಿಕೆಯಿಂದಾಗಿ ಶಾಲೆಯಲ್ಲಿ ಆಗಿರುವ ಎರಡು ಅಭಿವೃದ್ಧಿ ಕಾರ್ಯಗಳನ್ನು ನಮೂದಿಸಿ
10. ಶಾಲೆಯ ಬಗ್ಗೆ ನಿಮ್ಮ ಅಭಿಪ್ರಾಯ
11. ಶಾಲಾ ದಾಖಲಾತಿಯನ್ನು ಉತ್ತಮಪಡಿಸಲು ನೀವು ಯಾವ ಕ್ರಮ ಕೈಗೊಂಡಿರುವಿರಿ?

## ಸಿ.ಆರ್.ಪಿ ಗಳ ಪ್ರಶ್ನಾವಳಿ

1. ಎಸ್.ಎಂ.ಎಫ್ ನಮೂನೆಯನ್ನು ಭರ್ತಿ ಮಾಡಲು ಶಾಲೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು ಸಾಧ್ಯವಾಗಿದೆಯೇ?
2. ಎಸ್.ಎಂ.ಎಫ್ ನಮೂನೆಗಳನ್ನು ಆಧರಿಸಿಕೊಂಡು ಶಾಲಾ ಶಿಕ್ಷಕರು ಸ್ವ ಅವಲೋಕನ ಮಾಡಿಕೊಂಡಿದ್ದಾರೆಯೇ?
3. ಶಾಲಾ ಮಕ್ಕಳ ವಾಸ್ತವ ಕಲಿಕೆಯನ್ನು ತರಗತಿವಾರು, ವಿಷಯವಾರು ತಾವೇ ಸ್ವತಃ ತಂಡದೊಡನೆ ಪರಿಶೀಲಿಸಿ ದಾಖಲಿಸಲು ಸಾಧ್ಯವಾಗಿದೆಯೇ?
4. ಎಸ್.ಎಂ.ಎಫ್ ಸ್ವಾವಲೋಕನದಿಂದ ಕಂಡುಕೊಂಡ ಅಂಶಗಳನ್ನು ಆಧರಿಸಿ ಕ್ಲಸ್ಟರ್ ಯೋಜನೆಗೆ /ಸುಧಾರಣೆಗೆ ಕ್ಲಸ್ಟರ್ ವ್ಯಾಪ್ತಿಯ ಶಾಲೆಗಳೊಂದಿಗೆ ಚರ್ಚೆ ನಡೆದಿದೆಯೇ?
5. ಕ್ಲಸ್ಟರ್ ವ್ಯಾಪ್ತಿಯ ಎಸ್.ಎಂ.ಎಫ್ ಸ್ವಾವಲೋಕನದಿಂದ ಕಂಡುಕೊಂಡ ಅಂಶಗಳನ್ನು ಆಧರಿಸಿ ಕ್ಲಸ್ಟರ್ ಯೋಜನೆಯಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗಿದೆಯೇ?
6. ಸಿ.ಎಂ.ಎಫ್ ಕ್ರೋಢಿಕರಣದ ನಂತರ ತಾಲ್ಲೂಕು ಹಂತದಲ್ಲಿ ಮುಖ್ಯಾಂಶಗಳ ಬಗ್ಗೆ ಚರ್ಚೆ ನಡೆದಿದೆಯೇ?
7. ಆರ್.ಟಿ.ಇ ತರಬೇತಿ ಆಗಿದೆಯೇ?
8. ಶಿಕ್ಷಕರಿಗೆ ಅಗತ್ಯವಾಗಿರುವ ಶೈಕ್ಷಣಿಕ ಬೆಂಬಲ ನೀಡಲು ನಿಮಗೆ ಸಾಧ್ಯವಾಗುತ್ತಿದೆಯೇ?
9. ನಿಮ್ಮ ವೃತ್ತಿ ಪರತೆ ಹೆಚ್ಚಿಸಲು, ಮೇಲಾಧಿಕಾರಿಗಳಿಂದ ನೀವು ಅಪೇಕ್ಷಿಸುವ ಮಾರ್ಗದರ್ಶನ
10. ಕಳೆದ ತ್ರೈಮಾಸಿಕದಲ್ಲಿ ನೀಡಿದ ಮಾದರಿಪಾಠಗಳ ಸಂಖ್ಯೆ
11. ಹೊಸ ಪಠ್ಯ ಪುಸ್ತಕಗಳ ಬಗ್ಗೆ ಶಿಕ್ಷಕರ ಅಭಿಪ್ರಾಯ
12. ಮಕ್ಕಳ ಕಲಿಕೆಯ ಹಿಮ್ಮಾಹಿತಿ ನೀಡಲು ನಿರಂತರ ಮತ್ತು ಸಿ.ಸಿ.ಇ ಎಷ್ಟರ ಮಟ್ಟಿಗೆ ಹೇಗೆ ಪ್ರಯೋಜನಕಾರಿ
13. ಶಿಕ್ಷಕರಿಗೆ ಅಗತ್ಯವಾಗಿರುವ ಶೈಕ್ಷಣಿಕ ಬೆಂಬಲ ನೀಡಲು ಸಮರ್ಥರಾಗುವಂತೆ ನಿಮ್ಮನ್ನು ನೀವು ಹೇಗೆ ಸಿದ್ದಗೊಳಿಸಿರುವಿರಿ.

## ಬಿ.ಆರ್.ಸಿ ಪ್ರಶ್ನಾವಳಿ

1. ಶಾಲಾ ಭೇಟಿಯ ಸಂದರ್ಭದಲ್ಲಿ ಶಿಕ್ಷಕರು ತರಗತಿ/ವಿಷಯ ನಿರ್ವಹಣೆಗೆ ಸಂಬಂದಿಸಿದಂತೆ ಪ್ರಶ್ನೆಗಳನ್ನು ಕೇಳುತ್ತಿರುವರೇ?
2. ಸಿ.ಆರ್.ಪಿ ಗಳಿಗೆ ಅಗತ್ಯವಾಗಿರುವ ಶೈಕ್ಷಣಿಕ ಬೆಂಬಲ ನೀಡಲು ನಿಮಗೆ ಸಾಧ್ಯವಾಗುತ್ತಿದೆಯೇ?
3. ಸಿ.ಆರ್.ಪಿ ಸಭೆಗಳಲ್ಲಿ ಮಕ್ಕಳ ಕಲಿಕೆಯ ಬಗ್ಗೆ ಚರ್ಚೆ ನಡೆಯುತ್ತಿದೆಯೇ?
4. ಬಿ.ಎಂ.ಎಫ್ ಕ್ರೋಢಿಕರಣದ ನಂತರ ಜಿಲ್ಲಾ ಹಂತದಲ್ಲಿ ಮುಖ್ಯಾಂಶಗಳ ಬಗ್ಗೆ ಚರ್ಚೆ ನಡೆದಿದೆಯೇ?
5. ಆರ್.ಟಿ.ಇ ತರಬೇತಿ ಆಗಿದೆಯೇ?
6. ಶಿಕ್ಷಕರಿಗೆ ಅಗತ್ಯವಾಗಿರುವ ಶೈಕ್ಷಣಿಕ ಬೆಂಬಲ ನೀಡಲು ನಿಮಗೆ ಸಾಧ್ಯವಾಗುತ್ತಿದೆಯೇ?
7. ಕಳೆದ ತ್ರೈಮಾಸಿಕದಲ್ಲಿ ತರಗತಿ ವೀಕ್ಷಣೆ ಮಾಡಿ ಮೌಖಿಕ, ಲಿಖಿತವಾಗಿ ಹಿಮ್ಮಾಹಿತಿ ನೀಡಲಾಗಿರುವ ಒಟ್ಟು ಶಿಕ್ಷಕರ ಸಂಖ್ಯೆ
8. ಬ್ಲಾಕ್ ವ್ಯಾಪ್ತಿಯ ಎಸ್.ಎಂ.ಎಫ್ ಸ್ವಾವಲೋಕನದಿಂದ ಕಂಡುಕೊಂಡ ಅಂಶಗಳನ್ನು ಆಧರಿಸಿ ಬ್ಲಾಕ್ ಯೋಜನೆಯಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗಿದೆಯೇ?
9. ನಿಮ್ಮ ಬ್ಲಾಕ್‌ನಲ್ಲಿ ಶೈಕ್ಷಣಿಕ ವ್ಯವಸ್ಥೆಯನ್ನು ಬಲಪಡಿಸಲು ಶೈಕ್ಷಣಿಕ ಯೋಜನೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆಯೇ?.
10. ಶಾಲಾ ಕಾರ್ಯನಿರ್ವಹಣೆಯನ್ನು ಉತ್ತಮ ಪಡಿಸಲು ನಿಮ್ಮ ಬ್ಲಾಕಿನಲ್ಲಿ ಮಾಡಿರುವ ಗುಣಮಟ್ಟದ ಹೊಸ ಪ್ರಯತ್ನಗಳನ್ನು ನಮೂದಿಸಿ.
11. ಗುಣಮಟ್ಟದ ಅಭಿವೃದ್ಧಿಗಾಗಿ ನಿಮ್ಮ ಬ್ಲಾಕಿನಲ್ಲಿ ಗುರುತಿಸಿದ ಪ್ರಮುಖ ಕೊರತೆಗಳು.
12. ಗುಣಮಟ್ಟದ ಸುಧಾರಣೆಯಲ್ಲಿ ನಿಮ್ಮ ಬ್ಲಾಕಿನಲ್ಲಿ ಮಾಡಿರುವ ಗಣನೀಯ ಸಾಧನೆಗಳು.
13. ನಿಮ್ಮ ವೃತ್ತಿ ಪರತೆ ಹೆಚ್ಚಿಸಲು, ಮೇಲಾಧಿಕಾರಿಗಳಿಂದ ನೀವು ಅಪೇಕ್ಷಿಸುವ ಮಾರ್ಗದರ್ಶನ

## ನಲಿಕಲಿ ತರಗತಿ ವೀಕ್ಷಣಾ ನಮೂನೆ

1. ನಲಿ ಕಲಿ ತರಗತಿಗಳನ್ನು ನಿರ್ವಹಿಸುವ ಶಿಕ್ಷಕರಿಗೆ 6 ದಿನಗಳ ತರಬೇತಿ ಆಗಿದೆಯೇ?
2. ವ್ಯವಸ್ಥಿತ ರೀತಿಯಲ್ಲಿ ಕಲಿಕಾ ಚಪ್ಪರವನ್ನು ನಿರ್ವಹಿಸಲಾಗಿದೆಯೇ?
3. ಹೆಸರು ಸಹಿತ ವಿಭಾಗ ಮಾಡಿದ ವಿದ್ಯಾರ್ಥಿಗಳ ಕಪ್ಪು ಹಲಗೆಯು ಸುವ್ಯವಸ್ಥಿತವಾಗಿದ್ದು ಬಳಸಲ್ಪಡುತ್ತಿದೆಯೇ?
4. ಗುಂಪು ರಚನಾ ತಟ್ಟೆಗಳನ್ನು ಇಡಲು ಸ್ಥಳಗಳನ್ನು ನಿಗದಿಪಡಿಸಲಾಗಿದೆಯೇ?
5. ಪಪೆಟ್ ಗೊಂಬೆಗಳು, ಸ್ಕ್ರಿನ್, ಮುಖವಾಡಗಳು ಅವಶ್ಯಕ ಸಂಖ್ಯೆಯಲ್ಲಿ ಲಭ್ಯವಿದೆಯೇ?
6. ಹವಮಾನ ನಕ್ಷೆಗಳು ಬಳಸಲ್ಪಡುತ್ತಿದೆಯೇ?
7. ವಿಷಯವಾರು/ತರಗತಿವಾರು ಕಾರ್ಡುಗಳನ್ನು ಮಕ್ಕಳ ಕೈಗೆಟುಕುವಂತೆ ಮೈಲಿಗಲ್ಲುಗಳನ್ನು ಆಧರಿಸಿ ಜೋಡಿಸಲಾಗಿದೆಯೇ?
8. ಪ್ರಗತಿ ನೋಟವನ್ನು ವ್ಯವಸ್ಥಿತವಾಗಿ ಸಿದ್ದಪಡಿಸಿದ್ದು, ವಿದ್ಯಾರ್ಥಿಗಳೇ ಸ್ವತಃ ತಮ್ಮ ಕಲಿಕಾ ಮಟ್ಟವನ್ನು ದಾಖಲಿಸುತ್ತಿದ್ದಾರೆಯೇ?
9. ಚಟುವಟಿಕೆ ನಡೆಸಲು ಬೇಕಾದ ಮಿಂಚುಪಟ್ಟಿ, ಡೈಸ್, ಕಲ್ಲು, ಬೀಜ ಮತ್ತಿತರ ಕಲಿಕಾ ಸಾಮಾಗ್ರಿಗಳನ್ನು ಬಳಸಲು ಸುಲಭವಾಗುವ ರೀತಿಯಲ್ಲಿ ವ್ಯವಸ್ಥಿತವಾಗಿ ಸಂಗ್ರಹಿಸಲಾಗಿದೆಯೇ?
10. ಅವಧಿಯ ಆರಂಭದಲ್ಲಿ ಸಾಮೂಹಿಕ ಚಟುವಟಿಕೆ ನಡೆಸಿದ ನಂತರವೇ ಗುಂಪು ಚಟಿವಟಿಕೆ ನಡೆಸಲಾಗುತ್ತಿದೆಯೇ?
11. ಪ್ರಗತಿ ನೋಟದ ದಾಖಲೆಗನುಗುಣವಾಗಿ ಕಲಿಕಾ ಸಾಮಾಗ್ರಿಗಳನ್ನು ವಿದ್ಯಾರ್ಥಿಗಳೇ ಸ್ವತಃ ತೆಗೆದುಕೊಂಡು ಸಂಬಂಧಿಸಿದ ಗುಂಪಿನಲ್ಲಿ ಕುಳಿತು ಅಲ್ಲಿನ ಚಟುವಟಿಕೆ ನಿರ್ವಹಿಸಿದ ನಂತರ ಕಲಿಕಾ ಸಾಮಾಗ್ರಿಯನ್ನು ಸ್ವ ಸ್ಥಾನದಲ್ಲಿ ಇಡುತ್ತಾರೆಯೇ?
12. ವಿದ್ಯಾರ್ಥಿಗಳ ಕಲಿಕೆಯ ಪ್ರಗತಿ , ಪ್ರಗತಿ ನೋಟದ ದಾಖಲೆಗನುಗುಣವಾಗಿದೆಯೇ?
13. ಚಟುವಟಿಕೆ ಪೂರ್ಣಗೊಳಿಸಿದ ವಿದ್ಯಾರ್ಥಿಯ ಕಲಿಕೆ ದೃಢಿಕರಣ ಹಾಗೂ ಪ್ರಗತಿಯ ದಾಖಲೆಯ ನಂತರ ಮುಂದಿನ ಚಟುವಟಿಕೆಯ ನಿರ್ವಹಣೆಗೆ ಸೂಚನೆ ನೀಡಿರುತ್ತಾರೆಯೇ?
